ಇತಿಹಾಸ ದರ್ಶನ

ಸಂಪುಟ ೧/ಸಂಚಿಕೆ ೧

೧೯೮೬

KARNATAKA ITIHASA ACADEMY
कर्नाटक इतिहास अकादमि

ಕರ್ನಾಟಕ ಇತಿಹಾಸ ಅಕಾದೆಮಿ ಬೆಂಗಳೂರು

ಇತಿಹಾಸ ದರ್ಶನ

ಸಂಪುಟ ೧/ಸಂಚಿಕೆ ೧
೧೯೮೬

ಸಂಪಾದಕರು

ಡಾ॥ ಸೂರ್ಯನಾಥ ಯು. ಕಾಮತ್
ಲಕ್ಷ್ಮಣ್ ತೆಲಗಾವಿ

KARNATAKA ITIHASA ACADEMY
कर्नाटक इतिहास अकादमि

ಕರ್ನಾಟಕ ಇತಿಹಾಸ ಅಕಾದೆಮಿ ಬೆಂಗಳೂರು

ITIHASA DARSHANA
Journal of the
Karnataka Itihasa Academy
'Ranganatha Nilaya'
No. 13 (Old No. 4), 15th Cross
New Temple Road, Malleswaram
Bangalore 560 003
Vol. 1, No. 1 : December 1986
Edited by Dr. Suryanath U. Kamath
& Laxman Telagavi

(for private circulation only)

ರೂ. 10–00

ಲಕ್ಷ್ಮಿ ಮುದ್ರಣ
ನಂ. ೧೬೬, ೭ನೇ ಕ್ರಾಸ್, ೪ನೇ ಮೇನ್
ಚಾಮರಾಜಪೇಟೆ, ಬೆಂಗಳೂರು ೫೬೦ ೦೧೮

ಸಂಪಾದಕೀಯ

ಇದು 'ಇತಿಹಾಸ ದರ್ಶನ'ದ ಪ್ರಥಮಾಂಕ. ಇದೊಂದು ವಿಶಿಷ್ಟವಾದ ಹೊಸ ರೀತಿಯ ನಿಯತಕಾಲಿಕವೆಂದು ನಾವು ಭಾವಿಸಿಲ್ಲ. ಕರ್ನಾಟಕ ಇತಿಹಾಸ ಅಕಾದೆಮಿಯ ಮುಖಪತ್ರವಾಗಿ ಸಂಶೋಧನಾತ್ಮಕವಾದ ಲೇಖನಗಳು, ಹೊಸ ಶಾಸನಗಳು, ಹೊಸ ಐತಿಹಾಸಿಕ ದಾಖಲೆಗಳ ಪ್ರಕಟಣೆಗೆ ಇದು ಮೀಸಲು. ಅಲ್ಲದೆ ಅಕಾದೆಮಿಯ ಚಟುವಟಿಕೆಗಳು, ಅಕಾದೆಮಿ ನಡೆಸುವ ವಿಚಾರ ಸಂಕಿರಣ, ಸಮ್ಮೇಳನಗಳ ವರದಿಗಳು, ಇತಿಹಾಸ ಸಂಶೋಧನೆಗೆ ಸಂಬಂಧಿಸಿದ ಸಮಸ್ಯೆಗಳ ಚರ್ಚೆಗೂ ಇಲ್ಲಿ ಅವಕಾಶವಿದೆ. ಇದೀಗ ಉದ್ಘಾಟನೆಯಾಗುತ್ತಿರುವ ಅಕಾದೆಮಿಯ ಮುಖಪತ್ರವಾದ ಇದು ವಾರ್ಷಿಕವೇ ಅರ್ಧವಾರ್ಷಿಕವೇ ಅಥವಾ ತ್ರೈಮಾಸಿಕವೇ ಎಂಬ ಬಗೆಗೆ ಇನ್ನೂ ನಿರ್ಧಾರವಾಗಿಲ್ಲ. ಆದರೆ ೧೯೮೭ರ ಮೇ ತಿಂಗಳಿನಲ್ಲಿ ಬೆಂಗಳೂರಲ್ಲಿ ನಡೆಸಲಿರುವ ವಾರ್ಷಿಕ ಸಮ್ಮೇಳನದ ವರದಿಗಳ ಇನ್ನೊಂದು ಅಂಕವನ್ನು ಪ್ರಕಟಿಸುವ ಸಂಕಲ್ಪ ಇದೆ.

ಅಕಾದೆಮಿಯ ಧ್ಯೇಯ ಧೋರಣೆಗಳನ್ನು ಬೇರೆಡೆ ಪ್ರಕಟಿಸಿದ ಸಂವಿಧಾನದಲ್ಲಿ ಸ್ಪಷ್ಟೀಕರಿಸಿದೆ. ಸಾಧ್ಯವಿದ್ದಷ್ಟು ಕಾಲೇಜು ಹಾಗೂ ಶಾಲೆಗಳ ಅಧ್ಯಾಪಕರನ್ನು ಸದಸ್ಯರಾಗಿ ನೋಂದಾಯಿಸಿ, ಅವರ ಮೂಲಕ ಇತಿಹಾಸ ಸ್ಮಾರಕಗಳು, ಶಾಸನಗಳು ಹಾಗೂ ಐತಿಹಾಸಿಕ ಕಾಗದಪತ್ರಗಳ ಅನ್ವೇಷಣೆ, ಸಂರಕ್ಷಣೆ ಹಾಗೂ ವಿಶೇಷತಃ ಕಾಗದ ದಾಖಲೆಗಳ ಸಂಗ್ರಹದ ಬಗೆಗೆ ಅವರ ನೆರವನ್ನು ಪಡೆಯುವುದು ಅಕಾದೆಮಿಯ ಉದ್ದೇಶ. ಪುರಾತತ್ತ್ವ ಇಲಾಖೆ, ರಾಜ್ಯ ಹಾಗೂ ರಾಷ್ಟ್ರೀಯ ಪತ್ರಾಗಾರ ಹಾಗೂ ವಿಶ್ವವಿದ್ಯಾಲಯ ಮತ್ತು ಇತರ ಸಂಸ್ಥೆಗಳಿಗೆ ಇಂಥ ಉತ್ಸಾಹಿಗಳ ಚಟುವಟಿಕೆಗಳ ಲಾಭ ಆಗುವಂತಾಗಬೇಕೆಂದು, ಇಂಥ ಉತ್ಸಾಹಿಗಳ ಸೃಷ್ಟಿ ಹಾಗೂ ಈ ದಿಸೆಯಲ್ಲಿ ಅವರಿಗೆ ತರಬೇತಿ ನೀಡುವುದೂ ಅಕಾದೆಮಿಯ ಉದ್ದೇಶ. ಇಂಥ ಉದ್ದೇಶದ ಸಾಫಲ್ಯಕ್ಕೆ ಈ 'ಇತಿಹಾಸ ದರ್ಶನ' ಸಾಧಕವಾಗಲೆಂದು ಹಾರೈಕೆ.

ಈ ನಿಯತಕಾಲಿಕದ ಸುಧಾರಣೆಗೆ ಪ್ರಾಜ್ಞ ಓದುಗರ ಸಲಹೆ, ಸೂಚನೆಗೆ ಸ್ವಾಗತ; ಸಂಶೋಧನ ಲೇಖನಗಳಿಗಂತೂ ಸದಾ ಸ್ವಾಗತ.

೧೪-೧೨-೮೬ ಸಂಪಾದಕರು

ಕರ್ನಾಟಕ ಇತಿಹಾಸ ಅಕಾದೆಮಿ
ಬೆಂಗಳೂರು

ಪರಿವಿಡಿ

ಲೇಖಕರ ವಿಳಾಸಗಳು

ಡಾ॥ ಜಿ. ಎಸ್. ದೀಕ್ಷಿತ್

ಇತಿಹಾಸ ಪ್ರಾಧ್ಯಾಪಕರು (ನಿವೃತ್ತ), ಬಿ-೧, ಕೈಲಾಸ್ ಅಪಾರ್ಟ್‌ಮೆಂಟ್, ೮ನೇ ತಿರುವು, ೮ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು ೫೬೦ ೦೦೩

ದೇವರ ಕೊಂಡಾರೆಡ್ಡಿ

ಅನ್ವೇಷಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ೮ನೇ ಮಹಡಿ, ಕಾವೇರಿ ಭವನ, ಜಿಲ್ಲಾ ಕಚೇರಿ ರಸ್ತೆ, ಬೆಂಗಳೂರು ೫೬೦ ೦೦೯

ಡಾ॥ ಸೂರ್ಯನಾಥ ಕಾಮತ್

ಮುಖ್ಯ ಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ

ಡಾ॥ ಎಚ್. ಆರ್. ರಘುನಾಥ ಭಟ್

ರೀಡರ್, ಪ್ರಾಚೀನ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗ, ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ ೫೮೦ ೦೦೩

ಡಾ॥ ಎ. ವಿ. ನರಸಿಂಹಮೂರ್ತಿ

ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ, ಮಾನಸಗಂಗೋತ್ರಿ, ಮೈಸೂರು ೫೭೦ ೦೦೬

ಪಿ. ವಿ. ಕೃಷ್ಣಮೂರ್ತಿ

೪/೫, ಮಾರಮ್ಮನ ಗುಡಿ ಬ್ಲಾಕ್, ಹಳೇ ಮದರಾಸು ರಸ್ತೆ, ಇಂದಿರಾನಗರ, ಬೆಂಗಳೂರು ೫೬೦ ೦೩೮

ಕೆ. ಜಿ. ನಾಗರಾಜನ್

'ಭಾರತೀ ಭವನ', ೨೨೦, ೧೭ನೇ 'ಡಿ' ಮುಖ್ಯರಸ್ತೆ, ೩ನೇ 'ವೈ' ಬ್ಲಾಕ್, ರಾಜಾಜಿ ನಗರ, ಬೆಂಗಳೂರು ೫೬೦ ೦೧೦

ಎಚ್. ಎಸ್. ಗೋಪಾಲರಾಯ

೩೧, ೫ನೇ ಮುಖ್ಯರಸ್ತೆ, ೩ನೇ ತಿರುವು, ಸಿ.ಪಿ.ವಿ. ಬ್ಲಾಕ್, ಗಂಗೇನಹಳ್ಳಿ, ಬೆಂಗಳೂರು ೫೬೦ ೦೩೨

ಬಿ. ಎಂ. ಚಂದ್ರಶೇಖರಯ್ಯ

೬೦೭, ೭ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು ೫೬೦ ೦೪೦

ಬಿ. ರಾಜಶೇಖರಪ್ಪ

ಕನ್ನಡ ಉಪನ್ಯಾಸಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ ೫೭೭ ೫೨೭

ಡಾ॥ ಕೆ. ಜಿ. ವಸಂತಮಾಧವ

ರೀಡರ್, ಇತಿಹಾಸ ವಿಭಾಗ, ವಿಜಯಾ ಕಾಲೇಜು, ಮೂಲ್ಕಿ (ದಕ್ಷಿಣಕನ್ನಡ) ೫೭೪ ೧೫೪

ಲಕ್ಷ್ಮಣ್ ತೆಲಗಾವಿ

ಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ

ಡಾ॥ ಜಿ. ಎಸ್. ದೀಕ್ಷಿತ್

ಉಲ್ಲೇಖನೀಯ ಆಕರ ಗ್ರಂಥ ಚಾವುಂಡರಾಯನ 'ಲೋಕೋಪಕಾರ'

ಚಾವುಂಡರಾಯನ ಲೋಕೋಪಕಾರ ನಮ್ಮ ಜನಕ್ಕೆ ಪರಿಚಯವಾದ ಬಗೆಗೆ ಒಂದೆರಡು ಮಾತು ಅವಶ್ಯ. ಇಂತಹ ಗ್ರಂಥವೊಂದಿದೆಯೆಂದು ಮೊದಲು ಪರಿಚಯಿಸಿದವರು ಕವಿಚರಿತೆಕಾರರು. ಅವರಿಗೆ ಸಮಗ್ರ ಪ್ರತಿ ದೊರೆತಿರಲಿಲ್ಲ. ಕಾಲವನ್ನು ೧೧೦೦ ಎಂದಿದ್ದರು. ಡಾ॥ ಅನಂತರಂಗಾಚಾರರು ಸುಮಾರು ೪೦ ವರ್ಷದ ಹಿಂದೆ ಪ್ರಬುದ್ಧ ಕರ್ಣಾಟಕದ ೧೮ನೆಯ ಸಂಪುಟದಲ್ಲಿ ಒಂದು ಲೇಖನ ಬರೆದು ಇದರ ಮಹತ್ವವನ್ನು ಕನ್ನಡಿಗರಿಗೆ ಮೊದಲು ಮಾಡಿಕೊಟ್ಟರು. ನಂತರ ೧೯೫೦ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ ಶ್ರೀ ಎಚ್. ಶೇಷ ಅಯ್ಯಂಗಾರರು ನಾಲ್ಕು ಹಸ್ತಪ್ರತಿಗಳ ಸಹಾಯದಿಂದ ಈ ಗ್ರಂಥವನ್ನು ಸಂಪಾದಿಸಿ ಕನ್ನಡಿಗರಿಗೆ ಮಹದುಪಕಾರ ಮಾಡಿದ್ದಾರೆ.

೧೧ನೆಯ **ಶತಮಾನದ ಸಾಹಿತ್ಯ**: ಹನ್ನೊಂದನೆಯ ಶತಮಾನದ ಎಲ್ಲ ಕವಿಗಳು ಹೊಸ ರೀತಿಯ ಗ್ರಂಥಗಳನ್ನು ಬರೆದಿರುವರು. ೧೦ನೆಯ ಶತಮಾನದಲ್ಲಿ ಪಂಪ, ರನ್ನ, ಪೊನ್ನರು ಪುರಾಣಗಳನ್ನು, ಮಹಾಕಾವ್ಯಗಳನ್ನು ಬರೆದಂತೆ ಈ ಕಾಲದ ಕವಿಗಳು ಶಾಸ್ತ್ರೀಯ ಗ್ರಂಥಗಳನ್ನು ಬರೆದಿರುವರು. ಈ ಶತಮಾನದ ಆದಿಯಲ್ಲಿ ಚಾವುಂಡರಾಯ **'ಲೋಕೋಪಕಾರ'** ಬರೆದ. ಇವನ ಕಾಲದಲ್ಲಿಯೇ ಚಂದ್ರರಾಜನು ಕಾಮಶಾಸ್ತ್ರದ ಮೇಲೆ 'ಮದನ ತಿಲಕ' ಎನ್ನುವ ಗ್ರಂಥವನ್ನು, ದುರ್ಗಸಿಂಹ ಇದೇ ಕಾಲಕ್ಕೆ (೧೦೩೧) ಪಂಚತಂತ್ರವನ್ನು ಬರೆದು ಲೌಕಿಕ ಧರ್ಮವನ್ನು, ನೀತಿಸಾರವನ್ನು ತೋರಿಸಲು ಪ್ರಯತ್ನಿಸಿದ್ದಾನೆ. ೧೦೪೯ರಲ್ಲಿ ಶ್ರೀಧರಾಚಾರ್ಯ ಜ್ಯೋತಿಷ್ಯಶಾಸ್ತ್ರವನ್ನು ಬರೆದ. ಇವೆಲ್ಲವುಗಳ ನಂತರ 'ಮಾನಸೋಲ್ಲಾಸ'ವನ್ನು ೩ನೇ ಸೋಮೇಶ್ವರ ೧೨ನೆಯ ಶತಮಾನದ ಆದಿಯಲ್ಲಿ ಬರೆದ. ಇದು ಸಂಸ್ಕೃತ ಕೃತಿ.

ಇನ್ನು 'ಲೋಕೋಪಕಾರ'ದ ಕರ್ತೃವಿನ ವಿಷಯ ತಿಳಿದುಕೊಳ್ಳೋಣ. ಚಾವುಂಡರಾಯನು ತನ್ನ ವಿಷಯವನ್ನೂ ತನ್ನ ಮನೆತನದ ವಿಷಯವನ್ನೂ ಗ್ರಂಥ ಬರೆದ ಇಸ್ವಿಯನ್ನೂ ಹೇಳಿರುವುದರಿಂದ ಇಂಥ ವಿಷಯಗಳ ಬಗ್ಗೆ, ಇತರ ಲೇಖಕರ ಬಗ್ಗೆ ಇರುವ ಊಹಾಪೋಹಗಳು ಇವನ ಬಗ್ಗೆ ಇಲ್ಲದಿರುವುದು ನಮ್ಮ ಸುಕೃತ. ಈತ ಎರಡನೆಯ ಜಯಸಿಂಹನ ಕಾಲದಲ್ಲಿದ್ದು (೧೦೨೦–೪೫) ಅವನಿಂದ ಪೋಷಿತನಾಗಿದ್ದ. ಚಾವುಂಡರಾಯನ ಕಾಲ ೧೦೨೫ರ ಹತ್ತಿರವಿತ್ತು ಎನ್ನುವ ಬಗ್ಗೆ ಯಾವ ಸಂಶಯವೂ ಇಲ್ಲ. ಇವನು ವೈದಿಕ ಮತದ ಅದ್ವೈತಿಗಳ ಪಂಗಡಕ್ಕೆ ಸೇರಿದ ಬ್ರಾಹ್ಮಣ. ಈತನ ಊರು ಮುದಗಲ್. ಆ ಊರಿನಲ್ಲಿ ಕಾಶ್ಯಪ ಗೋತ್ರದ ಶಂಕರಭಟ್ಟರೆಂಬವರ ಮಗ ಪಂಗೌಂಡಭಟ್ಟನೆಂಬ ಪಂಡಿತನಿದ್ದ. ಇವನು ಅಪರಿಮಿತ ದಾನಿ. ಚಾಲುಕ್ಯ ರಾಜ ಪೋಷಿತ. ಹಲವು ಕೆರೆಗಳ ನಿರ್ಮಾತೃ; ಕವಿ ಕಲ್ಪವೃಕ್ಷ; ವಿದ್ವಜ್ಜನ ರತ್ನ; ವಿದ್ವತ್ಪಕ್ಷಪಾತಿ; ಕಾವ್ಯಗಳನ್ನು ರಚಿಸಿ 'ಕವಿತಾ ವಿಳಾಸ'ನೆಂಬ ಬಿರುದು ಪಡೆದಿದ್ದ. ಈತನ ಕಾವ್ಯಗಳಾವುವೂ ಸಿಕ್ಕಿಲ್ಲ. ಆದರೆ ದುರ್ಗಸಿಂಹನೆಂಬುವನು ೧೦೩೧ರಲ್ಲಿ ತನ್ನ 'ಪಂಚತಂತ್ರ'ದಲ್ಲಿ ಈ ಕವಿತಾ ವಿಳಾಸನನ್ನು ತನ್ನ ಸರ್ವ ಕವಿಗಳ ಪೈಕಿ ಸೇರಿಸಿ ಹೊಗಳಿದ್ದಾನೆ.

ಈತನ ಹೆಂಡತಿ ಮಲ್ಲಿಕಬ್ಬೆ. ಇವರ ಸುಪುತ್ರ ಚಾವುಂಡ ರಾಯ. ಜಯಸಿಂಹಚಕ್ರಿ ಈತನನ್ನು ಸರ್ವಾಧಿಕಾರಿಯನ್ನಾಗಿ ಮಾಡಿ 'ಮಹಾಬಳಿ' ಎಂಬ ಗ್ರಾಮವನ್ನು ದಾನ ಮಾಡಿದ. ಚಾವುಂಡರಾಯನು ಹಾಕಿಸಿದ ತೋಪುಗಳು, ಕಟ್ಟಿಸಿದ ದೇವಸ್ಥಾನಗಳು, ತೋಡಿಸಿದ ಕೆರೆ ಕಟ್ಟೆ ಬಾವಿ ಅಸಂಖ್ಯಾತವಾದುದರಿಂದ ಈತನಿಗೆ ಧರ್ಮ ಧರ್ಮಾತ್ಮಜನೆನ್ನುವ ಬಿರುದನ್ನು ತಂದವು. 'ಕವಿತಾ ವಿಳಾಸ'ನ ಮಗನಾದ ಇವನಿಗೆ 'ಕಾವ್ಯ ವಿಳಾಸ'ವೆಂಬ ಬಿರುದು ಒಪ್ಪ ತಕ್ಕದ್ದು. ಇವನು ಕೇಳುತ್ತಾನೆ: "ಕೇವಲ ಛಂದಸ್ಸಿನಿಂದ, ಮಾತ್ರಾಪದಗಳಿಂದ ತುಂಬಿರುವ ಕಾವ್ಯಗಳಿಂದ ಏನು ಪ್ರಯೋಜನ?" ಹೀಗೆಂದು ತನ್ನ ಗ್ರಂಥದಲ್ಲಿ ತಾನು ಏನು ಮಾಡಿದ್ದೇನೆಂದು ಹೇಳುತ್ತಾನೆ.

"ನನ್ನ ಗ್ರಂಥವಾದರೋ ಛಂದಸ್ಸಿನಲ್ಲಿಯೂ ಶಾಸ್ತ್ರದ ಕವಿತ್ವದ ಬೆಡಗಿನಲ್ಲಿಯೂ ಶೋಭಿಸುತ್ತಿರುವುದು. ಹಲವು ಲೌಕಿಕ ಶಾಸ್ತ್ರಗಳನ್ನೊಳಗೊಂಡಿರುವ ಈ ಲೋಕೋಪಕಾರವು ಜಗತ್ತಿಲಕವೆನಿಸಿ ರಾಜಪೂಜಿತವೂ ಆಗಿರುವುದು." ಈ ಗ್ರಂಥವು ಈ ಮೇದಿನಿಯ ಜನರಿಗೆ ಹಲವು ಬಗೆಯಿಂದ ಉಪಕಾರವಾಗಿರುವುದರಿಂದ ಅನ್ವರ್ಥವಾದ ಹೆಸರನ್ನು ಪಡೆದಿರುತ್ತದೆ.

ಈ ಗ್ರಂಥದಲ್ಲಿ ಹನ್ನೆರಡು ಅಧಿಕಾರಗಳು ಅಥವಾ ಅಧ್ಯಾಯಗಳಿವೆ. ಮೊದಲಿನ ಎರಡು ಅಧ್ಯಾಯಗಳು ಜ್ಯೋತಿಷ್ಯಶಾಸ್ತ್ರಕ್ಕೆ ಸಂಬಂಧಿಸಿದವು. ಮನುಷ್ಯನಿಗೆ ಬೇಕಾಗಿರುವ ಸುಖ ಸಾಧನಗಳಾದ ವಸತಿ, ಆಹಾರ, ಆರೋಗ್ಯ, ಅಲಂಕಾರ ಇವುಗಳ ವರ್ಣನೆ ಈ ಗ್ರಂಥದಲ್ಲಿದೆ. ಮೊದಲನೆಯ ಅಧ್ಯಾಯದಲ್ಲಿ ಮನುಷ್ಯ ತನ್ನ ಸುಖ ಸಾಧನಕ್ಕೆ ಪ್ರಾರಂಭಿಸಿದ ಕೆಲಸ ಸುಸೂತ್ರವಾಗಿ ಆಗಬೇಕಾಗಿರುವುದರಿಂದ ಇದಕ್ಕೆ ಅವಶ್ಯವಾಗಿ ತಿಳಿಯಬೇಕಾಗಿರುವ ತಿಥಿ, ವಾರ, ನಕ್ಷತ್ರ, ಯೋಗ, ಕರಣಗಳೆಂಬ ದಿನ ಪಂಚಾಂಗ ಶುದ್ಧಿಯನ್ನು ವಿವರಿಸಿದೆ. ಎರಡನೆಯ ಅಧ್ಯಾಯ ಮೊದಲನೆಯದಕ್ಕೆ ಪೂರಕ; ಮೊದಲನೆಯದರಲ್ಲಿ ಯಾವ ಯಾವ ತಿಥಿ ವಾರ ನಕ್ಷತ್ರ ಒಳ್ಳೆಯದು ಯಾವುದು ಕೆಟ್ಟದ್ದು ಎಂದು ಹೇಳಿದ್ದರೆ, ಎರಡನೆಯದರಲ್ಲಿ ಷೋಡಶ ಕರ್ಮಗಳನ್ನು ಮಾಡುವುದಕ್ಕೆ ಶುಭಕರಗಳಾದ ತಿಥಿ ಲಗ್ನಾದಿಗಳನ್ನು ವಿವರಿಸಿದೆ. ವಿವಾಹ ಯಾವಾಗ ಮಾಡಬೇಕು, ಮಕ್ಕಳಿಗೆ ಅನ್ನ ಪ್ರಾಶನ, ಚೌಲ ಕರ್ಮ, ವಿದ್ಯಾರಂಭ ದಿನ, ಧಾನ್ಯ ಬಿತ್ತುವುದು, ಪ್ರಯಾಣಕ್ಕೆ ತಕ್ಕ ಶುಭ ಇತ್ಯಾದಿಗಳನ್ನು ವರ್ಣಿಸಿದೆ. ಈ ಎರಡು ಅಧ್ಯಾಯಗಳು ಜ್ಯೋತಿಶ್ಶಾಸ್ತ್ರವನ್ನು ಅವಲಂಬಿಸಿವೆ. ಮುಂತಾಚಾರ್ಯರು, ಶೌನಕ, ಗಾರ್ಗ್ಯ, ವರಾಹ ಇವರ ಬರವಣಿಗೆಗಳ ಮೇಲೆ ಆಧರಿಸಿವೆ.

೩ನೆಯ ಅಧ್ಯಾಯ ವಾಸ್ತು ಪ್ರಕರಣ. ಮನುಷ್ಯನಿಗೆ ಬೇಕಾಗಿರುವ ಎಲ್ಲಾ ಸುಖ ಸಾಧನೆಗಳಲ್ಲಿ ಮನೆ ಬಹುಮುಖ್ಯ. ಇದನ್ನು ಕಟ್ಟಲಾರಂಭಿಸಲಿಕ್ಕೆ ಶುಭ ತಿಥಿ ನಕ್ಷತ್ರಗಳು, ಮನೆಗೆ ಉಪಯೋಗಿಸುವ ಮರಗಳ ಜಾತಿ ಸ್ವರೂಪ, ಇದ್ದ ಮನೆಯನ್ನು ಹೆಚ್ಚಿಸುವುದಕ್ಕೆ ತಕ್ಕ ದಿಕ್ಕು, ಮನೆಯಲ್ಲಿ ಸ್ನಾನ ಅಡುಗೆ ಈ ಭಾಗಗಳಿಗೆ ಬೇಕಾಗುವ ಉದ್ದಗಲಗಳ ಪ್ರಮಾಣ, ಬಾಗಿಲ್ವಾಡವನ್ನು ನಿಲ್ಲಿಸುವುದಕ್ಕೆ ತಕ್ಕ ಶುಭ ದಿನ ಇತ್ಯಾದಿ, ಅರಮನೆಯ ಬಗೆಗೂ ಸ್ವಲ್ಪ ವಿವರಣೆ ಇದೆ.

೪ನೆಯ ಅಧ್ಯಾಯ ಉತ್ಪಾತ ಅಧ್ಯಾಯ. ಲೋಕದೊಳಗೆ ಮನುಷ್ಯನ ಅನ್ಯಾಯದಿಂದ ಪಾಪ ಹೆಚ್ಚುವುದು. ಪಾಪ ಹೆಚ್ಚುವುದರಿಂದ ದೈವ ವಿಮುಖವಾಗುವುದು. ಆ ದೇವತಾ ಕ್ಷೋಭೆಯಿಂದ ಅಪಾಯ ಹುಟ್ಟುವುದು. ಆ ಅಪಾಯಗಳು ಮೂರು ತರ: ದಿವ್ಯ, ಅಂತರಿಕ್ಷ, ಭೌಮ್ಯ. ದಿವ್ಯ ಎಂದರೆ ತಾರೆಗಳ ಮತ್ತು ಗ್ರಹಗಳಲ್ಲಿ ತೋರುವ ವಿಕಾರ. ಆಕಾಶದಲ್ಲಿ ತೋರುವ ವಿಕಾರ ಚಂಡಮಾರುತ, ಸಿಡಿಲು, ಮಿಂಚು, ಗುಡುಗು. ಭೂಮಿಯಲ್ಲಿ ತೋರುವ ವಿಕಾರಗಳು (ಭೂಕಂಪ), ಯಾವಾಗಲೂ ಬತ್ತದಿರುವ ಕೆರೆ ಬತ್ತುವುದು, ನದಿ ನೀರು ಮೇಲ್ಗಡೆಗೆ ಏರುವುದು, ನೀರಿನಲ್ಲಿ ಉರಿ ತೋರುವುದು ಇವೇ ಮೊದಲಾದವು. ನೀರಿನ ವಿಕಾರದ ಉತ್ಪಾತಗಳಿಗೆ ವರುಣನನ್ನು ಪೂಜಿಸಿ ಜಪ ಹೋಮಾದಿಗಳನ್ನು ಮಾಡಿಸಬೇಕು. ಇವನ್ನೆಲ್ಲ ನಂಬಲಿಕ್ಕೆ ಆಗುವುದಿಲ್ಲ ಎನ್ನುವವರಿಗೆ ಆಂಧ್ರದಲ್ಲಿ ಕೆಲವು ವರ್ಷಗಳ ಹಿಂದಿನ ಚಂಡಮಾರುತ ಒಳ್ಳೆಯ ಉತ್ತರ. ಆಗ ಸಮುದ್ರದಲ್ಲಿ ಉರಿಯನ್ನು ನೋಡಿದವರು ವರ್ಣಿಸಿದ್ದಾರೆ.

೫ನೆಯ ಅಧ್ಯಾಯ ಉದಕಾರ್ಗಳ. ಜೀವನಕ್ಕೆ ನೀರು ಅತ್ಯವಶ್ಯಕ. ಈಗ ಈ ನೀರು ಸಾಕಾಗದೆ ಹೋಗುತ್ತಿದೆ. ಆದ್ದರಿಂದ ಭೂಮಿಯ ಕೆಳಗೆ ಇರುವ

ನೀರನ್ನು ಹುಡುಕುವುದು ಅನಿವಾರ್ಯ. ಅದಕ್ಕೆ ಸಹಾಯ ಮಾಡುವ ಈ ಅಧ್ಯಾಯ ಎಷ್ಟು ಉಪಯುಕ್ತವೆಂದು ಬೇರೆ ಹೇಳಬೇಕಾಗಿಲ್ಲ. ನೀರು ಎಷ್ಟು ಪ್ರಮಾಣದ ಕೆಳಗೆ ದೊರಕುವುದು, ದೊರಕುವ ನೀರಿನ ರುಚಿ ಎಂತಹದು, ಬಾವಿ ತೋಡುವಾಗ ಕೆಳಗಡೆ ಬಂಡೆ ಅಡ್ಡವಾದರೆ ಅದನ್ನು ಮೃದುಮಾಡುವುದು ಹೇಗೆ, ಕಲ್ಲನ್ನು ಸೀಳುವ ಉಳಿಗಳನ್ನು ವಜ್ರದಂತೆ ಗಟ್ಟಿ ಮಾಡುವ ಕ್ರಮ, ಇವೆಲ್ಲ ವನ್ನೂ ಹೇಳಿರುವನು.

ಎಂಥಲ್ಲಿ ನೀರು ಸಿಗುವುದು? ಇದಕ್ಕೆ ಉತ್ತರ, ಮರ ಗಳು ಚಿಗುರಿ ಸೊಂಪಾಗಿ ಬೆಳೆದಿರುವ ಸ್ಥಳದಲ್ಲಿ ನೀರು ಸಿಕ್ಕುವುದು. ಮರಗಳು ಒಣಗಿ ಬಿದ್ದ ಸ್ಥಳದಲ್ಲಿ ಸಿಗುವು ದಿಲ್ಲ. ಸುತ್ತಲೂ ಹುಲ್ಲಿಲ್ಲದ ಬಯಲಿನಲ್ಲಿ ಹುಲ್ಲು ಬೆಳೆದಿರುವ ಸ್ಥಳ, ಹುಲುಗಿಲು ಮರಗಳು ಬೆಳೆದಿರುವ ಸ್ಥಳದಲ್ಲಿಯೂ ಕೆಂಪು ಚಿಗುರುಗಳು ಮರಗಳಲ್ಲಿ ತೋರುವ ಸ್ಥಳದಲ್ಲಿಯೂ ನೀರು ಸಿಕ್ಕುತ್ತದೆ.

ಒಂದು ಸ್ಥಳದಲ್ಲಿ ಬೆಳೆದಿರುವ ಮರಗಿಡಗಳ ಜಾತಿ ವಿಶೇಷ, ಬೆಳೆದಿರುವ ಸ್ವರೂಪ—ಇವುಗಳ ಪ್ರಕಾರ ಆ ಸ್ಥಳಕ್ಕೆ ಇಷ್ಟಿಷ್ಟು ಹಸ್ತ ಪ್ರಮಾಣ ದೂರದಲ್ಲಿ ನೀರು ಸಿಕ್ಕುವುದು.

ಕೇಂದ್ರ ಸರ್ಕಾರದಲ್ಲಿ ಭೂಗರ್ಭ ಜಲವನ್ನು ಕಂಡು ಹಿಡಿಯಲು ಒಂದು ಶಾಖೆಯಿರುವುದು. ಅದರಲ್ಲಿ ಕೆಲಸ ಮಾಡುವವರು ಚಾವುಂಡರಾಯನ ಹೇಳಿಕೆಗಳ ಸತ್ಯಾ ಸತ್ಯತೆಯನ್ನು ಪ್ರಯೋಗಗಳಿಂದ ಕಂಡುಹಿಡಿಯಬೇಕು.

೭ನೆಯ ಅಧ್ಯಾಯ ವೃಕ್ಷಾಯುರ್ವೇದದ ಪ್ರಕ ರಣ. ಮನುಷ್ಯನ ಆಹಾರಕ್ಕೂ ಅಲಂಕಾರಕ್ಕೂ ಅತ್ಯಾವಶ್ಯಕವಾದ ಫಲಪುಷ್ಪ ವೃಕ್ಷಲತೆಗಳನ್ನು ಬೆಳೆಸುವ ಕ್ರಮ ಮತ್ತು ಹೆಚ್ಚು ಫಲ ಬರುವಂತೆ ಮಾಡುವ ಕ್ರಮ, ಮರಗಳನ್ನು ಬಿತ್ತುವಾಗ ಮತ್ತು ನಾಟುವಾಗ ಗುಳಿಗಳ ಅಂತರ, ಗಿಡಮರಗಳಿಗೆ ಬರುವ ರೋಗಗಳಿಗೆ ಔಷಧಿ—ಇವುಗಳನ್ನು ಹೇಳಿ ಕೆಲವು ಸಂಸ್ಕಾರಗಳನ್ನು ಮಾಡಿದರೆ ಫಲ ಬಿಡುವುದರಲ್ಲಿ ಕೆಲವು ಆಶ್ಚರ್ಯಕರವಾದ ಪರಿಣಾಮಗಳಾಗುವುವು ಎನ್ನುತ್ತಾನೆ.

(೧) ಒಂದು ಮರದ ಕೊಂಬೆಯನ್ನಾಗಲೀ ಬೀಜ ವನ್ನಾಗಲೀ ಸಮನಾಗಿ ಸೀಳಿ, ಸೇರಿಸಿ ಕಟ್ಟಿ, ತುಪ್ಪ, ಜೇನುತುಪ್ಪ ಇವನ್ನು ಚೆನ್ನಾಗಿ ಬಳಿದು ನೆಟ್ಟರೆ ಒಂದೇ ಬುಡದ ಮರದಲ್ಲಿ ಎರಡು ಬಗೆಯ ಹಣ್ಣುಗಳು ಬಿಡುವುವು. (ಈಗ ಬೋಗನ್‌ವೇಲ್‌ನಲ್ಲಿ ಎರಡು ಬಗೆಯ ಹೂವು ಬಿಡುವುದು ಗೊತ್ತಿದೆ.)

(೨) ಹಣ್ಣಿನಲ್ಲಿ ಬೀಜ ಇಲ್ಲದ ಹಾಗೆ ಮಾಡುವುದು ಸಾಧ್ಯವಂತೆ. ಈಗ ದ್ರಾಕ್ಷಿ, ಪಪ್ಪಾಯಿಗಳಲ್ಲಿ ಹೀಗೆ ಮಾಡಿದ್ದಾರೆ.

೭ನೆಯ ಅಧ್ಯಾಯ ಸುಗಂಧ ವಾದ. ಮನುಷ್ಯರ ಆರೋಗ್ಯಕ್ಕೂ ಉಲ್ಲಾಸಕ್ಕೂ ವಿರೋಧಿಯಾದ ದುರ್ಗಂಧ ವನ್ನು ಹೋಗಲಾಡಿಸಿ ಸುಗಂಧವನ್ನುಂಟುಮಾಡುವ ವಸ್ತು ಗಳನ್ನು ತಯಾರಿಸುವ ಕ್ರಮ ಈ ಅಧ್ಯಾಯದಲ್ಲಿ ಹೇಳಿದೆ. ಬಾಯಿ ಮುಕ್ಕಳಿಸುವ ಸುಗಂಧಜಲ, ಬಗೆಬಗೆಯ ಪರಿಮಳ ತೈಲ, ದೇಹಧೂಪ, ವಸ್ತ್ರಧೂಪದ್ರವ್ಯಗಳು, ಬಗೆಬಗೆಯ ಊದುಬತ್ತಿ, ದಶಾಂಗ ಧೂಪ,ತಗಣಿ, ನೊರಜು ಮೊದ ಲಾದ ಕಚ್ಚುವ ಕ್ರಿಮಿಗಳನ್ನು ನಿವಾರಿಸುವ ಧೂಪ, ಹೂವು ಗಳ ದ್ರವವನ್ನು ಸಂಗ್ರಹಿಸುವ ಕ್ರಮ, ಕಸ್ತೂರಿಯ ವಾಸನೆ ಯನ್ನು ಪಡೆವ ಕ್ರಮ, ಹೂವುಗಳಿಗೆ ಸುವಾಸನೆ ಹೆಚ್ಚಿಸಲು ಧೂಪ ಮಾಡುವ ಕ್ರಮ, ಇವುಗಳನ್ನು ಹೇಳಿ, ಕೃತ್ರಿಮ ಕುಂಕುಮ ಕೇಸರಿ, (V, 63), ಕೃತ್ರಿಮ ಕಸ್ತೂರಿ (V, 65), ಕರ್ಪೂರ (V, 67), ಕೃತ್ರಿಮ ಇಂಗು (V, 68–69), ಇವುಗಳನ್ನು ತಯಾರಿಸುವ ಕ್ರಮ ಗಳನ್ನು ಹೇಳಿದ್ದಾನೆ.

೮ನೆಯ ಅಧ್ಯಾಯ ಸೂಪ ಶಾಸ್ತ್ರ. ಅನ್ನವನ್ನು ಕೆಲವು ದಿನಗಳವರೆಗೆ ಕೆಡದಂತಿಡುವ ಕ್ರಮ, (P 120 V 3), ಸತ್ವಕಾರಿಯಾದ ಆಹಾರ (121 V 6-8, 10) ಇಡ್ಡಲಿಗೆ (V, 11), ಲಡ್ಡು, ಮಾಂಸ, ಮೀನುಗಳ ಭಕ್ಷ್ಯ ಗಳನ್ನು ತಯಾರಿಸುವ ವಿಧಾನ, ಸಂಡಿಗೆ, ಹಾಗಲಕಾಯಿ ಇತ್ಯಾದಿಗಳಲ್ಲಿ ಕಹಿ ನಿವಾರಿಸುವ ಕ್ರಮ ಇಲ್ಲಿ ಹೇಳಿದೆ.

ಹಣ್ಣುಗಳ ರಸವನ್ನು ದ್ರವಿಯಿಸುವ ಕ್ರಮ, ಸಕ್ಕರೆ, ಸುವಾಸನೆ ತುಪ್ಪ (129V, 40; 130V, 41) ಸುವಾಸನೆ ಬೆಣ್ಣೆ (V, 42), ಕೃತ್ರಿಮ ಹಾಲು (V, 45) ಕೃತ್ರಿಮ ಮೊಸರು (V, 48-49) ಈ ಕ್ರಮಗಳನ್ನು ಹೇಳಿದ್ದಾನೆ.

೯ನೆಯ ಅಧ್ಯಾಯ : ನರವೈದ್ಯ, ಸ್ತ್ರೀವೈದ್ಯ, ಬಾಲ ವೈದ್ಯ, ಗೋ ಅಶ್ವ ಗಜ ವೈದ್ಯ.

ಮೊರಾರ್ಜಿ ದೇಸಾಯರ ಔಷಧಿಯನ್ನು ಜ್ವರಕ್ಕೆ, ಗೋಮೂತ್ರದಲ್ಲಿ ಬನ್ನಿಯ ಬೀಜ ಅರೆದು ಉಪಯೋಗಿಸುವುದು ಮುಖಕಾಂತಿ ಹೆಚ್ಚಿಸುವುದಕ್ಕೆ.

ವಿಷಮಜ್ವರ (೧೪೦), ಕ್ಷಯ (೧೪೩), ಇವುಗಳಿಗೆ ಸುಲಭ ಚಿಕಿತ್ಸೆ. ಆಯುಷ್ಯ ವರ್ಧನ (೧೪೫), ಬುದ್ಧಿ ಪೆರ್ಚುವುದು (೧೪೫), ವೀರ್ಯವೃದ್ಧಿ (೧೪೬), ನರೆ ಕಪ್ಪಾಗುವುದಕ್ಕೆ (೧೪೭), ತೊನ್ನು (೧೬೨), ನೆತ್ತರು ಹೊಡಗೆ (೧೬೨; ರಕ್ತದಬತ್ತಡ?), ಮೂಲವ್ಯಾಧಿ, ಅತಿ ಕ್ರೂರವಾದ ವ್ಯಾಧಿಗಳಾದ ಕ್ಷಯ ಮುಂತಾದುವುಗಳಿಗೆ ಬಹು ಸುಲಭವಾದ ಔಷಧಿಯನ್ನು ಹೇಳಿರುವುದರಿಂದ ಅವು ಪರೀಕ್ಷಾರ್ಹ.

ಸ್ತ್ರೀವೈದ್ಯದಲ್ಲಿ ಗರ್ಭ ನಿಲ್ಲುವುದಕ್ಕೆ ಹೇಳಿರುವ ಈತನ ಕೆಲವು ಉಪಾಯಗಳು ಬೆಳೆಯುತ್ತಿರುವ ಜನಸಂಖ್ಯೆಯನ್ನು ಕಡಿಮೆ ಮಾಡಲು ಆಸ್ಥೆ ವಿಶೇಷವಾಗಿರುವ ಈ ದಿನಗಳಲ್ಲಿ ಪರೀಕ್ಷೆಗೆ ಯೋಗ್ಯವಾಗಿದೆ (೧೭೯–೧೮೦). ಶಿಶುವೈದ್ಯದಲ್ಲಿ ಅವುಗಳ ದೃಷ್ಟಿ ಪರಿಹಾರಕ್ಕೆ ತಾಯಿತಗಳನ್ನು ಕಟ್ಟಲು ಹೇಳುತ್ತಾನೆ. ಬೇರೆ ಕಡೆ ತಾಯಿತ ಹೇಳದಿರುವುದು ಗಮನಾರ್ಹ. ಹಲ್ಲು ಬೇಗ ಬರಲಿಕ್ಕೆ, ಅತಿಸಾರಕ್ಕೆ ಔಷಧಿ ಹೇಳಿದ್ದಾನೆ.

ಪಶುವೈದ್ಯದ ಬಗ್ಗೆ ನಾನು ಏನೂ ಹೇಳುವುದಿಲ್ಲ. ಆದರೆ ಪಶುವೈದ್ಯರು ಇದನ್ನು ಅವಶ್ಯ ಓದಬೇಕೆಂದು ಮಾತ್ರ ಹೇಳುತ್ತೇನೆ.

೧೦ನೆಯ ಅಧ್ಯಾಯ: ವಿಷತತ್ವ ಪ್ರಕರಣದಲ್ಲಿ ಎಲ್ಲಾ ತರಹ ವಿಷಸ್ವರೂಪಗಳನ್ನೂ ಹೇಳಿ, ಕೆಲವು ಪ್ರಾಣಿಗಳು ಕಚ್ಚಿದರೆ ಔಷಧ ಹೇಳಿದ್ದಾನೆ. ಉದಾ. ಹಾವು ಕಚ್ಚಿದರೆ ವಿಷ ಹಬ್ಬದ ಹಾಗೆ ಔಷಧಿಯನ್ನು, ನಾಯಿ ಕಚ್ಚಿದರೆ ನಂಜು ಆಗದ ಹಾಗೆ ಔಷಧಿಯನ್ನು ಹೇಳಿದ್ದಾನೆ. ಹಾವು ಕಚ್ಚಿದರೆ ಮಂತ್ರವನ್ನು ಹೇಳಬೇಕೆನ್ನುತ್ತಾನೆ. ಜತೆಗೆ ಔಷಧಿಯನ್ನು ಹೇಳುತ್ತಾನೆ (೨೦೧-೨೦೩).

೧೧ನೆಯ ಅಧ್ಯಾಯ : ಸರ್ವಲಕ್ಷಣ ಪರಿಜ್ಞಾನ ಪ್ರಕರಣ. ಇದರಲ್ಲಿ ಸ್ತ್ರೀಪುರುಷ ಗಜಾಶ್ವ ಗೋಶುನಕ ಅಜ ಕುಕ್ಕುಟ ಸ್ತ್ರೀಪುರುಷ ಅವಯವಗಳು ಹೇಗೆ ಇದ್ದರೆ ಯಾವುದನ್ನು ಸೂಚಿಸುತ್ತದೆ ಎನ್ನುವುದನ್ನು ಇಲ್ಲಿ ಹೇಳುತ್ತಾನೆ. ಹಸ್ತಸಾಮುದ್ರಿಕವನ್ನೂ ಹೇಳುತ್ತಾನೆ. ಇಷ್ಟವಿರುವವರು ಇದನ್ನು ಓದಬಹುದು.

೧೨ನೆಯ ಅಧ್ಯಾಯ ಶಕುನ ಪ್ರಕರಣ. ಸಾಮಾನ್ಯ ಶಕುನಗಳು, ಬೆಕ್ಕು, ಪಕ್ಷಿ, ಹಲ್ಲಿ ಮೊದಲಾದ ಶಕುನಗಳನ್ನು ಹೇಳಿದೆ. ಇಂಥ ಮೂಢ ನಂಬಿಕೆಗಳು ಎಲ್ಲಾ ಜನರಲ್ಲಿಯೂ ಇವೆ.

ಲೋಕೋಪಕಾರದ ಮಹತ್ವ : ಲೋಕೋಪಕಾರದಲ್ಲಿ ಮೂಢನಂಬಿಕೆಗಳು ಕಡಿಮೆ. ಚಿಕಿತ್ಸಿಕ ಬುದ್ಧಿ, ಪ್ರಯೋಗಶೀಲತೆ ಹೆಚ್ಚಾಗಿ ಕಾಣುತ್ತದೆ. ಬರಬರುತ್ತ ನಮ್ಮ ಜನರಲ್ಲಿ ಈ ಒಳ್ಳೆಯ ಗುಣಗಳು ಕಡಿಮೆಯಾದವು ಅಥವಾ ಹೋಗೇ ಹೋದವು ಅಂತ ಕೂಡ ಹೇಳಬಹುದು. ಸು. ೧೭೦೦ರಲ್ಲಿ ಬರೆದ ಕಡೆಯ ವಿಶ್ವಕೋಶವಾದ ಶಿವತತ್ವರತ್ನಾಕರದಲ್ಲಿ ವಿಷಯ ಸಂಗ್ರಹ ಅಪಾರವಾಗಿದ್ದರೂ ಮೇಲೆ ನಾವು ಲೋಕೋಪಕಾರದಲ್ಲಿ ಕಂಡಂಥ ಪ್ರಯೋಗಶೀಲಗಳನ್ನು ಕಾಣುವುದಿಲ್ಲ. ಲೋಕೋಪಕಾರ ಬರೆದ ಕಾಲದಲ್ಲಿ ಮತ್ತು ಅದರ ಹಿಂದೆ ನಮ್ಮ ಜನರು ವಿಜ್ಞಾನದಲ್ಲಿ ಮಾಡಿದ ಪ್ರಯೋಗಗಳನ್ನು ಅರಬ್ಬರು, ಚೀನಿಯರು ನಮ್ಮಿಂದ ಕಲಿತುಕೊಂಡರು. ಅವರಿಂದಲೂ ಕಲಿಯಲು ನಾವು ಹಿಂಜರಿಯುತ್ತಿರಲಿಲ್ಲ. ವರಾಹಮಿಹಿರ ಹೇಳುತ್ತಾನೆ. ನಮ್ಮ ದೇಶದಲ್ಲಿ ಮಾತ್ರ ಋಷಿಗಳಿಲ್ಲ. ಬೇರೆ ದೇಶದಲ್ಲಿಯೂ ಋಷಿಗಳಿದ್ದಾರೆ. ಅವರಿಂದ ನಾವು ಕಲಿಯುವುದು ತಪ್ಪಲ್ಲ. ಈತನು ರೋಮಕ ಸಿದ್ಧಾಂತವನ್ನು ಬರೆದು ನಮ್ಮ ಜನರಿಗೆ ಗ್ರೀಕ್ ಖಗೋಲ ವಿಜ್ಞಾನದ ಪರಿಚಯ ಮಾಡಿಕೊಟ್ಟ. ಕ್ರಮೇಣ ನಮ್ಮ ಜನರಲ್ಲಿ ಒಂದು ತರಹ ಅಹಂಕಾರ ಬಂದು ಚಿಕಿತ್ಸಿಕ ಬುದ್ಧಿ ಕಳೆದುಕೊಂಡೆವು. ನಾವು ಬುದ್ಧಿವಂತರು. ಇತರರು ಮ್ಲೇಚ್ಛರು, ಅವರಿಂದ ನಾವು ಕಲಿಯತಕ್ಕದ್ದೇನೂ ಇಲ್ಲ ಅನ್ನುವ ಭಾವನೆ ಬಂತು. ಈ ಭಾವನೆ ಇನ್ನೂ ಇಲ್ಲದೆ ಇದ್ದ ಕಾಲದಲ್ಲಿ ಬರೆದದ್ದು ಲೋಕೋಪಕಾರ. ಇದರ ಅನೇಕ ಭಾಗಗಳಲ್ಲಿ ಹೇಳಿರುವ ಪ್ರಯೋಗಗಳನ್ನು ಮಾಡಿ ಅವುಗಳ ಸತ್ಯಾಸತ್ಯತೆಯನ್ನು ನಾವು ಕಂಡುಕೊಳ್ಳಬೇಕು.

ದೇವರ ಕೊಂಡಾರೆಡ್ಡಿ

ಸತ್ಯವಾಕ್ಯನ ಹಿರೇಕಾಟಿ ಶಾಸನ

ಗುಂಡ್ಲುಪೇಟೆ-ನಂಜನಗೂಡು ರಸ್ತೆಯಲ್ಲಿ, ಗುಂಡ್ಲುಪೇಟೆಯಿಂದ ೧೪ ಮೈಲಿ ದೂರದಲ್ಲಿ ಹಿರೇಕಾಟಿಯಿದೆ. ಈ ಊರಿನ ಹಿಂಬದಿಯಲ್ಲಿ ಕಲ್ಲುಗಣಿ ಇದೆ. ಹಿಂದೆ ಇಲ್ಲಿ ಎತ್ತರವಾದ ಕಲ್ಲುಗುಡ್ಡವಿದ್ದು ಈಗ ಸಂಪೂರ್ಣವಾಗಿ ಸೀಳಿ ನೆಲಸಮ ಮಾಡಿರುತ್ತಾರೆ. ಒಂದು ಗುಡ್ಡದಲ್ಲಿ ದೇವಾಲಯವಿದ್ದು, ಇದನ್ನು ಮಾತ್ರ ಮುಟ್ಟದೆ ಅದು ಹಾಗೆಯೇ ಎತ್ತರವಾಗಿ ಉಳಿದಿದೆ. ಈ ಗುಡ್ಡದ ಮೇಲೆ ಚಂದ್ರಶೇಖರ ದೇವಾಲಯವಿದ್ದು, ಈ ದೇವಾಲಯದ ಪ್ರಾಕಾರದ ಹೊರಗೆ ಈಶಾನ್ಯ ಮೂಲೆಯಲ್ಲಿ ಮೇಲೆ ಹೆಸರಿಸಿರುವ ಶಾಸನ ಲಿಪಿ ನಿಂತಿದೆ.

ಶಾಸನವು ೪ ಅಡಿ ಉದ್ದ ೨ ಅಡಿ ಅಗಲವಾಗಿದ್ದು ೧೨ ಸಾಲುಗಳನ್ನು ಹೊಂದಿದೆ. ಶಾಸನ ಪಾಠದ ತಳದಲ್ಲಿ ಹಸುಕರುವಿನ ರೇಖಾಚಿತ್ರವಿದ್ದು ಇವುಗಳ ಹಿಂಬದಿಯಲ್ಲಿ ಸೂರ್ಯಚಂದ್ರರನ್ನು ಸೂಚಿಸುವ ಸಣ್ಣ ರೇಖಾ ಗೆರೆಯಿದೆ. ಶಾಸನದಲ್ಲಿ ಆರನೆಯ ಸಾಲನ್ನು ಶಾಸನದ ಪಾಠವನ್ನು ಉತ್ಕೀರ್ಣಸಿದನಂತರ ಬರೆದಿರುವಂತೆ ತಿಳಿಯುತ್ತದೆ. ೫ ಮತ್ತು ೭ನೇ ಸಾಲಿನ ಮಧ್ಯೆ ಜಾಗವಿರುವೆಡೆಯಲ್ಲೆಲ್ಲಾ ಈ ಸಾಲನ್ನು ಸಣ್ಣಗೆ ಕೆತ್ತಿದೆ. ಶಾಸನದಲ್ಲಿ ಬಂದಿರುವ 'ವ'ಕಾರ ಮತ್ತು 'ಮ'ಕಾರಗಳು ಎಲ್ಲಾ ಕಡೆ ಬಾಯಿ ಬಿಡದಿದ್ದರೂ ಒಂದನೇ ಸಾಲಿನಲ್ಲಿ ಬರುವ ವರ್ಮ ಎಂಬಲ್ಲಿನ 'ಮ'ಕಾರ ಮಾತ್ರ ಬಾಯಿ ಬಿಟ್ಟಿದೆ. ಶಕಟರೇಫ ಸ್ಪಷ್ಟ ಆಕಾರವನ್ನು ಪಡೆದಿದೆ. 'ಎ'ಕಾರದ ತಲೆಕಟ್ಟು ಕೆಲವು ಕಡೆ ಮಾತ್ರ ಎಡಕ್ಕೆ ಬಾಗಿದ್ದರೂ ಬಹುತೇಕ ಬಲಕ್ಕೆ ತಿರುಗಿ ಮೇಲಕ್ಕೆ ಏರಿದೆ.

ಶಾಸನವು ಸತ್ಯವಾಕ್ಯ ಕೊಙ್ಗುಣಿವರ್ಮನ ಬಿರುದುಗಳಿಂದ ಪ್ರಾರಂಭವಾಗುತ್ತದೆ. ಇವನ ರಾಜ್ಯಭಾರದಲ್ಲಿ ಕ್ರಾನ್ತಯ ಎಂಬುವವನು ಬೆಟ್ಟ ಮಹಾದೇವರಿಗೆ ಕಾರೆನಾಡಿನ ಎಪ್ಪತ್ತು ನಾಙ್ಗಾಮುಣ್ಡರ ಸಾಕ್ಷಿಯಾಗಿ ಮೂವತ್ತು ಗದ್ಯಾಣ ಪೊನ್ ಮತ್ತು ಮಣ್ಣನ್ನು ನೀಡುತ್ತಾನೆ.

ಈ ಶಾಸನದಲ್ಲಿ ರಾಜನ ಆಳ್ವಿಕೆಯ ವರ್ಷವಾಗಲೀ ಶಕ ಕಾಲವಾಗಲೀ ಉಲ್ಲೇಖವಾಗಿಲ್ಲ ; ಸತ್ಯವಾಕ್ಯ ಎಂಬ ವಿಶೇಷಣ ಉಕ್ತವಾಗಿದೆ. ಈ ವಿಶೇಷಣವು ಒಂದನೆಯ ರಾಚಮಲ್ಲನ ಕಾಲದಿಂದೀಚೆಗೆ ಒಂದು ಆಳ್ವಿಕೆಯ ತಲೆ ಬಿಟ್ಟು ಇನ್ನೊಂದು ಆಳ್ವಿಕೆಯ ತಲೆಗೆ ಸಾಗಿ ಬಂದಿದೆ. ಸತ್ಯವಾಕ್ಯ ಎಂಬ ಈ ವಿಶೇಷಣವು ಒಂದನೆಯ ರಾಚಮಲ್ಲ, ಎರಡನೆಯ ರಾಚಮಲ್ಲ, ನರಸಿಂಹ, ಇಮ್ಮಡಿ ಬೂತುಗ, ಮಾರಸಿಂಹ ಮತ್ತು ನಾಲ್ಕನೆಯ ರಾಚಮಲ್ಲರಿಗೆ ಅನ್ವಯಿಸುತ್ತದೆ. ಈ ಮೇಲೆ ಹೆಸರಿಸಿದ ಅರಸರಲ್ಲಿ ಈ ಶಾಸನದಲ್ಲಿ ಉಕ್ತನಾಗಿರುವ ಸತ್ಯವಾಕ್ಯನಾರು ಎಂದು ನಿರ್ಣಯಿಸುವುದು ಸೂಕ್ಷ್ಮ. ಶಾಸನದಲ್ಲಿ ದಾನದ ವಿಷಯ ತಿಳಿಸುವಾಗ 'ನರಗ' ಎಂಬ ಉಲ್ಲೇಖ ಬರುತ್ತದೆ. ಇದನ್ನು ಪುರುಷವಾಚಕವಾಗಿ ಪರಿಗಣಿಸಿದರೆ ಈ ಶಬ್ದ ಇಮ್ಮಡಿ ಬೂತುಗನ ಸು. ಕ್ರಿ. ಶ. ೯೫೦ ರ ಕಲ್ಕುಣಿ ಶಾಸನದಲ್ಲಿ, ಸತ್ಯವಾಕ್ಯ ಮಾರಸಿಂಹನ ಸು. ಕ್ರಿ. ಶ. ೯೭೨ರ ಆಸಂದಿ ಶಾಸನದಲ್ಲಿ ಕಾಣಸಿಗುತ್ತದೆ. ಈ ಆಧಾರದ ಮೇಲೆ ಮತ್ತು ಲಿಪಿಯ ಆಧಾರದ ಮೇಲೆ ಇದರ ಕಾಲವನ್ನು ಸು. ಕ್ರಿ. ಶ. ೯೬೫ ಎಂದು ಹೇಳಬಹುದು.

ದೇವಾಲಯವೂ ಇದೇ ಕಾಲದಲ್ಲಿ ರಚಿತವಾಗಿದ್ದಿರಬಹುದು.

ಶಾಸನದಲ್ಲಿ ಬರುವ ಪಾಠವನ್ನು ಗಮನಿಸಿದಾಗ ಅರ್ಥ ಸ್ಪಷ್ಟವಾಗುವುದಿಲ್ಲ. ಶಾಸನದಲ್ಲಿ ಸಣ್ಣಗೆ ಬರೆದಿರುವ ಆರನೆಯ ಸಾಲನ್ನು ಬಹುಶಃ ಎಂಟನೆಯ ಸಾಲಾದ ಮೇಲೆ ಓದಿದರೆ ಅರ್ಥ ಸ್ಪಷ್ಟವಾಗುತ್ತದೆ. ಆಗ ಇದರ ಅರ್ಥ 'ಕ್ರಾನ್ತಯ, ನರಗ ಕಾರೆನಾಡು ಎಪ್ಪತ್ತು ನಾಲ್ಕಾಮಣ್ಡು ಸಾಕ್ಷಿಯಾಗಿ ಎಲಚಿಗೆರೆ ಬೆಟ್ಟಮಹಾದೇವರ್ಗೆ ಮೂವತ್ತು ಗದ್ಯಾಣ ಪೊನ್ ಮತ್ತು ಉಳಿಕೆ ಕಾಲಭಾಗದಲ್ಲಿ ಮಣ್ಣನ್ನು ಧರ್ಮವಾಗಿ ಪಡೆದು ದಾನ ಬಿಡುತ್ತಾನೆ' ಎಂದಾಗುತ್ತದೆ.

ಶಾಸನದಲ್ಲಿ ಬಂದಿರುವ ಕಾರೆನಾಡು ಇದೇ ಗುಡ್ಡದ ಹಿಂಬದಿಯಲ್ಲಿದ್ದು ಹೆಗ್ಗಡದೇವನಕೋಟೆ ತಾಲೂಕಿಗೆ ಸೇರಿದೆ. ಎಲಚಗೆಱೆಯು ಬೆಟ್ಟದ ಈಶಾನ್ಯಕ್ಕಿದ್ದು, ಗುಂಡ್ಲುಪೇಟೆ–ನಂಜನಗೂಡು ರಸ್ತೆಯಲ್ಲಿದ್ದು ನಂಜನಗೂಡು ತಾಲೂಕಿಗೆ ಸೇರಿದೆ. 'ನರಗ ಮತ್ತು ಎಪ್ಪತ್ತು ನಾಲ್ಕಾಮುಂಡ ಸಾಕ್ಷಿ' ಎಂದಿರುವುದರಿಂದ 'ನರಗ' ಎಂಬುದು ಇಲ್ಲಿ ಪುರುಷವಾಚಕವಾಗಿ ಬಂದಿದೆ ಎನ್ನಬೇಕಾಗುತ್ತದೆ. ಅಂದರೆ ರಾಜ ಎಂಬ ಅರ್ಥ ಪ್ರಾಪ್ತವಾಗುತ್ತದೆ. ಈ ನರಗ ಶಾಸನದ ಆರಂಭದಲ್ಲಿ ಉಕ್ತನಾಗಿರುವ ಸತ್ಯವಾಕ್ಯ ಪೆರ್ಮಾನಡಿ ಇರಬೇಕು. ಬೆಟ್ಟ ಮಹಾದೇವರು ಈಗಿನ ಚಂದ್ರಶೇಖರ ದೇವಾಲಯವೇ ಆಗಿದೆ. ಹಿಂದೆ ಅದು ಎಲಚಗೆರೆಗೆ ಸೇರಿದ್ದರೂ ಈಗ ಹಿರೇಕಾಟಿಯ ಗಡಿಗೆ ಸೇರಿದೆ.

ಶಾಸನ ಪಾಠ

ಸ್ವಸ್ತಿ ಸತ್ಯವಾಕ್ಯ ಕೊಙ್ಗುಣಿವರ್ಮ
ಧರ್ಮ್ಮ ಮಹಾ ರಾಜಾಧಿರಾಜ ಕೊವ
ಳಾಳ ಪುರವರೇಶ್ವರ ನನ್ದ ಗಿರಿನಾ
ಥ ಶ್ರೀ ಮತ್ಪೆರ್ಮ್ಮಾನಡಿಗಳ್ ಪ್ರಿಥು
ವೀ ರಾಜ್ಯಂ ಗೆಯ್ಯುತ್ತಿರೆ ಕ್ರಾನ್ತಯ
* ಬೆಟ್ಟ ಮಹಾದೇವರ್ಗ್ಗೆ ಸಾಸನಮಾಗಿ ಕೊಟ್ಟೆದ *
ನರಗ ಕಾರೆನಾಡು ಎಪ್ಪತ್ತು ನಾಲ್ಕಾ
ಮುಣ್ಡು ಸಾಕ್ಷಿಯಾಗಿ ಎಲಚಿಗೆಱೆ
ಮೂವತ್ತು ಗದ್ಯಾಣ ಪೊನ್ ಕೊಟ್ಟುಗುಳ್ದಿ
ಕಾಲು ಮಣ್ಣಱಿ ಕೊಣ್ಡು ಬಿಟ್ಟರ ಱಿ ದವ[ಂ]
ವಾರಣಾಸಿಯ ಕೆಱೆಯ ಕಪಿಲೆಯನಱಿದ
ಪಾಪಕ್ಕೆ ಸಲ್ಲುಂ

(ಹಸು ಕರು ಚಿತ್ರ)

ಸತ್ಯವಾಕ್ಯ ಕೊಂಗುಣೀವರ್ಮ ಧರ್ಮ್ಮ ಮಹಾರಾಜನಾದ, ಕೊವಳಾಳ ಪುರವರೇಶ್ವರನಾದ, ನಂದಗಿರಿನಾಥನಾದ ಶ್ರೀಮತ್ಪೆರ್ಮಾನಡಿ ರಾಜ್ಯಭಾರ ಮಾಡುತ್ತಿದ್ದಾಗ ಕ್ರಾನ್ತಯನು ನರಗ ಮತ್ತು ಕಾರೆನಾಡು ಎಪ್ಪತ್ತನಾಲ್ಕು ನಾಡ ಗಾವುಂಡರ ಸಾಕ್ಷಿಯಾಗಿ ಎಲಚಿಗೆರೆ ಬೆಟ್ಟ ಮಹಾದೇವರಿಗೆ ಸಾಸನಮಾಗಿ ಮೂವತ್ತು ಗದ್ಯಾಣ ಹೊನ್ನನ್ನು ಕೊಟ್ಟು ಉಳಿದ ಕಾಲುಭಾಗದಲ್ಲಿ ಭೂಮಿಯನ್ನು ಪಡೆದು ಧರ್ಮಾರ್ಥವಾಗಿ ಬಿಟ್ಟನು. ಇದನ್ನು ನಾಶಪಡಿಸಿದವನು ವಾರಣಾಸಿಯನ್ನು, ಕೆರೆಯನ್ನು ನಾಶ ಮಾಡಿದ, ಗೋಹತ್ಯೆ ಮಾಡಿದ ಪಾಪಕ್ಕೆ ಈಡಾಗುತ್ತಾನೆ.

---

* ಈ ಸಾಲನ್ನು ಸಣ್ಣ ಅಕ್ಷರಗಳಲ್ಲಿ ಐದು ಮತ್ತು ಏಳನೇ ಸಾಲುಗಳ ಮಧ್ಯೆ ಜಾಗವಿರುವೆಡೆಯಲ್ಲೆಲ್ಲಾ ಕಂಡರಿಸಿರುತ್ತಾರೆ.

ಡಾ॥ ಸೂರ್ಯನಾಥ ಕಾಮತ್

ಕರ್ನಾಟಕದಲ್ಲಿ ಬಾಸೆಲ್ ಮಿಶನ್‌ನ ಸಾಧನೆ

ಪಾಶ್ಚಾತ್ಯರ ಪ್ರಭಾವದಿಂದ ಭಾರತದಲ್ಲಿ ಆದ ತೀವ್ರ ಬದಲಾವಣೆಗಳು ನಮಗೆ ಚಿರಪರಿಚಿತ. ಪಾಶ್ಚಾತ್ಯ ಶಿಕ್ಷಣ, ಪಾಶ್ಚಾತ್ಯ ವಿಜ್ಞಾನ ಹಾಗೂ ವಿಚಾರವಾದ, ಯಂತ್ರಯುಗ, ಸಾರಿಗೆ ಸುಧಾರಣೆ ಇವುಗಳೆಲ್ಲದರಿಂದ ಆದ ನವೋದಯ ('ರಿನೇಸಾನ್ಸ್') ಭಾರತೀಯ ಸಮಾಜದಲ್ಲಿ ಕ್ರಾಂತಿಕಾರಕ ಪರಿವರ್ತನೆಗಳನ್ನು ತಂದಿತು. ಮಧ್ಯಮವರ್ಗವು ಸಮಾಜದ ಮುಂದಾಳುತ್ವ ವಹಿಸಲು ಕಾರಣವಾಯಿತು. ಇಡೀ ಭಾರತದಲ್ಲಿ ಆದ ಈ ಪರಿವರ್ತನೆಗಳಿಂದ ಕರ್ನಾಟಕವೂ ಮುಕ್ತವಾಗಿರಲಿಲ್ಲ. ಇಂಥ ಪರಿವರ್ತನೆಗಳೇ ವಿವಿಧ ಮಾರ್ಗಗಳಿಂದ, ಮೂಲಗಳಿಂದ ಕರ್ನಾಟಕಕ್ಕೆ ಬಂದವು. ಈ ಪೈಕಿ ಕ್ರೈಸ್ತ ಮತ ಪ್ರಸಾರಕರು ಉಲ್ಲೇಖನೀಯರು. ಕರ್ನಾಟಕದಲ್ಲಿನ ಈ ಬದಲಾವಣೆಗಳಿಗೆ ಕಾರಣಕರ್ತರಾದ ಕ್ರೈಸ್ತ ಮತ ಪ್ರಸಾರಕರಲ್ಲಿ ಬಾಸೆಲ್ ಮಿಶನ್ ಅಗ್ರಗಣ್ಯವಾದುದು. ೧೮೩೪ ರ ಅಕ್ಟೋಬರ್ ೩೦ಕ್ಕೆ ಮಂಗಳೂರಿಗೆ ಬಂದು ಕಾರ್ಯಾರಂಭ ಮಾಡಿದ ಬಾಸೆಲ್ ಮಿಶನ್‌ಗೆ ಈಗ ಒಂದೂವರೆ ಶತಮಾನ ಮೀರಿತು.

ಸ್ವಿಜರ್ಲ್ಯಾಂಡ್ ದೇಶದಲ್ಲಿನ, ಫ್ರಾನ್ಸ್ ಮತ್ತು ಜರ್ಮನಿಗಳ ಗಡಿಯಲ್ಲಿರುವ ಜರ್ಮನ್ ಭಾಷಿಕ ಊರು ಬಾಸೆಲ್. ರ್‍ಹಾಯಿನ್ ನದಿದಂಡೆಯಲ್ಲಿರುವ ಒಂದು ಸ್ವಿಸ್ ಕ್ಯಾಂಟನ್‌ನ ಕೇಂದ್ರವಾಗಿರುವ ವಾಣಿಜ್ಯ, ಕೈಗಾರಿಕೆ ಹಾಗೂ ಶೈಕ್ಷಣಿಕ ಕೇಂದ್ರವಾದ ಈ ಪಟ್ಟಣವು ನೆಪೋಲಿಯನ್‌ನ ಯುದ್ಧಗಳ ಕಾಲದಲ್ಲಿ ಆಕ್ರಮಣದ ಭೀತಿಗೆ ಸತತವಾಗಿ ಒಳಗಾಗಿತ್ತು. ೧೮೧೫ರಲ್ಲಿ ರಷ್ಯಾದ ಸೈನ್ಯವು ಫ್ರಾನ್ಸ್ ವಿರುದ್ಧ ಯುದ್ಧ ನಡೆಸಲು ಬಾಸೆಲ್ ಮುಖಾಂತರವೇ ಹಾದುಹೋಗಿತ್ತು. ತಮ್ಮ ಊರು ಯಾವುದೇ ತೊಂದರೆಗೆ ಒಳಗಾಗದೆ ಸಾಬೀತಾಗಿ ಉಳಿಯುವಂತಾದರೆ, ತಾವೆಲ್ಲರೂ ಒಂದು ಕ್ರೈಸ್ತ ಧರ್ಮೋಪದೇಶಕರ ಶಾಲೆ ತೆರೆಯುವುದಾಗಿ ಊರ ಗಣ್ಯರು ಹರಕೆ ಹೊತ್ತರು. ನೆಪೋಲಿಯನ್ನನ ಪತನವಾಗಿ ಯೂರೋಪ್ ಅಪಾಯ ಮುಕ್ತವಾದಾಗ ಜರ್ಮನ್ ಇವ್ಯಾಂಜಲಿಕಲ್ ಸೊಸೈಟಿಯನ್ನು ಅವರು ೧೮೧೫ರ ಆಗಸ್ಟ್ ೧೫ರಂದು ಸ್ಥಾಪಿಸಿದರು, ಎಂಬುದಾಗಿ ೧೮೫೭ರಲ್ಲಿ ಪ್ರಕಟವಾದ 'ಬಾಸೆಲ್ ಮಿಶನ್ ರಿಪೋರ್ಟ್' ತಿಳಿಸುತ್ತದೆ. ಈ ಸಂಸ್ಥೆಯು ಮುಂದೆ 'ಬಾಸೆಲ್ ಇವ್ಯಾಂಜಲಿಕಲ್ ಸೊಸೈಟಿ' ಎಂದು ಪುನರ್ನಾಮಕರಣ ಹೊಂದಿತು. ಆರಂಭದಲ್ಲಿ ಆಫ್ರಿಕಾ ಖಂಡಕ್ಕೆ ಮಾತ್ರ ಮತಪ್ರಸಾರಕರನ್ನು ಕಳುಹಿಸುತ್ತಿದ್ದರೂ ೧೮೩೩ರ ಚಾರ್ಟರ್ ಆ್ಯಕ್ಟ್ (ಈಸ್ಟ್ ಇಂಡಿಯಾ ಕಂಪನಿಯು ಭಾರತದಲ್ಲಿ ವ್ಯವಹಾರ ನಡೆಸುವ ಹಕ್ಕನ್ನು ನವೀಕರಿಸುವ ಕಾಯಿದೆ) ಪ್ರಕಾರ, ಭಾರತದಲ್ಲಿ ಕ್ರೈಸ್ತ ಮಿಶನರಿಗಳು ಪ್ರಚಾರ ನಡೆಸುವ ಬಗ್ಗೆ ಇದ್ದ ಪ್ರತಿಬಂಧವನ್ನು ತೆಗೆದು ಹಾಕಿದಾಗ, ಭಾರತದಲ್ಲೂ ಕಣ್ಣು ಹಾಯಿಸುವ ನಿರ್ಣಯವನ್ನು ಬಾಸೆಲ್ ಮಿಶನ್ ಕೈಕೊಂಡು, ೧೮೩೪ರಲ್ಲಿ ಜಾನ್ ಕ್ರಿಸ್ಟೋಫ್ ಲೆಹ್ನರ್, ಕ್ರಿಸ್ಟೋಫ್ ಲಿಯೊನಾರ್ಡ್ ಗ್ರೆನರ್ ಮತ್ತು ಸ್ಯಾಮುವೆಲ್ ಹೆಬಿಕ್ ಎಂಬ ಮೂವರು ಕಲ್ಲಿಕೋಟೆ ಬಂದರಿನ ಮೂಲಕ ಬಂದು ಮಂಗಳೂರನ್ನು ತಲುಪಿ ಕಾರ್ಯಾರಂಭ ಮಾಡಿದರು.

ಬಾಸೆಲ್ ಮಿಶನ್‌ನವರು ಪ್ರಾಟೆಸ್ಟಂಟ್ ಪಂಥದವರು. ರೋಮನ್ ಕ್ಯಾಥಲಿಕರಂತೆ ಮತಾಂತರಿತ ಜನರ ಪೂರ್ತಿ ಹೆಸರು, ಭಾಷೆ, ಜೀವನ ವಿಧಾನಗಳಲ್ಲಿ ಒಮ್ಮೆಗೇ ಬದಲಾವಣೆ ಮಾಡಲು ಯತ್ನಿಸಿದವರಲ್ಲ. ಜೊತೆಗೆ ನವ ಶಿಕ್ಷಣ, ಭಾರತದ ಸಂಸ್ಕೃತಿ, ಸಾಹಿತ್ಯಗಳ ಅಧ್ಯಯನ ಹಾಗೂ ಮುದ್ರಣ, ಕೈಗಾರಿಕೆಗಳ ಬೆಳವಣಿಗೆಯ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳನ್ನು ತಂದವರು. ಕರ್ನಾಟಕದ ಕ್ರೈಸ್ತರಲ್ಲಿ ಕ್ಯಾಥಲಿಕರು ಬಹು ಸಂಖ್ಯಾತರು. ಪ್ರಾಟೆಸ್ಟೆಂಟರು ತೀರ ಅಲ್ಪ ಸಂಖ್ಯಾತರು. ಅವರಲ್ಲಿ ಬಾಸೆಲ್ ಮಿಶನ್, ಲಂಡನ್ ಮಿಷನ್ ಹಾಗೂ ವೆಸ್ಲಿಯನ್ ಮಿಶನ್ ಎಂಬ ಮೂರು ಮುಖ್ಯ ಗುಂಪುಗಳಿವೆ. (ಈ ಎಲ್ಲ ಪ್ರಾಟೆಸ್ಟೆಂಟರು ಈಗ 'ಚರ್ಚ್ ಆಫ್ ಸೌತ್ ಇಂಡಿಯಾ' ಎಂಬ ಸಾಮಾನ್ಯ ಸಂಸ್ಥೆಯಲ್ಲಿ ಒಂದಾಗಿದ್ದಾರೆ). ಆದರೆ ಈ ಪೈಕಿ ಬಾಸೆಲ್ ಮಿಶನ್ ಮಾತ್ರ ತನ್ನದೇ ಕೊಡುಗೆ ನೀಡಿ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಅದ್ವಿತೀಯ ಸ್ಥಾನ ಪಡೆಯಿತು. ದಕ್ಷಿಣ ಕನ್ನಡ, ಕೊಡಗು, ಧಾರವಾಡ ಹಾಗೂ ವಿಜಾಪುರ ಜಿಲ್ಲೆಗಳಲ್ಲಷ್ಟೇ ಅವರ ಚಟುವಟಿಕೆ ಸೀಮಿತವಾಗಿದ್ದರೂ ಅವರ ಚಟುವಟಿಕೆಗಳ ಪ್ರಭಾವ ವ್ಯಾಪಕ ಮತ್ತು ದೂರಗಾಮಿಯಾದ್ದು.

ಮತ ಪ್ರಚಾರಕ್ಕಾಗಿಯೇ ಬಂದವರು ಎಳೆಯರನ್ನು ಸೆಳೆಯಲು ಶಿಕ್ಷಣ ಕ್ಷೇತ್ರ ಪ್ರವೇಶಿಸಿ ಪಾಶ್ಚಾತ್ಯ ನವ ವಿಚಾರಗಳ ಗಾಳಿಯನ್ನು ತಂದರು. ಇಲ್ಲಿಯ ಜನರ ಭಾಷೆ ಕಲಿಯಲೆಂದು, ಜನಜೀವನ ಅರಿಯಲೆಂದು ಕನ್ನಡದ ವ್ಯಾಕರಣ, ಶಬ್ದಕೋಶಗಳ ವೈಜ್ಞಾನಿಕ ರಚನೆ ಆರಂಭ ಮಾಡಿದರು. ತಾವು ಟೀಕಿಸಬೇಕಾಗಿದ್ದ ಇಲ್ಲಿನ ಧರ್ಮ, ಸಂಸ್ಕೃತಿಗಳನ್ನು ಚನ್ನಾಗಿ ಅರಿಯಲು ಅವುಗಳ ಅಧ್ಯಯನ ನಡೆಸಿ ಕನ್ನಡ ಪ್ರಾಚೀನ ಗ್ರಂಥಗಳ ಸಂಪಾದನೆ, ಪ್ರಕಟಣೆಗೆ ಮುಂದಾದರು. ಪ್ರಕಟಣೆಗಾಗಿ ಮುದ್ರಣವನ್ನು ಜಾರಿಗೆ ತರಲು ಯತ್ನಿಸಿ ಕನ್ನಡ ಮುದ್ರಣದ ಕ್ಷೇತ್ರಕ್ಕೆ ಅದ್ವಿತೀಯ ಕೊಡುಗೆ ನೀಡಿದರು. ಕನ್ನಡದ ಜೊತೆಗೆ ಬಾಸೆಲ್ ಮಿಶನ್‌ನವರು ತುಳು, ಕೊಡವ ಭಾಷೆಗಳ ಅಧ್ಯಯನಕ್ಕೂ ಆರಂಭಿಸಿದರು. ಅಲ್ಲದೆ ಮತಾಂತರಿತ ದಲಿತರ ಉದರ ನಿರ್ವಾಹದ ಸಮಸ್ಯೆ ಪರಿಹರಿಸಲು ನೇಯ್ಗೆ, ಹೆಂಚಿನ ಕೈಗಾರಿಕೆಗಳಂಥ ನವ ಕೈಗಾರಿಕಾ ಕ್ಷೇತ್ರಗಳಲ್ಲಿ ಕಾಲಿಟ್ಟು ಆರ್ಥಿಕ ಕ್ಷೇತ್ರದಲ್ಲೂ ತಮ್ಮದೇ ಕೊಡುಗೆ ನೀಡಿದರು.

ಶಾಲೆಗಳನ್ನು ಆರಂಭಿಸಿ, ಅಲ್ಲಿ ಮಕ್ಕಳಿಗೆ ಬೈಬಲ್ ಶಿಕ್ಷಣ ನೀಡಿದಲ್ಲಿ, ಅವರನ್ನು ತಮ್ಮ ಧರ್ಮದ ಕಡೆ ಸೆಳೆಯುವುದು ಸುಲಭವೆಂದು ಈ ಮಿಶನರಿಗಳ ನಂಬಿಕೆ. "ಇಲ್ಲಿಯ ಜನತೆಯ ಮೂಢನಂಬಿಕೆಗಳನ್ನೂ ಸ್ವಧರ್ಮದಲ್ಲಿಯ 'ಅಂಧ' ನಿಷ್ಠೆಯನ್ನೂ ಸಡಲಿಸಿ ಕ್ರೈಸ್ತ ಧರ್ಮದಲ್ಲಿ ಆಸ್ಥೆಯನ್ನು ಕುದುರಿಸುವುದಕ್ಕೆ ಪ್ರಥಮ ಸೋಪಾನವೆಂದರೆ ಪಾಶ್ಚಾತ್ಯ ಶಿಕ್ಷಣ ಕ್ರಮವೇ — ಎಂದು ಅವರು ನಂಬಿದ್ದರು" ಎಂದು ಈ ಬಗ್ಗೆ ಡಾ॥ ಶ್ರೀನಿವಾಸ ಹಾವನೂರ ಹೇಳಿದ್ದಾರೆ. ಹೆಬಿಕ್ ೧೮೩೬ರಲ್ಲಿ ಮಂಗಳೂರಲ್ಲಿ ನಾಲ್ಕು ಬಾಲಕರನ್ನು ಒಳಗೊಂಡು ಒಂದು ಶಾಲೆ ಆರಂಭಿಸಿದ. ಮುಂದೆ ೧೮೪೦ರಲ್ಲಿ ಅದು ಇಂಗ್ಲಿಷ್ ಶಾಲೆಯಾಯಿತು. ಅದೇ ರೀತಿ ಮೋಗ್ಲಿಂಗ್ ೧೮೩೭ರಲ್ಲಿ ಧಾರವಾಡದಲ್ಲೂ ಶಾಲೆ ಆರಂಭಿಸಿದ. ೧೮೩೯ರಲ್ಲಿ ಹುಬ್ಬಳ್ಳಿ, ೧೮೪೧ರಲ್ಲಿ ಗದಗು, ಮಲ್ಲಸಂದ್ರ, ಗುಳೇದಗುಡ್ಡಗಳಲ್ಲೂ ಶಾಲೆಗಳು ಆರಂಭವಾದುವು. ಕೊಡಗಿನ ೧೮೩೪ರಲ್ಲಿ ಆರಂಭವಾದ ಆ್ಯಂಗ್ಲೊವರ್ನಾಕ್ಯುಲರ್ ಶಾಲೆಯನ್ನು ಹಾಗೂ ಇತರೆಡೆ ಕೆಲವು ಕನ್ನಡ ಪ್ರಾಥಮಿಕ ಶಾಲೆಗಳನ್ನೂ ಬ್ರಿಟಿಷ್ ಸರಕಾರವು ಪ್ರಾರಂಭಿಸಿದ್ದರೂ ಈ ಶಾಲೆಗಳಲ್ಲಿ "ಕೊಡವರಿಗೆ ಏನನ್ನೂ ಕಲಿಸಿಲ್ಲ, ಅವರು ಏನನ್ನೂ ಕಲಿತಿಲ್ಲ" ಎಂದು ಅಲ್ಲಿನ ಶಿಕ್ಷಣದ ಕೆಳಮಟ್ಟದ ಬಗ್ಗೆ ಮೋಗ್ಲಿಂಗ್ ೧೮೫೫ರಲ್ಲಿ ಬರೆಯಲು, ೧೮೫೭ರಲ್ಲಿ ಮಡಿಕೇರಿಯಲ್ಲಿ ಒಂದು ಲೋವರ್ ಸೆಕೆಂಡರಿ ಶಾಲೆಯನ್ನು ತೆರೆಯಲು ಮೋಗ್ಲಿಂಗನಿಗೆ ಕೊಡಗಿನ ಕಮೀಷನರ್ ಆಗಿದ್ದ ಸರ್ ಮಾರ್ಕ್ ಕಬ್ಬನ್ ಅನುಮತಿ ನೀಡಿದನು. ಕೊಡಗಿನ ಪ್ರಥಮ ಗ್ಯಾಸೆಟಿಯರ್ ಬರೆದ ರಿಕ್ಟರ್ ಮುಂದೆ ಅಲ್ಲಿ ಅಧ್ಯಾಪಕನಾದನು.

"ಬಾಸೆಲ್ ಮಿಶನ್‌ನವರ ವಿದ್ಯಾ ಕ್ಷೇತ್ರದಲ್ಲಿಯ ಪ್ರಗತಿ ಬೆರಗುಗೊಳಿಸುವಂತಿದೆ. ಕ್ರಿ.ಶ. ೧೮೫೩ರ ಸುಮಾರಿಗೆ ಅವರು ೫೦ ಪ್ರಾಥಮಿಕ ಶಾಲೆಗಳನ್ನೂ ೮ ಹೈಸ್ಕೂಲುಗಳನ್ನೂ ನಡೆಸುತ್ತಿದ್ದರು. ಶಾಲೆಗಳಲ್ಲಿ ಶಿಸ್ತನ್ನು ಚೆನ್ನಾಗಿ ಕಾಯ್ದುಕೊಳ್ಳಲಾಗುತ್ತಿತ್ತು" ಎಂದು ಡಾ॥ ಶ್ರೀನಿವಾಸ ಹಾವನೂರರು ಹೇಳಿರುವರಲ್ಲದೆ

ಔದ್ಯೋಗಿಕ ಶಿಕ್ಷಣ, ಸ್ತ್ರೀಯರ ಶಿಕ್ಷಣಗಳ ಬಗೆಗೂ ಅವರು ಮನಸ್ಸು ಕೊಟ್ಟರೆಂಬ ಸಂಗತಿಯ ಕಡೆ ಗಮನ ಸೆಳೆದಿದ್ದಾರೆ.

ಮಂಗಳೂರನ್ನೇ ಕೇಂದ್ರವಾಗಿಟ್ಟುಕೊಂಡು ಇವರು ನಡೆಸಿದ ಚಟುವಟಿಕೆಗಳಲ್ಲಿ ಈಗಿನ ಬಲ್ಮಠ ('ಬೆಲ್ಮೊಂಟ್' ಎಂಬ ಹೆಸರಿನ ಒಂದು ಬಂಗಲೆಯಿದ್ದ ಈ ಪ್ರದೇಶಕ್ಕೆ ಈ ಹೆಸರು ಬಂತು) ಕಟ್ಟಿದ್ದ ಶಾಂತಿ ಇಗರ್ಜಿ (೧೮೬೨) ಬಾಸೆಲ್‌ನಲ್ಲಿದ್ದ ಮಿಶನ್ ಹೌಸ್‌ನ ಮಾದರಿಯಲ್ಲೇ ಕಟ್ಟಲ್ಪಟ್ಟಿತು. ೧೯೬೨ರಲ್ಲಿ ಅದರ ಜೀರ್ಣೋದ್ಧಾರವಾದರೂ ಮೂಲವಸ್ತುವಿನಲ್ಲಿ ಹೆಚ್ಚಿನ ಬದಲಾವಣೆ ಆಗಲಿಲ್ಲ. ಮುಂದೆ ಮಂಗಳೂರ ಜೆಪ್ಪುವಿನ ಶಾಂತಿ ಇಗರ್ಜಿ ಬೊಕ್ಕಪಟ್ಣಣದ ವಿಶ್ರಾಂತಿ ಇಗರ್ಜಿಗಳ ರಚನೆಯಾಯಿತಲ್ಲದೇ ಧಾರವಾಡ, ಹುಬ್ಬಳ್ಳಿ (ಉಣಕಲ್), ಗದಗು, ಗುಳೇದಗುಡ್ಡಗಳಲ್ಲೂ ಅವರು ಇಗರ್ಜಿಗಳನ್ನು ಕಟ್ಟಿದರು. ಮಂಗಳೂರಲ್ಲಿ ಮತಾಂತರಗೊಂಡವರಲ್ಲಿ ೧೮೪೨ರ ಆನಂದರಾವ್ ಕೌಂಡಿಣ್ಯ ಎಂಬ ಬ್ರಾಹ್ಮಣ ಮುಖ್ಯನು. ಭಗವಂತರಾವ್ ಕೌಶಿಕ್ ಮತ್ತು ಮುಕುಂದರಾವ್ ಕೌಶಿಕ್ ಎಂಬ ಇಬ್ಬರು ಸಾರಸ್ವತರೂ ಇದರ ಹಿಂದೆ ಮತಾಂತರ ಹೊಂದಿದರು. ಇದಕ್ಕೆ ಕಾರಣಕರ್ತರು ರೆ. ಮೋಗ್ಲಿಂಗ್. ೧೮೩೮ರಲ್ಲಿ ಮಂಗಳೂರಲ್ಲಿ ಸ್ಥಾಪಿಸಿದ ಉಪದೇಶಕರ ಶಾಲೆ(ಸೆಮಿನರಿ)ಯಲ್ಲಿ ಇವರಿಗೆ ಮುಂದೆ ತರಬೇತಿ ನೀಡಲಾಯಿತು. ಆನಂದರಾವ್ ಕೌಂಡಿಣ್ಯನು ಮುಂದೆ ಕೊಡಗಿಗೆ ಬಂದು ಮತ ಪ್ರಚಾರ ಕೈಕೊಂಡನು. ಇವರನ್ನುಳಿದು ದಕ್ಷಿಣಕನ್ನಡದಲ್ಲಿ ಮತಾಂತರಿತರಾದ ಜನರಲ್ಲಿ ಅಸ್ಪೃಶ್ಯರಾದ 'ಹೊಲೆಯ'ರೂ ಹಾಗೂ ಆಗ ಅಸ್ಪೃಶ್ಯರೆಂದು ಪರಿಗಣಿಸಲ್ಪಡುತ್ತಿದ್ದ ಬಿಲ್ಲವರೂ ಮುಖ್ಯರು.

ಮತಾಂತರಿತರಾದ ಜನ ವಿವಿಧ ರೀತಿಯ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗುತ್ತಿದ್ದುದರಿಂದ ಅವರು ಸ್ವತಂತ್ರವಾಗಿ ಜೀವನ ನಡೆಸಲು ಸಾಧ್ಯವಾಗುವಂತೆ ರೆವೆರೆಂಡ್ ಮೆಟ್ಜ್ ಎಂಬ ಜರ್ಮನ್ ಪಾದ್ರಿ ನೇಯ್ಗೆಯಲ್ಲಿ ಅನೇಕ ನವ ಕ್ರೈಸ್ತರಿಗೆ ತರಬೇತಿಯನ್ನು ನೀಡಲು ೧೮೪೪ ರಿಂದ ಆರಂಭಿಸಿದನು. ಹ್ಯಾಲ್ಲೆನ್ ಎಂಬಾತನು ಓಡುಲಾಳಿ ('ಫ್ಲಾಯಿಂಗ್ ಪಟ್ಲ್') ಇರುವ ಚೌಕಟ್ಟಿನಲ್ಲಿ ಮಗ್ಗ ('ಫ್ರೇಂ ಲೂಂ') ಅನ್ನು ತುಳಿಯ ಮಗ್ಗದ ('ಪಿಟ್ ಲೂಂ') ಬದಲಿಗೆ ೧೮೫೧ರಲ್ಲಿ ರೂಢಿಗೆ ತಂದನು. ವಿಶಿಷ್ಟ ರೀತಿಯ (ಮುಂದೆ ವಿವಿಧ ರೀತಿಯ ಸಮವಸ್ತ್ರಗಳಿಗೆ ಬಳಕೆಯಾದ) ಖಾಕಿ ವಸ್ತ್ರದ ನೇಯ್ಗೆಯನ್ನು ಆರಂಭಿಸಿದವರೇ ಬಾಸೆಲ್ ಮಿಶನವರು. ಆರ್ಥಿಕ ಕ್ಷೇತ್ರದಲ್ಲಿ ಬಾಸೆಲ್ ಮಿಶನ್ ಆರಂಭಿಸಿದ ಇನ್ನೊಂದು ಗಣ್ಯ ಆವಿಷ್ಕಾರವೆಂದರೆ ಹೆಂಚಿನ ಉದ್ದಿಮೆ. ಜಗತ್ತಿನಲ್ಲೆಲ್ಲ ಖ್ಯಾತವಾದ ಮಂಗಳೂರು ಹೆಂಚಿನ ಉದ್ದಿಮೆಗೆ ಚಾಲನೆ ನೀಡಿದವರು ಅವರು. ಅವರೆಗೆ ಕುಂಬಾರರು (ಓಡಾರಿ) ಕೈಯಿಂದ (ತಿಗರಿಯಲ್ಲಿ) ತಯಾರಾಗುತ್ತಿದ್ದ ಪೊಳ್ಳು ಕಂಬಗಳನ್ನು ಸೀಳಿ ಮಾಡುತ್ತಿದ್ದ ನಾಡ ಓಡು (ಹೆಂಚು)ಗಳ ಬದಲಿಗೆ ಹೊಸ ಯಂತ್ರೋತ್ಪಾದಿತ ಹೆಂಚು ತಯಾರಿಸಲು ಕಾರಣನು ಪ್ಲೆಬಾತ್ ಎಂಬ ಜರ್ಮನ್ ಪಾದ್ರಿ. ಆತ ೧೮೬೫ರಲ್ಲಿ ಆರಂಭಿಸಿದ ಬಾಸೆಲ್ ಮಿಶನ್ ಹೆಂಚಿನ ಕಾರ್ಖಾನೆ ಆರಂಭದಲ್ಲಿ ೧೨ ಜನ ಕೂಲಿಗಳನ್ನು ಕೆಲಸಕ್ಕಿಟ್ಟುಕೊಂಡು ದಿನಕ್ಕೆ ೫೬೦ ಹೆಂಚುಗಳನ್ನು ತಯಾರಿಸುತ್ತಿತ್ತು. ಮಂಗಳೂರು ಹೆಂಚು ಆಫ್ರಿಕಾ, ಯೂರೋಪ್‌ಗಳಿಗೂ ರಫ್ತಾಗುತ್ತಿತ್ತು. (೧೯೬೨ರ ಸುಮಾರಿಗೆ ಮಂಗಳೂರಿನಲ್ಲಿ ೪೩ ಕಾರ್ಖಾನೆಗಳಾಗಿ ಹಲವು ಸಾವಿರ ಜನ ಅಲ್ಲಿ ದುಡಿಯುತ್ತಿದ್ದರು).

ಕನ್ನಡ ಮುದ್ರಣ ಕ್ಷೇತ್ರದಲ್ಲಿ ಬಾಸೆಲ್ ಮಿಶನ್ ನಡೆಸಿದ ಸಾಧನೆ ಅದ್ವಿತೀಯ. ೧೮೧೭ರಲ್ಲೇ ಕಲ್ಕತ್ತ ಬಳಿಯ ಶ್ರೀರಾಮಪುರದ ಡೇನಿಶ್ ವಸಾಹತಿನಿಂದ 'ಎ ಗ್ರಾಮರ್ ಆಫ್ ದಿ ಕರ್ನಾಟಾ ಲ್ಯಾಂಗ್ವೇಜ್' ಎಂಬ ಪ್ರಥಮ ಕನ್ನಡಾಕ್ಷರವಿದ್ದ ಕೃತಿ ಪ್ರಕಟವಾಗಿದ್ದರೂ ಬಾಸೆಲ್ ಮಿಶನ್‌ನವರು ಮುದ್ರಣದಲ್ಲಿ ನಡೆಸಿದ ಹಲವಾರು ಪ್ರಯೋಗಗಳ ಫಲವಾಗಿ ಚಲ ಅಚ್ಚುಗಳ ಸುಂದರ ಮಂಗಳೂರು ಲಿಪಿಯು ರೂಪು ತಳೆಯಿತು. ಕನ್ನಡ ಕಲಿಯಲು ನಿಘಂಟು, ವ್ಯಾಕರಣ, ಕನ್ನಡ ಸಾಹಿತ್ಯ ಹಾಗೂ ಧಾರ್ಮಿಕ ಗ್ರಂಥಗಳು ಹಾಗೂ ಸ್ವಮತ ಪ್ರಚಾರ ಮಾಡುವ ಬೈಬಲ್ ಮುಂತಾದ ಕೃತಿಗಳನ್ನು ಕನ್ನಡದಲ್ಲಿ ಪ್ರಕಟಿಸಲು ಕ್ರೈಸ್ತ ಮತ ಪ್ರಸಾರಕರ ವಿವಿಧ ಪಂಥಗಳ ಯತ್ನ ನಡೆದೇ ಇತ್ತು. ಮದ್ರಾಸಿನ ಕಾಲೇಜ್ ಪ್ರೆಸ್‌ನಿಂದ 'ಎ ಗ್ರಾಮರ್ ಆಫ್ ದಿ ಕರ್ನಾಟಕಾ ಲ್ಯಾಂಗ್ವೇಜ್' ಮ್ಯಾಕರೆಲ್ ಎಂಬ ಪಾದ್ರಿಯ ಪ್ರಯತ್ನದಿಂದ ೧೮೨೦ರಲ್ಲಿ ಹೊರಬಂದಿತ್ತು. ರೆವೆರೆಂಡ್ ರೀವ್ ಅವರ ಯತ್ನದಿಂದ ೧೮೨೪ರಲ್ಲಿ ಇಂಗ್ಲಿಷ್ ಕನ್ನಡ ಶಬ್ದಕೋಶ

ಹೊರಬಂದಿತ್ತು. ಲಂಡನ್ ಮಿಷನ್‌ನ ಜಾನ್ ಹ್ಯಾಂಡ್ಸ್‌ನ ಪ್ರಯತ್ನದಿಂದ ಮೊದಲಬಾರಿ ಕೇವಲ ಕನ್ನಡ ಲಿಪಿಗಳು ಮಾತ್ರವಿದ್ದ ಕನ್ನಡ ಬೈಬಲ್‌ಅನ್ನು ೧೮೩೦ರಲ್ಲಿ ಮದ್ರಾಸಿನ ಕಮರ್ಷಿಯಲ್ ಪ್ರೆಸ್‌ನಲ್ಲಿ ಮುದ್ರಿಸಿದ್ದನು. ಇದರ ಲಿಪಿ ಇಂದಿನ ತೆಲುಗು ಲಿಪಿಯನ್ನೇ ಹೋಲುತ್ತಿತ್ತು. ಇದೇ ರೀತಿ ಗ್ಯಾರೆಟ್ ಎಂಬ ವೆಸ್ಲಿಯನ್ ಮಿಶನರಿಯ ಯತ್ನದಿಂದ ೧೮೪೦ ರಿಂದ ಸರಕಾರೀ ಮುದ್ರಣಾಲಯ ಬೆಂಗಳೂರಿನಲ್ಲಿ ಆರಂಭ ಆಗಿದ್ದರೂ ೧೮೪೧ರಲ್ಲಿ ವೈಗಲ್ ಮತ್ತು ಪ್ಲೆಬ್ಸ್ತ್ ಎಂಬವರು ಯತ್ನಿಸಿ ಆರಂಭಿಸಿದ ಮಂಗಳೂರಿನ ಬಾಸೆಲ್ ಮಿಶನ್ ಪ್ರೆಸ್ ಉಲ್ಲೇಖನೀಯವಾದುದು. ಕನ್ನಡ ಮುದ್ರಣ ವಿಚಾರದಲ್ಲಿ ಮಂಗಳೂರು ಬಾಸೆಲ್ ಮಿಶನ್ನಿನ ಹೆಸರು ಅಜರಾಮರವಾದುದು ಎಂದು ಹೇಳಿರುವ ಡಾ॥ ಶ್ರೀನಿವಾಸ ಹಾವನೂರರು ೧೮೪೧ರಲ್ಲಿ ಆರಂಭಿಸಿದ 'ಜರ್ಮನ್ ಇವ್ಯಾಂಜಲಿಕಲ್ ಮಿಶನ್ ಪ್ರೆಸ್' ನಲ್ಲಿ 'ತುಳು ಕೀರ್ತನೆಗಳು' ಎಂಬ ಪುಸ್ತಕವನ್ನು ಕನ್ನಡ ಲಿಪಿಯಲ್ಲಿ ಮೊದಲ ಬಾರಿಗೆ ಮುದ್ರಿಸಿದರೆಂದು ಹೇಳಿದ್ದಾರೆ. ಕನ್ನಡ ಲಿಪಿಯ ಸುಧಾರಣೆಗಾಗಿ ಅನೇಕ ಪ್ರಯತ್ನಗಳನ್ನು ಮಾಡಿದರು. ಮತ್ತು ಅತ್ಯಂತ ಸುಂದರವಾದ ಕನ್ನಡ ಮುದ್ರಣಕ್ಕೆ ಕಾರಣರಾದರು. ೧೮೪೩ರಲ್ಲಿ ಅವರು ಆರಂಭಿಸಿದ ಮೊದಲ ಕನ್ನಡ ಪತ್ರಿಕೆ 'ಮಂಗಳೂರ ಸಮಾಚಾರ' ಹಾಗೂ 'ಹಿಂದೂಧರ್ಮಶಾಸ್ತ್ರದ ಪುಸ್ತಕವು' (೧೮೫೭) ಕೈಬರಹದಿಂದ ಕಲ್ಲಚ್ಚಿನಲ್ಲಿ ('ಲಿಥೋಗ್ರಾಫ್') ಮುದ್ರಣವಾದರೆ ಚಲ ಅಚ್ಚುಗಳಲ್ಲಿ ಮುದ್ರಿತವಾದ 'ರಾಜೇಂದ್ರನಾಮೆ' (೧೮೫೭) ಹಾಗೂ 'ಭೂತಾಳ ಪಾಂಡ್ಯ' ಬಿ. ಎಂ.ಶ್ರೀ. ಯೋಜಿಸಿದ್ದ ಅಕ್ಷರ ಸುಧಾರಣಾ ಕಲ್ಪನೆಯನ್ನು ಹೋಲುವ ಲಿಪಿಗಳಲ್ಲಿ ಆಗ ಮುದ್ರಿತವಾಗಿತ್ತು. "ಇಲ್ಲಿ ಮುದ್ರಿತವಾದ ಕೃತಿಗಳ ವೈವಿಧ್ಯವು ವಿಸ್ಮಯಜನಕವಾಗಿದೆ; ಹಲವಾರು ಅಂಶಗಳಲ್ಲಿ ಹೊಸಕ್ರಮಗಳನ್ನು ರೂಢಿಸಿದೆ. ಪಠ್ಯಪುಸ್ತಕ ಹಾಗೂ ಕ್ರೈಸ್ತಧರ್ಮದ ಪುಸ್ತಕಗಳಂತೂ ಸರಿಯೇ. ಅನೇಕ ವ್ಯಾವಹಾರಿಕ ಪುಸ್ತಕಗಳೂ ಪ್ರಥಮತಃ ಇಲ್ಲಿ ಅಚ್ಚಾದವು. ಕರಪತ್ರ, ಪಂಚಾಂಗ, ರೈಲ್ವೇ ವೇಳಾಪತ್ರಿಕೆ, ಕೋಷ್ಟಕ-ಇವುಗಳು ಇಲ್ಲಿಂದಲೇ ಹೊರಬಂದವು" ಎಂಬ ಡಾ॥ ಶ್ರೀನಿವಾಸ ಹಾವನೂರರ ಮಾತು ಇಲ್ಲಿ ಉಲ್ಲೇಖನೀಯ. ವರ್ಣಮಯ ಮುದ್ರಣವನ್ನೂ ರೂಢಿಗೆ ತಂದು ಭಾರತದ ನಕಾಶೆಯನ್ನೂ ೧೮೫೯ರಲ್ಲಿ ಅಲ್ಲಿಂದ ಹೊರತಂದರು. ೧೮೮೩ರಿಂದ ಕೊಂಕಣಿ ಭಾಷಾಗ್ರಂಥಗಳನ್ನೂ ಇಲ್ಲಿಂದ ಕನ್ನಡ ಲಿಪಿಯಲ್ಲಿ ಮುದ್ರಿಸಿದರು. ಬಾಸೆಲ್ ಮಿಶನ್‌ನವರೂ ಅವರನ್ನು ಅನುಸರಿಸಿ ಇತರರೂ ಮಂಗಳೂರಿನಲ್ಲಿ ನಡೆಸಿದ ವಿವಿಧ ಪ್ರಯೋಗಗಳ ಫಲವಾಗಿ ಅತ್ತಾವರ ಅನಂತಾಚಾರಿ ಮುಂದೆ ರೂಪಿಸಿದ ಸುಂದರ ಕನ್ನಡ ಅಚ್ಚುಮೊಳೆಗಳ ('ಅನಂತ ಲೇಡ್ಸ್') ಆವಿಷ್ಕಾರ ಸಾಧ್ಯವಾಯಿತು. ಮಂಗಳೂರು ಸುಂದರ ಕನ್ನಡ ಮುದ್ರಣದ ಅಗ್ರಗಣ್ಯ ಕೇಂದ್ರವಾಯಿತು.

ಆದರೆ ಬಾಸೆಲ್ ಮಿಶನ್‌ರವರು ಕರ್ನಾಟಕಕ್ಕೆ ಸಲ್ಲಿಸಿದ ಅದ್ವಿತೀಯ ಸೇವೆಯೆಂದರೆ, ಕನ್ನಡ ಭಾಷೆ, ಸಾಹಿತ್ಯಗಳ ಅಧ್ಯಯನಕ್ಕೆ ನೀಡಿದ ಚಾಲನೆ ಹಾಗೂ ಕೊಡುಗೆ. ತುಳು, ಕೊಡವ, ಕೊಂಕಣಿಗಳಿಗೆ ಸಂಬಂಧಿಸಿಯೂ ಅವರು ಕೆಲವೊಂದು ಆರಂಭಿಕ ಸಾಧನೆಗಳನ್ನು ಮಾಡಿದ್ದಾರೆಂಬುದೂ ಮರೆಯಲಾಗದ ಸಂಗತಿಗಳು. ಕನ್ನಡಕ್ಕೆ ಸಂಬಂಧಿಸಿದ ಉಲ್ಲೇಖಿಸಲೇಬೇಕಾದ ಅಗ್ರಗಣ್ಯ ವ್ಯಕ್ತಿಗಳೆಂದರೆ, ರೆವೆರೆಂಡ್ ತ್ಸಿಗ್ಲರ್, ರೆವೆರೆಂಡ್ ಮೋಗ್ಲಿಂಗ್, ಜಿ. ಹೆಚ್. ವೈಗಲ್ ಹಾಗೂ ರೆವೆರೆಂಡ್ ಕಿಟ್ಟೆಲ್.

ಫ್ರೆಡರಿಕ್ ತ್ಸಿಗ್ಲರ್ (೧೮೩೭–೧೯೦೬) ಬಾಸೆಲ್‌ನ ಉಪದೇಶಕರ ಶಾಲೆಯಲ್ಲಿ ಅಧ್ಯಾಪಕನಾಗಿ ಸೇರಿದ್ದರೂ ಮುಂದೆ ತಾನೇ ಉಪದೇಶಕ(ಮಿಶನರಿ)ನಾಗಿ ೧೮೬೭ ಮಂಗಳೂರಿಗೆ ಬಂದು ಅಲ್ಲಿಯ ಮಿಶನ್ ಹೈಸ್ಕೂಲಿನಲ್ಲೂ ೧೮೬೮ರಿಂದ ಹುಬ್ಬಳ್ಳಿಯಲ್ಲೂ ೧೮೭೮ರಲ್ಲಿ ಧಾರಾವಾಡದಲ್ಲೂ ಅಧ್ಯಾಪಕನಾಗಿ ದುಡಿದವನು. ಶಿಕ್ಷಣ ಕ್ಷೇತ್ರದಲ್ಲಿ ವಿಶೇಷತಃ ಗಣಿತ, ಭೂಗೋಲ, ಸಸ್ಯಶಾಸ್ತ್ರಗಳ ಕುರಿತು ಸ್ವತಃ ಅಧ್ಯಯನ, ಅಧ್ಯಾಪನಗಳಿಗೆ ಗಮನವಿತ್ತು ಶೈಕ್ಷಣಿಕ ಉನ್ನತಿಯ ಕಡೆಗೆ ಗಮನವಿತ್ತು, ಮತಪ್ರಸಾರದ ಚಟುವಟಿಕೆಯನ್ನು ಕಡೆಗಣಿಸುತ್ತಿರುವನೆಂಬ ಆಪಾದನೆಯನ್ನು ತನ್ನ ಮಿಶನರಿ ಸಂಸ್ಥೆಯಿಂದ ಆತ ಎದುರಿಸಬೇಕಾಯಿತು. ಕನ್ನಡ ಭಾಷೆಯನ್ನು ಆಳವಾಗಿ ಅಭ್ಯಸಿಸಿ, 'ಎ ಕ್ಯಾಟೆಚಿಸ್ಮ್ ಆಫ್ ಕನ್ನಡ ಗ್ರಾಮರ್' (೧೮೮೪), 'ಎ ಪ್ರ್ಯಾಕ್ಟಿಕಲ್ ಕೀ ಟು ಕನ್ನಡ ಲ್ಯಾಂಗ್ವೇಜ್' (೧೮೮೮), ಹಾಗೂ 'ಇಂಗ್ಲಿಷ್ ಕನ್ನಡ ಕೋಶ' (೧೮೮೮) ಗಣ್ಯ ಕೃತಿಗಳನ್ನು ನೀಡಿದವನು.

ಕೊನೆಯ ಕೃತಿ ನಾಲ್ಕು ಬಾರಿ ಪರಿಷ್ಕೃತ ಆವೃತ್ತಿಗಳನ್ನು ಮುಂದೆ ಕಂಡಿತು. ಅಲ್ಲದೆ ದಾಸರ ಕೃತಿಗಳನ್ನು ಅನುಸರಿಸಿ 'ಗೀತೆಗಳು' ಎಂಬ ಕನ್ನಡ ಭಜನೆಗಳನ್ನೂ ರಚಿಸಿ, ಅವುಗಳಿಗೆ ರಾಗಸಂಯೋಜಿಸಿ ಹಾಡುತ್ತಿದ್ದ. ಅವನ ಪತ್ನಿ ಜೂಲಿಯನ್ ಕೂಡ ಇಂಥ ಗೀತೆಗಳ ರಚನೆ, ಗಾಯನಗಳಿಗೆ ನೆರವಾಗಿದ್ದಾಳೆ. ಕನ್ನಡದ ಬಗ್ಗೆ ತ್ಸಿಗ್ಲರ್ ಎಷ್ಟೊಂದು ಕೆಲಸ ಮಾಡಿದ್ದಾನೆಂದರೆ, ೧೮೯೩-೯೪ರಲ್ಲಿ ಅವನು ಅಲ್ಲಿನ ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷನೂ ಆಗಿದ್ದ. (ಇತರ ಅನೇಕ ಮಿಶನರಿಗಳೂ ಕನ್ನಡದ ಮೊದಲ ಭಾವಗೀತೆಗಳನ್ನು ಆ ಕಾಲದಲ್ಲಿ ಬರೆದರು).

ಧಾರವಾಡ, ಮಂಗಳೂರು, ಕೊಡಗುಗಳಲ್ಲಿ ಕೆಲಸ ಮಾಡಿದ ಹರ್ಮನ್ ಮೋಗ್ಲಿಂಗ್ (೧೮೧೧-೧೮೮೧) ತೀಬಿಂಜೆನ್ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪಡೆದು (೧೮೨೯), ೧೮೩೬ಕ್ಕೆ ಮಂಗಳೂರಿಗೆ ಬಂದು ಅದೇ ವರ್ಷ ಹೆಬಿಕ್‌ನ ಜೊತೆ ಧಾರವಾಡ ಸೇರಿ, ಅಲ್ಲಿಂದ ಮುಂದೆ ೧೮೩೮ರಲ್ಲಿ ಮಂಗಳೂರಿಗೆ ಮರಳಿದನು. 'ಮಂಗಳೂರ ಸಮಾಚಾರ' ಕನ್ನಡದ ಪ್ರಪ್ರಥಮ ಕನ್ನಡ ಪತ್ರಿಕೆಯನ್ನು ೧೮೪೩ರ ಜುಲೈ ೧ರಂದು ಪಾಕ್ಷಿಕವಾಗಿ ಮಂಗಳೂರಿನಿಂದ ಅವನು ಹೊರತಂದನು. ಮುಂದೆ ಆ ಪತ್ರಿಕೆ ನಿಲ್ಲಿಸಬೇಕಾಗಿ ಬಂದಾಗ, ಬಳ್ಳಾರಿಯಿಂದ ೧೮೪೪ರಲ್ಲಿ 'ಕನ್ನಡ ಸಮಾಚಾರ' ಆರಂಭಿಸಿದ್ದೂ ಈತನೇ. 'ಕನ್ನಡ ಸುವಾರ್ತಿಕೆ' (೧೮೫೭) ಕೂಡ ಈತನದೇ. ಹೀಗೆ ಮೋಗ್ಲಿಂಗ್ ಕನ್ನಡ ಪತ್ರಿಕೋದ್ಯಮದ ಪಿತಾಮಹ. 'ರಾಜೇಂದ್ರನಾಮೆ'ಯ ಪ್ರಕಟಣೆಯು ಈತನ ಇನ್ನೊಂದು ಸಾಧನೆ. ಕೊಡಗಿನಲ್ಲಿ ರೆವೆರೆಂಡ್ ಗುಂಡರ್ಟ್ ಮತ್ತು ಆನಂದರಾವ್ ಕೌಂಡಿಣ್ಯನ ನೆರವಿನಿಂದ ಈತನು ಕೊಡಗಿನ ಅರಮೇರಿ ಗ್ರಾಮದ ಅಳಮಂಡ ಸೋಮಯ್ಯ ಎಂಬಾತನನ್ನು ಮತಾಂತರಿಸಿದ್ದಲ್ಲದೆ (೧೮೫೩) ಅಳಮಂಡ ಜಮ್ಮಾದ ೧೩೦ ಅಸ್ಪೃಶ್ಯರನ್ನು ಮತಾಂತರಿಸಿದನು. 'ಕೂರ್ಗ್ ಮೆಮಾಯರ್ಸ್'(೧೮೫೫) ಈತನ ಉಲ್ಲೇಖನೀಯವಾದ ಕೊಡಗಿನ ಬಗೆಗಿನ ಆಕರಗ್ರಂಥ. 'ಬಿಬ್ಲೋಥೆಕಾ ಕರ್ನಾಟಿಕಾ' ಮಾಲಿಕೆಯಲ್ಲಿ ಜೈಮಿನಿ ಭಾರತ (೧೮೪೮), ತೊರೆವೆ ರಾಮಾಯಣದ ಆರು ಸಂಧಿಗಳು, ದಾಸರ ಪದಗಳು (೧೮೫೦), ಹರಿಭಕ್ತಿಸಾರ, ಕುಮಾರವ್ಯಾಸ ಭಾರತ, ಬಸವಪುರಾಣ, ಚನ್ನಬಸವಪುರಾಣ ಇತ್ಯಾದಿಗಳನ್ನು ಪ್ರಕಟಿಸಿದ್ದಲ್ಲದೆ, ಬನಿಯನ್‌ನ 'ಪಿಲ್‌ಗ್ರಿಮ್ಸ್ ಪ್ರೊಗ್ರೆಸ್' ಕೃತಿಯನ್ನು ವೈಗಲ್‌ನ ನೆರವಿನಿಂದ 'ಯಾತ್ರಿಕನ ಸಂಚಾರ' ಎಂದು ಪ್ರಕಟಿಸಿದ್ದಾನೆ (೧೮೪೭). ಕೆಂಪುನಾರಾಯಣನ 'ಮುದ್ರಾಮಂಜೂಷ'ದ ನಂತರ ಇದೇ ಕನ್ನಡದ ಕಾದಂಬರಿಯೆನ್ನಬಹುದು. 'ಜಾತಿ(ಮತ) ವಿಚಾರಣೆ' (೧೮೪೫) ಹಾಗೂ 'ದೇವ ವಿಚಾರಣೆ' (೧೮೫೨) ಎಂಬ ಮೋಗ್ಲಿಂಗನ ಕೃತಿಗಳನ್ನು "ಹೊಸಗನ್ನಡದ ಆದ್ಯ ಪ್ರಬಂಧಗಳಾಗಿವೆಯೆನ್ನಬಹುದು" ಎಂದು ಡಾ॥ ಶ್ರೀನಿವಾಸ ಹಾವನೂರ ಹೇಳಿದ್ದಾರೆ. ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿ ಇತರ ಕೃತಿಗಳನ್ನೂ ಕನ್ನಡದಲ್ಲಿ ಮೋಗ್ಲಿಂಗ್ ಬರೆದಿರುವನಲ್ಲದೆ ದಾಸರ ಪದಗಳು ಹಾಗೂ ಜೈಮಿನಿ ಭಾರತದ ಭಾಗಗಳನ್ನು ಜರ್ಮನ್ ಭಾಷೆಗೆ ಭಾಷಾಂತರಿಸಿ ಜರ್ಮನ್ ನಿಯತಕಾಲಿಕೆಗಳಲ್ಲಿ ಪ್ರಕಟಿಸಿ, ಕನ್ನಡ ಸಾಹಿತ್ಯದ ಹಿರಿಮೆಯನ್ನು ಐರೋಪ್ಯರಿಗೆ ಮಾಡಿಕೊಟ್ಟಿದ್ದಾನೆ.

ಪ್ರಪ್ರಥಮವಾಗಿ ವೈಜ್ಞಾನಿಕವಾದ ಕನ್ನಡ ಸಾಹಿತ್ಯ ಚರಿತ್ರೆಯನ್ನು ಜರ್ಮನ್ ಭಾಷೆಯಲ್ಲಿ ಬರೆದು (೧೮೪೬) ಅದನ್ನು ಜರ್ಮನಿಯ ಟುಬಿಂಜೆನ್‌ನ ವಿದ್ವತ್ ಪತ್ರಿಕೆಯೊಂದರಲ್ಲಿ ಪ್ರಕಟಿಸಿದ ರೆವೆರೆಂಡ್ ವೈಗಲ್ ಇನ್ನೊಬ್ಬ ಗಣ್ಯ ಬಾಸೆಲ್ ಮಿಷನ್‌ನ ಉಪದೇಶಕ. (ಆತನ ಈ ಲೇಖನದ ಇಂಗ್ಲಿಷ್ ಭಾಷಾಂತರ ಇತ್ತೀಚೆಗೆ ೧೯೮೧ರಲ್ಲಿ—ಅಂಕ ೭೨— 'ಕ್ವಾರ್ಟರ್ಲಿ ಜರ್ನಲ್ ಆಫ್ ದಿ ಮಿಥಿಕ್ ಸೊಸೈಟಿ'ಯಲ್ಲಿ ಡಾ॥ ಗೀತಾ ಧರ್ಮಪಾಲರಿಂದ ಮಾಡಲ್ಪಟ್ಟು ಪ್ರಕಟವಾಗಿದೆ). ೧೮೫೪ರಲ್ಲಿ ಪ್ರಕಟವಾದ ಬೈಬಲ್‌ನ ಹೊಸಒಡಂಬಡಿಕೆಯ ಕನ್ನಡ ಆವೃತ್ತಿಯಲ್ಲಿ ಈತನದು ಗಣ್ಯ ಪಾತ್ರವಿದೆ.

ರೆವೆರೆಂಡ್ ವರ್ತ್ ಪ್ರಕಟಿಸಿದ 'ಪ್ರಾಕ್ಕಾವ್ಯ ಮಾಲಿಕೆ' (೧೮೬೮)ಕನ್ನಡ ಕಾವ್ಯಗಳ ಹಾಗೂ ಕವಿತೆಗಳ ಪ್ರಾತಿನಿಧಿಕ ಸಂಕಲನವಾಗಿ ಕನ್ನಡ ಪಠ್ಯ ಪುಸ್ತಕವೂ ಆಯಿತು. ಇದರಲ್ಲಿ ಕ್ರೈಸ್ತರು ರಚಿಸಿದ ಹೊಸಕನ್ನಡ ಕವಿತೆಗಳೂ ಇವೆ. 'ಇಸೋಪನ ನೀತಿಕತೆ' ಮುಂತಾದ ಇತರ ಕೃತಿಗಳೂ ಇವರ ಪ್ರಕಟಣೆಗಳು.

ತುಳು ಭಾಷೆಯಲ್ಲಿ'ಮತ್ತಾಯನ ಸುವಾರ್ತೆ'(೧೮೪೨),

ತುಳು ಬೈಬಲ್ (೧೮೫೯) ಎಂಬ ಬರಹಗಳನ್ನು ಬಾಸೆಲ್ ಮಿಶನ್‌ರವರು ಕನ್ನಡ ಲಿಪಿಯಲ್ಲಿ ಪ್ರಕಟಿಸಿದ್ದಲ್ಲದೆ ರೆವೆರೆಂಡ್ ಮೆನರ್ ತುಳು ಪಾಡ್ದನಗಳನ್ನು ಸಂಗ್ರಹಿಸಿ 'ಇಂಡಿಯನ್ ಎಂಟಿಕ್ವೇರಿ'ಯಲ್ಲಿ ಪ್ರಕಟಿಸಿದರು. ತುಳು ನಿಘಂಟು (೧೮೮೬) ಕೂಡ ಇವರದೇ ಸಾಧನೆ.

ರೆವೆರೆಂಡ್ ಫರ್ಡಿನಾಂಡ್ ಕಿಟ್ಟೆಲ್ (೧೮೩೨-೧೯೦೩) ಕನ್ನಡಕ್ಕೆ ಸೇವೆ ಸಲ್ಲಿಸಿದ ಬಾಸೆಲ್ ಮಿಶನ್‌ನ ಉಪದೇಶಕ ವಿದ್ವಾಂಸರಲ್ಲಿ ಅತ್ಯಂತ ಉಲ್ಲೇಖನೀಯರು. ೧೮೫೩ಕ್ಕೆ ಮಂಗಳೂರಿಗೆ ಬಂದ ಅವರು ೧೮೬೬-೬೭ರಲ್ಲಿ ಮಡಿಕೇರಿಯಲ್ಲೂ ಇದ್ದರಲ್ಲದೆ ಧಾರವಾಡದ ಮಿಶನ್ ಹೈಸ್ಕೂಲಿನಲ್ಲೂ ಮುಖ್ಯೋಪಾಧ್ಯಾಯರಾಗಿದ್ದರು (೧೮೮೩). ಅವರ ಸ್ಮಾರಕವಾಗಿ ಅಲ್ಲಿ ಈಗ ಕಿಟೆಲ್ ಕಾಲೇಜು ಇದೆ. ಕನ್ನಡದಲ್ಲಿ ಕವಿತೆಗಳ ರಚನೆ, ಪತ್ರಿಕಾ ಪ್ರಕಟಣೆ, ಗ್ರಂಥ ಸಂಪಾದನೆ, ವ್ಯಾಕರಣ ರಚನೆ, ಕೊನೆಯದಾಗಿ ಕನ್ನಡ ನಿಘಂಟು ಇವುಗಳೆಲ್ಲ ಅವರ ಅಸಾಧಾರಣ ವಿದ್ವತ್ತಿಗೆ ಸಾಕ್ಷಿ. ಭಾರತೀಯ ಧಾರ್ಮಿಕ ಅಧ್ಯಯನದಲ್ಲೂ ಅವರದು ಎತ್ತಿದ ಕೈ. 'ಟ್ರ್ಯಾಕ್ಟ್ ಆನ್ ಸ್ಯಾಕ್ರಿಫೈಸ್' (೧೮೭೨) ಯಜ್ಞಗಳ ಬಗೆಗಿನ ಪರಿಚಯ ಗ್ರಂಥ. ಕೊಡಗಿನ ಜೀವನ, ದಾಸ ಹಾಗೂ ಶರಣ ಸಾಹಿತ್ಯಗಳ ಬಗೆಗೂ ಅವರ ಇಂಗ್ಲಿಷ್ ಲೇಖನಗಳು ಪ್ರಕಟವಾಗಿವೆ. 'ಕಥಾಮಾಲೆ'ಯಲ್ಲಿ ಕುಮಾರವ್ಯಾಸನ ಶೈಲಿಯಲ್ಲಿ (ಭಾಮಿನೀ ಷಟ್ಪದಿ) ಯೇಸುವಿನ ಕತೆ ಹೇಳಲಾಗಿದೆ :

> ಒಂದು ದಿನದಲ್ಲೇಸು ತನ್ನೊಡ
> ಬಂದ ಶಿಷ್ಯರಸಹಿತ ಹಡಗನ-
> ನಂದಿನಂದದಿಯೇರಿ ಹೋಗಲಿಕಾ ಸಮಯದೊಳಗೇ ।
>
> ಸುಂದರಾನಿಲ ಶಾಂತಿಯಿದ್ದೆಡೆ
> ಮುಂದಘೋರದ ಕಂಪದೇಳಲ್
> ಚಂದದಿಂದಲಿ ನಿದ್ದೆಮಾಡುತಲೇಸು ಮಲಗಿಹನು॥

('ಒಂದು ದಿನ ದುರ್ಯೋಧನನು ನಿಜ ಮಂದಿರದೊಳೇಕಾಂತದಲಿ ಮನಸೊಂದು...' ಜ್ಞಾಪಿಸಿಕೊಳ್ಳಿ).

ಇದು ಕಿಟ್ಟೆಲರ ಅಪೂರ್ವ ಕನ್ನಡ ಖಂಡ ಕಾವ್ಯ. 'ವಿಚಿತ್ರ ವರ್ತಮಾನ ಸಂಗ್ರಹಂ' (೧೮೬೨) ಪತ್ರಿಕೆ, 'ಪರಮಾತ್ಮ ಜ್ಞಾನ' (೧೮೬೩), ನಾಗವರ್ಮನ ಕನ್ನಡ ಛಂದಸ್ಸು (೧೮೭೫) ಹಾಗೂ ಎಲ್ಲಕ್ಕೂ ಕಿರೀಟಪ್ರಾಯವಾದ, ಕನ್ನಡ ಭಾಷೆಯ ಘನತೆ, ಸಿರಿವಂತಿಕೆಗಳನ್ನು ಎತ್ತಿ ಹಿಡಿದ 'ಎ ಕನ್ನಡ ಇಂಗ್ಲಿಷ್ ಡಿಕ್ಶನರಿ' (೧೮೯೪) ಕಿಟ್ಟೆಲ್ಲರ ಇತರ ಬರಹಗಳು. ಕೊನೆಯ ಕೃತಿ ೧೫ ವರ್ಷಗಳಿಗೂ ದೀರ್ಘ ದುಡಿಮೆಯ ಅಮೂಲ್ಯ ಕೊಡುಗೆ ; ಬಾಸೆಲ್ ಮಿಶನ್‌ನವರು ಕನ್ನಡಕ್ಕೆ ಸಲ್ಲಿಸಿದ ಕಾಣಿಕೆಯ ಸೌಧಕ್ಕೆ ಚಿನ್ನದ ಕಳಶವಿಟ್ಟಂಥ ಬರಹ. ಕಣ್ಣು ಮಂಜಾದರೂ ಆರೋಗ್ಯ ಕೆಟ್ಟರೂ ತಪಸ್ಸಿನಂತೆ ಕಿಟ್ಟೆಲ್ಲರು ಮಾಡಿದ ಸಾಧನೆ.

ಕನ್ನಡ ನಾಡಿನಲ್ಲಿ ೧೦೦ರಷ್ಟು ಜರ್ಮನ್ ಮಿಶನರಿಗಳು ಬಾಸೆಲ್ ಮಿಶನ್ ಮೂಲಕ ದುಡಿದರು. ಕಲೆ, ಸಂಸ್ಕೃತಿ, ಸಾಹಿತ್ಯ, ಭಾಷೆಗಳ ವಿಕಾಸಕ್ಕೆ ನೆರವಾದರು. ಹೆಂಚು, ನೇಯ್ಗೆ, ಮುದ್ರಣ ಕೈಗಾರಿಕೆಗಳಿಗೆ ಹೆಚ್ಚಿನ ಚಾಲನೆ ನೀಡಿ, ಕೃಷಿಯಲ್ಲಿ, ವಿಶೇಷತಃ ಹಣ್ಣಿನ ತೋಟಗಾರಿಕೆಯಲ್ಲಿ ಕೆಲಸಮಾಡಿ, ಕರ್ನಾಟಕದ ಆರ್ಥಿಕ ಪ್ರಗತಿಗೆ ನೆರವಾದರು. ದಲಿತರನ್ನು ಮತಾಂತರಿಸಿಯೂ ಹಿಂದೂ ಸಮಾಜದ ಅಸ್ಪೃಶ್ಯತೆಯಂಥ ಮೌಢ್ಯಗಳ ಬಗ್ಗೆ ಟೀಕೆ ಮಾಡಿಯೂ ಹಿಂದೂ ಸಮಾಜದಲ್ಲಿ ನವಜಾಗೃತಿಗೆ ನೆರವಾದರು. ಅವರು ಮತಾಂತರಿಸಿದ ಜನರ ಸಂಖ್ಯೆ ಅತ್ಯಲ್ಪವಾದರೂ ಕಾರ್ಯವು-ಕಷ್ಟದ ದುಡಿಮೆ-ಒಂದು ಧಾರ್ಮಿಕ ಗುಣವೆಂದು ಆ ಜನಕ್ಕೆ ಅವರು ತಿಳಿಸಿಕೊಟ್ಟರು. ಹೊಸ ಹೆಂಚಿನ ಮಾಡಿನ ಹೊಸ ವಾಸ್ತುಶೈಲಿಯನ್ನು ರೂಢಿಗೆ ತಂದರು. ಸಾಹಿತ್ಯ, ಭಾಷೆಗಳ ವೈಜ್ಞಾನಿಕ ಅಧ್ಯಯನ, ನವ ಗದ್ಯ, ನವ ಭಾವಗೀತೆ, ಪತ್ರಿಕೋದ್ಯಮಗಳಿಗೆ ತಳಹದಿ ಹಾಕಿದರು. ಅನಾಥಾಲಯ, ಆಸ್ಪತ್ರೆ ತೆರೆದು ಜನತಾ ಸೇವೆಯ ಹೊಸ ಅಧ್ಯಾಯ ತೆರೆದರು. ಬಾಸೆಲ್ ಮಿಶನ್‌ನ ಒಂದೂವರೆ ಶತಮಾನದ ಸಾಧನೆ ಕರ್ನಾಟಕದ ನವೋದಯದ (ರಿನೇಸಾನ್ಸ್)ದ ಇತಿಹಾಸದಲ್ಲಿ ಒಂದು ಗಣ್ಯ ಅಧ್ಯಾಯ.

ಡಾ॥ ಎಚ್. ಆರ್. ರಘುನಾಥ ಭಟ್

ಮೈಸೂರು ಬಳಿ ವರುಣದಲ್ಲಿ ಮತ್ತೊಂದು ಜೈನಶಾಸನ ಸ್ತಂಭದ ಶೋಧನೆ

ಕರ್ನಾಟಕ ಶಾಸನ ಸಮೀಕ್ಷೆಯಲ್ಲಿ ಜೈನಸ್ತಂಭ ಶಾಸನ ಹಾಗೂ ನಿಶದಿಗೆ ಶಾಸನಗಳಿಗೆ ಪ್ರತ್ಯೇಕ ಸ್ಥಾನವಿದೆ. ಶಾಸನ ಸ್ವರೂಪ, ಪಾಠ ಮತ್ತು ಇತರ ವಿವರಗಳನ್ನು ಪರಿಶೀಲಿಸಿದರೆ ಈ ಮಾತು ಹೌದೆನ್ನಿಸೀತು. ಮೈಸೂರು ಬಳಿ ವರುಣಗ್ರಾಮದಲ್ಲಿ ಈಚೆಗೆ ನಾನು ಕೈಕೊಂಡ ಕ್ಷೇತ್ರ ಕಾರ್ಯದಲ್ಲಿ ಪತ್ತೆಯಾದ ಜೈನಸ್ತಂಭಶಾಸನವನ್ನು ಕುರಿತು ಒಂದು ಟಿಪ್ಪಣಿಯನ್ನಿಲ್ಲಿ ಬರೆಯಲಾಗಿದೆ.[1]

ವರುಣಗ್ರಾಮದ ಹೊರವಲಯದಲ್ಲಿ, ದೇವಾಂಬುದಿ ಕೆರೆಯಂಚಿನ ಬಯಲಲ್ಲಿ ಇರುವ ಹುಂಡಿಮಾರಮ್ಮ ಗುಡಿಯೆದುರಿಗೆ ನಿಲ್ಲಿಸಿರುವ ಕಲ್ಲುಕಂಬದ ಮೇಲೆ ಈ ಶಾಸನವನ್ನು ಕಂಡರಿಸಲಾಗಿದೆ.[2] ಕಣಶಿಲೆಯ ಕಂಬದ (೧೩೦ × ೨೨ × ೧೮ ಸೆಂ. ಮೀ.) ಎರಡು ಮೈಗಳಲ್ಲಿ ಮಾತ್ರ ಮೇಲಿಂದ ಕೆಳಕ್ಕೆ ಶಾಸನ ಬರಹವನ್ನು ಕೆತ್ತಲಾಗಿದೆ. ಕಂಬದ ಎದುರು ಮುಖದಲ್ಲಿ ಹದಿನೈದು ಸಾಲುಗಳೂ (೧-೧೫), ಹಿಮ್ಮುಖದಲ್ಲಿ ಹದಿನೆಂಟು ಸಾಲುಗಳೂ (೧೬-೩೩) ಕಂಡುಬರುತ್ತವೆ. ಈ ಕಂಬದ ಮೇಲ್ತುದಿಯಲ್ಲಿ ನಾಲ್ಕು ದಳಗಳ ಕಮಲವನ್ನು ಕವುಚಿಟ್ಟಂತೆ ಕೆತ್ತಲಾಗಿದೆ. ವರುಣದಲ್ಲಿರುವ ಉಳಿದ ಜೈನಶಾಸನ ಸ್ತಂಭಗಳಲ್ಲಿ ಕಂಡುಬರುವಂತೆ ಜಿನಬಿಂಬಗಳು ಗೂಡಿನೊಳಗಿದ್ದಂತೆ ಇಲ್ಲಿ ಶಿಲ್ಪಿತವಾಗಿಲ್ಲ.[3]

ಸುಮಾರು ಹತ್ತನೆಯ ಶತಮಾನದ ಹಳಗನ್ನಡ ಲಿಪಿ ಮತ್ತು ಭಾಷೆಯಲ್ಲಿ ಬರೆದ ಈ ಶಾಸನವು ಗದ್ಯಶೈಲಿಯಲ್ಲಿದೆ. ಅಲ್ಲಲ್ಲಿ ಕಾಗುಣಿತ ದೋಷಗಳೂ ನುಸುಳಿವೆ. ತೇದಿಯ ವಿವರಗಳು ಇಲ್ಲಿಲ್ಲ. ಇದರ ಲಿಪಿಶೈಲಿ, ಶಾಸನ ಪಾಠ ವಿವರಗಳನ್ನಾಧರಿಸಿ ಸುಮಾರು ಹತ್ತನೆಯ ಶತಮಾನದ್ದೆಂದು ಹೇಳಲಡ್ಡಿಯಿಲ್ಲ. ಇದು ಜೈನಸ್ಮಾರಕ ಸ್ತಂಭಶಾಸನ. ಇದನ್ನು ನಿಶದಿಗೆ ಸ್ತಂಭಶಾಸನ ಪ್ರಕಾರವೆಂದೂ ಪರಿಗಣಿಸಬಹುದು. ವರುಣ, ಶ್ರವಣಬೆಳಗೊಳ ಮುಂತಾದೆಡೆಗಳಲ್ಲಿ ಈ ಬಗೆಯ ಸ್ತಂಭಶಾಸನಗಳು ಸಾಕಷ್ಟಿವೆ.

ಐತಿಹಾಸಿಕ ಮಹತ್ವ

ತಲಕಾಡನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಬಹುಕಾಲ ಆಳಿದ ಗಂಗರ ಕಾಲದ, ಗಂಗ ಕುಲದ, ಜೈನ

1. ವರುಣಗ್ರಾಮದ ವಾಸ್ತುಶಿಲ್ಪ, ಶಾಸನಗಳನ್ನು ಕುರಿತು, ವ್ಯಾಪಕ ಅಧ್ಯಯನ ಕೈಕೊಂಡಿದ್ದು ಒಂದು ಪುಸ್ತಕ ರೂಪದಲ್ಲಿ ಪ್ರಕಟವಾಗಲಿದೆ.
2. ನೋಡಿ : ಜೈ.ಇ.ಎಸ್.ಐ., ಸಂ. XI (೧೯೮೫)
3. ಮತ್ತೊಂದು ಜಿನ ಬಿಂಬವನ್ನೊಳಗೊಂಡ ನಿಶದಿಗೆ ಸ್ತಂಭಶಾಸನವೊಂದನ್ನು ಕೆಲವರ್ಷಗಳ ಹಿಂದೆ ಪತ್ತೆ ಮಾಡಿದ್ದು, ಅದರ ಬಗೆಗೆ ದಕ್ಷಿಣ ಭಾರತೀಯ ಇತಿಹಾಸ ಸಮ್ಮೇಳನದ ವಾರ್ಷಿಕ ಪ್ರಕಟಣೆ(೧೯೮೨)ಯಲ್ಲಿ ಓದಬಹುದು.

ಕಂತಿಯಾದ ಗಂಗಬ್ಬೆಯ ಒಂದು ಸ್ಮಾರಕವಾಗಿ ಈ ಸ್ತಂಭ ಶಾಸನ ಉಳಿದಿದೆ. ಗಂಗರು ಗುಣನಂದಿಯಂಥ ಜೈನ ಯತಿಗಳಿಂದ ಸ್ಫೂರ್ತಿ ಪಡೆದು ಜೈನಮತಕ್ಕೆ ವಿಶೇಷವಾಗಿ ಪ್ರೋತ್ಸಾಹ ನೀಡಿದ್ದು ನಾಡಿನ ಇತಿಹಾಸದಲ್ಲಿ ಆಗಲೇ ದಾಖಲೆಯಾಗಿದೆ. ಗಂಗಕುಲದಲ್ಲಿ ಗಂಗಬ್ಬೆಯಂಥ ಜೈನ ಕಂತಿಯರಿದ್ದರೆಂದು ಬಹುಶಃ ಮೊದಲ ಬಾರಿಗೆ, ಪ್ರಸ್ತುತ ಶಾಸನವು ಪ್ರಕಟಪಡಿಸುತ್ತದೆ. ಅಲ್ಲದೆ ಆ ಕಾಲದ ಖ್ಯಾತ ಜೈನ ಯತಿಯಾಗಿದ್ದ ಕುಮಾರಣಂದಿಯನ್ನು ಕುರಿತಂತೆ ಇದೊಂದು ಪ್ರಮುಖ ಶಾಸನವಾಗಿದೆ.

ಸಮಾಜೋ ಧಾರ್ಮಿಕ ಮಹತ್ವ

ಈ ಶಾಸನದ ಮೂಲ ಉದ್ದೇಶವೇ ಕಂತಿ ಗಂಗಬ್ಬೆಯ ಬಗೆಗೆ, ಅವಳು ಸಲ್ಲೇಖಸವ್ರತವನ್ನಾಚರಿಸಿ ದೇಹಾಂತಗೊಂಡಿದ್ದರ ಬಗೆಗೆ ವಿವರಗಳನ್ನು ನೀಡುವುದಾಗಿದೆ. ಈ ಹಿನ್ನೆಲೆಯಲ್ಲಿ ಅವಳನ್ನು 'ಗಂಗಕುಲೋದ್ಭವೆ'ಯೆಂದೂ ಮಲದ ಕುಮಾರಣಂದಿಯ ಶಿಷ್ಯೆಯೆಂದು ಖ್ಯಾತಳಾಗಿದ್ದ ಬಾದುಬ್ಬೆಯಿಂದ ದೀಕ್ಷೆ ಪಡೆದವಳೆಂದೂ ಬಣ್ಣಿಸಲಾಗಿದೆ. ಈ ಬಾದುಬ್ಬೆ ಹಿರಿಯ ಸನ್ಯಾಸಿಣಿ (ಕಂತಿ)ಯಾಗಿರುವುದರಿಂದ ಅವಳನ್ನು 'ಆರ್ಯೆ' ಅಜ್ಜಿಯೆಂದೂ ಉಲ್ಲೇಖಿಸಲಾಗಿದೆ.

ಗಂಗಬ್ಬೆಯು 'ತುಂಗಾನ್ವಯ' ಮತ್ತು 'ಸೂರಸ್ತಗಣ'ಕ್ಕೆ ಸೇರಿದವಳು. ಅವಳನ್ನು 'ಸೂರಸ್ತಗಣಗುಣಾಗ್ರಣಿ' ಎಂದೇ ಪ್ರಶಂಸಿಸಲಾಗಿದೆ! ಇಂಥ ಖ್ಯಾತ ಕಂತಿ ಗಂಗಬ್ಬೆಯು ಸನ್ಯಸನ ವಿಧಿಯನ್ನು ಆಚರಿಸುತ್ತ ಪಂಚ ಪರಮೇಷ್ಠಿಧ್ಯಾನ ಮಾಡುತ್ತ (ಅಯ್ದನೊಂತು), ತನ್ನ ದೇಹತ್ಯಾಗ ಮಾಡಿ (ಸುಪರ್ಯಸನಗೆದು) ಊರ್ಧ್ವ ಲೋಕ ಪಡೆದಳು (ಸ್ವರ್ಗಸ್ಥಳಾದಳು). ಇದನ್ನು ತಿಳಿಸುವ ಮರಣ-ಶಾಸನ ವರುಣದಲ್ಲಿ ಪತ್ತೆಯಾದ್ದರಿಂದ ಅವಳು ಆ ಊರಲ್ಲೇ ಸತ್ತಿರಬೇಕೆಂದು ಊಹಿಸಲು ಅವಕಾಶವಿದೆ. ಆದರೆ ಆ ನಿರ್ದಿಷ್ಟ ಸ್ಥಳವನ್ನು ನಿರ್ದೇಶಿಸಲು ಆಗದು. ಸ್ಮಾರಕ ಕಂಬ ಇರುವುದು ಈಗಿನ ಗ್ರಾಮದೇವತೆ ಹುಂಡಿಮಾರಮ್ಮ ಗುಡಿಯೆದುರಲ್ಲಿ. ಇದು ಸ್ಥಳಾಂತರಗೊಂಡಿರುವ ಸಂಭವವಿಲ್ಲದಿಲ್ಲ.

ಇದು ಗಂಗರ ಕಾಲದಲ್ಲಿ ಖ್ಯಾತನಾಮನಾಗಿದ್ದ ಕುಮಾರಣಂದಿಯ ವ್ಯಕ್ತಿತ್ವದ ಮೇಲೆ ಹೊಸ ಬೆಳಕನ್ನು ಚೆಲ್ಲುವಂಥದ್ದಾಗಿದೆ. ಇವನನ್ನು ಮಲದ ಕುಮಾರಣಂದಿಯೆಂದು ಉಲ್ಲೇಖಿಸಲಾಗಿದೆ. ಮಲದ/ಮಲಧಾರಿ ಎಂಬುದು ಜೈನಯತಿಪ್ರಕಾರವನ್ನು ಸೂಚಿಸುತ್ತದೆ. ಇವನನ್ನು 'ಮುನೀಂದ್ರ' (ಮುನಿಸಮೂಹದಲ್ಲೀ ಇಂದ್ರನಂತಿರುವವನು), 'ನಿಯಮಾದಿಗುಣೋಪೇತರು', ಕೊಂಡಕುಂದಾನ್ವಯದ ಶ್ರೀಮತ್ ಕುಮಾರಣಂದಿ ಭಟ್ಟಾರಕರೆಂದು ಸ್ತುತಿಸಲಾಗಿದೆ. ಇವರು ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖಗಳಲ್ಲೆಲ್ಲ ಸಂಚರಿಸುತ್ತಿದ್ದಿರಬೇಕೆಂಬುದು ಹತ್ತನೆಯ ಶತಮಾನದ ಬೇಗೂರು ಶಾಸನ ಸೂಚಿಸುತ್ತದೆ.[4] ಗಂಗ ಶ್ರೀಪುರುಷನ ದೇವರಹಳ್ಳಿ ತಾಮ್ರಶಾಸನವೂ(ಎಂಟನೆಯ ಶತಮಾನ) ಒಬ್ಬ ಕುಮಾರಣಂದಿಯನ್ನು ಬಹುವಾಗಿ ಸ್ತುತಿಸುತ್ತದೆ.[5] ಈತನೇ ವರುಣಶಾಸನೋಕ್ತ ಕುಮಾರಣಂದಿಯೆಂದು ತೀರ್ಮಾನಿಸಲು ಕಾಲದ ಅಂತರ (ಸುಮಾರು ಎರಡು ಶತಮಾನಗಳು!) ಅಡ್ಡಿ ಬರುತ್ತದೆ. ಅಂತೆಯೇ ಇವರು ಬೇರೆ ಬೇರೆ ಯತಿಗಳಾಗಿರಬಹುದೆಂದು ಭಾವಿಸಬಹುದು.

ಇನ್ನೋರ್ವ ಹಿರಿಯ ಜೈನ ಸಂನ್ಯಾಸಿಣಿಯಾದ ಬಾದುಬ್ಬೆ ಬಗೆಗೆ ಇನ್ನೂ ಹೆಚ್ಚಿನ ವಿವರಗಳು ಪ್ರಸ್ತುತ ಶಾಸನದಲ್ಲಿಲ್ಲ. ಗಂಗಬ್ಬೆಗೆ ದೀಕ್ಷೆ ಕೊಟ್ಟ ಈಕೆ ಬಹುಶಃ ಮೊದಲಬಾರಿಗೆ ವರುಣಸ್ತಂಭಶಾಸನದಲ್ಲಿ ಉಲ್ಲೇಖಿತಳಾಗಿದ್ದಾಳೆ.

ಜೈನ ನಿಶದಿಗೆ ಕಂಬದ ಮೇಲಣ ಬರಹದಲ್ಲಿ ಜಿನ ಶಾಸನ, ಮಲದ (ಮಲಧಾರಿ), ಅನ್ವಯ, ಗಣ,

4. ಎಕ IX, ಬೇಗೂರು-೯೫ (ಸು. ೯೫೦)

5. ನೋಡಿ : ಕೆ.ವಿ. ರಮೇಶ್ : ಇನ್‌ಸ್ಕ್ರಿಪ್ಶನ್ಸ್ ಆಫ್ ವೆಸ್ಟರ್ನ್ ಗಂಗಾಸ್, ದೆಹಲಿ, ೧೯೮೪ : ಎಕ IV, ದೇವರಹಳ್ಳಿ-೮೫ (೭೭೬–೭೭)

ಉಭಯ ಸಂಘ. ಸನ್ಯಸನವಿಧಿ, ಅಯ್ದುನೊಂತು (ನೊಂಪಿ), ಸ್ವರ್ಗ, ಕಂತಿ ಮುಂತಾದ ಪಾರಿಭಾಷಿಕ ಪದಗಳಿವೆ. ಇವೆಲ್ಲ ಜನಜನಿತ ಶಬ್ದಗಳಾಗಿದ್ದು, ಪ್ರತ್ಯೇಕ ವಿವರಗಳಿಗೇನೂ ಇಲ್ಲಿ ಅವಕಾಶ ನೀಡಲಾರವು.[6]

ಪ್ರಸ್ತುತ ಶಾಸನ ಶೋಧನೆಯಿಂದ ವರುಣವು ಹತ್ತನೆಯ ಶತಮಾನದಲ್ಲಿ ಜೈನ ಕೇಂದ್ರವಾಗಿತ್ತೆಂಬುದು ಇನ್ನೂ ಸ್ಪಷ್ಟವಾಗುತ್ತದೆ. ಅಲ್ಲಿರುವ ಜಿನಬಿಂಬಗಳೂ ಜೈನ ಶಾಸನಗಳೂ ಜೈನ ಬಸದಿಯ ಅವಶೇಷಗಳೂ ಇದಕ್ಕೆ ಮೂಕಸಾಕ್ಷಿಗಳಾಗಿ ಅಲ್ಲಲ್ಲಿ ಚದುರಿವೆ. ಕರ್ನಾಟಕದ ಜೈನ ಕಂತಿಯರ ಪಟ್ಟಿಗೆ ಇನ್ನೊಂದು ಹೆಸರು ವರುಣದ ಗಂಗಬ್ಬೆ ಶಾಸನದ ಶೋಧನೆಯಿಂದ ಸೇರಿ ದಂತಾಯಿತು. ಅಲ್ಲದೆ ಇದು ಜೈನ ನಿಶದಿಗೆಸ್ತಂಭಶಾಸನಗಳ ಸಾಲಲ್ಲಿ ನಿಲ್ಲಿಸಬಹುದಾದ ಒಂದು ಹೊಸ ಸೇರ್ಪಡೆ ಯೆಂದೂ ಹೇಳಬಹುದು.

---

6. ನೋಡಿ : ತ.ಸು. ಶಾಮರಾಯ, ಪ. ನಾಗರಾಜಯ್ಯ : ಜೈನ ಪರಿಭಾಷಾಕೋಶ, ಬೆಂಗಳೂರು, ೧೯೮೧

ಡಾ॥ ಎ. ವಿ. ನರಸಿಂಹಮೂರ್ತಿ

ಕರ್ನಾಟಕವಲ್ಲಿ ಇತಿಹಾಸ ಆರಂಭಕಾಲದ ಕೆಲವು ಸಮಸ್ಯೆಗಳು

ಪುರಾತತ್ವ ಆಧಾರದ ಮೇಲೆ ಹೇಳುವುದಾದರೆ ಕರ್ನಾಟಕದಲ್ಲಿ, ಭಾರತದ ಇತರ ಭಾಗಗಳಲ್ಲಿರುವಂತೆ, ಇತಿಹಾಸ ಆರಂಭ ಕಾಲದ ಸಂಸ್ಕೃತಿಯು ಬೆಳಕಿಗೆ ಬಂದಿದೆ. ಅಂದರೆ ಇತಿಹಾಸಪೂರ್ವ ಕಾಲದ ಅನಂತರ, ಆದರೆ ಇತಿಹಾಸಕ್ಕೆ ಖಚಿತವಾಗಿ ಸೇರಬಹುದಾದ ಕಾಲಕ್ಕೆ ಮುಂಚಿನ ಈ ಸಂಸ್ಕೃತಿಯನ್ನೇ ಇತಿಹಾಸ ಆರಂಭಕಾಲದ ಸಂಸ್ಕೃತಿ ಎಂದು ಕರೆಯಬಹುದು. ಉತ್ಖನನಗಳಲ್ಲಿ ದೊರಕಿರುವ ಆಧಾರದ ಮೇಲೆ ಇದರಲ್ಲಿ ಮುಖ್ಯವಾಗಿ ಕೆಲವು ಲಕ್ಷಣಗಳು ಕಾಣಬರುತ್ತವೆ. ಅವುಗಳಲ್ಲಿ ಅತಿ ಮುಖ್ಯವಾದುದು ಆ ಕಾಲದ ಮಡಕೆ. ಸುಟ್ಟ ಕೆಂಪು ಅಥವಾ ಕಂದು ಬಣ್ಣದ ಮಡಕೆಯ ಮೇಲೆ ಬಿಳಿಯ ಬಣ್ಣದ ಗೆರೆಗಳುಳ್ಳ ಅಲಂಕಾರವೇ ಇದರಲ್ಲಿ ಅತಿ ಮುಖ್ಯವಾದುದು. ಇದರಲ್ಲಿ ವಿವಿಧ ವಿನ್ಯಾಸಗಳು ಕಂಡು ಬಂದು ವೈವಿಧ್ಯಮಯವಾದ ಅಲಂಕಾರದಿಂದ ಕೂಡಿದೆ. ಇದು ಇತಿಹಾಸ ಆರಂಭ ಕಾಲದ ಸಂಸ್ಕೃತಿಯ ಎಲ್ಲ ನೆಲೆಗಳಲ್ಲಿಯೂ ಹೇರಳವಾಗಿ ದೊರಕುತ್ತದೆ. ಆದುದರಿಂದ ಇದನ್ನೇ ಅತ್ಯಂತ ಪ್ರಮುಖ ಲಕ್ಷಣವೆಂದು ಪರಿಗಣಿಸಿದರೆ ತಪ್ಪಾಗುವುದಿಲ್ಲ. ಇದನ್ನು ಆ ಕಾಲದ ಪುರಾತತ್ವಜ್ಞರು ಆಂಧ್ರ ಮಡಕೆ ಎಂದು ಕರೆದರು. ಇದನ್ನು ಮುಂದೆ ಗಮನಿಸೋಣ. ಇನ್ನೊಂದು ಲಕ್ಷಣವೆಂದರೆ ಇಟ್ಟಿಗೆಯಿಂದ ಕಟ್ಟಲ್ಪಟ್ಟ ರಚನೆಗಳು. ಅವು ಯಾವುವೂ ಪೂರ್ಣವಾಗಿ ಉಳಿದಿಲ್ಲವಾದರೂ ಇಟ್ಟಿಗೆಯ ಬಳಕೆ ವ್ಯಾಪಕವಾಗಿದ್ದಿತೆಂದು ಮಾತ್ರ ತಿಳಿದು ಬಂದಿದೆ. ಇವುಗಳ ಜೊತೆಗೆ ಆಂಧ್ರ–ಶಾತವಾಹನರ ನಾಣ್ಯಗಳು ಈ ಸ್ತರಗಳಲ್ಲಿ ಹೇರಳವಾಗಿ ದೊರಕಿದ್ದು, ಕಾಲನಿರ್ಣಯಕ್ಕೆ ಬಲು ಸಹಕಾರಿಯಾಗಿವೆ. ಹೀಗೆ ಈ ಮೂರು ಲಕ್ಷಣಗಳು ಉತ್ಖನನಗಳಿಂದ ಕರ್ನಾಟಕದಲ್ಲಿ ವ್ಯಕ್ತಪಟ್ಟಿವೆ.

ಕರ್ನಾಟಕದಲ್ಲಿ ಇತಿಹಾಸ ಆರಂಭಕಾಲದ ಸ್ತರಗಳನ್ನು ಪೊಟ್ಟ ಮೊದಲು ಪತ್ತೆ ಮಾಡಿದವರು ಡಾ॥ ಎಂ. ಎಚ್. ಕೃಷ್ಣ.[1] ಅವರು ಚಂದ್ರವಳ್ಳಿಯಲ್ಲಿ ನಡೆಸಿದ ಉತ್ಖನನದಲ್ಲಿ ಈ ಕಾಲದ ಸ್ತರಗಳನ್ನು ಮೊದಲನೆಯ ಬಾರಿಗೆ ಗುರುತಿಸಿದರು. ಆಗಿನ ಕಾಲದಲ್ಲಿ ರೂಢಿಯಲ್ಲಿದ್ದಂತೆ ಅದನ್ನು ಅವರು ಶಾತವಾಹನ ಸಂಸ್ಕೃತಿ ಎಂದು ಕರೆದರು. ಏಕೆಂದರೆ ಆ ಸ್ತರಗಳಲ್ಲಿ ಶಾತವಾಹನ ರಾಜರ ನಾಣ್ಯಗಳು ದೊರಕಿದವು. ಇವುಗಳ ಜೊತೆಗೆ ಇಟ್ಟಿಗೆಯಿಂದ ಕಟ್ಟಲಾದ ಅವಶೇಷಗಳೂ ಮತ್ತು ಬಿಳಿಯ ರೇಖೆಗಳ ಅಲಂಕಾರವನ್ನುಳ್ಳ ಕೆಂಪನೆಯ ಮಡಕೆಯ ಚೂರುಗಳೂ ದೊರಕಿದವು. ಈ ಎಲ್ಲ ಅವಶೇಷಗಳ ಆಧಾರದ ಮೇಲೆ ಎಂ. ಎಚ್. ಕೃಷ್ಣ ಅವರು ಈ ಸಂಸ್ಕೃತಿಯನ್ನು ಎರಡು ಭಾಗಗಳನ್ನಾಗಿ ವಿಂಗಡಿಸಿದರು: ಮೊದಲನೆಯದು ಆರಂಭದ ಕಾಲ; ಎರಡನೆಯದು ಅನಂತರದ ಕಾಲ. ಕಾಲಗಣನೆಗೆ ಅವರು ವಿಶೇಷವಾಗಿ ಉಪಯೋಗಿಸಿದ ವಸ್ತುಗಳೆಂದರೆ ನಾಣ್ಯಗಳು.

1. ಎಂ .ಎಚ್. ಕೃಷ್ಣ : ಎಕ್ಸ್‌ಕವೇಷನ್ ಎಟ್ ಚಂದ್ರವಳ್ಳಿ, ಬೆಂಗಳೂರು, ೧೯೩೧

ಸರ್ ಮಾರ್ಟಿಮರ್ ವ್ಹೀಲರ್ ಅವರು ೧೯೪೭ ಚಂದ್ರವಳ್ಳಿಯಲ್ಲಿ ಪುನಃ ಉತ್ಖನನಗಳನ್ನು ನಡೆಸಿದರು.[2] ಇವರು ಇತಿಹಾಸ ಆರಂಭದ ಕಾಲವನ್ನು ಸ್ಪಷ್ಟವಾಗಿ ಶಾತವಾಹನ ಕಾಲ ಎಂದೇ ಕರೆದರು. ಆದರೆ ಇದನ್ನು ಇವರು ಮೂರು ಭಾಗಗಳಾಗಿ ವಿಂಗಡಿಸಿದರು: ಆರಂಭದ ಆಂಧ್ರ ; ಮಧ್ಯಕಾಲೀನ ಆಂಧ್ರ ಮತ್ತು ಇತ್ತೀಚಿನ ಆಂಧ್ರ ಎಂಬುವೇ ಅವರು ಮಾಡಿದ ವಿಭಾಗಗಳು. ಇದಕ್ಕೆ ಅವರು ಕೊಟ್ಟ ಆಧಾರಗಳು ಹೀಗಿವೆ: ಮೊದಲ ನೆಯ ಹಂತದಲ್ಲಿ ಮೆಗಾಲಿತಿಕ್ ಸಂಸ್ಕೃತಿಯ ಮಡಕೆಗಳ ಜೊತೆಗೆ ಬಿಳಿ (ಹಳದಿ) ಬಣ್ಣದ ಅಲಂಕಾರದ ಮಡಕೆಗಳು ದೊರಕಿದವು. ಆದರೆ ಮೆಗಾಲಿತಿಕ್ ಮಡಕೆಯ ಚೂರುಗಳು ಬಹಳ ಕಡಿಮೆಯ ಪ್ರಮಾಣದಲ್ಲಿ ಇದ್ದುದರಿಂದ, ಆ ಸಂಸ್ಕೃತಿಯು ಇಳಿಮುಖದಲ್ಲಿತ್ತು ಎಂಬುದನ್ನು ಅವರು ಊಹಿಸಿದರು. ಎರಡನೆಯ ಹಂತದಲ್ಲಿ ಮೆಗಾಲಿತಿಕ್ ಮಡಕೆಯು ಸ್ವಲ್ಪವೂ ಇಲ್ಲದೆ, ಬಿಳಿ ಬಣ್ಣದ ಅಲಂಕಾರದ ಮಡಕೆಗಳು ಏಕಾಏಕಿ ಹೆಚ್ಚಿದವು. ಮೂರನೆಯ ಹಂತದಲ್ಲಿ ಈ ಮಡಕೆಯ ಚೂರುಗಳೂ ಇಳಿಮುಖವಾಗತೊಡಗಿದವು.

ಇವುಗಳ ಜೊತೆಗೆ ಆಂಧ್ರ-ಶಾತವಾಹನ ರಾಜರ ನಾಣ್ಯಗಳು, ಮಹಾರಥಿಯವರ ನಾಣ್ಯಗಳು, ರೋಮನ್ ನಾಣ್ಯಗಳು ಬೆಳಕಿಗೆ ಬಂದವು. ಇವುಗಳಲ್ಲಿಯೂ ಕಾಲನಿರ್ಣಯಕ್ಕೆ ಅನುಕೂಲವಾದ ವಾಸಿಷ್ಠೀಪುತ, ಪುಳುಮಾವಿ, ಯಜ್ಞಶಾತಕರ್ಣಿಯ ನಾಣ್ಯಗಳು ಮತ್ತು ಟೈಬೀರಿಯಸ್ ಚಕ್ರವರ್ತಿಯ ಕ್ರಿ. ಶ. ೧೪-೩೭ ರಲ್ಲಿ ಟಂಕಿಸಲ್ಪಟ್ಟ ನಾಣ್ಯ ಮುಖ್ಯವಾದವು. ಅಂದರೆ ವ್ಹೀಲರ್ ಅವರ ಪ್ರಕಾರ ಇತಿಹಾಸ ಆರಂಭಕಾಲದ ಸಂಸ್ಕೃತಿಯಲ್ಲಿ ಬಿಳಿಬಣ್ಣದ ಅಲಂಕಾರವುಳ್ಳ ಮಡಕೆ, ಆಂಧ್ರರ ನಾಣ್ಯ, ರೋಮನ್ ನಾಣ್ಯ ಮತ್ತು ಕೆಲವು ಶಿಥಿಲವಾದ ಇಟ್ಟಿಗೆಯ ಕಟ್ಟಡಗಳೂ ಸೇರಿದ್ದವು.

ವ್ಹೀಲರ್‌ರವರು ಬ್ರಹ್ಮಗಿರಿಯಲ್ಲಿ ನಡೆಸಿದ ಉತ್ಖನನದಲ್ಲಿಯೂ ಇದೇ ರೀತಿಯ ಸಂಸ್ಕೃತಿಯನ್ನು ಗುರುತಿಸಿದರು.[3] ಮೆಗಾಲಿತಿಕ್ ಸಂಸ್ಕೃತಿಯ ನಂತರದ ಕಾಲಕ್ಕೆ ಸೇರಬಹುದಾದ, ಅಂದರೆ ಕ್ರಿ.ಶ. ಮೊದಲನೆಯ ಶತಮಾನದಿಂದ ಮೂರನೆಯ ಶತಮಾನದವರೆಗಿನ ಕಾಲಕ್ಕೆ ಸೇರಬಹುದೆಂದು ಅವರು ನಿರ್ಣಯಿಸಿದರು. ಬಿಳಿಯ ಬಣ್ಣದ ಅಲಂಕಾರವನ್ನು ಹೊಂದಿದ ಕೆಂಪು ಮಡಕೆಗಳು ಮಾತ್ರ ರೋಮನ್ ಕಾಲಕ್ಕೆ ಸೇರುವ 'ರೌಲೆಟೆಡ್' ಮಡಕೆಯ ಚೂರುಗಳೂ ಹೇರಳವಾಗಿ ದೊರಕಿದವು. ಅಗೇಟ್, ಕಾರ್ನೀಲಿಯನ್ ಮತ್ತು ಮಣ್ಣಿನ ಮಣಿಗಳೂ ಸಿಕ್ಕಿದವು. ಇನ್ನೊಂದು ಆಕರ್ಷಣೆಯೆಂದರೆ ಚೈತ್ಯದ ಮಾದರಿಯ ಗಜಪೃಷ್ಠಾಕಾರದ ಇಟ್ಟಿಗೆಯ ಕಟ್ಟಡ. ಆದರೆ ಇಲ್ಲಿ ನಾಣ್ಯಗಳು ಅಷ್ಟಾಗಿ ದೊರಕಲಿಲ್ಲ.

ಬಿ.ಕೆ. ಥಾಪರ್ ಅವರು ಮಸ್ಕಿಯಲ್ಲಿ ೧೯೫೪ರಲ್ಲಿ ಉತ್ಖನನ ನಡೆಸಿದರು.[4] ಇವರು ಆಂಧ್ರ ಸಂಸ್ಕೃತಿಯೆನ್ನುವ ಪದವನ್ನು ಬಳಸದೆ, ಇತಿಹಾಸ ಆರಂಭದ ಕಾಲದ ಸಂಸ್ಕೃತಿ ಎನ್ನುವ ಪದವನ್ನು ಮೊದಲ ಬಾರಿಗೆ ಕರ್ನಾಟಕ ಪುರಾತತ್ವದಲ್ಲಿ ಬಳಕೆಗೆ ತಂದರು. ಆಂಧ್ರ ಮಡಕೆ ಅಥವಾ ಆಂಧ್ರ ಸಂಸ್ಕೃತಿ ಎನ್ನುವುದಕ್ಕೆ ಅರ್ಥವಿಲ್ಲ; ಈ ಪದಗಳನ್ನು ಬಳಸಬಾರದು ; ಅವುಗಳು ಸೂಚಿಸುವ ಅರ್ಥವೇ ಬೇರೆ. ಆಂಧ್ರ ನಾಣ್ಯಗಳು ದೊರೆತ ಮಾತ್ರಕ್ಕೆ ಆ ಸಂಸ್ಕೃತಿಯನ್ನು ಆಂಧ್ರ ಸಂಸ್ಕೃತಿ ಎಂದು ಕರೆಯಲಾಗುವುದಿಲ್ಲ. ಹಾಗಾದರೆ ಜೊತೆಗೆ ರೋಮನ್ ನಾಣ್ಯಗಳೂ ದೊರಕುವುದರಿಂದ ಆ ಸಂಸ್ಕೃತಿಯನ್ನು ಏನೆಂದು ಕರೆಯಬೇಕು ; ಆಂಧ್ರ-ರೋಮನ್ ಸಂಸ್ಕೃತಿ ಎನ್ನಬೇಕೇ ಎಂದು ಇವರು ವಾದಿಸುತ್ತಾರೆ. ಆದುದರಿಂದ ಇದಕ್ಕೆ ಇನ್ನೊಂದು ಬೇರೆಯ ಹೆಸರನ್ನೇ ಕೊಡಬೇಕು ಎಂದು ಹೇಳುತ್ತಾರೆ. ಈ ಸಂಸ್ಕೃತಿಯು ಮೆಗಾಲಿತಿಕ್ ಸಂಸ್ಕೃತಿಯ ಅಂದರೆ ಇತಿಹಾಸ ಪೂರ್ವಕಾಲದ ಸಂಸ್ಕೃತಿಯ ಅನಂತರ ಕಾಲದ್ದಾದುದರಿಂದ, ಇದನ್ನು ಇತಿಹಾಸ ಆರಂಭದ ಕಾಲದ

2. ವ್ಹೀಲರ್ : ಏನ್ಷಂಟ್ ಇಂಡಿಯ, ಸಂಪುಟ ೪, ಪು. ೨೭೦
3. ಅದೇ, ಪು. ೨೦೨
4. ಅದೇ, ಸಂಪುಟ ೧೩, ಪು. ೪

ಸಂಸ್ಕೃತಿ ಎಂದು ಕರೆಯಬೇಕಾದುದು ಹೆಚ್ಚು ಸಮಂಜಸವಾದುದು. ಇವರು ಇಲ್ಲಿ ದೊರೆಯುವ ಬಿಳಿಬಣ್ಣದ ಅಲಂಕಾರವನ್ನುಳ್ಳ ಕೆಂಪು ಮಡಕೆಗೆ ಹೆಚ್ಚು ಪ್ರಾಮುಖ್ಯ ನೀಡಿ, ಈ ಸಂಸ್ಕೃತಿಯನ್ನು ಈ ಮಡಕೆಯ ಲಕ್ಷಣದೊಂದಿಗೇ ಸೇರಿಸಬೇಕು ಎಂದು ಅಭಿಪ್ರಾಯ ಪಡುತ್ತಾರೆ. ಇಲ್ಲಿ ಈ ಮಡಕೆಯು ಮುಂದುವರೆದು ರೂಪದಲ್ಲಿ ದೊರೆಯುವುದು ಮಾತ್ರವಲ್ಲದೆ ವೈವಿಧ್ಯಪೂರ್ಣವಾದ ಅಲಂಕಾರಗಳನ್ನು ತೋರಿಸುತ್ತದೆ. ಅಂದರೆ ಈ ಸಂಸ್ಕೃತಿಯಲ್ಲಿ ಈ ಮಡಕೆಯು ಅತ್ಯಂತ ಪ್ರಭಾವಶಾಲಿಯಾದ ರೀತಿಯಲ್ಲಿ ಬಳಕೆಯಲ್ಲಿದ್ದಿತು ಎಂದು ವಿದಿತವಾಗುತ್ತದೆ. ಇದರ ಜೊತೆಗೆ ವಿವಿಧ ರೀತಿಯ ಮಣಿಗಳು ಮತ್ತು ಮಣ್ಣಿನ ಬೊಂಬೆಗಳು ದೊರಕಿದವು. ರುಂಡವಿಲ್ಲದ ಸ್ತ್ರೀಯ ಬೊಂಬೆಯಲ್ಲಿ, ಬಟ್ಟೆ, ಕಂಠಾಭರಣ, ಹಿಂಭಾಗದಲ್ಲಿ ಜಡೆಗಳು ಕಾಣಬರುತ್ತವೆ. ಇನ್ನೊಂದು ಗಿಣಿಯ ಬೊಂಬೆ. ಈ ಎರಡು ಬೊಂಬೆಗಳೂ ಸುಂದರವಾಗಿ ಮಾಡಲ್ಪಟ್ಟಿವೆ. ಇವು ಈ ಸಂಸ್ಕೃತಿಯ ಮೇಲಿನ ಸ್ತರಗಳಲ್ಲಿ ದೊರಕಿರುವುದು ಗಮನಾರ್ಹ ಸಂಗತಿ.

ಮಸ್ಕಿಯಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಹೇರಳವಾಗಿ ದೊರಕಿರುವ ಬಳೆಗಳು. ಅದರಲ್ಲಿಯೂ ಮೇಲಿನ ಸ್ತರಗಳಲ್ಲಿ ದೊರಕಿರುವ ಬಳೆಗಳು ಕಲಾತ್ಮಕವಾಗಿದ್ದು, ಕೆತ್ತನೆಯ ಅಲಂಕಾರವನ್ನು ಹೊಂದಿವೆ. ಇವುಗಳ ಜೊತೆಯಲ್ಲಿ ಒಂದು ಬೆರಳುಂಗುರವೂ ದೊರಕಿದೆ. ಒಟ್ಟಿನಲ್ಲಿ ಮಸ್ಕಿಯಲ್ಲಿ ದೊರೆತ ಅವಶೇಷಗಳು ಇತರ ನೆಲೆಗಳಲ್ಲಿ ದೊರಕಿರುವ ಅವಶೇಷಗಳಿಗಿಂತ ಹೆಚ್ಚು ಮುಂದುವರೆದ ಹಂತವನ್ನು ವ್ಯಕ್ತಪಡಿಸುತ್ತವೆ ಎಂಬುದು ಖಚಿತವಾಗುತ್ತದೆ. ಈ ಸಂಸ್ಕೃತಿಯು ಕ್ರಿ.ಶ. ಒಂದನೆಯ ಶತಮಾನದಿಂದ ಮೂರನೆಯ ಶತಮಾನದವರೆಗೆ ಪ್ರಚಲಿತವಾಗಿದ್ದಿತು.

ಮೈಸೂರಿಗೆ ಸಮೀಪದಲ್ಲಿರುವ ತಿರಮಕೂಡ್ಲು ನರಸೀಪುರದಲ್ಲಿ ಡಾ॥ ಶೇಷಾದ್ರಿಯವರ ನೇತೃತ್ವದಲ್ಲಿ ನಡೆದ ಉತ್ಖನನದಲ್ಲಿ ದೊರಕಿರುವ ಸಂಸ್ಕೃತಿಗಳಲ್ಲಿ ಇತಿಹಾಸ ಆರಂಭಕಾಲವೂ ಒಂದು.[5] ಇದು ಮಸ್ಕಿಯ ಸಂಸ್ಕೃತಿಯಂತೆಯೇ ಇದ್ದು ಬಿಳಿಯ ಬಣ್ಣದ ಅಲಂಕಾರದ ಕೆಂಪು ಮಡಕೆ, ಮಣಿಗಳು, ಮಣ್ಣಿನ ಬೊಂಬೆಗಳು ಮತ್ತು ಬಳೆಗಳನ್ನು ಒಳಗೊಂಡಿದೆ. ಇದರ ಕಾಲ ಸು. ಕ್ರಿ.ಶ. ಒಂದನೆಯ ಶತಮಾನ. ನರಸೀಪುರಕ್ಕೆ ಬಲು ಸಮೀಪದಲ್ಲೇ ಇರುವ ಹೆಮ್ಮಿಗೆಯಲ್ಲಿಯೂ ಈ ಸಂಸ್ಕೃತಿಯ ಸ್ತರಗಳು ಗುರುತಿಸಲ್ಪಟ್ಟಿವೆ.[6] ಇಲ್ಲಿಯೂ ಬಿಳಿಯ ಅಲಂಕಾರದ ಮಡಕೆ, ಮಣಿಗಳು ದೊರಕಿವೆ.

ಹಳ್ಳೂರಿನಲ್ಲಿ ಖಚಿತವಾದ ಇತಿಹಾಸ ಆರಂಭಕಾಲದ ಸಂಸ್ಕೃತಿಯ ಸ್ತರಗಳು ದೊರಕಿಲ್ಲ.[7] ಆದರೆ ಬಿಳಿಯ ಬಣ್ಣದ ಅಲಂಕಾರದ ಮಡಕೆಗಳು ದೊರಕಿರುವುದು ಗಮನಾರ್ಹ. ಬನವಾಸಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದವರು ನಡೆಸಿದ ಉತ್ಖನನದಲ್ಲಿ ಉತ್ತಮವಾದ ಮಾಹಿತಿಯು ದೊರಕಿರುವುದನ್ನು ಗಮನಿಸಬೇಕು.[8] ಇಲ್ಲಿ ಬಲು ವಿಶಾಲವಾದ ಗಜಪೃಷ್ಠಾಕೃತಿಯ ಇಟ್ಟಿಗೆಯ ಕಟ್ಟಡಗಳು ದೊರಕಿದವು. ಕೆಂಪು ಮಡಕೆ, ಕಪ್ಪು ಮಡಕೆ, ರೌಲೆಟೆಡ್ ಮಡಕೆಗಳ ಜೊತೆಗೆ ಬಿಳಿಯ ಬಣ್ಣದ ಅಲಂಕಾರವುಳ್ಳ ಕೆಂಪು ಮಡಕೆಯ ಚೂರುಗಳು ಹೇರಳವಾಗಿ ದೊರಕಿದವು. ಇವುಗಳ ಜೊತೆಯಲ್ಲಿ ಒಂದು ಪಂಚ್ ಮಾರ್ಕ್ ನಾಣ್ಯವೂ ದೊರಕಿತು.[8] ಚುಟುಕುಲಾನಂದ, ಮುಡಾನಂದ ರಾಜರ ಸೀಸದ ನಾಣ್ಯಗಳ ಜೊತೆಗೆ ಶಾತವಾಹನ ರಾಜರ ಸೀಸದ ನಾಣ್ಯಗಳೂ ದೊರಕಿದವು. ಇಲ್ಲಿ ರೋಮನ್ ನಾಣ್ಯದ ಒಂದು ಅಚ್ಚು ಮತ್ತು ರೋಮನ್ ಕಾಲದ ಮಡಕೆಗಳು ದೊರಕಿದವು.[9] ಈ ಅಚ್ಚಿನಲ್ಲಿ ಆಸನದ ಮೇಲೆ ಕುಳಿತು, ರಾಜ

---

5. ಎಂ. ಶೇಷಾದ್ರಿ : ಎಕ್ಸ್‌ಕವೇಷನ್ ಎಟ್ ಟಿ. ನರಸೀಪುರ, ಪು. ೮
6. ಹನುಮಂತರಾವ್ ಮತ್ತು ನಾಗರಾಜು : ಎಕ್ಸ್‌ಕವೇಷನ್ ಎಟ್ ಹೆಮ್ಮಿಗೆ, ಪು. ೨೫
7. ಎಂ. ಎಸ್. ನಾಗರಾಜರಾವ್ : ಪ್ರೋಟೊ ಹಿಸ್ಟಾರಿಕ್ ಕಲ್ಚರ್ ಆಫ್ ತುಂಗಭದ್ರಾ ವ್ಯಾಲಿ, ಪು. ೬೮
8. ಎ. ವಿ. ನರಸಿಂಹಮೂರ್ತಿ : ಕಾಯಿನ್ಸ್ ಆಫ್ ಕರ್ನಾಟಕ, ಪು. ೫೮
9. ಎ. ವಿ. ನರಸಿಂಹಮೂರ್ತಿ : ಜರ್ನಲ್ ಆಫ್ ನ್ಯೂಮಿಸ್‌ಮ್ಯಾಟಿಕ್ ಸೊಸೈಟಿ ಆಫ್ ಇಂಡಿಯ, ಸಂಪುಟ **XLVI**, ಪು. ೪೫

ದಂಡವನ್ನು ಹಿಡಿದಿರುವ ಸ್ತ್ರೀಯ ಚಿತ್ರವಿದೆ. ಇಲ್ಲಿ ದೊರಕಿರುವ ನಾಲ್ಕಾರು ಸುಟ್ಟಮಣ್ಣಿನ ಬೊಂಬೆಗಳು ಗಮನಾರ್ಹವಾದವು. ಅವು ಮಥುರಾ ಕಾಲದ ಬೊಂಬೆಗಳನ್ನು ಹೋಲುತ್ತವೆ. ಇವುಗಳ ಜೊತೆಗೆ ಮಣಿಗಳು, ಬಳೆಗಳು ದೊರಕಿವೆ. ಇಲ್ಲಿ ದೊರಕಿರುವ ಕಟ್ಟಡಗಳ ಇಟ್ಟಿಗೆಗಳು, ಇತರ ಶಾತವಾಹನ ನೆಲೆಗಳಲ್ಲಿ ದೊರಕಿರುವ ಇಟ್ಟಿಗೆಗಳನ್ನು ಗಾತ್ರ ಮತ್ತು ಗುಣಗಳಲ್ಲಿ ಹೋಲುತ್ತವೆ. ಇಲ್ಲಿ ಒಂದು ಶಾತವಾಹನರ ಶಾಸನವೂ ದೊರಕಿದ್ದು, ಇದು ಶಿವಶ್ರೀ ಪುಳುಮಾವಿಯ ಶಾಸನಕ್ಕೆ ಒಳಪಟ್ಟಿದ್ದಿತು ಎಂಬುದನ್ನು ತೋರಿಸುತ್ತದೆ.[10] ಒಟ್ಟಿನಲ್ಲಿ ಕ್ರಿ. ಶ. ಒಂದನೆಯ ಶತಮಾನದಿಂದ ಆರಂಭವಾಗಿ ಮೂರನೆಯ ಶತಮಾನದವರೆಗಿನ ಸಂಸ್ಕೃತಿಯನ್ನು ಇಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದೆ.

ಬೆಳಗಾವಿಗೆ ಸಮೀಪದಲ್ಲಿರುವ ವಡಗಾಂವ ಮಾಧವಪುರದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದವರು ಉತ್ಖನನನ್ನು ನಡೆಸಿದರು.[11] ಇದು ಇತಿಹಾಸ ಆರಂಭ ಕಾಲದ ಸಂಸ್ಕೃತಿಗೆ ಉತ್ತಮ ಉದಾಹರಣೆಯಾಗಿದೆ. ಇಲ್ಲಿನ ಸಂಸ್ಕೃತಿಯನ್ನು ಮೂರು ಭಾಗವಾಗಿ ವಿಂಗಡಿಸಲಾಗಿದೆ. ಇದರ ಮೂರನೆಯ ಸ್ತರದಲ್ಲಿ ಬಿಳಿಯ ಬಣ್ಣದ ಅಲಂಕಾರವುಳ್ಳ ಕೆಂಪು ಬಣ್ಣದ ಮಡಕೆಯು ಹೇರಳವಾಗಿ ದೊರಕಿದೆ. ಶಾತವಾಹನ ಕಾಲದ ಇಟ್ಟಿಗೆಯ ಕಟ್ಟಡಗಳೂ ಇಲ್ಲಿ ಉತ್ಖನನದಲ್ಲಿ ದೊರಕಿದವು. ಈ ಕಟ್ಟಡಗಳ ಜೊತೆಯ ಸ್ತರಗಳಲ್ಲಿ ಶಾತವಾಹನ ನಾಣ್ಯಗಳು ಕಂಡು ಬಂದವು. ಇವುಗಳ ಜೊತೆಯಲ್ಲಿಯೇ ಸುಟ್ಟ ಮಣ್ಣಿನ ಬೊಂಬೆಗಳು ದೊರಕಿದವು. ಒಟ್ಟಿನಲ್ಲಿ ಇಲ್ಲಿ ಬಿಳಿಯ ಬಣ್ಣದ ಅಲಂಕಾರದ ಮಡಕೆ, ಇಟ್ಟಿಗೆಯ ಕಟ್ಟಡಗಳು, ಶಾತವಾಹನ ನಾಣ್ಯ, ಬೊಂಬೆಗಳು ದೊರಕಿದ್ದು, ಇವೆಲ್ಲವೂ ಇತಿಹಾಸ ಆರಂಭಕಾಲಕ್ಕೆ ಸೇರಿದವುಗಳಾಗಿವೆ.

ಗುಲ್ಬರ್ಗ ಜಿಲ್ಲೆಯ ಸನ್ನತಿಯಲ್ಲಿ ಇತಿಹಾಸ ಆರಂಭ ಕಾಲದ ಸಂಸ್ಕೃತಿಯ ಅವಶೇಷಗಳು ನೆಲದ ಮೇಲೆ ದೊರಕಿವೆ. ಇಲ್ಲಿ ಉತ್ಖನನ ಇನ್ನೂ ನಡೆದಿಲ್ಲವಾದುದರಿಂದ ಸ್ಪಷ್ಟವಾದ ಚಿತ್ರ ಇನ್ನೂ ದೊರಕಬೇಕಾಗಿದೆ. ಆದರೆ ಇಲ್ಲಿ ಶಾತವಾಹನ ಶೈಲಿಯ ಶಿಲ್ಪಗಳು, ಇಟ್ಟಿಗೆಯ ಕಟ್ಟಡಗಳು, ಬೊಂಬೆಗಳು, ಶಾಸನಗಳು ಹೇರಳವಾಗಿ ದೊರಕಿದ್ದು, ಈ ನೆಲೆ ಕ್ರಿ.ಶ. ಎರಡನೆಯ ಮತ್ತು ಮೂರನೆಯ ಶತಮಾನಗಳಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದಿತೆಂಬುದನ್ನು ಸ್ಪಷ್ಟಪಡಿಸುತ್ತದೆ.[12] ಇಲ್ಲಿ ವಿಪುಲವಾದ ಉತ್ಖನನ ನಡೆದರೆ ಕರ್ನಾಟಕದ ಇತಿಹಾಸ ಆರಂಭಕಾಲದ ಸಂಸ್ಕೃತಿಯ ಮೇಲೆ ವಿಶೇಷ ಬೆಳಕು ಚೆಲ್ಲುತ್ತದೆ ಎಂಬುದನ್ನು ಗಮನಿಸಬೇಕು.

ಆಲ್‌ಚಿನ್‌ರವರು ಪೀಕ್ಲಿಹಾಳದಲ್ಲಿ ನಡೆಸಿದ ಉತ್ಖನನದಲ್ಲಿಯೂ ಈ ಕಾಲದ ಸಂಸ್ಕೃತಿಯ ಅವಶೇಷಗಳು ಬೆಳಕಿಗೆ ಬಂದಿವೆ.[13] ಆಲ್‌ಚಿನ್‌ರವರ ಪ್ರಕಾರ ಇಲ್ಲಿನ ಸಂಸ್ಕೃತಿ ಬ್ರಹ್ಮಗಿರಿಯ ಆಂಧ್ರಸಂಸ್ಕೃತಿಗೆ ಸಮನಾಗಿದೆ. ಇದರ ಕಾಲವನ್ನು ಕ್ರಿ.ಶ. ಒಂದರಿಂದ ಮೂರನೆಯ ಶತಮಾನದವರೆಗೆ ಅಂದಾಜು ಮಾಡಲಾಗಿದೆ. ಐಹೊಳೆ ಮತ್ತು ಪಟ್ಟದಕಲ್ಲುಗಳಲ್ಲಿ ನಡೆದ ಸಂಶೋಧನೆಗಳಲ್ಲಿ ಡಾ॥ ಎಸ್. ಆರ್. ರಾಯರು ಶಾತವಾಹನ ಕಾಲದ ಇಟ್ಟಿಗೆಯ ಕಟ್ಟಡ, ನಾಣ್ಯಗಳು ಮತ್ತು ಬಿಳಿಯ ಬಣ್ಣದ ಅಲಂಕಾರದ ಕೆಂಪು ಮಡಕೆಗಳನ್ನು ಗುರುತಿಸಿದ್ದಾರೆ.[14] ಬಳ್ಳಾರಿಗೆ ಸಮೀಪದಲ್ಲಿರುವ ಕುರುಗೋಡಿನಲ್ಲಿ ಇತಿಹಾಸ ಆರಂಭಕಾಲದ ನೆಲೆಯನ್ನು ಗುರುತಿಸಲಾಗಿದೆ.[15] ಶಾತವಾಹನ ಕಾಲದ ಇಟ್ಟಿಗೆಗಳು ಮತ್ತು ಬಿಳಿಯ ಬಣ್ಣದ ಅಲಂಕಾರವುಳ್ಳ ಕೆಂಪು ಮಡಕೆಯೂ ಇಲ್ಲಿ ದೊರಕಿದೆ. ಇವುಗಳಲ್ಲದೆ ಮೈಸೂರು, ಧಾರವಾಡ, ಗುಲ್ಬರ್ಗ, ಬಿಜಾಪುರ ಮುಂತಾದ ಜಿಲ್ಲೆಗಳಲ್ಲಿ ನಡೆದ ಶೋಧನೆಗಳಿಂದ

---

10. ಜರ್ನಲ್ ಆಫ್ ಇಂಡಿಯನ್ ಎಫಿಗ್ರಾಫಿಕಲ್ ಸೊಸೈಟಿ, ಸಂಪುಟ ೪, ಪು. ೧೦೪
11. ಕರ್ನಾಟಕ ಭಾರತಿ, ಸಂಪುಟ ೫, ಪು. ೭೫
12. ಕ್ವಾರ್ಟರ್ಲಿ ಜರ್ನಲ್ ಆಫ್ ದಿ ಮಿಥಿಕ್ ಸೊಸೈಟಿ, ಸಂಪುಟ LVI, ಪು. ೩೫
13. ಎಫ್. ಆರ್. ಆಲ್‌ಚಿನ್ : ಪೀಕ್ಲಿಹಾಳ್ ಎಕ್ಸ್‌ಕವೇಷನ್ಸ್, ಪ್ಲೆ. XVI
14. ಶ್ರೀಕಂಠಿಕಾ, ಪು. ೨೩
15. ಆರ್ಕಿಯೋಲಾಜಿಕಲ್ ಸ್ಟಡೀಸ್ (ಎ. ವಿ. ನರಸಿಂಹಮೂರ್ತಿ), ಸಂಪುಟ, ೬ ಪು. ೬೦

ನೆಲದ ಮೇಲೆ ದೊರಕಿರುವ ಅವಶೇಷಗಳಿಂದ ಇತಿಹಾಸ ಆರಂಭ ಕಾಲದ ಸಂಸ್ಕೃತಿಯ ನೆಲೆಗಳು ಬೆಳಕಿಗೆ ಬಂದಿವೆ. ಆದರೆ ಇವುಗಳಲ್ಲಿ ಉತ್ಖನನ ನಡೆದಿಲ್ಲದೇ ಇರುವುದು ಮುಖ್ಯ ಕೊರತೆಯಾಗಿದೆ.

ಈ ಮೇಲಿನ ಎಲ್ಲ ಮಾಹಿತಿಗಳನ್ನೂ ಪರಿಶೀಲಿಸಿದರೆ ತಿಳಿದುಬರುವ ಸಂಗತಿಗಳನ್ನು ಈ ರೀತಿ ನಿರೂಪಿಸಬಹುದು : ಮೊದಲನೆಯದಾಗಿ ಈ ಎಲ್ಲ ನೆಲೆಗಳಲ್ಲೂ ಅತ್ಯಂತ ಪ್ರಮುಖ ಸಂಗತಿಯೆಂದರೆ ಬಿಳಿಬಣ್ಣದ ಅಲಂಕಾರವನ್ನುಳ್ಳ ಕೆಂಪು ಮಡಕೆಯು ಹೆಚ್ಚು ಕಡಿಮೆ ವಿಶೇಷ ಪ್ರಮಾಣದಲ್ಲಿ ದೊರಕಿರುವುದು. ಈ ಅಲಂಕಾರ ವಿನ್ಯಾಸಗಳಲ್ಲಿ ವೈವಿಧ್ಯತೆಯಿರಬಹುದು ಇಲ್ಲದಿರಬಹುದು; ಆದರೆ ಅವುಗಳನ್ನು ತಯಾರಿಸುವ ರೀತಿ ಒಂದೇ ತೆರನಾಗಿರುವುದು. ಅಂದರೆ ಇದೊಂದು ಖಾತರಿಯಾದ ಲಕ್ಷಣವೆಂದಾಯಿತು. ಇದನ್ನು ಗಮನದಲ್ಲಿಡಬೇಕು. ಇಷ್ಟೊಂದು ಪ್ರಾಮುಖ್ಯವಲ್ಲದಿದ್ದರೂ ಕೆಲ ನೆಲೆಗಳಲ್ಲಿ ಕಾಣಬರುವ ಇನ್ನೊಂದು ಅಂಶವೆಂದರೆ ಇಟ್ಟಿಗೆಯ ಕಟ್ಟಡಗಳು. ಈ ಎಲ್ಲ ಇಟ್ಟಿಗೆಯ ಕಟ್ಟಡಗಳಲ್ಲಿಯೂ ಕಾಣಬರುವ ಒಂದು ಅಂಶವೆಂದರೆ ಅವುಗಳ ಗಣ, ಗುಣ ಮತ್ತು ಗಾತ್ರಗಳಲ್ಲಿ ಸಾಮ್ಯತೆ. ಶಾತವಾಹನ ರಾಜರ ನಾಣ್ಯಗಳು, ಅವರ ಅಧೀನ ರಾಜವಂಶಗಳಾದ ಚುಟುಕುಲದವರ ಮತ್ತು ಮಹಾರಥಿಗಳ ಸೀಸದ ನಾಣ್ಯಗಳು ಮತ್ತೊಂದು ಗಮನಾರ್ಹ ಅಂಶ. ಇವುಗಳಲ್ಲಿಯೂ ಹೆಚ್ಚಾಗಿ ಅನಂತರದ ಶಾತವಾಹನ ರಾಜರ ನಾಣ್ಯಗಳೇ ಜಾಸ್ತಿ. ಕೆಲವು ನೆಲೆಗಳಲ್ಲಿ ಮಾತ್ರ ದೊರಕಿರುವ ಸುಟ್ಟ ಮಣ್ಣಿನ ಬೊಂಬೆಗಳು ಈ ಸಂಸ್ಕೃತಿಯ ಮತ್ತೊಂದು ಅಂಶ. ರೋಮನ್ ಸಂಸ್ಕೃತಿಯ ಅವಶೇಷಗಳಾದ ನಾಣ್ಯಗಳು ಮತ್ತು ರೌಲೇಟೆಡ್ ಮಡಕೆಗಳು ಕೆಲವು ನೆಲೆಗಳಲ್ಲಿ ಮಾತ್ರ ಕಂಡುಬರುತ್ತವೆ. ಈ ಎಲ್ಲ ಲಕ್ಷಣಗಳೂ ಒಟ್ಟಾರೆ ಕಾಣಬರುವುದು ಚಂದ್ರವಳ್ಳಿ, ಬ್ರಹ್ಮಗಿರಿ ಮತ್ತು ಬನವಾಸಿ ನೆಲೆಗಳಲ್ಲಿ. ಈಗ ತಿಳಿದಿರುವಂತೆ ಈ ನೆಲೆಗಳು ವ್ಯಾಪಕವಾದವು ಮಾತ್ರವಲ್ಲದೆ ಬಹಳಷ್ಟು ಕಾಲ ಈ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದವು. ಆದರೆ ಎಲ್ಲ ನೆಲೆಗಳಲ್ಲಿಯೂ ಕಂಡುಬರುವ ಅಂಶವೆಂದರೆ ಬಿಳಿಯ ಬಣ್ಣದ ಅಲಂಕಾರವನ್ನು ಹೊಂದಿದ ಕಂದು ಅಥವಾ ಕೆಂಪು ಮಡಕೆ. ಆದುದರಿಂದ ಈ ರೀತಿಯ ಮಡಕೆಯನ್ನು ಇತಿಹಾಸ ಆರಂಭ ಕಾಲದ ಅತ್ಯಂತ ಪ್ರಮುಖ ಲಕ್ಷಣವಾಗಿ ಪರಿಗಣಿಸಲೇ ಬೇಕಾಗುತ್ತದೆ. ಇದು ವ್ಯಾಪಕವಾದುದಾದುದರಿಂದ, ಶೋಧನೆಯಲ್ಲಿ ಸುಲಭವಾಗಿ ದೊರಕಲೂ ಸಾಧ್ಯ.

ಈ ಸಂಸ್ಕೃತಿಯನ್ನು ವರ್ಣಿಸುವಾಗ ಅನೇಕ ವಿಭಾಗಗಳನ್ನು ಪುರಾತತ್ವಜ್ಞರು ಮಾಡಿದ್ದಾರೆಂಬುದನ್ನು ನಾವು ಆಗಲೇ ಗಮನಿಸಿದ್ದೇವೆ. ಪ್ರಾಚೀನ, ಮಧ್ಯಕಾಲೀನ ಮತ್ತು ಇತ್ತೀಚಿನ ಎನ್ನುವ ವಿಭಾಗ ತೀರಾ ಅಸಮರ್ಪಕವೆನಿಸುತ್ತದೆ. ಜೊತೆಗೆ ಇವುಗಳ ಕಾಲ ನಿರ್ಣಯವೂ ಬಲು ತೊಡಕಿನ ವಿಷಯ. ಮೆಗಾಲಿತಿಕ್ ಸಂಸ್ಕೃತಿಯ ನಂತರ, ಇತಿಹಾಸದ ಕಾಲ ಆರಂಭವಾಯಿತೆಂದು ನಂಬುವುದಾದರೆ ಇದನ್ನು ಮೆಗಾಲಿತಿಕ್ ಸಂಸ್ಕೃತಿಯ ಅನಂತರದ ಕಾಲಮಾನಕ್ಕೆ ಸೇರಿಸಬೇಕಾಗಿರುತ್ತದೆ. ಈ ಮಧ್ಯದ ಅವಧಿಯಲ್ಲಿ ಮೌರ್ಯವಂಶದ ಆಧಿಪತ್ಯಕ್ಕೆ ಕರ್ನಾಟಕವು ಸೇರಿದ್ದುದು ವಿದಿತವಾಗಿಯೇ ಇದೆ. ಈ ಸಂಸ್ಕೃತಿಯು ಕರ್ನಾಟಕದಲ್ಲಿ ಎಲ್ಲಿಯೂ ದೊರಕಿಲ್ಲ ಎನ್ನುವುದು ನಿಜವಾದರೂ ದೊರಕುವ ಸಾಧ್ಯತೆಯನ್ನು ತಳ್ಳಿಹಾಕುವ ಹಾಗಿಲ್ಲ. ಆಗ ಈ ಸಂಸ್ಕೃತಿಯನ್ನು ಏನೆಂದು ಕರೆಯಬೇಕು ಎನ್ನುವ ಪ್ರಶ್ನೆಗೆ ಉತ್ತರ ಖಚಿತವಾಗಿಲ್ಲ. ಆದುದರಿಂದ ಕರ್ನಾಟಕದಲ್ಲಿ ಇತಿಹಾಸ ಆರಂಭಕಾಲವನ್ನು ಎರಡು ಭಾಗಗಳಾಗಿ ಮಾತ್ರ ವಿಂಗಡಿಸಬಹುದು. ಮೊದಲನೆಯದು ಮೆಗಾಲಿತಿಕ್ ಸಂಸ್ಕೃತಿಯ ಅನಂತರದ ಕಾಲ; ಸುಮಾರಾಗಿ ಇದು ಮೌರ್ಯಸಾಮ್ರಾಜ್ಯದ ಕಾಲ. ಇದೇ ಮೊದಲನೆಯ ಭಾಗ. ಎರಡನೆಯ ಭಾಗವೇ ಇದುವರೆವಿಗೂ ನಾವು ಗಮನಿಸಿರುವ ಹತ್ತಾರು ನೆಲೆಗಳ ಸಂಸ್ಕೃತಿ. ಅಂದರೆ ಇದು ಮೌರ್ಯಕಾಲದ ನಂತರ ಬೆಳೆದು ಬಂದ ಸಂಸ್ಕೃತಿ. ಅನೇಕ ನೆಲೆಗಳಲ್ಲಿ ಮೆಗಾಲಿತಿಕ್ ಸಂಸ್ಕೃತಿಯ ನಂತರ ಈ ಎರಡನೆಯ ಹಂತವೇ ಬೆಳಕಿಗೆ ಬಂದಿದೆ. ಅಂದರೆ ಇಲ್ಲಿ ಮೊದಲನೆಯ ಹಂತ ಕಾಣಬರುವುದಿಲ್ಲ.

ಈ ಎರಡನೆಯ ಹಂತವನ್ನು ನಾವು ಗಮನಿಸಿದಾಗ, ಅಲ್ಲಿ ಶಾತವಾಹನ ನಾಣ್ಯಗಳು ಮುಖ್ಯವಾಗಿ ಕಂಡುಬಂದರೂ ಆ ಕಾಲವನ್ನು ಆಂಧ್ರಕಾಲ ಎಂದು ಕರೆಯುವುದು ತಪ್ಪಾಗುತ್ತದೆ. ಆದುದರಿಂದ ಅದನ್ನು ಇತಿಹಾಸ ಆರಂಭಕಾಲದ ಎರಡನೆಯ ಹಂತವೆಂದೇ ನಾವು ಕರೆಯಬೇಕು.

ಕೊನೆಯದಾಗಿ ಈ ಸಂಸ್ಕೃತಿಯ ಕಾಲಮಾನವನ್ನು
ಗಮನಿಸಬೇಕು. ಕ್ರಿ.ಪೂ. ನಾಲ್ಕನೆಯ ಶತಮಾನದಿಂದ
ಕ್ರಿ.ಶ. ಒಂದನೆಯ ಶತಮಾನದವರೆಗಿನ ಕಾಲವನ್ನು ಮೊದ
ಲನೆಯ ಹಂತವೆಂದೂ ಕ್ರಿ.ಶ. ಒಂದನೆಯ ಶತಮಾನ
ದಿಂದ ಕ್ರಿ.ಶ. ಮೂರನೆಯ ಶತಮಾನದವರೆಗಿನ ಕಾಲ
ವನ್ನು ಎರಡನೆಯ ಹಂತವೆಂದೂ ಕರೆಯಬೇಕಾಗು
ತ್ತದೆ. ಅನಂತರದ ಕಾಲವನ್ನು ಇತಿಹಾಸ ಕಾಲಕ್ಕೆ

ಸೇರಿಸಬೇಕಾಗುತ್ತದೆ. ಸದ್ಯದ ಮಟ್ಟಿಗೆ ನಮಗೆ ದೊರ
ಕಿರುವ ಆಧಾರಗಳ ಮೇಲೆ ಈ ರೀತಿಯ ಕಾಲನಿರ್ಣ
ಯವೇ ಸಮಂಜಸವಾದುದೆಂದು ಹೇಳಲೇಬೇಕು. ಇತಿ
ಹಾಸ ಆರಂಭಕಾಲದ ಪೂರ್ಣ ಪ್ರಮಾಣದ (ಸನ್ನತಿ
ಯಂತಹ) ಪುರಾತತ್ವ ನೆಲೆಯನ್ನು ಶೋಧಿಸಿ, ಉತ್ಖನನ
ನಡೆಸಿದಾಗ ಮಾತ್ರ ಇದರ ವಿಷಯದಲ್ಲಿ ಇನ್ನೂ ಹೆಚ್ಚಿನ
ಮಾಹಿತಿ ದೊರೆಯಲು ಸಾಧ್ಯ.

ಪಿ. ವಿ. ಕೃಷ್ಣಮೂರ್ತಿ

ಬೆಂಗಳೂರು ಜಿಲ್ಲೆಯ ಪ್ರಾಚೀನ ಪ್ರಾದೇಶಿಕ ವಿಭಾಗಗಳು

(ಕ್ರಿ. ಶ. ಸು. ೫೦೦ ರಿಂದ ಕ್ರಿ.ಶ. ಸು. ೧೩೫೦ರ ವರೆಗೆ)

ಆಡಳಿತದ ಅನುಕೂಲಕ್ಕಾಗಿ ಒಂದು ಜಿಲ್ಲೆಯನ್ನು ತಾಲ್ಲೂಕು, ಹೋಬಳಿ, ಪಂಚಾಯಿತಿ ಮತ್ತು ಗ್ರಾಮ ಎಂದು ವಿಂಗಡಿಸಿಕೊಂಡಿರುವುದು ಪ್ರಚಲಿತ ವ್ಯವಸ್ಥೆ. ಇಂತಹುದೇ ಕ್ರಮವು ಪ್ರಾಚೀನಕಾಲದಲ್ಲೂ ಪ್ರಚಲಿತ ವಿತ್ತೆ? ಇದ್ದರೆ, ಅದರ ಸ್ವರೂಪವೇನು? ಅಂದು ಪ್ರಸಿದ್ಧವಾಗಿದ್ದ ಪ್ರಾದೇಶಿಕ ವಿಭಾಗಗಳಾವುವು? ಅವುಗಳಲ್ಲಿ ಸಮಾವೇಶಗೊಂಡಿದ್ದ ಗ್ರಾಮಗಳೆಷ್ಟು? ಅವು ಯಾವುವು ? ಎಂಬಿವೇ ಮುಂತಾದ 'ಐತಿಹಾಸಿಕ ಭೂಗೋಳ'ಕ್ಕೆ ಸಂಬಂಧಿಸಿದ ಅಂಶಗಳನ್ನು ಅರಸುತ್ತಾ ಹೋದರೆ ಹಲವಾರು ಪ್ರಾದೇಶಿಕ ವಿಭಾಗಗಳು ನಮ್ಮ ಗಮನ ಸೆಳೆಯುತ್ತವೆ. ಈ ನಿಟ್ಟಿನಲ್ಲಿ ಶೋಧಿಸಲು ನಮಗಿರುವ ಮೂಲ ಆಕರಗಳೆಂದರೆ ಶಾಸನಗಳು. ಪ್ರಸ್ತುತ, ಬೆಂಗಳೂರು ಜಿಲ್ಲೆಯ ಶಾಸನಗಳನ್ನು ಅವಲೋಕಿಸಿ, ಸುಮಾರು ಕ್ರಿ.ಶ. ೫೦೦ ರಿಂದ ಕ್ರಿ.ಶ. ೧೩೫೦ರ ಅವಧಿಯಲ್ಲಿ ಪ್ರಚಲಿತವಿದ್ದ ಪ್ರಾದೇಶಿಕ ವಿಭಾಗಗಳು, ಉಪವಿಭಾಗಗಳು, ಇತ್ಯಾದಿಗಳನ್ನು ಗುರುತಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

ಈ ಜಿಲ್ಲೆಯಲ್ಲಿ ಸಿಕ್ಕುವ ಪ್ರಾರಂಭಕಾಲದ ಶಾಸನಗಳೆಂದರೆ ಗಂಗರವು. ನಂತರದಲ್ಲಿ ಚೋಳ ಮತ್ತು ಹೊಯ್ಸಳರ ಶಾಸನಗಳು ದೊರೆಯುತ್ತವೆ. ಸುಮಾರು ಕ್ರಿ.ಶ. ೧೩೪೦ರ ನಂತರ ವಿಜಯನಗರದ ಅರಸರ ಶಾಸನಗಳು ಕಾಣಸಿಕೊಳ್ಳುತ್ತವೆ.

ಈ ಪ್ರದೇಶದ ಪ್ರಾದೇಶಿಕ ವಿಭಾಗಗಳನ್ನು ಚೋಳರು ಪ್ರವೇಶಗೊಳ್ಳುವ ಮೊದಲು ಇದ್ದ ಪ್ರಾದೇಶಿಕ ವಿಭಾಗಗಳು ಮತ್ತು ಚೋಳ ಮತ್ತು ಹೊಯ್ಸಳರ ಕಾಲದ ಪ್ರಾದೇಶಿಕ ವಿಭಾಗಗಳು ಎಂಬ ಎರಡು ಮುಖ್ಯವಾದ ಹಂತಗಳಲ್ಲಿ ಗುರುತಿಸಬಹುದಾಗಿದೆ.

ಗಂಗರ ಕಾಲದಲ್ಲಿ ಇಡೀ ಜಿಲ್ಲೆ 'ಗಂಗವಾಡಿ ತೊಂಬತ್ತಾರು ಸಾವಿರ' ಎಂಬ ಪ್ರದೇಶದಲ್ಲಿ ಅಂತರ್ಗತವಾಗಿದ್ದಿತು. ಈ ಜಿಲ್ಲೆಯ ಕ್ರಿ.ಶ. ೮೯೦ರ ಬೇಗೂರು ಶಾಸನ ಮತ್ತು ಕ್ರಿ.ಶ. ೧೧೦೫ರ ಶಾಸನವೊಂದರಲ್ಲಿ ಗಂಗವಾಡಿ ೯೬,೦೦೦ದ ಉಲ್ಲೇಖವಿದೆ.[1] ಕೋಲಾರ, ಮೈಸೂರು, ತುಮಕೂರು ಮುಂತಾದ ಜಿಲ್ಲೆಗಳ ಶಾಸನಗಳಲ್ಲೂ ಈ ನಾಡಿನ ಉಲ್ಲೇಖ ಕಂಡುಬರುತ್ತದೆ. 'ಗಂಗವಾಡಿ', 'ಗಂಗಪಾಡಿ'. 'ಗಂಗವಾಡಿ ಛಾನ್ನವತಿ ಸಹಸ್ರ' ಎಂದು ಮುಂತಾಗಿ ಈ ಪ್ರದೇಶವನ್ನು ಶಾಸನಗಳು ಕರೆದಿವೆ. ಇದು ಸಮಗ್ರ ಗಂಗ ಸಾಮ್ರಾಜ್ಯದ ಪ್ರತಿನಾಮ. ಬೆಂಗಳೂರು ಜಿಲ್ಲೆಗೆ ಸಂಬಂಧಿಸಿದಂತೆ ಈ ಪ್ರದೇಶದಲ್ಲಿ ಅಂತರ್ಗತವಾಗಿದ್ದ ನಾಡುಗಳಲ್ಲಿ, 'ಗಂಗ ಅಱುಸಾಸಿರ'

---

1. ಎಪಿಗ್ರಾಫಿಯ ಕರ್ನಾಟಿಕ, ಸಂ. ೯, ಬೆಂಗಳೂರು ೮೩, ೧೪೨, ಇತ್ಯಾದಿ

(ಗಂಗ ೬೦೦೦) ಎಂಬ ಒಂದು ದೊಡ್ಡ ಪ್ರಾದೇಶಿಕ ವಿಭಾಗ ಮತ್ತು 'ಕರಿಕನಾಡು', 'ಮೊರಸುನಾಡು', 'ಬೆಂಪೂರು ಪನ್ನೆರಡು', 'ಕುಂದನಾಡ ಎಪ್ಪತ್ತು', 'ಕೈವಾರನಾಡು', 'ನೆಕ್ಕುಂದಿನಾಡು', 'ಕೆಱೆಕುನ್ದ ಮೂನೂರು', 'ಪುನ್ನಾಡು', 'ಸೞ್ನ ಮೂನೂರು', 'ಕುಣುಂಗಿ ಅಯ್ನೂಱು', ಮುಂತಾದುವು ಮುಖ್ಯವಾದವು. ಇವುಗಳಲ್ಲಿ ಕೆಲವು ಅಂಕಿಗಳನ್ನು ಒಳಗೊಂಡಿರುವುದು ಗಮನಾರ್ಹ ; ಏಕೆಂದರೆ ಈ ತೆರನಾದ ಅಂಕಿಗಳನ್ನು ಬಳಸುವುದು ಕರ್ನಾಟಕದ ಅಂದರೆ ಕನ್ನಡ ಅರಸು ಮನೆತನಗಳ ಒಂದು ಪ್ರಧಾನ ಅಂಶವೆನ್ನಬಹುದು. ಉತ್ತರಕರ್ನಾಟಕ ಭಾಗದ ಶಾಸನಗಳನ್ನು ಗಮನಿಸಿದಾಗ ಕಂಡುಬರುವಷ್ಟು ಸಂಖ್ಯೆಗಳನ್ನೊಳಗೊಂಡ ಪ್ರಾದೇಶಿಕ ವಿಭಾಗಗಳು ಈ ಪ್ರದೇಶದಲ್ಲಿ ಇಲ್ಲವೆನ್ನಬಹುದು.

ಕ್ರಿ.ಶ. ಹನ್ನೊಂದನೆಯ ಶತಮಾನದ ಪ್ರಾರಂಭದಲ್ಲಿ ಈ ಪ್ರದೇಶವು ಚೋಳರ ವಶವಾಯಿತು. ಅವರ ಪ್ರವೇಶದೊಂದಿಗೆ 'ಮಂಡಲ', 'ವಳನಾಡು', 'ನಾಡು', ಮತ್ತು 'ಗ್ರಾಮ' ಎಂಬ ಕ್ರಮವಾದ ಆಡಳಿತ-ವಿಭಾಗಗಳು ಕಾಣಿಸಿಕೊಳ್ಳತೊಡಗಿದವು. ಅವುಗಳಲ್ಲಿ ಮೊದಲಿಗೆ ಮುಡಿಗೊಂಡ ಚೋಳಮಂಡಲ (ಕ್ರಿ.ಶ.ಸು. ೧೦೦೦),[2] ವಿಕ್ರಮ ಚೋಳಮಂಡಲ (ಕ್ರಿ.ಶ.ಸು. ೧೦೪೬),[3] ಕರಿಕಾಲ ಚೋಳ ವಳನಾಡು (ಕ್ರಿ.ಶ.ಸು. ೧೦೦೦),[4] ಕ್ಷತ್ರಿಯ ಶಿಖಾಮಣಿ ವಳನಾಡು (ಕ್ರಿ.ಶ. ೧೦೩೪),[5] ಮುಂತಾದುವು ಕಾಣಿಸಿಕೊಳ್ಳುತ್ತವೆ. ನಂತರದಲ್ಲಿ 'ನಿಗರಿಲಿ ಚೋಳಮಂಡಲ',[6] 'ರಾಜೇಂದ್ರ ಚೋಳ ವಳನಾಡು'[7] ಮೊದಲಾದ ನಾಡು ಒಳನಾಡುಗಳ ಉಲ್ಲೇಖಗಳು ಕಂಡುಬರುತ್ತವೆ. ಇವರ ಪ್ರಾರಂಭದ ಶಾಸನಗಳು ಕನ್ನಡದಲ್ಲೂ ನಂತರದವು ತಮಿಳಿನಲ್ಲೂ ಇವೆ.

ಮುಡಿಗೊಂಡ ಚೋಳಮಂಡಲದಲ್ಲಿ ರಾಜೇಂದ್ರ ಚೋಳ ವಳನಾಡು, ಕರಿಕಾಲ ಚೋಳ ವಳನಾಡುಗಳು ಅಂತರ್ಗತವಾಗಿದ್ದವು. ವಿಕ್ರಮ ಚೋಳಮಂಡಲದಲ್ಲಿ ಸಣ್ಣೆನಾಡು, ಕುಕ್ಕನೂರುನಾಡು, ಮಣ್ಣೆನಾಡು, ಮುಂತಾದುವು ಸಮಾವೇಶಗೊಂಡಿದ್ದವು. ನಿಗರಿಲಿ ಚೋಳಮಂಡಲವು ಮಣ್ಣೆನಾಡು, ರಾಜೇಂದ್ರ ಚೋಳ ವಳನಾಡು, ಪುಲ್ಲಿಯೂರುನಾಡು, ಇಲೈಪಾಕ್ಕನಾಡು (ಯಲಹಂಕನಾಡು), ವೆಪ್ಪೂರುನಾಡು (ಬೇಗೂರು ನಾಡು)ಗಳನ್ನು ಒಳಗೊಂಡಿದ್ದಿತು.

ಕ್ರಿ.ಶ. ಸುಮಾರು ೧೧೧೦ರ ನಂತರ ಕ್ರಮ ಕ್ರಮವಾಗಿ ಈ ಪ್ರದೇಶ ಹೊಯ್ಸಳರ ವಶವಾಯಿತು. ಮಂಡಲ, ವಳನಾಡು, ನಾಡು ಎಂಬ ವಿಭಾಗಕ್ರಮದಲ್ಲಿ ಗಮನಾರ್ಹ ಬದಲಾವಣೆಗಳೇನೂ ಆಗಲಿಲ್ಲ. ಅಷ್ಟೇ ಅಲ್ಲದೆ, ಅಪ್ಪಟ ಕನ್ನಡ ಅರಸು ಮನೆತನದವರಾದ ಇವರು, ತಮ್ಮ ಅನೇಕ ಶಾಸನಗಳನ್ನು ಈ ಪ್ರದೇಶದಲ್ಲಿ ತಮಿಳು ಭಾಷೆಯಲ್ಲಿ ಹಾಕಿಸಿರುವುದು ವಿಶಿಷ್ಟವಾದ ಅಂಶವಾಗಿದೆ.

ಚೋಳರ ಕಾಲದಲ್ಲಿ ಅನೇಕ ಗ್ರಾಮಗಳನ್ನು ಚತುರ್ವೇದಿ ಮಂಗಲಗಳನ್ನಾಗಿ ಅಂದರೆ ಅಗ್ರಹಾರಗಳನ್ನಾಗಿ ಬ್ರಾಹ್ಮಣರಿಗೆ ದಾನವಾಗಿ ನೀಡಿರುವ ಉಲ್ಲೇಖಗಳು ವಿಪುಲವಾಗಿವೆ. ಇದೇ ಪದ್ಧತಿ ಹೊಯ್ಸಳರ ಕಾಲದಲ್ಲೂ ಮುಂದುವರೆದಿರುವುದು ಕಂಡುಬರುತ್ತದೆ. ಇಂತಹ ಸಂದರ್ಭದಲ್ಲಿ ದಾನವಾಗಿ ಕೊಡುವ ಗ್ರಾಮಕ್ಕೆ ಪ್ರತಿನಾಮಧೇಯವೊಂದನ್ನು ನೀಡಿರುವುದುಂಟು. ಉದಾ : ಮಳೂರು > ರಾಜೇನ್ದ್ರಸಿಂಹ

---

2. ಎ. ಕ., ೯, ಚನ್ನಪಟ್ಟಣ ೯೨
3. ಅದೇ, ದೇವನಹಳ್ಳಿ ೭೫
4. ಅದೇ, ಚನ್ನಪಟ್ಟಣ ೯೨
5. ಅದೇ, ಚನ್ನಪಟ್ಟಣ
6. ಅದೇ, ಹೊಸಕೋಟೆ ೪೦, ೭೫ ಇತ್ಯಾದಿ
7. ಅದೇ, ಬೆಂಗಳೂರು ೮೫

ಚತುರ್ವೇದಿ ಮಂಗಲ,[8] ಪುಂಗನೂರು>ತ್ರೈಲೋಕ್ಯ ದೇವಿ ಚತುರ್ವೇದಿ ಮಂಗಲ, ಇತ್ಯಾದಿ.[9]

ಗಂಗರ ಕಾಲದಲ್ಲಿ ಪ್ರಚಲಿತವಿದ್ದ ಅನೇಕ ನಾಡುಗಳು, ಚೋಳ ಮತ್ತು ಹೊಯ್ಸಳರ ಕಾಲದಲ್ಲೂ ಅದೇ ಹೆಸರಿನಲ್ಲಿ ಮುಂದುವರೆದಿರುವುದು ಕಂಡುಬರುತ್ತದೆ. ಉದಾಹರಣೆಗೆ, ಮೊರಸುನಾಡು, ಕೈವಾರನಾಡು, ಬೆಂಪೂರು>ವೆಪ್ಪೂರು, ಸಣ್ಣೆನಾಡು ಮುಂತಾದುವು.

ಬೆಂಗಳೂರು ಜಿಲ್ಲೆಯ ಪ್ರದೇಶದಲ್ಲಿ ಕ್ರಿ.ಶ.ಸು. ೫೦೦ ರಿಂದ ಕ್ರಿ.ಶ.ಸು. ೧೩೫೦ರ ಅವಧಿಯಲ್ಲಿ ಬೇರೆ ಬೇರೆ ಭಾಗಗಳಲ್ಲಿ ಹೆಸರುಗೊಂಡ ಸುಮಾರು ಮೂವತ್ತಕ್ಕಿಂತಲೂ ಹೆಚ್ಚಿನ ಪ್ರಾದೇಶಿಕ ಅಥವಾ ಆಡಳಿತ ವಿಭಾಗಗಳನ್ನು ಗುರುತಿಸಬಹುದಾಗಿದೆ. ಅವುಗಳ ಸ್ಥೂಲ ವಿವರ ಈ ಕೆಳಕಂಡಂತೆ ಇದೆ :

ಗಂಗವಾಡಿ ತೊಂಬತ್ತಾರು ಸಾವಿರ

ಇದು ಗಂಗರ ಆಳ್ವಿಕೆಯ ಪೂರ್ಣ ಪ್ರದೇಶವನ್ನು ಪ್ರತಿನಿಧಿಸುತ್ತದೆ. ಕ್ರಿ.ಶ.ಸು. ೮೯೦ರ ಬೇಗೂರು ಶಾಸನದಲ್ಲಿ 'ಗಂಗವಾಡಿ ತೊಂಬತ್ತಾರು ಸಾವಿರ'ದ ಉಲ್ಲೇಖ ಕಂಡುಬಂದರೆ, ಬೆಂಗಳೂರು ಮ್ಯೂಸಿಯಂನ ಕ್ರಿ.ಶ. ೧೧೦೫ರ ಶಾಸನದಲ್ಲಿ 'ಗಂಗವಾಡಿ' ಎಂಬ ಉಲ್ಲೇಖ ದೊರೆಯುತ್ತದೆ. ಚೋಳರ ಮತ್ತು ಹೊಯ್ಸಳರ ಕಾಲದ ಅನೇಕ ಶಾಸನಗಳಲ್ಲಿ 'ಗಂಗಪಾಡಿ' ಎಂದು ಈ ಪ್ರದೇಶವನ್ನು ಕರೆದಿರುವುದು ಕಂಡುಬರುತ್ತದೆ.

ಗಂಗ ಅಱುಸಾಸಿರ (ಗಂಗ ೬೦೦೦)

ಬೆಂಗಳೂರು ದಕ್ಷಿಣ ತಾಲ್ಲೂಕಿನ ವರ್ತೂರು ಗ್ರಾಮದ ಶಾಸನ (ಕ್ರಿ.ಶ.ಸು. ೮೨೦)[10] ಮತ್ತು ಹೊಸಕೋಟೆ ತಾಲ್ಲೂಕಿನ ಜೋಡಿದಳಸಗೆರೆ ಗ್ರಾಮದ ಶಾಸನಗಳಲ್ಲಿ (ಕ್ರಿ.ಶ.ಸು. ೮೬೦) ಉಲ್ಲೇಖಗೊಂಡಿದೆ.[11] ಬೆಂಗಳೂರು ಜಿಲ್ಲೆಯ ಪೂರ್ವಕ್ಕಿರುವ ಕೋಲಾರ ಮತ್ತು ಧರ್ಮಪುರಿ ಜಿಲ್ಲೆಯ ಅನೇಕ ಪ್ರಾಚೀನ ಶಾಸನಗಳಲ್ಲಿ 'ಗಂಗ ೬೦೦೦' ಪ್ರದೇಶದ ಉಲ್ಲೇಖಗಳು ಕಂಡುಬರುತ್ತದೆ. ಬೆಂಗಳೂರು ಜಿಲ್ಲೆಯ ಶಾಸನಗಳಲ್ಲಿ ಉಕ್ತವಾಗಿರುವ ಈ ಪ್ರದೇಶಕ್ಕೆ ಸಂಬಂಧಿಸಿದ ಗ್ರಾಮಗಳೆಂದರೆ—ಎರೆಯಪ ಮಂಗಲ, ಮೆರೂರು ಕುನ್ನಾಣಿ, ನೆಲ್ಲಿಗೆಟ್ಟ್ವ ಗ್ರಾಮಗಳು. ಮೊರಸುನಾಡು ಗಂಗ ಆರು ಸಾವಿರ ಪ್ರದೇಶದ ಒಂದು ಭಾಗ. ಈ ಪ್ರದೇಶವು ಸಾಮಾನ್ಯವಾಗಿ ನೊಳಂಬರ ಅಧೀನದಲ್ಲಿರುತ್ತಿದ್ದಿತು.

ಕರಿಕನಾಡು

ಕ್ರಿ.ಶ.ಸು. ೭೫೦ರ ಶಾಸನವೊಂದರಲ್ಲಿ (ದಾಸರಳ್ಳಿ, ಬೆಂಗಳೂರು ತಾಲ್ಲೂಕು)[12] ಈ ನಾಡಿನ ಪ್ರಸ್ತಾಪ ಬಂದಿದೆ. ಬಿದಿರ್ಕಲ್ಲು ಗ್ರಾಮ ಈ ನಾಡಿನಲ್ಲಿದ್ದ ಸ್ಥಳವೆಂದು ಅದೇ ಶಾಸನದಿಂದ ತಿಳಿದುಬರುತ್ತದೆ. ಇದು ಈಗಿನ ಯಶವಂತಪುರ ತಾಲ್ಲೂಕಿನ ದೊಡ್ಡ ಬಿದರಕಲ್ಲು ಗ್ರಾಮವೇ ಆಗಿದೆ. ಕರಿಕನಾಡು ಬೆಂಗಳೂರು ನಗರದ ಉತ್ತರಕ್ಕಿರುವ ಯಶವಂತಪುರ, ಯಲಹಂಕ ಪ್ರದೇಶಗಳನ್ನೊಳಗೊಂಡ ಪ್ರದೇಶವಾಗಿದ್ದಿರಬೇಕು.

ಕೆಳ್ಗಲಿ ನಾಡು

ಕ್ರಿ. ಶ. ಸು. ೭೫೦ ಐಜೂರಿನ ವೀರಗಲ್ಲು ಶಾಸನವೊಂದರಲ್ಲಿ 'ಕೆಳ್ಗಲಿನಾಡು' ಎಂಬ ಉಲ್ಲೇಖವಿದೆ.[13] 'ಕೆಳ್ಗಲಿ' ಎಂಬುದು ಮುಂದೆ ಕಾಣಿಸಿಕೊಳ್ಳುವ ಕೆಳಲೆ ಅಥವಾ ಕಲುವಳಿನಾಡುಗಳೊಂದರ ಪೂರ್ವನಾಮವಿದ್ದಂತೆ ತೋರುತ್ತದೆ.

8. ಅದೇ, ಚನ್ನಪಟ್ಟಣ ೩೮, ಕ್ರಿ. ಶ. ೧೨೬೦
9. ಅದೇ, ೪೨, ಕ್ರಿ. ಶ. ೧೦೧೮
10. ಅದೇ, ಬೆಂಗಳೂರು ೪೩
11. ಅದೇ, ಹೊಸಕೋಟೆ ೯
12. ಅದೇ, ಬೆಂಗಳೂರು ೩೬
13. ಅದೇ, ಬೆಂಗಳೂರು ೪೦

ಮೊರಸುನಾಡು

ಈ ನಾಡಿನ ಪ್ರಾಚೀನತಮ ಉಲ್ಲೇಖ ಬೆಂಗಳೂರು ದಕ್ಷಿಣ ತಾಲ್ಲೂಕಿನ ವರ್ತೂರು ಗ್ರಾಮದ ಕ್ರಿ. ಶ. ಸು. ೮೨೦ರ ಶಾಸನದಲ್ಲಿ ಬಂದಿದೆ.[14] ಮೊರಸುನಾಡು 'ಗಂಗ ಆರುಸಾವಿರ' ಪ್ರದೇಶದ ಭಾಗ. 'ಮೆರೂರು-ಕುನ್ನಾಡಿ' ಮತ್ತು 'ಎರೆಯಪ-ಮಂಗಲ'ಗಳು ಈ ನಾಡಿನ ಶಾಸನೋಕ್ತ ಗ್ರಾಮಗಳು. ಆನೇಕಲ್ಲು ತಾಲ್ಲೂಕಿನ ಹಳೇ-ಹಳ್ಳಿ ಗ್ರಾಮದ ಚೋಳರ ಶಾಸನದಲ್ಲಿ (ಕ್ರಿ. ಶ. ೧೨೪೫) ಈ ನಾಡನ್ನು 'ಮುರುಶುನಾಡು' ಎಂದು ಕರೆದಿದೆ.[15] ಇದು ರಾಜೇನ್ದ್ರಚೋಳ (ವಳ) ನಾಡಿನ ಭಾಗವೆಂದು ಇದೆ. ಇದೇ ತಾಲ್ಲೂಕಿನ ಇಗ್ಗಲೂರಿನ ಕ್ರಿ. ಶ. ೧೩೩೦ರ ಶಾಸನ ಮತ್ತು ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೇಗೂರು ಗ್ರಾಮದ ಶಾಸನ (ಕ್ರಿ. ಶ. ೧೧೧೦)ಗಳಲ್ಲಿ ಉಕ್ತವಾಗಿದೆ.[16] ಮುಡಿಗೊಂಡ ಚೋಳ ಮಂಡಲದ ಭಾಗವಾದ ಇದು, ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಲವು ಗ್ರಾಮಗಳು, ಹೊಸಕೋಟೆ, ಆನೇಕಲ್ಲು ಮತ್ತು ಧರ್ಮಪುರಿ ಜಿಲ್ಲೆಯ ಹೊಸೂರು, ಡೆಂಕಣಿ ಕೋಟೆ ತಾಲ್ಲೂಕುಗಳು ಮತ್ತು ಕೋಲಾರ ಜಿಲ್ಲೆಯ ಪಶ್ಚಿಮ ಮತ್ತು ದಕ್ಷಿಣಪ್ರದೇಶದ ತಾಲ್ಲೂಕುಗಳ ಅನೇಕ ಗ್ರಾಮಗಳನ್ನೊಳಗೊಂಡ ಪ್ರದೇಶವು ಈ ನಾಡಿನಲ್ಲಿ ಸಮಾವೇಶಗೊಂಡಿದ್ದಿತೆಂದು ಹೇಳಬಹುದು.

ಬೆಂಪೂರು ಪನ್ನೆರಡು

ಪ್ರಸಿದ್ಧ ಬೇಗೂರು ವೀರಗಲ್ಲು ಶಾಸನದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಈ ನಾಡು ಗಂಗವಾಡಿ ಪ್ರಾಂತ್ಯದ ಹನ್ನೆರಡು ಗ್ರಾಮಗಳನ್ನೊಳಗೊಂಡಂಥ ಒಂದು ಉಪವಿಭಾಗ. ಅದೇ ಶಾಸನದಲ್ಲಿ ಪ್ರಯುಕ್ತವಾಗಿರುವ ಗ್ರಾಮಗಳಲ್ಲಿ ಇಂದು ಕೂಡ ಹಲವಾರು ಗ್ರಾಮಗಳನ್ನು ಗುರುತಿಸಬಹುದಾಗಿದೆ. ಉದಾ : ಬೆಂಪೂರು (ಬೇಗೂರು), ತೊವಗೂರು (ತೋಗೂರು), ಪೂವಿನಪುಲ್ಲಿಮಂಗಲ (ಹುಲಿಮಂಗಲ), ಇಗ್ಗುಲೂರು (ಇಗ್ಗಲೂರು), ಕೂಡಲ್ (ಕೂಡಲು), ಸಾರಮು (ಸಾರಕ್ಕಿ?)[17] ಮುಂದಿನ ಶತಮಾನಗಳಲ್ಲಿ ಈ ಪ್ರದೇಶವೇ ವೆಪ್ಪೂರುನಾಡು (ನೋಡಿ: ವೆಪ್ಪೂರುನಾಡು) ಎಂದು ಕರೆಯಲ್ಪಟ್ಟಿರುವುದು ಕಂಡುಬರುತ್ತದೆ.

ಮಣ್ಣೆನಾಡು ೩೦೦

ಮಾಗಡಿ ತಾಲ್ಲೂಕಿನ ಉಡುಗುಂಟೆಯ ಮಜರೆ ಮೂಡ್ಲುಪಾಳ್ಯದ ಕ್ರಿ. ಶ. ೯೬೬ರ ಶಾಸನದಲ್ಲಿ 'ಮಣ್ಣೆನಾಡು ೩೦೦' ಮತ್ತು 'ಮಣ್ಣೆಸೀಮಾ' ಎಂಬ ಉಲ್ಲೇಖಗಳಿವೆ.[18] ನೆಲಮಂಗಲ ತಾಲ್ಲೂಕಿನ ಸೋಲದೇವನಹಳ್ಳಿ (ಕ್ರಿ. ಶ. ೧೦೨೯), ಮಂಡಿಕೆರೆ (ಕ್ರಿ. ಶ. ೧೦೫೦) ಶಾಸನಗಳಲ್ಲಿ ಮಣ್ಣೆನಾಡು ವಿಕ್ರಮ ಚೋಳಮಂಡಲದ ಭಾಗವೆಂದು ಉಕ್ತವಾಗಿದೆ.[19]

ನೆಕ್ಕುಂದಿನಾಡು

ಕ್ರಿ. ಶ. ಸು. ೯೫೦ರ ಹೊಸಕೋಟೆ ತಾಲ್ಲೂಕಿನ ಕೊಂಡಹಳ್ಳಿ ಗ್ರಾಮದ ಶಾಸನದಲ್ಲಿ ಈ ನಾಡು ಉಕ್ತವಾಗಿದೆ.[20] ಇದೇ ತಾಲ್ಲೂಕಿನ ಈಗಿನ ನೆಕ್ಕುಂದಿ ಗ್ರಾಮವನ್ನು ಕೇಂದ್ರವಾಗಿಟ್ಟುಕೊಂಡು ಸುತ್ತಲ ಅನೇಕ ಗ್ರಾಮಗಳನ್ನೊಳಗೊಂಡ ಪ್ರದೇಶ ಇದಾಗಿರಬೇಕು. ಇದೇ ಸಂದರ್ಭದಲ್ಲಿ ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ನೆಕ್ಕುಂದಿ ಎಂಬ ಗ್ರಾಮವು ಕೂಡ ಪ್ರಾಚೀನವಾದುದು ಎಂಬುದನ್ನು ಪರಿಗಣಿಸಬೇಕಾಗುತ್ತದೆ.

---

14. ಅದೇ, ಬೆಂಗಳೂರು ೪೦
15. ಅದೇ, ಆನೇಕಲ್ಲು **೪೬**, ಸು. ಕ್ರಿ. ಶ. ೧೨೭೪
16. ಅದೇ, ಆನೇಕಲ್ಲು ೬೨ ಮತ್ತು ಬೆಂಗಳೂರು ೮೫ ಸಿ
17. ದೇವರ ಕೊಂಡಾರೆಡ್ಡಿ: 'ಬೇಗೂರು ಒಂದು ಅಧ್ಯಯನ', ಸಾಧನೆ, ಸಂಪುಟ ೩, ಸಂಚಿಕೆ ೨, ೧೯೭೪, ಪು. ೯೯
18. ಎ. ಕ., ೯, ಮಾಗಡಿ ೭೫
19. ಅದೇ, ನೆಲಮಂಗಲ ೧ ಮತ್ತು ೨೫
20. ಅದೇ, ಹೊಸಕೋಟೆ ೩೭

ಪುನ್ನಾಡ ೭೦

ಕ್ರಿ.ಶ. ಸು. ೯೦೦ರ ದೇವನಹಳ್ಳಿ ತಾಲ್ಲೂಕಿನ ಅರ ದೇಶನಹಳ್ಳಿ ಗ್ರಾಮದ ಶಾಸನಗಳಲ್ಲಿ 'ಪುನ್ನಾಡು' ಎಂದು ಕರೆಯಲ್ಪಟ್ಟಿರುವ ಈ ನಾಡಿನಲ್ಲಿ 'ಪುಲ್ಲಮಂಗಲ' ಎಂಬ ಗ್ರಾಮವಿದ್ದ ಬಗ್ಗೆ ಉಲ್ಲೇಖವಿದೆ. 21 ದೊಡ್ಡಬಳ್ಳಾಪುರ ತಾಲ್ಲೂಕಿನ ಶಿವಪುರದ ಶಾಸನದಲ್ಲಿ 'ಪುಣ್ಣಾಡಯಪತ್ತ ನಾಡು' ಎಂದು ಉಕ್ತವಾಗಿದೆ. 22 ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ ಸಾಂಪ್ರದಾಯಿಕವಾಗಿ ೭೦ ಗ್ರಾಮಗಳನ್ನೊಳಗೊಂಡ ಒಂದು ಆಡಳಿತ ವಿಭಾಗ ಇದಾಗಿದ್ದಿತು. ಮೈಸೂರು ಜಿಲ್ಲೆಯ ದಕ್ಷಿಣಭಾಗವನ್ನು 'ಪುನ್ನಾಡು' ಎಂದು ಇತಿಹಾಸಕಾರರು ಗುರುತಿಸಿರುತ್ತಾರೆ. ಅದು ಈ ನಾಡಿಗಿಂತ ಭಿನ್ನವಾದುದು ಮತ್ತು ಹೆಚ್ಚು ವಿಸ್ತಾರವಾದುದೆಂದು ತೋರುತ್ತದೆ.

ಕೈವಾರನಾಡು

ಕ್ರಿ.ಶ. ೧೧೪೧ರ ಹೊಸಕೋಟೆ ತಾಲ್ಲೂಕಿನ ಸಿದ್ಧನ ಹಳ್ಳಿಯ ರಾಜೇಂದ್ರಚೋಳನ ಕನ್ನಡ ಶಾಸನದಲ್ಲಿ 'ಸಱುಕ್ಕನೂಱು ಕೈಯ್ವಾರನಾಡಲ್ಲಿ' ಅಂತರ್ಗತವಾಗಿದ್ದ ಬಗ್ಗೆ ಉಲ್ಲೇಖವಿದೆ.23 ಇದೇ ತಾಲ್ಲೂಕಿನ ಹೋಬೇನ ಹಳ್ಳಿ (ಕ್ರಿ. ಶ. ೧೧೪೫),24 ಕೊಂಡಹಳ್ಳಿ (ಕ್ರಿ. ಶ. ೧೦೬೫),25 ನೆಲವಾಗಲಹಳ್ಳಿ (ಕ್ರಿ. ಶ. ೧೩೪೦),26 ಬೇಚಿರಾಕ್ ಮಾರೇನಹಳ್ಳಿ (ಕ್ರಿ. ಶ. ೧೦೭೫)27- ಈ ಗ್ರಾಮಗಳ ಶಾಸನಗಳಲ್ಲೂ ಈ ನಾಡು ಉಲ್ಲೇಖ ಗೊಂಡಿದೆ. ಸಱುಕ್ಕನೂಱು (ಚಱುಕ್ಕನೂರು>), ಸುಣ್ಣಕೊಳ್ಳಿ, ನೆಲವಾಯ್‌ಪಳ್ಳಿ, ನಿಲತ್ತೂರ್, ಪೆಲಬಾಳ ಪುರ ಗ್ರಾಮಗಳೂ ಶಾಸನೋಕ್ತವಾಗಿವೆ. ಈ ನಾಡನ್ನು 'ಕೈವಾರನಾಟ್ಟು' ಎಂದು ತಮಿಳು ಶಾಸನಗಳು ಕರೆದಿವೆ. ಈ ನಾಡು ನಿಗರಿಲಿ ಚೋಳಮಂಡಲದ ಭಾಗವೆಂದು ಹೋಬಳೇನಹಳ್ಳಿ ಶಾಸನದಲ್ಲಿ (ಕ್ರಿ. ಶ. ೧೧೪೫)28 ಕರೆದಿದ್ದರೆ, ಕ್ರಿ. ಶ. ೧೦೬೫ರ ಕೊಂಡಹಳ್ಳಿ ಶಾಸನದಲ್ಲಿ ವಿಜಯರಾಜೇಂದ್ರ ಚೋಳಮಂಡಲದ ಭಾಗವೆಂದು ಉಲ್ಲೇಖವಾಗಿದೆ.29 'ಕೈವಾರ' ಎಂಬುದು ಹೊಸ ಕೋಟೆ ತಾಲ್ಲೂಕಿನ ಪೂರ್ವದ ಗಡಿಯಲ್ಲಿರುವ ಕೋಲಾರ ಜಿಲ್ಲಾ ಚಿಂತಾಮಣಿ ತಾಲ್ಲೂಕಿನ ಒಂದು ಪ್ರಮುಖ ಗ್ರಾಮ. ಇಂದಿನ ಕೈವಾರ ಗ್ರಾಮವನ್ನು ಕೇಂದ್ರವಾಗಿಟ್ಟುಕೊಂಡು ಹೊಸಕೋಟೆ ತಾಲ್ಲೂಕಿನ ಹಲವಾರು ಗ್ರಾಮಗಳು, ಕೋಲಾರ ಜಿಲ್ಲೆಯ ಚಿಂತಾಮಣಿ, ಮಾಲೂರು, ಕೋಲಾರ ತಾಲ್ಲೂಕುಗಳ ಹಲವಾರು ಗ್ರಾಮಗಳು ಈ ನಾಡಿನಲ್ಲಿ ಅಂತರ್ಗತವಾಗಿದ್ದವು.

ಕೆಱೆಕುನ್ನಾಡ ೩೦೦

ಕ್ರಿ. ಶ. ಸು. ೭೨೦ರ ಹೊಸಕೋಟೆ ತಾಲ್ಲೂಕಿನ ಮಾರೇನಹಳ್ಳಿ ಗ್ರಾಮದ ಗಂಗ ಶ್ರೀಪುರುಷನ ಕಾಲದ ಶಾಸನವೊಂದರಲ್ಲಿ 'ಕೆಱೆಕುನ್ನಾಡ ಮೂನೂಱು' ಎಂಬ ಪ್ರಾದೇಶಿಕ ವಿಭಾಗದ ಉಲ್ಲೇಖವಿದೆ.30 ಈ ಪ್ರದೇಶ ದಲ್ಲಿ ಸಾಂಪ್ರದಾಯಿಕವಾಗಿ ೩೦೦ ಗ್ರಾಮಗಳನ್ನೊಳ ಗೊಂಡಂತೆ ಹೊಸಕೋಟೆ ತಾಲ್ಲೂಕಿನ ಭಾಗವು ಅಂತರ್ಗತ ವಾಗಿದ್ದಿತೆಂದು ತೋರುವುದು.

---

21. ಅದೇ, ದೇವನಹಳ್ಳಿ ೪೧
22. ಅದೇ, ದೊಡ್ಡಬಳ್ಳಾಪುರ, ೩೮, ಕ್ರಿ. ಶ. ೧೩೨೮
23. ಅದೇ, ಹೊಸಕೋಟೆ ೧೧, ಕ್ರಿ. ಶ. ೧೦೪೧
24. ಅದೇ, ೪೦
25. ಅದೇ, ೩೬
26. ಅದೇ, ೪೯
27. ಅದೇ, ೧೦೧
28. ಅದೇ, ೪೦
29. ಅದೇ, ೩೬
30. ಅದೇ, ೮೬

ಕುಣುಂಗಿ ೫೦೦

ಕ್ರಿ. ಶ. ಸುಮಾರು ೯೦೦ರ ದೇವನಹಳ್ಳಿ ತಾಲ್ಲೂಕಿನ ಅರದೇಶಹಳ್ಳಿ ಶಾಸನದಲ್ಲಿ 'ಕುಣುಂಗಿ ಅಯ್ನೂಱು' ಎಂಬ ಉಲ್ಲೇಖವಿದೆ. ಅಲ್ಲದೆ 'ನನ್ದಿಗುನ್ದಂ', 'ನನ್ದಿಯಸ್ತಾನ' ಎಂಬ ಸ್ಥಳಗಳ ಉಲ್ಲೇಖಗಳೂ ಇವೆ. 31 ಇವುಗಳಲ್ಲಿ 'ನನ್ದಿಯಸ್ಥಾನ' ಎಂಬುದು ಪ್ರಸಿದ್ಧವಾದ ನನ್ದಿದುರ್ಗವನ್ನು ಕುರಿತದ್ದೆ ಆಗಿದೆ.

ಸೞ್ನೆ ೩೦೦/ಸಣ್ಣೆನಾಡು

ಕ್ರಿ. ಶ. ಸು. ೯೦೦ರ ದೇವನಹಳ್ಳಿ ತಾಲ್ಲೂಕಿನ ಅರದೇಶಹಳ್ಳಿಯ ರಾಷ್ಟ್ರಕೂಟರ ಶಾಸನದಲ್ಲಿ 'ಸೞ್ನೆಮೂನೂಱಂ' ಎಂಬ ಉಲ್ಲೇಖ ದೊರೆಯುತ್ತದೆ.32 ಇದೇ ತಾಲ್ಲೂಕಿನ ಬ್ಯಾಡರಹಳ್ಳಿ ಶಾಸನದಲ್ಲಿ (ಕ್ರಿ. ಶ. ೧೦೬೭) ಸಣ್ಣೆನಾಡಿನ ತಿಪ್ಪೂರು ವಿಕ್ರಮ ಚೋಳಮಂಡಲದ ಭಾಗವೆಂದು ಉಲ್ಲೇಖವಾಗಿದೆ.33 ಗಂಗವಾರ (ಕ್ರಿ. ಶ. ೧೦೪೬ ಮತ್ತು ೧೦೫೦),34 ಪಟ್ಟನ್ದೂರು (ಕ್ರಿ. ಶ. ೧೩೪೩),35 ಆವತಿ (ಕ್ರಿ. ಶ. ೧೨೮೩) ಮತ್ತು ಕಾರಹಳ್ಳಿ (ಕ್ರಿ. ಶ. ೧೧೩೩)36 ಗ್ರಾಮಗಳ ಶಾಸನಗಳಲ್ಲಿ ಈ ನಾಡಿನ ಉಲ್ಲೇಖವಿದ್ದು, ಆವತ್ತಿಯೂರ್, ಕೊಡವತ್ತಿ, ಮೊಳ್ವೆಮಾಂಪಳ್ಳಿ (ನಂದಿಸಮುದ್ರ) ಗ್ರಾಮಗಳು ಉಲ್ಲೇಖಿಸಲ್ಪಟ್ಟಿವೆ. ಈ ನಾಡಿನ ದಕ್ಷಿಣಕ್ಕೆ 'ತೊೞೆವಳವಿತ್ತಿ'ಯು ಇದ್ದಿತೆಂದು ಶಾಸನವೊಂದು ಉಲ್ಲೇಖಿಸುತ್ತದೆ. 37

ಬಿದೆಕಂಡ

ಸು. ಕ್ರಿ. ಶ. ೯೫೦ರ ಬೆಂಗಳೂರು ತಾಲ್ಲೂಕಿನ ಶಾಸನವೊಂದರಲ್ಲಿ ಕಾಮುಪುರ ಮತ್ತು ಮದಂಬ-ಪಟ್ಟಣಗಳು ಬಿದೆಕಂಡನಾಡಿನಲ್ಲಿ ಸಮಾವೇಶವಾಗಿರುವ ಬಗ್ಗೆ ಸೂಚನೆ ಕೊಡುತ್ತವೆ.38

ಕುಕ್ಕನರೆನಾಡು ಅಥವಾ ಕುಕ್ಕನೂರುನಾಡು

ಕ್ರಿ. ಶ. ಸುಮಾರು ೭೫೦ರ ತೋಟಗೆರೆ ಶಾಸನದಲ್ಲಿ 'ಕುಕ್ಕನೆರೆನಾಡು' ಎಂದು ಕರೆಯಲ್ಪಟ್ಟಿರುವ ಈ ನಾಡಿನಲ್ಲಿ ತಳಾವೂರ ಪೂಗುಣ್ಡೆ ಗ್ರಾಮಗಳು ಶಾಸನೋಕ್ತವಾಗಿವೆ.39 ಕ್ರಿ. ಶ. ೧೦೩೩ರ ನೆಲಮಂಗಲ ತಾಲ್ಲೂಕಿನ ಅಯಿಗಂಡಪುರದ ಶಾಸನದಲ್ಲಿ ಈ ನಾಡು ಉಲ್ಲೇಖಿತವಾಗಿದೆ ಮತ್ತು ವಾಣಪುರ ಗ್ರಾಮವು ಶಾಸನೋಕ್ತ ಗ್ರಾಮವಾಗಿದೆ.40 ಅಯಿಗಂಡಪುರದ ಇನ್ನೊಂದು ಶಾಸನದಲ್ಲಿ (ಕ್ರಿ. ಶ. ೧೧೧೩) ಕುಕ್ಕನೂರುನಾಡು ವಿಕ್ರಮ ಚೋಳಮಂಡಲದ ಭಾಗವೆಂಬ ಅಂಶ ತಿಳಿದು ಬರುತ್ತದೆ. ಅಲ್ಲದೆ, 'ಪೆರಿಯ ಮುತ್ತಕೂರು' ಎಂಬುದು ಐಗಂಡಪುರದ ಇನ್ನೊಂದು ಹೆಸರು ಎಂಬ ಅಂಶವೂ ಇದೇ ಶಾಸನದಿಂದ ಸ್ಪಷ್ಟಪಡುತ್ತದೆ.41 ಈ ಊರನ್ನು ಐವರಗಂಡಪುರವೆಂದು ಕರೆದಿರುವ ಉಲ್ಲೇಖಗಳಿವೆ. ನೆಲಮಂಗಲ ತಾಲ್ಲೂಕಿನ ಸೋಲದೇವನಹಳ್ಳಿಯ ಕ್ರಿ. ಶ. ೧೦೭೯ರ ಶಾಸನವೊಂದರಲ್ಲಿ 'ಕುಕ್ಕನೂರುನಾಡ'ನ್ನು ಹೆಸರಿಸಿದೆ. ಇದೇ ತಾಲ್ಲೂಕಿನ ಬಿನ್ನಮಂಗಲ, ನಕ್ಕೂರು, ಮಣಿಪುರ

31. ಅದೇ, ದೇವನಹಳ್ಳಿ ೪೨
32. ಅದೇ
33. ಅದೇ, ೧೪
34. ಅದೇ, ೭೫ ಮತ್ತು ೭೬
35. ಅದೇ, ಬೆಂಗಳೂರು ೪೧
36. ಅದೇ, ದೇವನಹಳ್ಳಿ ೨೮ ಮತ್ತು ೨೦
37. ಅದೇ, ಬೆಂಗಳೂರು ೪೧
38. ಅದೇ, ೮೫
39. ಅದೇ, ನೆಲಮಂಗಲ ೩೮
40. ಅದೇ, ೩೭, ಕ್ರಿ. ಶ. ೧೦೩೩
41. ಅದೇ, ೩೮ ಎ, ಕ್ರಿ. ಶ. ೧೧೧೩

ಗ್ರಾಮಗಳ ಶಾಸನಗಳಲ್ಲೂ ಈ ನಾಡಿನ ಉಲ್ಲೇಖಗಳು ಕಂಡುಬರುತ್ತವೆ.

ಕುಕ್ಕರಪಾಳಿಕ್ಕಾಱ್ನಾಡು ಅಥವಾ ಕುಕ್ಕಲನಾಡು

ಕ್ರಿ.ಶ. ಸು. ೭೫೦ರ ಬೆಂಗಳೂರು ತಾಲ್ಲೂಕಿನ ದಾಸರಹಳ್ಳಿ ಗ್ರಾಮದ ಶಾಸನದಲ್ಲಿ 'ಕುಕ್ಕರಪಾೞಿಕ್ಕಾಱ್ನಾಡು' ಉಲ್ಲೇಖಗೊಂಡಿದೆ.42 ಕ್ರಿ. ಶ. ೧೧೫೬ರ ಬೆಂಗಳೂರು ತಾಲ್ಲೂಕಿನ ವಸಂತಹಳ್ಳಿ ಗ್ರಾಮದ ಶಾಸನದಲ್ಲಿ, ಪೆೞಕಡಿ, ತಿಪ್ಪೂರು ನಗರಗಳು ಕುಕ್ಕಲನಾಡಿನಲ್ಲಿ ಸಮಾವೇಶವಾಗಿದ್ದ ಬಗ್ಗೆ ಆಧಾರ ದೊರೆಯುತ್ತದೆ.43 ಇದೇ ತಾಲ್ಲೂಕಿನ ಬ್ಯಾಡರಹಳ್ಳಿ, ಹಲಗೆವಡೇರನಹಳ್ಳಿ, ರಾಮಸಮುದ್ರ ಗ್ರಾಮಗಳ ಶಾಸನಗಳಲ್ಲೂ ಮಾಗಡಿ ತಾಲ್ಲೂಕಿನ ಕ್ರಿ.ಶ. ೧೩೪೦ರ ಬೈಚಗುಪ್ಪೆ ಶಾಸನದಲ್ಲೂ ಚನ್ನಪಟ್ಟಣ ತಾಲ್ಲೂಕಿನ (ಈಗಿನ ರಾಮನಗರ ತಾಲ್ಲೂಕಿನ ?) ಹಾಗಲಹಳ್ಳಿ ಶಾಸನದಲ್ಲೂ (ಕ್ರಿ. ಶ. ೧೩೩೪)44 ಕುಕ್ಕಲನಾಡು ಪ್ರಸ್ತಾಪಗೊಂಡಿದೆ. ಅಲ್ಲದೆ, ಕ್ರಿ. ಶ. ೧೩೩೦ರ ನೆಲಮಂಗಲ ತಾಲ್ಲೂಕಿನ ಕಿತ್ತನಲ್ಲಿ ಗ್ರಾಮದ ಶಾಸನ ಮತ್ತು ಅದೇ ತಾಲ್ಲೂಕಿನ ಬಾಣಸವಾಡಿ ಗ್ರಾಮದ ಕ್ರಿ.ಶ. ೧೩೪೦ರ ಶಾಸನಗಳಲ್ಲೂ ಈ ನಾಡಿನ ಉಲ್ಲೇಖಗಳಿವೆ.45 ಒಟ್ಟಾರೆ, ಈ ನಾಡಿನಲ್ಲಿ ಅಂತರ್ಗತವಾಗಿರುವ ಶಾಸನೋಕ್ತ ಗ್ರಾಮಗಳೆಂದರೆ– ರಾಮುಸಮುದ್ರ, ಪೆೞಕಡಿ, ತಿಪ್ಪೂರುನಗರ, ಕಿತ್ತನೆಲ್ಲೆ, ಚಟ್ಟನಕುಂಟೆ (>ಬಯಿರವ್ವೆಹಳ್ಳಿ) ಮುಂತಾದವು. ಬೆಂಗಳೂರು ತಾಲ್ಲೂಕಿನ ಪಶ್ಚಿಮ ಪ್ರದೇಶವೂ ಸೇರಿದಂತೆ ರಾಮನಗರ ತಾಲ್ಲೂಕಿನ ಪೂರ್ವಭಾಗ, ಮಾಗಡಿ ತಾಲ್ಲೂಕಿನ ಪಶ್ಚಿಮಭಾಗದ ಹಲವಾರು ಗ್ರಾಮಗಳು, ನೆಲಮಂಗಲ ತಾಲ್ಲೂಕಿನ ಕೆಲವು ಗ್ರಾಮಗಳನ್ನು ಒಳಗೊಂಡಂತೆ ಈ ಕುಕ್ಕಲನಾಡು ಎಂಬ ಪ್ರಾದೇಶಿಕ ವಿಭಾಗ ಅಸ್ತಿತ್ವದಲ್ಲಿತ್ತು.

ಕಲುವಳಿನಾಡು ಅಥವಾ ಕೆಳವಲನಾಡು

ಚನ್ನಪಟ್ಟಣ ತಾಲ್ಲೂಕಿನ ಚನ್ನಮಾನಹಳ್ಳಿ, ಮಾಗೇನಹಳ್ಳಿ ಗ್ರಾಮಗಳ ಶಾಸನಗಳಲ್ಲಿ ಕಲುವಳಿನಾಡು, ಕೆಳವಲನಾಡು ಎಂದು ಕರೆಯಲ್ಪಟ್ಟಿದೆ.46 ವಡಗಟ್ಟದ ಕ್ರಿ.ಶ. ೧೩೩೫ರ ಶಾಸನವೊಂದರಲ್ಲಿ 'ಕಲುವೊಳೆನಾಡು' ಎಂಬ ಪ್ರಯೋಗ ಕಂಡುಬರುತ್ತದೆ.47 'ಕೆಲುವಳಿನಾಡು' ಎಂದು ಈ ನಾಡನ್ನು ಕರೆದಿರುವ ಉಲ್ಲೇಖಗಳೂ ಉಂಟು.48 ಈ ನಾಡಿನಲ್ಲಿ ಚಂದಿಮಾದಿಯಹಳ್ಳಿ, ಮಡಗುಟ್ಟೆ, ವೀರಂಣಿಗನಹಳ್ಳಿ, ಚಂನಮಾದಿಹಳ್ಳಿ, ಹೊಂಗನೂರು, ತಾಳವಾಡಿ, ಗಂಗವಾಡಿ, ಮಿಳೆಹಳ್ಳಿ, ವೆಟ್ಟಜೀಯಗಲುಂಡನಹಳ್ಳಿ, ಅರೆಗೊಳಲು, ಐಜೂರು, ಮಗುವನಹಳ್ಳಿ>ಮುಗುಳನಹಳ್ಳಿ, ಮಾರಪ್ಪನ ಕುಪ್ಪೆ, ಬೆಳತೂರು ಮುಂತಾದ ಗ್ರಾಮಗಳು ಶಾಸನೋಕ್ತವಾಗಿವೆ. ಚನ್ನಪಟ್ಟಣ, ರಾಮನಗರ ತಾಲ್ಲೂಕಿನ ಬಹುಭಾಗ, ಪ್ರಾಯಶಃ ಈ ನಾಡಿನಲ್ಲಿ ಅಂತರ್ಗತವಾಗಿದ್ದಿರಬೇಕೆಂದು ತೋರುತ್ತದೆ.

ಮುಡಿಗೊಣ್ಡ ಚೋಳಮಂಡಲ

ಚೋಳರ ಕಾಲದ ಒಂದು ದೊಡ್ಡ ಆಡಳಿತ ವಿಭಾಗ. ಈ ವಿಭಾಗದಲ್ಲಿ ರಾಜೇನ್ದ್ರ ಚೋಳ ವಳ

---

42. ಅದೇ, ಬೆಂಗಳೂರು ೩೭
43. ಅದೇ, ಮಾಗಡಿ ೮೧
44. ಅದೇ, ಚನ್ನಪಟ್ಟಣ ೭
45. ಅದೇ, ನೆಲಮಂಗಲ ೧೨ ಮತ್ತು ೧೯
46. ಅದೇ, ಚನ್ನಪಟ್ಟಣ ೨೨, ೭೩
47. ಅದೇ, ೧೭೮
48. ಅದೇ, ೧೮೫

ನಾಡು, ಕರಿಕಾಲ ಚೋಳ ವಳನಾಡುಗಳೂ ಕಿಟಲ್ವೆ ನಾಡು. ಮುರುಶುನಾಡು, ಶಿಯಲ್‌ನಾಡು (ಶಿಗಲ್ ನಾಡು) ಮುಂತಾದುವೂ ಸಮಾವೇಶಗೊಂಡಿದ್ದವು ಎಂಬ ಅಂಶ ಈ ಜಿಲ್ಲೆಯ ಚೋಳರ ಕಾಲದ ಅನೇಕ ಶಾಸನಗಳಿಂದ ತಿಳಿದುಬರುತ್ತದೆ.[49] ಒಟ್ಟಾರೆ ಬೆಂಗಳೂರು ಜಿಲ್ಲೆಯ ದಕ್ಷಿಣ ಮತ್ತು ಪಶ್ಚಿಮಭಾಗದ ನಾಡುಗಳು ಈ ಮಂಡಲಕ್ಕೆ ಸೇರಿದ್ದವು.

ವಿಕ್ರಮ ಚೋಳಮಂಡಲ

ಕ್ರಿ.ಶ. ೧೦೪೬ರ ದೇವನಹಳ್ಳಿ ತಾಲ್ಲೂಕಿನ ಗಂಗವಾರ,[50] ಬ್ಯಾಡರಹಳ್ಳಿ (ಕ್ರಿ.ಶ. ೧೦೬೭), ಸೋಲದೇವನಹಳ್ಳಿ (ಕ್ರಿ.ಶ. ೧೦೨೯)[51] ಶಾಸನಗಳು ಈ ನಾಡಿನ ಅಸ್ತಿತ್ವವನ್ನು ಪ್ರತಿನಿಧಿಸುತ್ತವೆ. 'ಸಣ್ಣೆನಾಡು', 'ಕುಕ್ಕನೂರುನಾಡು', 'ಮಣ್ಣೆನಾಡು'ಗಳು ವಿಕ್ರಮ ಚೋಳ ಮಂಡಲದಲ್ಲಿ ಅಂತರ್ಗತವಾಗಿದ್ದ ನಾಡುಗಳೆಂದು ತಿಳಿದು ಬರುತ್ತದೆ.

ನಿಗರಿಲಿ ಚೋಳಮಂಡಲ

ಈ ಮಂಡಲದಲ್ಲಿ ಮಣ್ಣೆನಾಡು ಅಂತರ್ಗತವಾಗಿದ್ದ ಬಗ್ಗೆ ಕ್ರಿ.ಶ. ೧೧೧೫ರ ನೆಲಮಂಗಲ ತಾಲ್ಲೂಕಿನ ಹೆಗ್ಗುಂದ ಗ್ರಾಮದ ಶಾಸನವು ಆಧಾರವಾಗಿದೆ.[52] ಕ್ರಿ.ಶ. ೧೩೬೫ರ ಮಡಿವಾಳ ಗ್ರಾಮದ ಶಾಸನದಲ್ಲೂ ಈ ಮಂಡಲದ ಹೆಸರು ಉಕ್ತವಾಗಿದೆ.[53] ಅಲ್ಲದೆ, ರಾಜೇನ್ದ್ರ ಚೋಳ ವಳನಾಡು ಇದೇ ಮಂಡಲದ ಭಾಗವೆಂದೂ ತಿಳಿಸುತ್ತದೆ.[54] ಹೊಸಕೋಟೆ ತಾಲ್ಲೂಕಿನ ನಿಡುಗಟ್ಟ ಗ್ರಾಮದ ಶಾಸನವು ಪುಲ್ಲಿಯೂರುನಾಡು ನಿಗರಿಲಿ ಚೋಳಮಂಡಲದ ಭಾಗವೆಂದು ತಿಳಿಸುತ್ತದೆ.[55] ಯಲಹಂಕ ನಾಡು (ಇಲೈಪಾಕ್ಕನಾಡು), ವೆಪ್ಪೂರುನಾಡು (ಬೇಗೂರುನಾಡು), ಮಾಶಂಡಿನಾಡುಗಳು ಇದೇ ಮಂಡಲದ ಭಾಗಗಳೆಂದು ಹೇಳಬಹುದು. ಸ್ಥೂಲವಾಗಿ, ಈಗಿನ ಬೆಂಗಳೂರು ಜಿಲ್ಲೆಯ ಉತ್ತರ ಮತ್ತು ಪೂರ್ವ ಭಾಗದ ಪ್ರದೇಶಗಳು ಈ ಮಂಡಲದಲ್ಲಿ ಅಂತರ್ಗತವಾಗಿದ್ದವು.

ಕರಿಕಾಲ ಚೋಳ ವಳನಾಡು

ಚನ್ನಪಟ್ಟಣ ತಾಲ್ಲೂಕಿನ ಮಳೂರು ಗ್ರಾಮದ ಶಾಸನ(ಕ್ರಿ.ಶ. ಸು. ೧೦೦೦)ವೊಂದರಲ್ಲಿ ಪೆರಿಯಮಳವೂರು ಮುಡಿಗೊಂಡ ಚೋಳಮಂಡಲದ ಭಾಗವೆಂದು ಉಲ್ಲೇಖವಾಗಿದೆ.[56] ಇದು ಮುಡಿಗೊಂಡ ಚೋಳ ಮಂಡಲದ ಒಳ ವಿಭಾಗ (ಆದ್ದರಿಂದಲೇ ವಳನಾಡು ಎಂದು ಕರೆದಿರುವುದು). ಈ ವಳನಾಡಿನಲ್ಲಿ ಹಲವಾರು ನಾಡುಗಳು ಅಂತರ್ಗತವಾಗಿರುತ್ತವೆ. ಇವುಗಳಲ್ಲಿ ಕಿಳಲೈ ನಾಡು ಮುಖ್ಯವಾದುದೆನ್ನಬಹುದಾಗಿದೆ. ಈ ವಳನಾಡೇ ಮುಂದೆ ರಾಜೇನ್ದ್ರಚೋಳ ವಳನಾಡಾಗಿ ಪರಿವರ್ತಿತವಾದಂತೆ ತೋರುತ್ತದೆ.

ಕ್ಷತ್ರಿಯ ಶಿಖಾಮಣಿ ವಳನಾಡು

ಚನ್ನಪಟ್ಟಣ ತಾಲ್ಲೂಕಿನ ಮಳೂರು ಗ್ರಾಮದ ಕ್ರಿ.ಶ. ೧೦೩೪ರ ಶಾಸನವೊಂದರಲ್ಲಿ ಪುಲಿಯೂರು ಕ್ಷತ್ರಿಯ ಶಿಖಾಮಣಿ ವಳನಾಡಿನಲ್ಲಿದ್ದ ಉಲ್ಲೇಖವಿದೆ.[57]

---

49. ಅದೇ, ಕಾನಕಾನಹಳ್ಳಿ ೨೩, ಕ್ರಿ. ಶ. ೧೧೫೦ ; ೨೬, ಕ್ರಿ. ಶ. ೧೯೯೧, ಚನ್ನಪಟ್ಟಣ ೧೬೭, ಇತ್ಯಾದಿ
50. ಅದೇ, ದೇವನಹಳ್ಳಿ ೭೫, ೭೬, ಕ್ರಿ. ಶ. ೧೦೫೦
51. ಅದೇ, ನೆಲಮಂಗಲ ೧
52. ಅದೇ, ೬೨
53. ಅದೇ, ಬೆಂಗಳೂರು ೬೬
54. ಅದೇ
55. ಅದೇ, ಹೊಸಕೋಟೆ ೭೫
56. ಅದೇ, ಚನ್ನಪಟ್ಟಣ ೯೨
57. ಅದೇ

ಇದು ಚೋಳಮಂಡಲಕ್ಕೆ ಸೇರಿದ್ದ ಭಾಗವೆಂದು ಇದೇ ಶಾಸನದಿಂದ ತಿಳಿದು ಬರುತ್ತದೆ. ಕಾಲಾಂತರದಲ್ಲಿ ಕರಿಕಾಲ ಚೋಳ ವಳನಾಡಿನಂತೆ ಈ ನಾಡೂ ರಾಜೇನ್ದ್ರ ಚೋಳ ವಳನಾಡಿನಲ್ಲಿ ಅಂತರ್ಗತವಾದಂತೆ ತೋರುತ್ತದೆ.

ರಾಜರಾಜ ಚೋಳ ವಳನಾಡು

ಕ್ರಿ. ಶ. ಸು. ೧೨೦೦ರ ದೊಮ್ಮಲೂರಿನ ಶಾಸನದಲ್ಲಿ 'ಇಲೈಪಾಕ್ಕನಾಡಿನ ತೊಂಬಲೂರು' ರಾಜರಾಜ ಚೋಳ ವಳನಾಡಿನ ಭಾಗವೆಂದು ಉಕ್ತವಾಗಿದೆ.[58] ಇದು ಕೂಡ ಚೋಳರ ಪ್ರಾರಂಭಕಾಲದ ಒಂದು ಒಳನಾಡು.

ರಾಜೇನ್ದ್ರ ಚೋಳ ವಳನಾಡು

ಇದು ಮುಡಿಗೊಣ್ಡ ಚೋಳಮಂಡಲದ ಒಂದು ಒಳನಾಡು. ಈ ನಾಡಿನಲ್ಲಿ ಕಿಟಲೈನಾಡು, ಮೊರಸುನಾಡು, ಶಿಗಲ್‌ನಾಡು, ಎಲಹಕ್ಕನಾಡು ಇತ್ಯಾದಿ ನಾಡುಗಳು ಅಂತರ್ಗತವಾಗಿದ್ದವು. ಈ ಜಿಲ್ಲೆಯ ಚೋಳರ ಕಾಲದ ಶಾಸನಗಳಲ್ಲಿ ಮತ್ತು ಹೊಯ್ಸಳರ ಕಾಲದ ಶಾಸನಗಳಲ್ಲಿ ಹೆಚ್ಚಾಗಿ ಉಲ್ಲೇಖಗೊಂಡಿರುವ ಈ ನಾಡು ಬಹಳ ಪ್ರಸಿದ್ಧವಿದ್ದಂತೆ ತೋರುತ್ತದೆ.

ಎರುಮರೈನಾಡು (ಯಮರೆ)

ಈ ನಾಡಿನ ಉಲ್ಲೇಖಗಳು ಆನೇಕಲ್ಲು ತಾಲ್ಲೂಕಿನ ಕತ್ತರಿಕುಪ್ಪೆ ಮತ್ತು ಕೊಮ್ಮಸಂದ್ರ ಗ್ರಾಮಗಳ ಶಾಸನಗಳಲ್ಲಿ ಬಂದಿವೆ.[59] ಈ ನಾಡಿನ ಕೇಂದ್ರಸ್ಥಳ, ಶಾಸನಗಳಲ್ಲಿ 'ಎರುಮರೈ' ಎಂದು ಕರೆಯಲ್ಪಟ್ಟಿರುವ ಇದೇ ತಾಲ್ಲೂಕಿನ 'ಯಮರೆ' ಗ್ರಾಮವೇ ಆಗಿದೆ. 'ಎರುಮರೈ' ಎಂಬುದು 'ಯಮರೆ'ಯ ತಮಿಳು ರೂಪ. ಈ ನಾಡು ಮಾಶಂಡಿನಾಡಿನ ಒಂದು ಉಪ ವಿಭಾಗವೆನ್ನಲು ಇದೇ ಗ್ರಾಮದ ಕ್ರಿ. ಶ. ಸು. ೧೩೦೦ರ ಶಾಸನವೊಂದು ಆಧಾರವಾಗುತ್ತದೆ.[60] ಆನೇಕಲ್ಲು ತಾಲ್ಲೂಕಿನ ಉತ್ತರ ಭಾಗದಲ್ಲಿನ ಯಮರೆ, ಸರ್ಜಾಪುರ, ಕತ್ತರಿಕುಪ್ಪೆ, ಕೊಮ್ಮಸಂದ್ರಗಳನ್ನೊಳಗೊಂಡಂತೆ ಈ ನಾಡು ಇದ್ದಿತೆನ್ನಬಹುದು.

ಎಲಹಕ್ಕನಾಡು (ಇಲೈಕಪಾಕ್ಕನಾಡು)

ಬೆಂಗಳೂರು, ಹೊಸಕೋಟೆ, ದೊಡ್ಡಬಳ್ಳಾಪುರಮತ್ತು ದೇವನಹಳ್ಳಿ ತಾಲ್ಲೂಕುಗಳ ಶಾಸನಗಳಲ್ಲಿ ವಿಶೇಷವಾಗಿ ಪ್ರಸ್ತಾಪವಾಗಿರುವ ಈ ನಾಡಿಗೆ ಎಲಹಕ್ಕ, ಯಲಹಕ್ಕ, ಎಲಹಂಕ, ಎಲಹ್ಕ, ಯೆಲಹಕ, ಯಲಯಹಕ ಮುಂತಾದ ಕನ್ನಡ ರೂಪಗಳೂ ಇಲೈಪಾಕ್ಕನಾಡೆಂಬ ತಮಿಳು ರೂಪವೂ ಇದ್ದುದು ಗೊತ್ತಾಗುತ್ತದೆ. ಕ್ರಿ. ಶ. ೧೫೭೭ರ ದೊಮ್ಮಲೂರಿನ ಶಾಸನದಿಂದ ಇರುಂಬಲಿಯೂರು (< ಇಬ್ಬಲೂರು), ಶಯನಲ್ಲಾಯ್, ಕೊಪ್ಪಿಪುಳ್ಳಿ, ತೊಂಬಲೂರು (> ದೊಂಮಲೂರು), ಜಾಲಪ್ಪನಹಳ್ಳಿ, ವಿಣ್ಣಮಂಗಲ (< ಬಿನ್ನಮಂಗಲ) ಗ್ರಾಮಗಳು ಈ ನಾಡಿನಲ್ಲಿದ್ದವೆಂದೂ ತಿಳಿಯುತ್ತದೆ.[61] ಕ್ರಿ. ಶ. ೧೩೪೨ರ ಜಕ್ಕೂರು ಗ್ರಾಮದ ಶಾಸನದಿಂದ 'ಜಕ್ಕೂರು' ಈ ನಾಡಿನಲ್ಲಿದ್ದಿತೆಂದು ತಿಳಿದುಬರುತ್ತದೆ.[62] ಶಿಂಗಿನಾಯ್ಕನಹಳ್ಳಿಯ ಕ್ರಿ. ಶ. ೧೩೦೫ರ ಶಾಸನದಲ್ಲಿ ಗಂಗನಾರಾಯಣ ಚತುರ್ವೇದಿ ಮಂಗಲವು ಈ ನಾಡಿನಲ್ಲೇ ಅಂತರ್ಗತವಾಗಿದ್ದಿತೆಂಬ ಅಂಶ ವ್ಯಕ್ತವಾಗುತ್ತದೆ.[63] ಕ್ರಿ. ಶ. ೧೩೪೭ರ ಕಾಣಿಗರಹಳ್ಳಿ ಶಾಸನದಲ್ಲಿ ಸೋಮದೇವನಹಳ್ಳಿ, ಕಾಳಿತಮ್ಮನಹಳ್ಳಿಗಳು ಈ ನಾಡಿನ ಗ್ರಾಮ

---

58. ಅದೇ, ಬೆಂಗಳೂರು ೧೩
59. ಅದೇ, ಆನೇಕಲ್ಲು ೨೮, ೩೦ ಮತ್ತು ೩೧
60. ಅದೇ, ೩೪
61. ಅದೇ, ಬೆಂಗಳೂರು ೬ ಎ
62. ಅದೇ, ೨೧
63. ಅದೇ, ೨೩

ಗಳೆಂದು ವರ್ಣಿತವಾಗಿವೆ.[64] ಅಲ್ಲಾಳಸಂದ್ರ (ಕ್ರಿ. ಶ. ೧೩೪೦), ನಾಗಸಂದ್ರ (ಕ್ರಿ. ಶ. ೧೩೪೨), ಹೆಬ್ಬಾಳ (ಕ್ರಿ. ಶ. ೧೩೦೮), ಹೊಸಕೋಟೆ ತಾಲ್ಲೂಕಿನ ಬಯಿರತ್ತಿ (ಕ್ರಿ. ಶ. ೧೩೩೦), ದೊಡ್ಡಬಳ್ಳಾಪುರ ತಾಲ್ಲೂಕಿನ ಹಾಡೋಹಳ್ಳಿ, ಕುರಿವಿಗೆರೆ, ದೊಡ್ಡಬಳ್ಳಾಪುರ, ತಿಂಡಲು ಮತ್ತು ದೇವನಹಳ್ಳಿ, ತಾಲ್ಲೂಕಿನ ಜಾಲಿಗೆ, ಯಂಬ್ರಳ್ಳಿ, ಸುರಧೇನುಪುರ, ಸಾದೇನಹಳ್ಳಿ, ಕೊಡಿಗೆಹಳ್ಳಿ, ಕುದಿರ್ಕ್ಕಿಱ್ಱಿ, ಜಾಲ, ಬನಹಳ್ಳಿ, ಗಂಗವಾರ, ಕಟಿಗೇನಹಳ್ಳಿ, ಬಯನಹಳ್ಳಿ, ಕಾಡಿಗೇನಹಳ್ಳಿ, ಚಿಕ್ಕಜಾಲ, ಬಂಡೆ ಕೊಡಿಗೆಹಳ್ಳಿ ಮೊದಲಾದ ಊರುಗಳಲ್ಲಿ ಎಲಹಕ್ಕ ನಾಡನ್ನು ಉಲ್ಲೇಖಿಸುವ ಶಾಸನಗಳಿವೆ. ಈ ನಾಡು ರಾಜೇನ್ದ್ರಚೋಳ ವಳನಾಡಿನ ಭಾಗವಾಗಿತ್ತು ಎಂಬ ಅಂಶವು ದೊಮ್ಮಲೂರಿನ ಕ್ರಿ.ಶ. ೧೨೬೬ರ ಶಾಸನದಿಂದ ತಿಳಿಯುತ್ತದೆ.[65] ಅಲ್ಲದೆ ರಾಜೇನ್ದ್ರಚೋಳ ವಳನಾಡು ನಿಗರಿಲಿ ಚೋಳಮಂಡಲವ ಭಾಗವೆಂದು ಮಡಿವಾಳ ಗ್ರಾಮದ ಕ್ರಿ.ಶ. ೧೩೬೫ರ ಶಾಸನದಿಂದ ವಿದಿತವಾಗುತ್ತದೆ.[66] ಮಧ್ಯಕಾಲೀನ ಬೆಂಗಳೂರು ಜಿಲ್ಲೆಯ ಇತಿಹಾಸದಲ್ಲಿ ಈ ನಾಡು ಪ್ರಭಾವಶಾಲಿಯಾದ ಆಡಳಿತ ವಿಭಾಗವಾಗಿದ್ದಿತೆಂಬ ಅಂಶಕ್ಕೆ ಶಾಸನಗಳಲ್ಲಿ ಯಥೇಚ್ಛವಾಗಿ ಕಂಡು ಬಂದಿರುವ ಉಲ್ಲೇಖಗಳೇ ಸಾಕ್ಷಿಯೆನ್ನಬಹುದು. ಈ ನಾಡಿನ ಕೇಂದ್ರ ಸ್ಥಳ ಬೆಂಗಳೂರಿನ ಉತ್ತರಕ್ಕಿರುವ ಈಗಿನ ಯಲಹಂಕವೇ ಆಗಿದೆ. ಇದು ವಿಜಯನಗರ ಕಾಲದಲ್ಲಿ ಕೆಂಪೇಗೌಡನ ವಂಶಿಕರಾದ ಸ್ಥಳೀಯ ಪಾಳೆಯಗಾರರ ರಾಜಧಾನಿಯಾಗಿದ್ದಿತು. ಇಂದಿನ ಬೆಂಗಳೂರು ತಾಲ್ಲೂಕುಗಳ ಪೂರ್ವಭಾಗ, ಹೊಸಕೋಟೆ ತಾಲ್ಲೂಕಿನ ಪಶ್ಚಿಮಭಾಗ, ಸ್ವಲ್ಪ ಹೆಚ್ಚು ಕಡಿಮೆ ದೊಡ್ಡಬಳ್ಳಾಪುರ ಮತ್ತು ದೇವನಹಳ್ಳಿ ತಾಲ್ಲೂಕುಗಳನ್ನೊಳಗೊಂಡಂಥ ಒಂದು ದೊಡ್ಡ ನಾಡು ಇದಾಗಿದ್ದಿತು.

ಕಿಟಿಶ್ಶೈನಾಡು

ಈ ನಾಡಿನ ಪ್ರಾಚೀನ ರೂಪ ಕ್ರಿ.ಶ. ಸು. ೭೫೦ರ ಚನ್ನಪಟ್ಟಣ ತಾಲ್ಲೂಕಿನ ಐಜೂರು ಶಾಸನದಲ್ಲಿ ಉಕ್ತವಾಗಿರುವ ಕೆಳ್ಗಲಿನಾಡು ಎಂಬುದೇ ಆಗಿರಬೇಕೆಂದು ತೋರುತ್ತದೆ. (ನೋಡಿ : ಕೆಳ್ಗಲಿನಾಡು). ಕ್ರಿ.ಶ. ೧೦೧೮ರ ಹೊಂಗನೂರಿನ ಶಾಸನದಲ್ಲಿ ಮುಡಿಗೊಂಡ ಚೋಳಮಂಡಲದ ಭಾಗವಾಗಿ ಪುಂಗಸೂರು (> ಹೊಂಗನೂರು) ಇದ್ದ ಬಗ್ಗೆ ತಿಳಿಸುತ್ತದೆ.[67] ಕ್ರಿ.ಶ. ೧೦೮೬ರ ಮಳೂರು ಶಾಸನದಲ್ಲಿ 'ಪೆರಿಯಮಟಿವೂರು' ಕಿಟಿಲ್ಶೈನಾಡಿನ ಭಾಗವೆಂದೂ ಈ ನಾಡು ರಾಜೇನ್ದ್ರಚೋಳ ವಳನಾಡಿನಲ್ಲಿ ಅಂತರ್ಗತವಾಗಿದ್ದಿತೆಂದೂ ಮತ್ತು ಪೆರಿಯಮಟಿವೂರಿಗೆ ರಾಜೇನ್ದ್ರಸಿಂಹ ಚತುರ್ವೇದಿ ಮಂಗಲವೆಂಬ ಪರ್ಯಾಯ ನಾಮವಿದ್ದಿತೆಂದೂ ತಿಳಿಯುತ್ತದೆ.[68] ಅಲ್ಲದೆ, ಮಳೂರಿನ ಒಂದು ಭಾಗಕ್ಕೆ ನಿಗರಿಲಿ ಚೋಳಪುರವೆಂಬ ಹೆಸರಿದ್ದ ಬಗ್ಗೆ ಕ್ರಿ.ಶ. ೧೧೫೯ರ ಮಳೂರು ಪಟ್ಟಣದ ಶಾಸನದಿಂದ ತಿಳಿದು ಬರುತ್ತದೆ.[69] ಕ್ರಿ.ಶ. ೧೩೦೭ ಮತ್ತು ಕ್ರಿ.ಶ. ೧೩೨೬ರ ಮಳೂರಿನ ಕನ್ನಡ ಶಾಸನಗಳಲ್ಲಿ 'ಅನಾದಿ ಅಗ್ರಹಾರಂ ರಾಜೇನ್ದ್ರಸಿಂಹ ಚತುರ್ವೇದಿ ಮಂಗಲ' ಎಂಬ ಉಲ್ಲೇಖಗಳು ದೊರೆಯುತ್ತವೆ.[70] ಈ ನಾಡಿನಲ್ಲಿ ಸಮಾವೇಶಗೊಂಡಿದ್ದ ಶಾಸನೋಕ್ತ ಗ್ರಾಮಗಳು ಯಾವುವೆಂದರೆ : ಮಳವೂರು > ರಾಜೇನ್ದ್ರಸಿಂಹ ಚತುರ್ವೇದಿಮಂಗಲ, ಪುಂಗನೂರು > ತ್ರೈಲೋಕ್ಯದೇವಿ ಚತುರ್ವೇದಿಮಂಗಲ, ಕೂಡಲೂರು > ರಾಜರಾಜ ಚತುರ್ವೇದಿ ಮಂಗಲ, ವೆಪ್ಪೂರ್ > ವೆಂಗೇಶ್ವರ ಕುಲಕಾಲನಲ್ಲೂರ್, ಕಟಿಕೂರು ಕಡಬ > ಶ್ರೀ ಕೇಶವ ಚತುರ್ವೇದಿ ಮಂಗಲ, ಕಂದಮಂಗಲ > ಕರುದಿಮಂಗಲ > ಕಂನಮಂಗಲ, ಸಾರಘಟ್ಟ, ಕಿಬ್ಬೆಜೀಯಗ ವುಡನಹಳ್ಳಿ, ಚಿಕ್ಕಗಂಗವಾಡಿ, ಪೆರುತಿಕೋಟ್ಟೈ, ಎಲಚವಾಡಿ, ಕುಣಮಂಗಲ, ಅಱಿಕಿಱೈ-ಈ

---

64. ಅದೇ, ೨೪
65. ಅದೇ, ೧೦
66. ಅದೇ, ೬೭
67. ಅದೇ, ಚನ್ನಪಟ್ಟಣ ೪೨
68. ಅದೇ, ೭೭
69. ಅದೇ, ೧೩೭
70. ಅದೇ, ೭೬ ಮತ್ತು ೯೮

ಗ್ರಾಮಗಳೆಲ್ಲವೂ ಬಹುಮಟ್ಟಿಗೆ ಇಂದಿನ ರಾಮನಗರ ಮತ್ತು ಚನ್ನಪಟ್ಟಣ ತಾಲ್ಲೂಕುಗಳ ಪ್ರದೇಶದಲ್ಲಿ ಅಂತರ್ಗತವಾಗಿವೆ. 'ಕಿಳಲೆನಾಡು' ಎಂಬ ಪ್ರಯೋಗವು ಈ ನಾಡಿಗೆ ಇದ್ದಿತು.

ಕುಂಜಿನಾಡು

ಹೊಸಕೋಟೆ ತಾಲ್ಲೂಕಿನ ನಿಡುಘಟ್ಟ ಗ್ರಾಮದ ಶಾಸನದಲ್ಲಿ 'ಕುಂಜಿನಾಡಾನ್ ಪುಲ್ಲಿಯೂರ್ ನಾಟ್ಟು' ಎಂದಿದೆ. ಇದರಿಂದ ವ್ಯಕ್ತವಾಗುವ ಅಂಶವೆಂದರೆ ಪುಲ್ಲಿಯೂರು ನಾಡಿನ ಹಿಂದಿನ ಹೆಸರು 'ಕುಂಜಿನಾಡು' ಎಂಬುದು. ಇದು ನಿಗರಿಲಿ ಚೋಳಮಂಡಲದ ಭಾಗ. ಮುಗುಳಬಾಳ ಗ್ರಾಮದ ಶಾಸನದಲ್ಲಿ 'ತಿರುಕ್ಕುಂಜಿ ನಾಟ್ಟು' ಎಂಬ ಪ್ರಯೋಗವಿದ್ದು 'ತಿರುಮಯಿಉಪ್ಪೂರ್' ಎಂಬ ಗ್ರಾಮವೊಂದು ಹೆಸರಿಸಲ್ಪಟ್ಟಿದೆ. 71

ಚಿಕ್ಕಗಂಗವಾಡಿನಾಡು

ಹೊಯ್ಸಳ ವೀರನಾರಸಿಂಹನ ಕ್ರಿ. ಶ. ೧೨೭೮ರ ಚನ್ನಪಟ್ಟಣ ತಾಲ್ಲೂಕಿನ ಯಲಿಯೂರು ಗ್ರಾಮದ ಶಾಸನದಲ್ಲಿ 'ದೇವದಾನದ ಯಲೆಯೂರು' ಚಿಕ್ಕ ಗಂಗವಾಡಿ ನಾಡಿನಲ್ಲಿದ್ದ ಬಗ್ಗೆ ಉಲ್ಲೇಖಿಸುತ್ತದೆ.72 ಕನಕಪುರ ತಾಲ್ಲೂಕಿನ ಹಲ್ಲೂಕ್ರು ಶಾಸನ(ಕಿ. ಶ. ೧೨೭೭)ದಲ್ಲಿ ಮದ್ದೂರು>ಶ್ರೀನಾರಸಿಂಹ ಚತುರ್ವೇದಿ ಮಂಗಲ, ಸಿವಪುರ, ಹಲುಗೂರು (>ಹಲ್ಲೂಕ್ರು), ಬೋಡರಹಳ್ಳಿ ಗ್ರಾಮಗಳು ಉಕ್ತವಾಗಿವೆ. 73 ನಿಟ್ಟೂರು ಗ್ರಾಮದ ಕ್ರಿ. ಶ. ೧೨೯೯ರ ಹೊಯ್ಸಳ ವೀರಬಲ್ಲಾಳದೇವನ ಶಾಸನದಲ್ಲಿ 'ಚಿಕ್ಕಗಂಗವಾಡಿ ನಾಡೊಳಗಣ ರೆಳವಲೆನಾಡ ನಿಟ್ಟೂರ ಮಂಡಲ ಸ್ವಾಮಿಯರ ಮಗ....' ಎಂಬ ಉಲ್ಲೇಖವಿದೆಯಲ್ಲದೆ, 74 ಈ ನಾಡಿನಲ್ಲಿ ನಿಟ್ಟೂರಹಳ್ಳಿ, ಹರನೂರ ಗ್ರಾಮಗಳು ಅಂತರ್ಗತವಾಗಿದ್ದವು. ಈ ಶಾಸನದಲ್ಲಿ ಪ್ರಯುಕ್ತವಾಗಿರುವ 'ರೆಳವಲೆನಾಡು' ಯಾವುದು ಎಂಬ ಪ್ರಶ್ನೆ ಏಳುತ್ತದೆ. ವಾಸ್ತವವಾಗಿ ಇದು ಕಿಳಲೆ ನಾಡೇ ಆಗಿರಬೇಕು. ಏಕೆಂದರೆ, ಇದೇ ಊರಿನಲ್ಲಿರುವ ಕ್ರಿ. ಶ. ೧೨೮೩ರ ಹೊಯ್ಸಳ ವೀರ ನಾರಸಿಂಗದೇವನ ಶಾಸನದಲ್ಲಿ 'ಶ್ರೀಮತು ಚಿಕ್ಕಗಂಗವಾಡಿಯಾದ ಕಿಳಲೆನಾಡ ನಿಟ್ಟೂರ' ಎಂಬ ಉಲ್ಲೇಖವಿದೆ.75 ಅಲ್ಲದೆ, ಈ ಉಲ್ಲೇಖ, ಕಿಳಲೆನಾಡೇ ಚಿಕ್ಕಗಂಗವಾಡಿ ಆಯಿತೇ ಎಂಬ ಸಂದೇಹವನ್ನು ಉಂಟುಮಾಡುತ್ತದೆ.

ತುರ್ರೈವಟಿನಾಡು

ಹೊಯ್ಸಳ ವೀರಬಲ್ಲಾಳನ ಕಾಲದ (ಕ್ರಿ. ಶ. ೧೩೩೪) ಬೆಂಗಳೂರು ಜಿಲ್ಲೆಯ ಇಮ್ಮಡಹಳ್ಳಿಯ ಶಾಸನವು ಪಮ್ಮಸಂದ್ರ, ಪಮ್ಮಕಿಱ್ರೈ, ನಾಗ ಗಲುಂಡಪಳ್ಳಿಗಳು ತುಱ್ರೈವಱಿನಾಡಿನಲ್ಲಿದ್ದ ಬಗ್ಗೆ ತಿಳಿಸುತ್ತದೆ.76 ಸಾದರಮಂಗಲದ ಕ್ರಿ.ಶ. ೧೩೩೭ರ ಶಾಸನದಲ್ಲಿ 'ತುಱ್ರೈವಱಿನಾಟ್ಟು' ಎಂಬ ಉಲ್ಲೇಖವಿದೆ. ಕ್ರಿ. ಶ. ೧೩೩೨ರ ಹೂಡಿಗ್ರಾಮದ ಶಾಸನದಲ್ಲಿ 'ತೊಱವಟಿಯನಾಡ ತೊಳವಂಡಿಯ ಚಿಕ್ಕಹೂಡಿ' ಎಂಬ ಉಲ್ಲೇಖವಿದೆ. 77 ಹೊಸಕೋಟೆ ತಾಲ್ಲೂಕಿನ ಸತ್ಯವಾರ (ಕ್ರಿ. ಶ. ೧೩೩೨) ಮತ್ತು ಮುಗಳಬಾಳ ಗ್ರಾಮಗಳ ಶಾಸನಗಳಲ್ಲಿ 'ತುಱವರೆ' ಎಂಬ ಉಲ್ಲೇಖವಿದೆ.78 ತುರ್ರೈವಟಿನಾಡೆಂಬುದು

71. ಅದೇ, ಹೊಸಕೋಟೆ ೭೫
72. ಅದೇ, ಚನ್ನಪಟ್ಟಣ ೬೫
73. ಅದೇ, ಕಾನಕಾನಹಳ್ಳಿ ೭೨
74. ಅದೇ, ೭೬
75. ಅದೇ, ೮೨
76. ಅದೇ, ಬೆಂಗಳೂರು ೪೪
77. ಅದೇ, ೬೦ ಮತ್ತು ೬೧
78. ಅದೇ, ಹೊಸಕೋಟೆ ೧೦೪ ಮತ್ತು ೯೯

ಬೆಂಗಳೂರು ನಗರದ ಪೂರ್ವಭಾಗಕ್ಕೆ ಇರುವ ಸಾದರ ಮಂಗಲ, ಇಂಮಡಿಹಳ್ಳಿ, ಹೂಡಿ, ಕಾಡುಗೋಡಿ, ಪಟ್ಟಂದೂರು ಮುಂತಾದ ಊರುಗಳನ್ನೊಳಗೊಂಡ ಪ್ರದೇಶವೆಂದು ನಿರ್ಧರಿಸಬಹುದಾಗಿದೆ. ಈ ನಾಡಿನ ಉತ್ತರಕ್ಕೆ ಸಣ್ಣೆನಾಡು ಇದ್ದ ಬಗ್ಗೆ ಕ್ರಿ. ಶ. ೧೩೪೩ರ ಪಟ್ಟಂದೂರು ಶಾಸನ ಆಧಾರ ನೀಡುತ್ತದೆ.[79] ಅಲ್ಲದೆ, ಕಾಡುಗೋಡಿ, ಹಟಂದೂರು ಸ್ಥಳಗಳು ತುಱೈವಟ್ಟಿನಾಡಿನ ಹಳ್ಳಿಗಳೇ ಆಗಿವೆ.

ಪುಲ್ಲಿಯುಊರುನಾಡು

ಹೊಸಕೋಟೆ ತಾಲ್ಲೂಕಿನ ಚಿಕ್ಕನಲ್ಲೂರು, ನಿಡುಘಟ್ಟ, ಚೋಳಪ್ಪನಹಳ್ಳಿ, ಮುಗಬಾಳ (ಕ್ರಿ.ಶ. ೧೩೩೭), ಅಟ್ಟೂರು (ಕ್ರಿ. ಶ. ೧೩೪೨), ಸತ್ಯವಾರ (ಕ್ರಿ. ಶ. ೧೩೩೨) ಗ್ರಾಮಗಳ ಶಾಸನಗಳಲ್ಲಿ[80] ಪ್ರಸ್ತಾಪವಾಗಿರುವ ಈ ನಾಡಿನಲ್ಲಿ ನಲ್ಲೂರಪಳ್ಳಿ, ವಡಕರುಪಳ್ಳಿ, ತೋಳಪ್ಪನ್ಪಳ್ಳಿ (ಚೋಳಪ್ಪನಹಳ್ಳಿ) ಗ್ರಾಮಗಳು ಸಮಾವೇಶಗೊಂಡಿದ್ದವು. ಈ ನಾಡು ನಿಗರಿಲಿ ಚೋಳಮಂಡಲದ ಭಾಗ.

ಪೆರಿಯನಾಡು

ಆನೇಕಲ್ಲು ತಾಲ್ಲೂಕಿನ ಇಗ್ಗಲೂರು (ಕ್ರಿ. ಶ. ೧೩೩೦),[81] ಬನ್ನೇರುಘಟ್ಟ (ಕ್ರಿ. ಶ. ೧೨೯೭)[82] ಗ್ರಾಮಗಳ ಶಾಸನಗಳಲ್ಲಿ ಉಲ್ಲೇಖಿಗೊಂಡಿರುವ ಈ ನಾಡು 'ಪೊಣ್ಮಣಿಗನಾಡಿನ' ಒಂದು ಉಪ ವಿಭಾಗವಾಗಿದ್ದ ಬಗ್ಗೆ (ಬನ್ನೇರುಘಟ್ಟ ಗ್ರಾಮದ) ಶಾಸನವೊಂದು ಆಧಾರ ನೀಡುತ್ತದೆ. ಈ ಆಡಳಿತ ವಿಭಾಗದ ಉಲ್ಲೇಖಗಳು ಅತ್ಯಲ್ಪ. ಬನ್ನೇರುಘಟ್ಟದ ಸುತ್ತಮುತ್ತಲ ಪ್ರದೇಶ ಈ ನಾಡಿನಲ್ಲಿ ಅಂತರ್ಗತವಾಗಿದ್ದಿತೆನ್ನಬಹುದು.

ಬಾಣತಿಹಳ್ಳಿಯನಾಡು

ಚನ್ನಪಟ್ಟಣ ತಾಲ್ಲೂಕಿನ ಯಲಿಯೂರು ಗ್ರಾಮದ ಕ್ರಿ. ಶ. ೧೨೭೮ರ ಶಾಸನವೊಂದರಲ್ಲಿ ಈ ನಾಡಿನ ಪ್ರಸ್ತಾಪವಿದ್ದು, ದೇವದಾನದ ಯಲೆಯೂರು, ವಟ್ಟ, ಬಾಣರತ್ತಹಳ್ಳಿಗಳು ಶಾಸನೋಕ್ತವಾಗಿವೆ.[83] ಪ್ರಾಯಶಃ ಇದು ಒಂದು ಉಪ ನಾಡಾಗಿದ್ದು ಚಿಕ್ಕಗಂಗವಾಡಿನಾಡು ಮತ್ತು ಕಿಳಲೆನಾಡುಗಳಲ್ಲಿ ಅಂತರ್ಗತವಾಗಿದ್ದಂತೆ ತೋರುತ್ತದೆ.

ಮಾಶಂಡಿನಾಡು

ಇದು ಚೋಳರ ಕಾಲದ ಒಂದು ಪ್ರಸಿದ್ಧ ನಾಡು. ಆನೇಕಲ್ಲು ತಾಲ್ಲೂಕಿನ ಯಮರೆ ಗ್ರಾಮದ ಶಾಸನದಲ್ಲಿ ಪ್ರಸ್ತಾಪಗೊಂಡಿರುವ ಈ ನಾಡು ಆನೇಕಲ್ಲು ತಾಲ್ಲೂಕಿನ ಉತ್ತರಭಾಗವೂ ಸೇರಿದಂತೆ, ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕು,ಧರ್ಮಪುರಿ ಜಿಲ್ಲೆಯ ಹೊಸೂರು ತಾಲ್ಲೂಕಿನ ಉತ್ತರಭಾಗದ ಪ್ರದೇಶಗಳನ್ನು ಈ ನಾಡು ಒಳಗೊಂಡಿದ್ದಿತೆಂದು ಶಾಸನಗಳಿಂದ ತಿಳಿದುಬರುತ್ತದೆ.[84]

ವೆಪ್ಪೂರುನಾಡು

(ನೋಡಿ: ಬೆಂಪೂರು ಪನ್ನೆರಡು). ಗಂಗರ ಕಾಲದಲ್ಲಿ ಬೆಂಪೂರು–೧೨ ಎಂಬ ಹೆಸರಿನಿಂದ ಕರೆಯಲಾಗಿದ್ದ ಒಂದು ಪ್ರಾದೇಶಿಕ ವಿಭಾಗವೇ ಮುಂದೆ, ಚೋಳರ ಮತ್ತು ಹೊಯ್ಸಳರ ಕಾಲದ ಶಾಸನಗಳಲ್ಲಿ ವೆಪ್ಪೂರುನಾಡು ಎಂದು ಹೆಸರಾಗಿದೆ. ಕ್ರಿ. ಶ. ೧೨೪೭ರ ಮಡಿವಾಳ ಗ್ರಾಮದ ಶಾಸನದಲ್ಲಿ ಈ ನಾಡಿನ ಉಲ್ಲೇಖ ಬಂದಿದೆ.[85] ವೆಪ್ಪೂರ್ (ಬೇಗೂರು), ಬೆಂಗುಳೂರು (ಬೆಂಗಳೂರು), ಕೂಡಲ್ (ಕೂಡ್ಲು) ಊರುಗಳು ಶಾಸ

79. ಅದೇ, ಬೆಂಗಳೂರು ೪೧
80. ಅದೇ, ಹೊಸಕೋಟೆ ೭೫, ೯೩, ೯೯, ೯೦ ಮತ್ತು ೧೦೪
81. ಅದೇ, ಆನೇಕಲ್ಲು ೬೨
82. ಅದೇ, ೮೪
83. ಅದೇ, ಚನ್ನಪಟ್ಟಣ ೬೫
84. ಆನ್ಯುಯಲ್ ರಿಪೋರ್ಟ್ ಆನ್ ಇಂಡಿಯನ್ ಎಪಿಗ್ರಫಿ, ೧೯೬೯-೭೦ : ಶಾಸನ ಬಿ ೨೫೭ (ಪು. ೪೮) ಮತ್ತು ಬಿ ೨೮೭ (ಪು. ೫೧), ಕ್ರಿ. ಶ. ೧೨೯೫
85. ಎ. ಕ., ೯, ಬೆಂಗಳೂರು ೬೮

ನೋಕ್ತವಾಗಿವೆ. ಕ್ರಿ. ಶ. ೧೩೩೦ರ ಆನೇಕಲ್ಲು ತಾಲ್ಲೂಕಿನ ಹೀಲಲಿಗೆ ಗ್ರಾಮದ ಶಾಸನದಲ್ಲಿ '....ಲ ಪಟ್ಟಣವು ವೆಪ್ಪೂರು ನಾಡಿನಲ್ಲಿದೆ' ಎಂಬ ಉಲ್ಲೇಖವಿದೆ.[86] ಮಡಿವಾಳ ಗ್ರಾಮದ ಇನ್ನೊಂದು ಶಾಸನದಲ್ಲಿ (ಕ್ರಿ. ಶ. ೧೩೬೫) 'ತಾಮರೈಕೆಱ್ಱೈ' (ತಾವರೆಕೆರೆ) ವೆಪ್ಪೂರು ನಾಡಿನ ಗ್ರಾಮವೆಂದು ತಿಳಿಯುತ್ತದೆ.[87] ಬೆಂಗಳೂರು ನಗರದ ಆಗ್ನೇಯ ಭಾಗವೂ ಸೇರಿದಂತೆ ಬೆಂಗಳೂರು ದಕ್ಷಿಣ ಮತ್ತು ಆನೇಕಲ್ಲು ತಾಲ್ಲೂಕಿನ ಹಲವಾರು ಗ್ರಾಮಗಳು ಈ ನಾಡಿನಲ್ಲಿ ಅಂತರ್ಗತವಾಗಿದ್ದವು. ಅಂದರೆ, ಸರಿ ಸುಮಾರು ಗಂಗರ ಕಾಲದ ಬೆಂಪೂರು ಪನ್ನೆರಡರಷ್ಟೆ ಪ್ರದೇಶವನ್ನು ಇದು ಒಳಗೊಂಡಿದ್ದಿತೆನ್ನಬಹುದು.

ವೆಯೂರುನಾಡು

ಬೆಂಗಳೂರು ದಕ್ಷಿಣ ತಾಲ್ಲೂಕಿನ ದೊಡ್ಡಕನ್ನೆಲ್ಲಿ ಗ್ರಾಮದ ಕ್ರಿ.ಶ. ೧೩೪೬ರ ಶಾಸನವೊಂದರಲ್ಲಿ ಇರುಂಬಿಲಿಯೂರು (ಇಬ್ಬಲೂರು) ಮತ್ತು ಉದ್ಯೆಯನಪಳ್ಳಿಗಳು ವೆಯೂರುನಾಡಿನ ಗ್ರಾಮಗಳೆಂದು ಉಲ್ಲೇಖಿಸಲ್ಪಟ್ಟಿದೆ.[88]

ಶಿಗಲ್‌ನಾಡು ಅಥವಾ ಶಿಯಲ್‌ನಾಡು

(ಸಿಗಲನಾಡು) ಕನಕಪುರ ತಾಲ್ಲೂಕಿನ ಬಾಳೇಪುರ ಶಾಸನ (ಕ್ರಿ. ಶ. ೧೧೫೦), ಹೊಸದುರ್ಗ (ಕ್ರಿ. ಶ. ೧೩೨೦), ಚಿಕ್ಕಕೊಪ್ಪ (ಕ್ರಿ. ಶ. ೧೩೩೭), ಆಲಹಳ್ಳಿ (ಕ್ರಿ.ಶ. ೧೧೭೮), ಮುಳ್ಳಹಳ್ಳಿ (ಕ್ರಿ. ಶ. ೧೩೦೦ ಮತ್ತು ಕ್ರಿ. ಶ. ೧೨೦೭), ತುಂಗಣೆ (ಕ್ರಿ. ಶ. ೧೩೧೬) ಮತ್ತು ಚನ್ನಪಟ್ಟಣ ತಾಲ್ಲೂಕಿನ ಎಡಮಾರನಹಳ್ಳಿ ಶಾಸನಗಳಲ್ಲಿ ಈ ನಾಡಿನ ಉಲ್ಲೇಖ ಬಂದಿದೆ. ಈ ನಾಡನ್ನು 'ಸಿಗಲನಾಡು' ಎಂದು ಕನ್ನಡ ಶಾಸನಗಳಲ್ಲೂ[89] 'ಚಿಗಲ್‌ನಾಟ್ಟು', 'ಶಿಯಲ್‌ನಾಟ್ಟು' ಎಂದು ತಮಿಳು ಶಾಸನಗಳಲ್ಲೂ[90] ಕರೆಯಲಾಗಿದೆ. ಈ ನಾಡಿನಲ್ಲಿ ಅಂತರ್ಗತವಾಗಿದ್ದ ಶಾಸನೋಕ್ತ ಗ್ರಾಮಗಳೆಂದರೆ: ಅಣ್ಣೈಯನ್‌ಪಳ್ಳಿ, ಮುಕ್ಕೂಡಲ್ ವಡಕೂಱು, ಅಣೆಲ್ಮೈವಾಡಿ (ಅಣೆಲಿವಾಡಿ), ವಿಣ್ಣೂರುಕೊಟ್ಟೈ, ಅಲೆಂಬಳ್ಳಿ, ಮಾರೇನಹಳ್ಳಿ, ಅಗರ, ಹಂನೆರಡುಂಬೂರು, ನಾಕಪಪಳ್ಳಿ, ಬನಹಳ್ಳಿ, ಮಾರಳ್ಳಿ, ದಿನ್ನೂರು, ಮುಳ್ಳೈಪಳ್ಳಿ, ತೊರಗನೂರು, ಯೂಣ್ಡಿಗಪಳ್ಳಿ, ಅರುಳಹಳ್ಳಿ, ವನ್ನಿಗಹಳ್ಳಿ, ವಡದಂಗಾಲೂರು, ತುಂಗಣೆ, ಇತ್ಯಾದಿ. ಕನಕಪುರ ತಾಲ್ಲೂಕಿನ ಚಿಕ್ಕಕೊಪ್ಪ ಶಾಸನ (ಕ್ರಿ.ಶ. ೧೩೩೭)ದಲ್ಲಿ '(ಸಿಗ)ಲನಾಡ ಸಾವಿರಮುಂ' ಎಂಬ ತ್ರುಟಿತ ಉಲ್ಲೇಖವಿದೆ.[91] ಇದರಿಂದ ಶಿಗಲ್‌ನಾಡೆಂಬುದು ಸಾಂಪ್ರದಾಯಿಕವಾಗಿ ಸಾವಿರ ಗ್ರಾಮಗಳನ್ನೊಳಗೊಂಡಂಥ ಒಂದು ಆಡಳಿತ ವಿಭಾಗವಿದ್ದಿರಬೇಕೆಂದು ತೋರುತ್ತದೆ. ಈ ನಾಡು ಮುಡಿಗೊಂಡ ಚೋಳಮಂಡಲದ ರಾಜೇನ್ದ್ರಚೋಳ ವಳನಾಡಿನ ಭಾಗವೆಂದು ಅನೇಕ ಶಾಸನಗಳಿಂದ ವ್ಯಕ್ತವಾಗುತ್ತದೆ.

ಸಾವಿತೆಯನಾಡು

ಆನೇಕಲ್ಲು ತಾಲ್ಲೂಕಿನ ಗೆರಟಿಗನಬೆಲೆಯ ಕ್ರಿ.ಶ. ೧೩೨೫ರ ಶಾಸನವೊಂದರಲ್ಲಿ 'ಸಾವಿತೆಯ ನಾಡಿನ ಗೆರೆಟಿನಬೆಲೆ' ಎಂಬ ಉಲ್ಲೇಖವಿದೆ.[92]

ಹೊಮ್ಮಳಿಗೆನಾಡು

ಕ್ರಿ.ಶ. ೧೩೧೬ರ ಹೊಯ್ಸಳರ ಶಾಸನವೊಂದರಲ್ಲಿ[93] ಈ ನಾಡಿನ ಉಲ್ಲೇಖವಿದೆ. (ಕನಕಪುರ ತಾಲ್ಲೂಕಿನ ಗಾಣಾಳುಕೊಪ್ಪ) ಕನಕಪುರ ತಾಲ್ಲೂಕಿನ ಹಳೇ ಅಗ್ರಹಾರದ ಶಾಸನದಲ್ಲಿ (ಕ್ರಿ.ಶ. ೧೪೦೭)

86. ಅದೇ, ಆನೇಕಲ್ಲು ೬೫
87. ಅದೇ, ಬೆಂಗಳೂರು ೬೭
88. ಅದೇ, ೪೭
89. ಅದೇ, ಕಾನಕಾನಹಳ್ಳಿ ೩೦, ೪೧ ಮತ್ತು ೧೦೪
90. ಅದೇ, ೨೩, ೨೪, ೩೫, ೪೩
91. ಅದೇ, ೩೦
92. ಅದೇ, ಆನೇಕಲ್ಲು ೫೬

'ವೊಂಮಳಿಗೆನಾಡು' ಎಂದೂ ಚಿಕ್ಕಮರಳವಾಡಿ ಗ್ರಾಮದ ಶಾಸನದಲ್ಲಿ 'ಹೊಂಮಳಿಗೆಯ ನಾಡು...' ಎಂದೂ ಉಲ್ಲೇಖಗಳಿವೆ. ಕನಕಪುರ ತಾಲ್ಲೂಕಿನ ಗಾಣಾಳುಕೊಪ್ಪ, ಹಳೇ ಅಗ್ರಹಾರ, ಚಿಕ್ಕಮರಳ ವಾಡಿಗಳನ್ನೊಳಗೊಂಡಂತೆ ಈ ನಾಡು ಇದ್ದಿತೆನ್ನ ಬಹುದು.

ಕಾಡನೂರು ೨೦

ದೊಡ್ಡಬಳ್ಳಾಪುರ ತಾಲ್ಲೂಕಿನ ಕಾಡುನೂರಿನ ಸುತ್ತ ಮುತ್ತಲ ಸಾಂಪ್ರದಾಯಿಕವಾಗಿ ೨೦ ಗ್ರಾಮಗಳನ್ನೊಳಗೊಂಡ ಒಂದು ಪ್ರಾದೇಶಿಕ ವಿಭಾಗ ಮತ್ತು ಹೆಜ್ಜಾಜಿ-೧೨ ಇದರ ಒಂದು ಉಪ ವಿಭಾಗವೆಂಬ ಅಂಶ, ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಶಾಸನಗಳಿಂದ ತಿಳಿದು ಬರುತ್ತದೆ.[94]

---

93. ಅದೇ, ಕಾನಕಾನಹಳ್ಳಿ ೭
94. ಅದೇ, ೧೧, ಚಳ್ಳಕೆರೆ ೨೯ ಮತ್ತು ೩೦

ಕೆ. ಜಿ. ನಾಗರಾಜನ್

ಕರ್ನಾಟಕ ರಾಜ್ಯದ ಪುರಾತತ್ತ್ವ ಇಲಾಖೆ : ಒಂದು ನೂರು ವರುಷ

ಕರ್ನಾಟಕದ ಪುರಾತತ್ತ್ವ ಮತ್ತು ಸಂಗ್ರಹಾಲಯಗಳ ಇಲಾಖೆ, ತನ್ನ ವೈಭವೋಪೇತ ಚರಿತ್ರೆಯಲ್ಲಿ ಮಹತ್ವದ ಘಟ್ಟವೊಂದನ್ನು ಹಾದು ಹೋಗುತ್ತಿದೆ. ಈಗ ಇದು ತನ್ನ ಶತಮಾನೋತ್ಸವವನ್ನು ಮುಗಿಸಿದೆ. ಇದು ೧೮೮೫ರಲ್ಲಿ ಕಾರ್ಯ ಪ್ರವೃತ್ತವಾಗಿ, ಭಾರತೀಯ ಪ್ರಾಚೀನ ವಸ್ತುಗಳ ಸಂಶೋಧನೆಯಲ್ಲಿ ಅತ್ಯುತ್ತಮವಾದ ಸೇವೆಯನ್ನು ಸಲ್ಲಿಸಿದ ಅಸೂಯೆ ಹುಟ್ಟಿಸುವಂತಹ ದಾಖಲೆಯನ್ನು ಹೊಂದಿದೆ. ಬಿ. ಎಲ್. ರೈಸ್, ಆರ್. ನರಸಿಂಹಾಚಾರ್, ಆರ್. ಶ್ಯಾಮಾಶಾಸ್ತ್ರಿ, ಡಾ॥ ಎಂ. ಎಚ್. ಕೃಷ್ಣ ಮೊದಲಾದ ವಿದ್ವಾಂಸರ ಮಾರ್ಗದರ್ಶನ ಈ ಇಲಾಖೆಯ ಕಾರ್ಯ ಚಟುವಟಿಕೆಗಳಿಗೆ ದೊರಕಿದುದು ರಾಜ್ಯದ ಒಂದು ಅದೃಷ್ಟ. ಭಾರತ ಮತ್ತು ಹೊರದೇಶಗಳೆರಡರಲ್ಲೂ ಈ ಮಹನೀಯರ ಹೆಸರುಗಳು, ಪುರಾತತ್ತ್ವ ಸಂಶೋಧನೆಯ ಅತ್ಯುತ್ತಮ ಮಟ್ಟಕ್ಕೆ ಪರ್ಯಾಯ ಪದಗಳಾಗಿವೆ.

ಇಂದಿನ ಕರ್ನಾಟಕ ರಾಜ್ಯದ ಕೇಂದ್ರ ಭಾಗವಾಗಿರುವ ಹಿಂದಿನ ಮೈಸೂರು ಸಂಸ್ಥಾನವು ನಮ್ಮ ದೇಶದ ಪ್ರಾಚೀನ ವಸ್ತುಗಳ ಸಂಶೋಧನಾ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿತ್ತು. ಭಾರತ ಸರ್ಕಾರವು ತನ್ನ ಪುರಾತತ್ತ್ವ ಪರಿವೀಕ್ಷಣಾ ವಿಭಾಗವನ್ನು ೧೮೬೧ರಲ್ಲಿ ಸ್ಥಾಪಿಸಿತು. ರಾಜ್ಯದ ಪುರಾತತ್ತ್ವ ಪರಿವೀಕ್ಷಣೆಯ ವ್ಯವಸ್ಥಿತ ಕೆಲಸ ಮಾಡುವ ಇಲಾಖೆ ಪ್ರಾರಂಭವಾದದ್ದು ೧೮೮೫ರ ಸಮಯದಲ್ಲಾದರೂ ಕೆಲಸದಲ್ಲಿ ಹಿಂದುಳಿಯಲಿಲ್ಲ ಎನ್ನುವುದು ಕನ್ನಡಿಗರಿಗೆ ಹೆಮ್ಮೆಯ ವಿಷಯ. ಈ ದಿಸೆಯಲ್ಲಿ ಕೆಲಸ ಮಾಡುವ ಪ್ರಯತ್ನಗಳು ಮೊದಲಿನಿಂದಲೂ ಇಲ್ಲಿ ನಡೆದಿದ್ದವು. ಸ್ವತಂತ್ರ ಇಲಾಖೆಯ ರಚನೆಗೆ ಮುನ್ನ, ರಾಜ್ಯದ ಪುರಾತತ್ತ್ವ ಸಂಶೋಧನೆಯು, ಕರ್ನಲ್ ಕಾಲಿನ್ ಮೆಕೆಂಜಿ, ಮೇಜರ್ ಡಿಕ್ಸನ್ ಮತ್ತು ಬೆಂಜಮಿನ್ ಲೂಯಿಸ್ ರೈಸ್ ಮುಂತಾದವರ ವೈಯಕ್ತಿಕ ಸಾಹಸಗಳಾಗಿದ್ದವು.

ಮೈಸೂರು ಸಂಸ್ಥಾನವನ್ನು ೧೬೭೨ ರಿಂದ ೧೭೦೪ರ ವರೆಗೆ ಆಳಿದ ಚಿಕ್ಕದೇವರಾಜ ಒಡೆಯರು, ರಾಜ್ಯದಲ್ಲಿದ್ದ ಎಲ್ಲ ದಾನ, ದತ್ತಿಗಳನ್ನು ಪರೀಕ್ಷಿಸಬೇಕೆಂದೂ ಆಯಾ ದಾನದ ಉದ್ದೇಶ ನೇರವೇರಿದೆಯೋ ಇಲ್ಲವೇ ಎಂಬುದನ್ನು ಖಾತ್ರಿ ಮಾಡಿಕೊಳ್ಳಬೇಕೆಂದೂ ಬಯಸಿದರೆಂದು ತಿಳಿದುಬಂದಿದೆ. ಈ ಉದ್ದೇಶದಿಂದ, ರಾಜ್ಯದ ಎಲ್ಲ ಕಡೆ ಇರುವ ಶಾಸನಗಳ ಪಟ್ಟಿಯನ್ನು ಮಾಡಿಸಿ, ಪ್ರತಿಗಳನ್ನು ಸಿದ್ಧಪಡಿಸಿ, ಸಂಗ್ರಹಿಸಿದ ದಾಖಲೆ ಪುಸ್ತಕವನ್ನು ಅರಮನೆಯ ಗ್ರಂಥ ಭಂಡಾರದಲ್ಲಿ ಇರಿಸಿದ್ದರು. ದುರದೃಷ್ಟವಶಾತ್ ಆ ದಾಖಲೆಗಳು ನಾಶವಾದವು.

೧೭೯೯ ರ ಕಾಲದಲ್ಲಿ ರಾಜ್ಯದ ಪರಿವೀಕ್ಷಣಾ ಮೇಲ್ವಿಚಾರಕರಾಗಿದ್ದ ಕರ್ನಲ್ ಕಾಲಿನ್ ಮೆಕೆಂಜಿ ಅವರು, ರಾಜ್ಯದ ಎಲ್ಲ ಕಡೆಯಲ್ಲಿ ಚದರಿ ಹೋಗಿದ್ದ ಸಾವಿರಾರು ಶಾಸನಗಳನ್ನು ಪ್ರತಿ ಮಾಡಿಸಿದರು. ೧೮೬೫ರ ಸುಮಾರಿನಲ್ಲಿ ಮೈಸೂರು ಮತ್ತು ಕೊಡಗಿನ ಮುಖ್ಯ ಕಮಿಷನರ್ ಆಗಿದ್ದ ಎಲ್. ಬೌರಿಂಗ್ ಅವರು, ರಾಜ್ಯದ ಬೇರೆ ಬೇರೆ ಶಾಸನಗಳ ಛಾಯಾಚಿತ್ರಗಳನ್ನು ತೆಗೆಯಲು


ಮೇಜರ್ ಡಿಕ್ಸನ್ ಅವರನ್ನು ನಿಯುಕ್ತಗೊಳಿಸಿದರು. ಪುರಾತತ್ತ್ವ ಸಂಶೋಧನೆಯ ಕೆಲಸ ರಾಜ್ಯದಲ್ಲಿ ವ್ಯವಸ್ಥಿತವಾಗಿ ಪ್ರಾರಂಭವಾಗುವುದಕ್ಕೆ ಇದು ನಾಂದಿಯಾಯಿತು. ಆ ಕಾಲದಲ್ಲಿ ಮೈಸೂರು ಮತ್ತು ಕೊಡಗು ರಾಜ್ಯಗಳ ಸಾರ್ವಜನಿಕ ಶಿಕ್ಷಣದ ನಿರ್ದೇಶಕರಾಗಿದ್ದ ಬೆಂಜಮಿನ್ ಲೂಯಿಸ್ ರೈಸ್ ಅವರಿಗೆ ಈ ಛಾಯಾಚಿತ್ರಗಳನ್ನು ಕೊಡಲಾಯಿತು. ಕನ್ನಡಿಗರ ಭಾಷೆ ಮತ್ತು ಜೀವನಗಳ ಅಭ್ಯಾಸದಲ್ಲಿ ವಿಶೇಷ ಆಸಕ್ತಿ ಇದ್ದ ರೈಸ್ ಅವರು, ಈ ಚಿತ್ರಗಳನ್ನು ತೀವ್ರವಾಗಿ ಅಭ್ಯಾಸ ಮಾಡಿದರು.

ವ್ಯಾಪಕವಾಗಿ ಪ್ರವಾಸ ಕೈಗೊಳ್ಳುತ್ತಿದ್ದ ರೈಸ್, ಸಾರ್ವಜನಿಕ ಶಿಕ್ಷಣದ ನಿರ್ದೇಶಕನ ಕೆಲಸದಲ್ಲಿ ರಾಜ್ಯದ ಒಳ ಭಾಗಗಳಲ್ಲಿ ಪ್ರಯಾಣ ಮಾಡಿದಾಗಲೆಲ್ಲಾ, ಆಯಾ ಪ್ರದೇಶದ ಸ್ವಾರಸ್ಯಕರ ವಿಷಯಗಳನ್ನು ವಿವರವಾಗಿ ಅಭ್ಯಾಸ ಮಾಡುತ್ತಿದ್ದರು.

ಡಿಕ್ಸನ್ ತೆಗೆದ ಛಾಯಾ ಚಿತ್ರಗಳು ತಮ್ಮ ವಶಕ್ಕೆ ಬಂದಾಗ, ರೈಸ್ ಅವರು ಆ ಚಿತ್ರಗಳಲ್ಲಿದ್ದ ಶಾಸನಗಳನ್ನು ಓದಿ ಅನುವಾದ ಮಾಡಿ, ಅದರ ಜೊತೆಗೆ ತಾವು ಸಂಗ್ರಹ ಮಾಡಿದ್ದ ಮತ್ತಷ್ಟು ಶಾಸನಗಳನ್ನು ಸೇರಿಸಿ, 'ಮೈಸೂರು ಶಾಸನಗಳು' ಎಂಬ ಸಂಪುಟವನ್ನು ೧೮೭೯ ರಲ್ಲಿ ಪ್ರಕಟಿಸಿದರು.

ಪುರಾತತ್ತ್ವ ಇಲಾಖೆಯನ್ನು ಮೈಸೂರು ರಾಜ್ಯದಲ್ಲಿ ವಿಧಿವತ್ತಾಗಿ ೧೮೯೦ನೇ ಇಸವಿಯಲ್ಲಿ ಸ್ಥಾಪನೆ ಮಾಡಲಾಯಿತೆಂಬುದರ ಬಗ್ಗೆ, ರಾಜ್ಯದ ದಿವಾನರಾಗಿದ್ದ ಕೆ. ಶೇಷಾದ್ರಿ ಅಯ್ಯರ್ ಅವರ ಭಾಷಣವೊಂದರಲ್ಲಿ ಸೂಚನೆಯಿದೆ. ೯ನೇ ಅಕ್ಟೋಬರ್ ೧೮೯೧ ರಂದು ದಸರೆಯ ಪ್ರಜಾಪ್ರತಿನಿಧಿ ಸಭೆಯನ್ನು ಕುರಿತು ದಿವಾನರು ಮಾತನಾಡುತ್ತಾ "ಕಳೆದ ವರ್ಷ ಪ್ರಾರಂಭದಲ್ಲಿ, ವ್ಯವಸ್ಥಿತವಾದ ಪುರಾತತ್ತ್ವ ಸಂಶೋಧನೆಯ ಕೆಲಸ ಮೈಸೂರು ರಾಜ್ಯದಲ್ಲಿ ಆರಂಭವಾಯಿತು. ಅಸಂಖ್ಯಾತವಾಗಿರುವ ಪ್ರಾಚೀನ ಶಾಸನಗಳನ್ನು ಸಂಪೂರ್ಣವಾಗಿ ಪರೀಕ್ಷಿಸಿ, ಈಗಾಗಲೇ ಕಂಡುಹಿಡಿಯಲಾದ ಶಾಸನಗಳೊಂದಿಗೆ ಪರಿಶೀಲಿಸಿ, ಮುಖ್ಯ ತೀರ್ಮಾನಗಳಿಗೆ ಬರುವ ಅವಕಾಶವನ್ನು ಮಾಡಿಕೊಡಲಾಯಿತು. ಪಕ್ಕದ ಮುಂಬಯಿ ಮತ್ತು ಮದ್ರಾಸ್ ಸಂಸ್ಥಾನಗಳಲ್ಲಿ ಈಗಾಗಲೇ ವ್ಯವಸ್ಥಿತವಾದ ಪುರಾತತ್ತ್ವ ಪರಿವೀಕ್ಷಣಾಲಯಗಳನ್ನು ಸ್ಥಾಪಿಸಲಾಗಿದೆ. ಮಧ್ಯಂತರ ಸ್ಥಾನವನ್ನು ಪಡೆದಿರುವ ಕಾರಣ, ಆ ಸಂಸ್ಥಾನಗಳಲ್ಲಿ ಕಂಡುಹಿಡಿಯಲಾಗುತ್ತಿರುವುದರ


ಡಾ॥ ಆರ್. ನರಸಿಂಹಾಚಾರ್


ಬಿ. ಎಲ್. ರೈಸ್


ಡಾ॥ ಎಂ. ಎ. ಕೃಷ್ಣ

ಬಹುಪಾಲು ವಿಷಯಗಳ ಬಗೆಗೆ ವಿವರಣೆ ನೀಡುವ ಕೊಂಡಿಯಾಗಿ ಮೈಸೂರು ಸಂಸ್ಥಾನ ಕಾಣುತ್ತಿದೆ."

ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರಾಗಿದ್ದ ಮತ್ತು ಶಿಕ್ಷಣ ಮತ್ತು ಇತರ ವಿಭಾಗಗಳಿಗೆ ಕಾರ್ಯದರ್ಶಿಯಾಗಿದ್ದ ಬೆಂಜಮಿನ್ ಲೂಯಿಸ್ ರೈಸ್ ಅವರಿಗೆ, ೨೪ನೇ ಜನವರಿ ೧೮೮೪ರಂದು, ಅವರ ಕರ್ತವ್ಯಗಳ ಜೊತೆಗೆ ಪುರಾತತ್ತ್ವ ಇಲಾಖೆಯ ಮೇಲ್ವಿಚಾರಣೆಯನ್ನೂ ವಹಿಸಲಾಯಿತು. ಪುರಾತತ್ತ್ವ ಸಂಶೋಧನೆಯ ಒಂದು ವಿಭಾಗದ ಕೆಲಸವಾದ ಶಾಸನಗಳ ಸಂಗ್ರಹ ಮತ್ತು ಲಿಪಿಗಳನ್ನು ಓದುವ ಕೆಲಸವನ್ನು ಕೆಲವು ವರ್ಷಗಳಲ್ಲಿಯೇ ಮುಗಿಸಿ, ಅನಂತರ ಕೈ ಬಿಡಬಹುದೆಂದು ಭಾವಿಸಲಾಗಿತ್ತು; ಆದ್ದರಿಂದ ಈ ಕೆಲಸಕ್ಕೆ ಶಾಶ್ವತವಾದ ಅಧಿಕಾರ ಸ್ಥಾನವೊಂದನ್ನು ನಿರ್ಮಿಸುವುದರ ಬಗ್ಗೆ ಅಂದಿನ ಸರ್ಕಾರಕ್ಕೆ ಯಾವ ಕಾಳಜಿಯೂ ಇರಲಿಲ್ಲ.

೧೮೯೦ರ ಸುಮಾರಿಗೆ, ರಾಜ್ಯದ ದಿವಾನರು ಈ ಕೆಲಸದ ಅಗಾಧತೆಯನ್ನು ಗುರುತಿಸಿದರು. ಈ ಸಂಶೋ, ಧನೆಯ ಕೆಲಸಕ್ಕೆ ಬೇಕಾದ ಸಮರ್ಪಣ ಭಾವ, ಪ್ರಯತ್ನ, ಉತ್ಸಾಹಗಳನ್ನೂ, ಸಂಗ್ರಹ ಮಾಡಲಾದ ವಸ್ತುಗಳ ಮಹತ್ವವನ್ನೂ ಅರ್ಥಮಾಡಿಕೊಂಡರು. ದಿವಾನರಾಗಿದ್ದ ಕೆ. ಶೇಷಾದ್ರಿ ಅಯ್ಯರ್ ಅವರ ಮಾತಿನಂತೆ, ೨೬ನೇ ಏಪ್ರಿಲ್ ೧೮೯೦ರಲ್ಲಿ, ಬೆಂಜಮಿನ್ ಲೂಯಿಸ್ ರೈಸ್ ಅವರನ್ನು ಉಳಿದ ಕೆಲಸಗಳಿಂದ ಬಿಡುಗಡೆ ಮಾಡಿ, ಪುರಾತತ್ತ್ವ ಸಂಶೋಧನೆಗಳ ಪೂರ್ಣ ಕಾಲದ ನಿರ್ದೇಶಕರನ್ನಾಗಿ ನೇಮಿಸಲಾಯಿತು. ಜನಗಣತಿಯ ಮೇಲ್ವಿಚಾರಕರಾಗಿದ್ದ ವಿ. ಎನ್. ನರಸಿಂಹ ಅಯ್ಯಂಗಾರ್ ಅವರನ್ನು ೧೮೯೩ರಲ್ಲಿ ರೈಸ್ ಅವರ ಸಹಾಯಕರನ್ನಾಗಿ ನೇಮಿಸಲಾಯಿತು. ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಪ್ರಾಚ್ಯ ಭಾಷೆಗಳ ಪ್ರಾಧ್ಯಾಪಕರಿಗೆ ಸಹಾಯಕರಾಗಿದ್ದ ಕೆ. ಬಿ. ಪಾಠಕ್ ಅವರನ್ನು, ರೈಸ್ ಅವರಿಗೆ ಸಹಾಯ ಮಾಡಲು, ೧೮೯೬ರಲ್ಲಿ ತಾತ್ಕಾಲಿಕವಾಗಿ ನೇಮಕ ಮಾಡಲಾಯಿತು. ಅವರು ೧೮೯೭ರ ಆಗಸ್ಟ್‌ನಲ್ಲಿ ಪುಣೆಗೆ ಹಿಂತಿರುಗಿದಾಗ ಅವರ ಸ್ಥಾನಕ್ಕೆ ಶಿಕ್ಷಣ ಇಲಾಖೆಯಲ್ಲಿ ಭಾಷಾಂತರಕಾರರಾಗಿದ್ದ ಆರ್. ನರಸಿಂಹಾಚಾರ್ ಬಂದರು.

೧೮೯೦ರಲ್ಲಿ, ಪುರಾತತ್ತ್ವ ಇಲಾಖೆಯ ಪೂರ್ಣ ಕಾಲದ ನಿರ್ದೇಶಕರಾಗಿ ಕೆಲಸವನ್ನು ವಹಿಸಿಕೊಂಡಂದಿನಿಂದ ಹಿಡಿದು ೧೯೦೬ರಲ್ಲಿ ನಿವೃತ್ತರಾಗುವವರೆಗೆ, ರೈಸ್ ಅವರ ಅಧಿಕಾರಾವಧಿ ಸಾಧನೆಗಳ ಸರಪಳಿಯಾಗಿದೆ. 'ಎಪಿಗ್ರಾಫಿಯಾ ಕರ್ನಾಟಿಕಾ' ಎಂಬ ಹೆಸರಿನ ೧೨ ಸಂಪುಟಗಳಲ್ಲಿ ಅವರು ಸುಮಾರು ೯೦೦೦ ಶಾಸನಗಳನ್ನು ಪ್ರಕಟಿಸಿದರು. ಈ ಕಾಲದಲ್ಲಿ ಭಾರತ ಸರ್ಕಾರವು ಇನ್ಸ್‌ಕ್ರಿಪ್ಷನಂ ಇಂಡಿಕೇರಂ' ಎಂಬ ಶೀರ್ಷಿಕೆಯಲ್ಲಿ ಶಾಸನಗಳನ್ನು ಸಂಗ್ರಹಿಸಿ ಪ್ರಕಟಿಸುತ್ತಿತ್ತು. ರೈಸ್ ಅವರು 'ಎಪಿಗ್ರಾಫಿಯಾ ಕರ್ನಾಟಿಕಾ' ಸಂಪುಟಗಳನ್ನು ಪ್ರಕಟಿಸಿದ ಮೇಲೆ, ಭಾರತ ಸರ್ಕಾರದ ಶಾಸನ ಸಂಗ್ರಹ ಸಂಪುಟಗಳನ್ನು 'ಎಪಿಗ್ರಾಫಿಯಾ ಇಂಡಿಕಾ' ಎಂದು ಕರೆಯಲಾಯಿತು.

೧೮೮೬ರಲ್ಲಿ, ಕೊಡಗಿನ ಶಾಸನಗಳನ್ನೊಳಗೊಂಡ ಎಪಿಗ್ರಾಫಿಯಾ ಕರ್ನಾಟಿಕಾದ ಮೊದಲ ಸಂಪುಟವನ್ನು ರೈಸ್ ಪ್ರಕಟಿಸಿದರು. ಅಕ್ಟೋಬರ್ ೧೮೮೮ ರಲ್ಲಿ ಬರ್ಜೆಸ್ ಅವರು ತ್ರೈಮಾಸಿಕ ಪ್ರಕಟಣೆಯಾಗಿ 'ಎಪಿಗ್ರಾಫಿಯಾ ಇಂಡಿಕಾ'ವನ್ನು ಪ್ರಕಟಿಸಿದರು. 'ಎಪಿಗ್ರಾಫಿಯಾ' (ಈ ಶಬ್ದ ಶಾಸನಗಳ ಸಂಗ್ರಹವನ್ನು ಸೂಚಿಸುತ್ತದೆ) ಎನ್ನುವ ಶಬ್ದ ಪ್ರಯೋಗ ಭಾರತೀಯ ವಿದ್ವತ್ ಪ್ರಪಂಚಕ್ಕೆ, ಲೂಯಿಸ್ ರೈಸ್ ಮತ್ತು ಹಿಂದಿನ ಮೈಸೂರು ಸಂಸ್ಥಾನದ ಕೊಡುಗೆ.

೧೮೯೨ರಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಅಶೋಕನ ಶಾಸನಗಳನ್ನು ಕಂಡು ಹಿಡಿದು, ರೈಸ್ ಹೊಸ ಯುಗವೊಂದನ್ನೇ ನಿರ್ಮಾಣ ಮಾಡಿದರು. ಪ್ರಪಂಚದ ಎಲ್ಲೆಡೆಯ ವಿದ್ವಾಂಸರು ಈ ಸಂಶೋಧನೆಯನ್ನು ಹೊಗಳಿದ್ದಾರೆ.

ರೈಸ್ ಅವರು 'ಮೈಸೂರು ಗ್ಯಾಸೆಟಿಯರ್'ನ ಎರಡು ಸಂಪುಟಗಳನ್ನು ಪ್ರಕಟಿಸಿದರು. 'ಬಿಬ್ಲಿಯೊಥಿಕಾ ಕರ್ನಾಟಿಕಾ' ಎಂಬ ಮತ್ತೊಂದು ಬಗೆಯ ಸಂಪುಟ ಮಾಲೆಗೂ ಅವರು ಕಾರಣರಾದರು. ಕನ್ನಡ ಸಾಹಿತ್ಯ ಕ್ಷೇತ್ರದ ಮಹಾಕೃತಿಗಳಾದ 'ಕರ್ನಾಟಕ ಭಾಷಾ ಭೂಷಣ', 'ಕರ್ನಾಟಕ ಶಬ್ದಾನುಶಾಸನ', 'ಪಂಪ ರಾಮಾಯಣ', 'ಪಂಪಭಾರತ', 'ಕವಿರಾಜಮಾರ್ಗ' ಮತ್ತು 'ಕಾವ್ಯಾವಲೋಕನ'ಗಳು ಈ ಮಾಲೆಯಲ್ಲಿ ಪ್ರಕಟವಾದವು.

ರೈಸ್, ಅಸಂಖ್ಯಾತ ಹಸ್ತಪ್ರತಿಗಳನ್ನು ಸಂಗ್ರಹಿಸಿದರು. ಈ ಹಸ್ತಪ್ರತಿಗಳನ್ನು ಸುರಕ್ಷಿತವಾಗಿಡುವ ಉದ್ದೇಶದಿಂದ ಸರ್ಕಾರದ ಪ್ರಾಚ್ಯವಸ್ತು ಭಂಡಾರವನ್ನು ಪ್ರಾರಂಭಿಸಲಾಯಿತು. ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳೆರಡೂ ರೈಸ್ ಅವರ ಸೇವೆಯನ್ನು ಅನೇಕ ವಿಶೇಷ ಕೆಲಸಗಳಿಗೆ ಬಳಸಿಕೊಂಡವು. ರಾಜ್ಯ ಸರ್ಕಾರದ ಕಾರ್ಯದರ್ಶಿಗಳಿಗೋಸ್ಕರ ಶಾಸನಗಳನ್ನು ಓದುವ ಮತ್ತು ಅನುವಾದ ಮಾಡುವ ಕೆಲಸಗಳಿಗೆ ಅವರನ್ನು ನೇಮಿಸಲಾಯಿತು; ಅವರು, ಭಾರತ ಸರ್ಕಾರಕ್ಕೆ ಮೈಸೂರು ಮತ್ತು ಕೊಡಗಿನ ಗ್ಯಾಸೆಟಿಯರುಗಳನ್ನು (೧೮೭೩) ತಯಾರು ಮಾಡಿ ಕೊಟ್ಟರು ; ಮೈಸೂರು ಮತ್ತು ಕೊಡಗಿನಲ್ಲಿದ್ದ ಸಂಸ್ಕೃತ ಹಸ್ತಪ್ರತಿಗಳ ಪಟ್ಟಿಯನ್ನು ಸಿದ್ಧಪಡಿಸಿದರು ; ಕಲ್ಕತ್ತದ ಶಿಕ್ಷಣ ಕಮಿಷನರ್ ಜೊತೆಯಲ್ಲಿ ವಿಶೇಷ ಕರ್ತವ್ಯ ನಿರ್ವಹಣೆ ಮಾಡಿದರು ; ಮೈಸೂರಿನ ಜನಗಣತಿಯ (೧೮೮೩) ವರದಿಯನ್ನು ಸಂಗ್ರಹಿಸಿದರು ; ಮೈಸೂರು ಗ್ಯಾಸೆಟಿಯರ್‌ನ ಹೊಸ ಆವೃತ್ತಿಯನ್ನು (೧೮೯೭) ಹೊರತಂದರು ; ಭಾರತದ ಇಂಪೀರಿಯಲ್ ಗ್ಯಾಸೆಟಿಯರ್‌ಗೆ ಮೈಸೂರು ಗ್ಯಾಸೆಟಿಯರನ್ನು ಪರಿಷ್ಕೃತ ಮಾಡಿಕೊಟ್ಟರು (೧೯೦೨) ; ಕೊಡಗಿನ ಗ್ಯಾಸೆಟಿಯರನ್ನು ಸಿದ್ಧಪಡಿಸಿಕೊಟ್ಟರು (೧೯೦೩).

ಕರ್ನಾಟಕದ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆಯ ಉನ್ನತ ಅಧ್ಯಯನಕ್ಕೆ ರೈಸ್ ಅವರು ದ್ವಾರಕರಾದರು. ಅವರ ಕೆಲಸಗಳಿಂದ ಪ್ರಾಚೀನ ಭಾರತದ ಸಾಹಿತ್ಯದ ಅಧ್ಯಯನದಲ್ಲಿ ಕನ್ನಡ ಸಾಹಿತ್ಯಕ್ಕೆ ಹೆಮ್ಮೆಯ ಸ್ಥಾನ ದೊರಕಿತು. ೧೯೦೬ರಲ್ಲಿ ರೈಸ್ ನಿವೃತ್ತರಾದರು.

೧೮೯೭ ರಿಂದ ರೈಸ್‌ಗೆ ಸಹಾಯಕರಾಗಿದ್ದ, ಮಹಾವಿದ್ವಾಂಸರಾಗಿದ್ದ, ಆರ್. ನರಸಿಂಹಾಚಾರ್ ಅವರೇ, ರೈಸ್ ನಂತರ ಅಧಿಕಾರಕ್ಕೆ ಬಂದರು. ನರಸಿಂಹಾಚಾರ್ ಅಧಿಕಾರ ವಹಿಸಿಕೊಂಡಾಗ ಅವರನ್ನು 'ಪುರಾತತ್ತ್ವ ಸಂಶೋಧನೆಗಳ ಮುಖ್ಯಾಧಿಕಾರಿ' ಎಂದು ಗಣಿಸಿ, ಅವರನ್ನು ಶಿಕ್ಷಣ ಕ್ಷೇತ್ರದ ಮಹಾ ನಿರೀಕ್ಷಕರ ಆಡಳಿತದ ಹಿಡಿತಕ್ಕೆ ಒಳಪಡಿಸಲಾಯಿತು. ೧೯೧೦ರಲ್ಲಿ, ಅವರಿಗೆ ಕಾರ್ಯನಿರ್ವಹಣೆಯ ಸ್ವಾತಂತ್ರ್ಯ ನೀಡಿ 'ಪುರಾತತ್ತ್ವ ಸಂಶೋಧನೆಗಳ ನಿರ್ದೇಶಕ'ರೆಂದು ಪುನರ್ ನೇಮಕ ಮಾಡಲಾಯಿತು.

ಶಾಸನಗಳನ್ನು ಹುಡುಕುವ ಕೆಲಸ ರಭಸದಿಂದ ಮುಂದುವರಿಯಿತು. ಹಿಂದೆ ಗಮನಕ್ಕೆ ಬಾರದಿದ್ದ ಅನೇಕ ಶಾಸನಗಳನ್ನು ಸಂಗ್ರಹಿಸಲಾಯಿತು ಮತ್ತು ಹಿಂದೆ ಸಮಾಧಾನಕರವಾಗಿ ಓದದಿದ್ದ ಕೆಲವನ್ನು ಪರಿಷ್ಕೃತ ಮಾಡಲಾಯಿತು. ವಾರ್ಷಿಕ ವರದಿಗಳನ್ನು ನೀಡುವುದರೊಂದಿಗೆ ತನ್ನ ಕೆಲಸವನ್ನು ಇಲಾಖೆಯು ಪ್ರಾರಂಭಿಸಿತು. ಮೈಸೂರು ವಿಶ್ವವಿದ್ಯಾಲಯದ ಇತಿಹಾಸ ಉಪನ್ಯಾಸಕರಾಗಿದ್ದ ಎಂ. ಎಚ್. ಕೃಷ್ಣ ಅವರ ಸೇವೆಯನ್ನು ೧೯೨೦–೨೨ರ ಅವಧಿಯಲ್ಲಿ ಈ ಇಲಾಖೆಗೆ ನೀಡಲಾಯಿತು. ಈ ಕಾಲದಲ್ಲಿ ಕೃಷ್ಣ ಅವರು ಮೈಸೂರಿನ ಸರ್ಕಾರಿ ವಸ್ತು ಪ್ರದರ್ಶನಾಲಯದಲ್ಲಿದ್ದ ನಾಣ್ಯಗಳ ಪಟ್ಟಿಯನ್ನು ಸಿದ್ಧಪಡಿಸಿದರು. ೧೯೨೮–೩೧ರಲ್ಲಿ ಆ ಪಟ್ಟಿಯ ಪರಿಷ್ಕರಣೆಯಾದರೂ ಇನ್ನೂ ಈ ಕೃತಿ ಬೆಳಕಿಗೆ ಬಂದಿಲ್ಲ.

ಆರ್. ನರಸಿಂಹಾಚಾರ್ ಅವರು 'ಮೈಸೂರಿನಲ್ಲಿ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ' ಎಂಬ ಹೊಸ ಮಾಲೆಯನ್ನು ಪ್ರಾರಂಭಿಸಿದರು. ಬೇಲೂರಿನ ಚೆನ್ನಕೇಶವ ದೇವಾಲಯ, ಸೋಮನಾಥಪುರದ ಕೇಶವ ದೇವಾಲಯ ಮತ್ತು ದೊಡ್ಡಗದ್ದವಳ್ಳಿಯ ಮಹಾಲಕ್ಷ್ಮೀ ದೇವಾಲಯ–ಎಂಬ ದೇವಸ್ಥಾನಗಳನ್ನು ಕುರಿತ ಮೂರು 'ಮಾನೋಗ್ರಾಫ್' ಗಳು ಈ ಮಾಲೆಯಲ್ಲಿ ಬಂದವು.

ಸ್ಫುಟವಾದ ಮತ್ತು ಬೇರೆಯಾದ ಶೈಲಿಯೆಂದು ಹೊಯ್ಸಳ ವಾಸ್ತುಶಿಲ್ಪವನ್ನು ಗುರುತಿಸಿದ ಕೀರ್ತಿ ನರಸಿಂಹಾಚಾರ್ಯರಿಗೆ ಸೇರುತ್ತದೆ. ಇದಕ್ಕೆ ಮುಂಚೆ ಹೊಯ್ಸಳ ಶೈಲಿಯನ್ನು ಚಾಲುಕ್ಯ ಶೈಲಿಯಲ್ಲಿ ಸೇರಿಸಲಾಗಿತ್ತು. ಇವರ ಕಾಲದಲ್ಲಿ ದೇವನಹಳ್ಳಿ ತಾಲ್ಲೂಕಿನ ಕೆಲವು 'ಕ್ರೋಮೋಲೆಕ್'ಗಳನ್ನು ತೆರೆಯಲಾಯಿತು. ೧೯೨೨ ರಲ್ಲಿ, ಚಿತ್ರದುರ್ಗ, ತಲಕಾಡು ಮತ್ತು ಹಳೆಯಬೀಡುಗಳಲ್ಲಿ ಸಣ್ಣ ಪ್ರಮಾಣದ ಪ್ರಾಯೋಗಿಕ ಉತ್ಖನನಗಳನ್ನು ಕೈಗೊಳ್ಳಲಾಯಿತು. ೧೯೨೪ ರಲ್ಲಿ ಹಳೆಯಬೀಡಿನ ಪಾರ್ಶ್ವನಾಥ ಬಸದಿಯ ಸುತ್ತುಗೋಡೆಯೊಳಗೆ ಕೆಲವು ಉತ್ಖನನಗಳನ್ನು ಮಾಡಲಾಯಿತು.

ಆರ್. ನರಸಿಂಹಾಚಾರ್ ಅವರ ಮುಖ್ಯವಾದ ಕೊಡುಗೆ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದುದು. ಕರ್ಣಾಟಕ ಕವಿಚರಿತೆ ಎಂಬ ಮೂರು ಸಂಪುಟಗಳನ್ನು ಪ್ರಕಟಿಸಿ, ಇವರು ಹೊಸಯುಗವನ್ನೇ ಆರಂಭಿಸಿದರು. ಇವರು ತಮ್ಮ ಪ್ರೌಢಿಮೆ ಹಾಗೂ ಶ್ರದ್ಧೆಗಳಿಂದ, ರೈಸ್ ಹಾಕಿಕೊಟ್ಟಿದ್ದ ಅಸ್ತಿಭಾರವನ್ನು ಬಲಪಡಿಸಿದರು. ಹೊಯ್ಸಳ ಶೈಲಿಯ ವಾಸ್ತುಶಿಲ್ಪಗಳ ಬಗೆಗಿನ ಇವರ ಕೆಲಸ, ಮೈಸೂರಿನ ಸ್ಮಾರಕಗಳ ಕಲಾತ್ಮಕ ಗುಣಗಳ ಬಗ್ಗೆ ಎಲ್ಲ ವಿದ್ವಾಂಸರ ಗಮನ ಸೆಳೆಯಿತು. ಪ್ರಾಚ್ಯವಸ್ತು ಸಂಶೋಧನಾ ಕಾರ್ಯದಲ್ಲಿ ಇವರು ಅಳಿಸಲಾಗದ ಪ್ರಭಾವವನ್ನು ಬೀರಿ ಹೋಗಿದ್ದಾರೆ.

೧೯೨೨ ರಲ್ಲಿ ನರಸಿಂಹಾಚಾರ್ ನಿವೃತ್ತರಾದಾಗ, ಇಲಾಖೆಯನ್ನು ಮುನ್ನಡೆಸುವ ಕೆಲಸ ಆರ್. ಶ್ಯಾಮಾ ಶಾಸ್ತ್ರಿಗಳ ಪಾಲಿಗೆ ಬಂದಿತು. ಮೈಸೂರಿನ ಪ್ರಾಚ್ಯವಸ್ತು ಭಂಡಾರದ ಕ್ಯೂರೇಟರ್ ಕೆಲಸದ ಜೊತೆಯಲ್ಲಿ ಮೈಸೂರಿನ ಪುರಾತತ್ತ್ವ ಸಂಶೋಧನೆಗಳ ನಿರ್ದೇಶಕರಾಗಿ ಶಾಸ್ತ್ರಿಗಳನ್ನು ನೇಮಿಸಲಾಯಿತು ಅದೇ ವರ್ಷ ಇಲಾಖೆಯ ಕಾರ್ಯಾಲಯವನ್ನು ಬೆಂಗಳೂರಿನಿಂದ ಮೈಸೂರಿಗೆ ವರ್ಗಾಯಿಸಲಾಯಿತು. ಮತ್ತು ನಿರ್ದೇಶಕರನ್ನು ಮೈಸೂರು ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಒಳಪಡಿಸಲಾಯಿತು. ಪ್ರಾಚೀನ ಸ್ಮಾರಕಗಳ ರಕ್ಷಣೆಯ ಕಾನೂನು ೧೯೨೫ ರಲ್ಲಿ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿತು.

ಶ್ಯಾಮಾಶಾಸ್ತ್ರಿಗಳು ಒಂದು ಮಹತ್ವದ ಸಂಸ್ಕೃತ ಕೃತಿಯಾದ ಕೌಟಿಲ್ಯನ ಅರ್ಥಶಾಸ್ತ್ರವನ್ನು ಕಂಡುಹಿಡಿದು ಅದನ್ನು ಸಂಪೂರ್ಣವಾಗಿ ಇಂಗ್ಲಿಷಿಗೆ ಅನುವಾದ ಮಾಡಿ ಪ್ರಕಟಿಸಿದರು. ಮೌರ್ಯ ರಾಜ್ಯ ವ್ಯವಸ್ಥೆಯ ಅನೇಕ ವಿಷಯಗಳಲ್ಲಿ ಇವರು ಅಧಿಕೃತ ವಾಣಿಯಾಗಿದ್ದರು. ಇವರು ಭಾರತ ಸರ್ಕಾರದ ಪರವಾಗಿ, ಭಾರತದ ಪುರಾತತ್ತ್ವ ಪರಿವೀಕ್ಷಣಾಲಯದವರು ಸಂಗ್ರಹಿಸಿದ್ದ ಅಪಾರವಾದ ಕನ್ನಡ ಶಾಸನಗಳಿದ್ದ 'ದಕ್ಷಿಣಭಾರತದ ಶಾಸನ' ಎಂಬ ಹೆಸರಿನ ಒಂಬತ್ತನೆಯ ಸಂಪುಟವನ್ನು ಸಂಪಾದಿಸಿ ಪ್ರಕಟಿಸಿದರು. ಮೈಸೂರು ರಾಜ್ಯಕ್ಕೆ ಇವರು ಪ್ರಕಟಿಸಿ ಕೊಟ್ಟ ಏಳು ವಾರ್ಷಿಕ ವರದಿಗಳು ಅಮೂಲ್ಯ ಕೊಡುಗೆಗಳಾಗಿವೆ. ಪ್ರಾಚ್ಯ ಸಂಶೋಧನೆಯಲ್ಲಿ ಶ್ಯಾಮಾಶಾಸ್ತ್ರಿಗಳು ತೋರಿಸಿದ ಧೈರ್ಯ, ಸಾಹಸಗಳು ರಾಜ್ಯದ ಸಂಶೋಧನಾ ಕಾರ್ಯಗಳಿಗೆ ಹೊಸದೊಂದು ಆಯಾಮವನ್ನು ಉಂಟುಮಾಡಿದವು.

ಡಾ॥ ಎಂ. ಎಚ್. ಕೃಷ್ಣ, ವಿಶ್ವವಿದ್ಯಾನಿಲಯದ ಕೆಲಸದ ಜೊತೆಯಲ್ಲಿಯೇ ಪುರಾತತ್ತ್ವ ಸಂಶೋಧನೆಯ ನಿರ್ದೇಶಕರಾಗಿ ೧೯೨೮ ರಲ್ಲಿ ಶ್ಯಾಮಾಶಾಸ್ತ್ರಿಗಳ ಸ್ಥಾನಕ್ಕೆ ಬಂದರು. ಇವರು ಎರಡೂ ಅಧಿಕಾರಗಳನ್ನು ೧೯೪೪ರ ವರೆಗೂ ಹೊಂದಿದ್ದರು. ಆ ವರ್ಷ ಪುರಾತತ್ತ್ವ ಇಲಾಖೆಯನ್ನು ವಿಶ್ವವಿದ್ಯಾನಿಲಯದಿಂದ ಬೇರ್ಪಡಿಸಿದಾಗ,ಕೃಷ್ಣ, ಸ್ವತಂತ್ರ ಕಾರ್ಯಾಧಿಕಾರದ ಪೂರ್ಣ ಕಾಲದ ನಿರ್ದೇಶಕರಾದರು. ಸಾಂಸ್ಕೃತಿಕ ಇತಿಹಾಸ, ಪುರಾತತ್ತ್ವ ಶಾಸ್ತ್ರ, ಮಾನವ ವಿಜ್ಞಾನ ಮತ್ತು ಸಮಾಜ ಶಾಸ್ತ್ರಗಳಲ್ಲಿ ಲಂಡನ್ ವಿಶ್ವವಿದ್ಯಾನಿಲಯದಲ್ಲಿ ಉನ್ನತ ವ್ಯಾಸಂಗ ಮತ್ತು ತರಬೇತಿ ಪಡೆದಿದ್ದ ಕೃಷ್ಣ, ಪುರಾತತ್ತ್ವ ಇಲಾಖೆಯ ಚಟುವಟಿಕೆಗಳಿಗೆ ಹೊಸ ಆಯಾಮ ಒದಗಿಸಿ, ಹೊಸಯುಗಕ್ಕೆ ಕಾರಣರಾದರು.

ಹಿಂದಿನವರು ಶಾಸನಶಾಸ್ತ್ರ ಮತ್ತು ಸ್ವಲ್ಪಮಟ್ಟಿಗೆ ಕಲೆಗಳ ಅಭ್ಯಾಸಕ್ಕೆ ಹೆಚ್ಚು ಗಮನವನ್ನು ಕೇಂದ್ರೀಕರಿಸಿದ್ದರೆ, ಕೃಷ್ಣ ಅವರು ವೈಜ್ಞಾನಿಕ ಉತ್ಪನ್ನಗಳನ್ನೂ ನಾಣ್ಯಗಳ ಅಧ್ಯಯನವನ್ನು ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳ ಅಧ್ಯಯನವನ್ನೂ ಕೈಗೊಂಡರು. ಇಲಾಖೆಯ ಎಲ್ಲ ಕೆಲಸವನ್ನು ಇವರು ಎಷ್ಟು ಹೊಂದಾಣಿಕೆ ಮಾಡಿಕೊಂಡಿದ್ದರೆಂದರೆ, ಇಲಾಖೆಯ ಕಾರ್ಯ ಚಟುವಟಿಕೆಗಳು ವ್ಯಾಪಕವಾಗಿ ಬೆಳೆದು ವಿಶ್ವದ ಕಣ್ಣಿಗೆ ಬೀಳುವಂತಾಯಿತು.

ಹರಪ್ಪ ಮತ್ತು ಮೊಹೆಂಜೋದಾರೋಗಳಲ್ಲಿ ಉತ್ಖನನಗಳು ನಡೆಯುತ್ತಿದ್ದ ಸಮಯದಲ್ಲಿ ಕೃಷ್ಣ, ದಕ್ಷಿಣ ಭಾರತ ಕ್ಷೇತ್ರದಲ್ಲಿ ಮಿಂಚಿನಂತೆ ಕೆಲಸಮಾಡಿದರು. ೧೯೨೫ ಮತ್ತು ೧೯೪೨ ರ ಮಧ್ಯಾವಧಿಯಲ್ಲಿ ಇವರು ಸ್ಟ್ರಾಟಿಗ್ರಾಫಿಕ್ ತಂತ್ರವನ್ನು ಭಾರತದಲ್ಲಿ ಮೊದಲಬಾರಿಗೆ ಉಪಯೋಗಿಸಿ, ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಗಳಲ್ಲಿ ಉತ್ಖನನಗಳನ್ನು ನಡೆಸಿದರು. ತಾತ್ಕಾಲಿಕವಾಗಿ ನಿಲ್ಲಿಸಲಾಗಿದ್ದ ನಾಣ್ಯಗಳ ಅಧ್ಯಯನವನ್ನು ಪುನಶ್ಚೇತನಗೊಳಿಸಿ, ವಾರ್ಷಿಕ ವರದಿಗಳಲ್ಲಿ

ಆದರ ಅಧ್ಯಯನಗಳ ಫಲಿತಾಂಶವನ್ನು ಪ್ರಕಟಿಸಿದರು. ರೈಸ್ ಮತ್ತು ನರಸಿಂಹಾಚಾರ್ ಅವರು ಕ್ರಮವಾಗಿ ೯೦೦೦ ಮತ್ತು ೫೦೦೦ ಶಾಸನಗಳನ್ನು ಸೇರಿಸಿದರು.

ಇವರು ರಾಜ್ಯದ ಮೂಲೆ ಮೂಲೆಗಳಲ್ಲಿದ್ದ ನೂರಾರು ವಾಸ್ತುಶಿಲ್ಪ ಮಹತ್ವದ ರತ್ನಗಳನ್ನು ಅಭ್ಯಾಸ ಮಾಡುವ ವೈಜ್ಞಾನಿಕ ಅಧ್ಯಯನವನ್ನು ಆರಂಭಿಸಿದರು. ಇದನ್ನು ನಮ್ಮ ದೇಶದ ಯಾವ ರಾಜ್ಯವೂ ಸರಿದೂಗಲು ಸಾಧ್ಯವಾಗಿಲ್ಲ. ಇಂಡಾಲಜಿಯ ವಿಜ್ಞಾನಿಗಳಿಗೆ ಅಸಾಧಾರಣವಾಗಿ ಉಪಯುಕ್ತವಾಗುವ ಕೃತಿಗಳು ಇಲಾಖೆಯಿಂದ ಪ್ರಕಟ ಮಾಡಲು ಇವರು ಪ್ರಮುಖ ಕಾರಣರಾದರು.

'ಎಪಿಗ್ರಾಫಿಯಾ ಕರ್ನಾಟಿಕದ' ೧೪ ಮತ್ತು ೧೫ ನೇ ಸಂಪುಟಗಳು; 'ಎಪಿಗ್ರಾಫಿಯಾ ಕರ್ನಾಟಿಕಾ' (ಭಾಗ ೧)ದ ಸೂಚಿ ; ಮೈಸೂರು ಪುರಾತತ್ತ್ವ ಪರಿವೀಕ್ಷಣೆಯ ವಾರ್ಷಿಕ ವರದಿಗಳ (೧೯೦೬–೧೯೧೮) ಸೂಚಿ; ಬೇಲೂರು, ಹಳೆಯಬೀಡು, ನಂದಿ, ಶ್ರವಣಬೆಳಗೊಳ, ತಲಕಾಡು, ಶ್ರೀರಂಗಪಟ್ಟಣಗಳ ಮಾರ್ಗದರ್ಶಿ ಪುಸ್ತಕಗಳು ಇವರ ಕಾಲದಲ್ಲಿ ಪ್ರಕಟವಾದುವು. ಇವರು, ಮೈಸೂರು ಪುರಾತತ್ತ್ವ ವಿಭಾಗದ ವಾರ್ಷಿಕ ವರದಿಗಳ ೧೮ ಸಂಪುಟಗಳನ್ನು (೧೯೨೯–೧೯೪೬) ಪ್ರಕಟಿಸಿದರು. ತಾವು ಕಂಡುಹಿಡಿದ ಹೊಸ ಶಾಸನಗಳ ವಿವರಗಳು, ನಾಣ್ಯಗಳ ಮೇಲಿನ ಟಿಪ್ಪಣಿಗಳು, ಉತ್ಖನನ ಟಿಪ್ಪಣಿಗಳು, ನೂರಾರು ಸ್ಮಾರಕಗಳ ವಿವರಣಾತ್ಮಕ ಅಧ್ಯಯನಗಳು–ಇವುಗಳಿಂದ ಕೂಡಿದ ಈ ವರದಿಗಳು ಸೂಕ್ಷ್ಮವಾಗಿ ಯೋಜಿಸಲಾದ ರೂಪ ಪಡೆದಿದ್ದು, ಸುಂದರವಾಗಿ ಮೂಡಿವೆ ಹಾಗೂ ಇಂಡಾಲಜಿಯ ಅಧ್ಯಯನಕ್ಕೆ ವಿಶೇಷ ಕೊಡುಗೆಯಾಗಿವೆ.

ಎರಡನೆಯ ಮಹಾಯುದ್ಧದ ಸಮಯದಲ್ಲಿ ಪುರಾತತ್ತ್ವ ವೀಕ್ಷಣೆಯ ವಾರ್ಷಿಕ ವರದಿಗಳ ಪ್ರಕಟಣೆಯನ್ನು ಭಾರತ ಸರ್ಕಾರದವರು ತಡೆ ಹಿಡಿದಿದ್ದಾಗ, ಮೈಸೂರಿನ ಪುರಾತತ್ತ್ವ ವೀಕ್ಷಣೆಯ ವರದಿಗಳು ನಿರಂತರವಾಗಿ ಸಕಾಲಕ್ಕೆ ಸರಿಯಾಗಿ ಹೊರ ಬಂದುದು ಗಮನಾರ್ಹ ಸಂಗತಿ.

ಈ ಮಹಾ ವಿದ್ವಾಂಸರ ಅನೇಕ ಮುಖ್ಯ ಕೃತಿಗಳು ಇನ್ನೂ ಬೆಳಕಿಗೆ ಬಾರದಿರುವುದು ಒಂದು ದುರಂತವಾಗಿದೆ. ರಾಜ್ಯದ ಪುರಾತತ್ತ್ವ ಇಲಾಖೆಯಲ್ಲಿ ಇತ್ತೀಚೆಗೆ ಕೃಷ್ಣರ ಮೂರು ಹಸ್ತಪ್ರತಿಗಳನ್ನು ಪತ್ತೆ ಹಚ್ಚಲಾಗಿದೆ. ಅವುಗಳನ್ನು ಬೇಗ ಪ್ರಕಟಿಸುತ್ತಾರೆಂಬ ಆಸೆ ನಮಗಿದೆ. ಕೃಷ್ಣ ಅವರಿಂದ ಇಲಾಖೆಯ ಕಾರ್ಯ ಚಟುವಟಿಕೆಗಳು ಉನ್ನತ ಸ್ಥಿತಿಗೆ ಏರಿದ್ದವು. ಇಂಡಾಲಜಿ ಸಂಶೋಧನೆಗಳಲ್ಲಿ ಕೃಷ್ಣರ ಕೊಡುಗೆ ಎಲ್ಲ ಕಾಲದಲ್ಲೂ ನಿಲ್ಲತಕ್ಕದ್ದಾಗಿದೆ. ರಾಜ್ಯದ ಸೇವೆ ಸಲ್ಲಿಸುತ್ತಿರುವಾಗಲೇ ೧೯೪೭ ರಲ್ಲಿ ಮೈಸೂರಿನಲ್ಲಿ ಹಠಾತ್ತಾಗಿ ಹೃದಯಾಘಾತದಿಂದ ಕೃಷ್ಣ ನಿಧನರಾದರು.

ಕೃಷ್ಣರ ಸಾವಿನ ನಂತರ, ಅವರ ಸ್ಥಾನವನ್ನು ೧೯೫೦ ರವರೆಗೆ ತುಂಬಿದವರು ಎಲ್. ನರಸಿಂಹಾಚಾರ್. ಈ ಅವಧಿಯಲ್ಲಿ ಭಾರತ ಸರ್ಕಾರದ ಪುರಾತತ್ತ್ವ ಪರಿವೀಕ್ಷಣಾ ಇಲಾಖೆ, ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಗಳಲ್ಲಿ ಉತ್ಖನನಗಳನ್ನು ಮುಂದುವರೆಸಿತು. ೧೯೪೭ ರಲ್ಲಿ ಹಳೆಯಬೀಡಿನಲ್ಲಿ ಉತ್ಖನನಗಳನ್ನು ಮಾಡಲಾಯಿತು.

೧೯೫೦ ರಲ್ಲಿ ಕೆ. ನಾರಾಯಣ ಅಯ್ಯಂಗಾರ್ ಅವರು ನರಸಿಂಹಾಚಾರ್ ಅವರ ಸ್ಥಾನಕ್ಕೆ ಬಂದರು. ೧೯೫೧ರಲ್ಲಿ ಭಾರತದ ಪಾರ್ಲಿಮೆಂಟ್, ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ತ್ವ ನಿವೇಶನಗಳು ಮತ್ತು ಉಳಿಕೆಗಳ ನಿಯಮಾವಳಿಯನ್ನು ಜಾರಿಗೆ ತಂದಿತು. ೧೯೫೩ ರಲ್ಲಿ ರಾಜ್ಯದ ರಾಷ್ಟ್ರೀಯ ಸ್ಮಾರಕಗಳನ್ನು ಭಾರತದ ಪುರಾತತ್ತ್ವ ಪರಿವೀಕ್ಷಣಾ ಇಲಾಖೆಯ ದಕ್ಷಿಣ ವೃತ್ತಕ್ಕೆ ವರ್ಗಾಯಿಸಲಾಯಿತು. ೧೯೫೪ ರಲ್ಲಿ ಇಲಾಖೆಯನ್ನು ಮತ್ತೆ ಮೈಸೂರು ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಒಳಪಡಿಸಲಾಯಿತು. ಆಗ ಕೆ. ನೀಲಕಂಠಶಾಸ್ತ್ರಿಗಳು ಪುರಾತತ್ತ್ವ ನಿರ್ದೇಶಕ, ಇಂಡಾಲಜಿ ಪ್ರೊಫೆಸರ್ ಆಗಿ ಕಾರ್ಯ ನಿರ್ವಹಿಸಿದರು. ೧೯೫೭ ರಲ್ಲಿ ಡಾ॥ ಎಂ. ಶೇಷಾದ್ರಿ ಅವರು ಅಧಿಕಾರಕ್ಕೆ ಬಂದರು.

೧೯೭೦ ರಲ್ಲಿ ಕೈಗಾರಿಕಾ ಮತ್ತು ವಾಣಿಜ್ಯ ವಿಭಾಗಗಳ ಆಡಳಿತದಲ್ಲಿದ್ದ ಸಂಗ್ರಹಾಲಯಗಳ ಆಡಳಿತ ಸೂತ್ರವನ್ನು ಪುರಾತತ್ತ್ವ ಇಲಾಖೆಗೆ ವರ್ಗಾಯಿಸಿ ಅದಕ್ಕೆ

ಪುರಾತತ್ತ್ವ ಮತ್ತು ಸಂಗ್ರಹಾಲಯ ನಿರ್ದೇಶನಾಲಯ ಎಂಬ ಹೆಸರನ್ನು ಕೊಡಲಾಯಿತು. ಬೆಂಗಳೂರು (೨) ಬಸವಕಲ್ಯಾಣ, ಚಿತ್ರದುರ್ಗ, ಗುಲ್ಬರ್ಗ, ಹಾಸನ, ಕಿತ್ತೂರು, ಮಡಿಕೇರಿ, ಮಂಗಳೂರು, ಶಿವಮೊಗ್ಗ ದಲ್ಲಿರುವ ಸಂಗ್ರಹಾಲಯಗಳು ಈ ಇಲಾಖೆಯ ಅಧೀನ ದಲ್ಲಿವೆ.

ಮೈಸೂರಿನ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳ ಮತ್ತು ಪುರಾತತ್ತ್ವ ನಿವೇಶನ ಮತ್ತು ಉಳಿಕೆಗಳ ನಿಯಮಾವಳಿಯನ್ನು ೧೯೬೨ ರಲ್ಲಿ ಜಾರಿಗೆ ತರಲಾಯಿತು. ಟಿ. ನರಸೀಪುರ ಮತ್ತು ಹೆಮ್ಮಿಗೆಯಲ್ಲಿ ಉತ್ಖನನಗಳನ್ನು ನಡೆಸಲಾಯಿತು.

೧೯೭೨ ರಲ್ಲಿ ಮತ್ತೆ ಇಲಾಖೆಯನ್ನು ಸ್ವತಂತ್ರ ವಾಗಿ ಮಾಡಲಾಯಿತು. ಡಾ॥ ಎಂ. ಎಸ್ ನಾಗರಾಜ ರಾವ್ ಅವರು ಡಾ॥ ಎಂ. ಶೇಷಾದ್ರಿ ಅವರಿಂದ ಅಧಿಕಾರ ಪಡೆದರು. ಹಳ್ಳೂರು ಮತ್ತು ತಡಕನಹಳ್ಳಿಗಳಲ್ಲಿ ಉತ್ಖ ನನಗಳು ನಡೆದವು. ೧೯೭೨ ರ ಪ್ರಾಚ್ಯವಸ್ತುಗಳ ಮತ್ತು ಕಲಾ ಭಂಡಾರದ ನಿಯಮಾವಳಿ, ೧೯೭೭ ರಲ್ಲಿ ಜಾರಿಗೆ ಬಂದಿತು.

ರಾಷ್ಟ್ರೀಯ ಪರಿಶೋಧನಾ ಯೋಜನೆಗಳ ಕಾರ್ಯ ಕ್ರಮದನ್ವಯ, ಹಂಪೆಯನ್ನು ಐತಿಹಾಸಿಕ ಮಹತ್ವವುಳ್ಳ ನಗರವೆಂದು ಪರಿಗಣಿಸಿ, ೧೯೭೮ ರಲ್ಲಿ ಉತ್ಖನನಗಳನ್ನು ನಡೆಸಲಾಯಿತು.

೧೯೮೩ ರಲ್ಲಿ ಎಂ. ಎಸ್. ನಾಗರಾಜರಾವ್ ಅವರು ಭಾರತದ ಪುರಾತತ್ತ್ವ ಪರಿವೀಕ್ಷಣಾಲಯದ ಮಹಾ ನಿರ್ದೇಶಕರಾಗಿ ದೆಹಲಿಗೆ ತೆರಳಿದರು. ಡಾ॥ ಅ. ಸುಂದರ ಈಗ ಇಲಾಖೆಯ ಅಧಿಕಾರ ವಹಿಸಿಕೊಂಡಿದ್ದಾರೆ. ಹಂಪೆಯಲ್ಲಿ ಈಗ ಉತ್ಖನನಗಳು ಮುಂದುವರಿಯುತ್ತಿವೆ. ಶಿವಪ್ಪನಾಯಕನ ಅರಮನೆಯ ರಿಪೇರಿ, ತುಮಕೂರು ಜಿಲ್ಲೆಯ ಅರಳುಗುಪ್ಪೆಯಲ್ಲಿ ಸಂರಕ್ಷಣೆ, ಈಗ ನಡೆ ಯುತ್ತಿರುವ ಕೆಲವು ಕೆಲಸಗಳು.

ಈ ಇಲಾಖೆಯ ಕಳೆದ ನೂರು ವರ್ಷಗಳ ಕಾರ್ಯ ಗಳನ್ನು ವೀಕ್ಷಿಸಿದಾಗ, ಅನೇಕ ಸ್ವಾರಸ್ಯಕರ ವಿಷಯಗಳು ಬಯಲಿಗೆ ಬರುತ್ತವೆ. ಈ ಅವಧಿಯಲ್ಲಿ ಇಲಾಖೆಯು ಅನೇಕ ಬದಲಾವಣೆಗಳನ್ನು ಕಂಡಿದೆ. ಎಂ. ಎಚ್ ಕೃಷ್ಣ ಅವರ ಕಾಲದಲ್ಲಿ (೧೯೨೯–೧೯೪೭) ಇಲಾಖೆಯ ಎಲ್ಲಾ ವಿಭಾಗಗಳಲ್ಲೂ ಸಮರ್ಪಕ ಕೆಲಸ ನಡೆಯಿತು. ಅವರಿ ಗಿಂತ ಹಿಂದೆ, ಶಾಸನಗಳಿಗೆ ಹೆಚ್ಚು ಮಹತ್ವವನ್ನು ನೀಡ ಲಾಗಿತ್ತು. ಕೃಷ್ಣರ ಅನಂತರದ ಕಾಲದಲ್ಲಿ, ಉತ್ಖನನ ಗಳಿಗೆ ಪ್ರಾಮುಖ್ಯತೆ ನೀಡಲಾಗಿದೆ. ಈ ಏಕತಾನತೆ ಬದಲಾಗುವುದೆಂಬ ಆಸೆ ಇದೆ.

೧೯೦೦ ರಲ್ಲಿ ಒಂದು ಬಾರಿ, ಮತ್ತೊಮ್ಮೆ ೧೯೧೬ ರಲ್ಲಿ ಭಾರತ ಸರ್ಕಾರದ ಪುರಾತತ್ತ್ವ ಪರಿವೀಕ್ಷಣಾ ಇಲಾಖೆಯು ರಾಜ್ಯದ ಸಂಶೋಧನಾ ಚಟುವಟಿಕೆಗಳನ್ನು ತನ್ನ ಆಡಳಿತಕ್ಕೊಳಪಡಿಸಿಕೊಳ್ಳುವ ಯೋಜನೆಯನ್ನು ಮಾಡಿತ್ತು. ಈ ಇಲಾಖೆಯ ಹಿರಿಮೆ ಹಾಗು ವಿಶ್ವದ ಎಲ್ಲೆಡೆಯಲ್ಲಿ ಇದು ಸಂಪಾದಿಸಿದ್ದ ಗೌರವಗಳ ಕಾರಣ ದಿಂದ, ಅಂದಿನ ಸರ್ಕಾರ ಈ ಸಲಹೆಗೆ ಬೆಂಬಲ ನೀಡಲಿಲ್ಲ.

ರೈಸ್, ನರಸಿಂಹಾಚಾರ್, ಶ್ಯಾಮಾಶಾಸ್ತ್ರಿ, ಕೃಷ್ಣ ಈ ನಾಲ್ಕು ಜನರ ಕೆಲಸಗಳು ಮುಂದಿನ ತಲೆಮಾರಿನ ಕನ್ನಡಿಗರಿಗೆ ದಾರಿದೀಪವಾಗಿ ಸ್ಫೂರ್ತಿಯನ್ನು ನೀಡಿ, ವಿಶ್ವದ ಪುರಾತತ್ತ್ವ ಸಂಶೋಧನೆಯ ನಕ್ಷೆಯಲ್ಲಿ ಕರ್ನಾಟಕ ಗಣ್ಯಸ್ಥಾನ ಪಡೆಯುತ್ತದೆಂದು ಆಶಿಸುತ್ತೇವೆ.

(ಇಂಗ್ಲಿಷ್‌ನಿಂದ ಅನುವಾದ : ಕೆ. ಆರ್. ಗಣೇಶ)

ಎಚ್. ಎಸ್. ಗೋಪಾಲರಾಯ

ರಂಗನಾಥಪುರದ ತಾಮ್ರಪತ್ರ

ಪ್ರಸ್ತುತ ಪ್ರಸ್ತಾಪಿಸಲಿರುವ ತಾಮ್ರಶಾಸನಕ್ಕೆ ಸಂಬಂಧಿಸಿದಂತೆ ಆರಂಭದಲ್ಲೇ ತಿಳಿಸಬೇಕಾಗಿರುವುದೆಂದರೆ, ಇದನ್ನು 'ರಂಗನಾಥಪುರದ ತಾಮ್ರಪತ್ರ' ಎಂದು ಕರೆಯಲಾದರೂ ಹಾಲಿ ಇದು ದೊರೆತಿರುವ ರಂಗನಾಥಪುರಕ್ಕೂ ಇದರಲ್ಲಿ ಪ್ರಸ್ತಾಪಿತವಾಗಿರುವ ಊರುಗಳಿಗೂ ಯಾವ ಸಂಬಂಧವೂ ಇದ್ದಂತೆ ತೋರುವುದಿಲ್ಲ. 'ಜಯರೇಖೆ' ಮತ್ತು 'ಧಾರ್ಮಿಕ ಒಪ್ಪಂದ'ಗಳ ಈ ಶಾಸನವು ದೇಶಭಾಗದವರ ಸಾಹಸ ಮತ್ತು ಒಪ್ಪಂದವನ್ನು ತಿಳಿಸುತ್ತದೆ.

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕು ಬುಕ್ಕಾಪಟ್ಟಣ ಹೋಬಳಿ ರಂಗನಾಥಪುರ ಗ್ರಾಮದ ಪಕ್ಕದಲ್ಲಿರುವ ಶ್ರೀ ಮರಡಿ ರಂಗನಾಥಸ್ವಾಮಿಯ ಅರ್ಚಕರಾದ ಮುದಿಗೆರೆಯ ಶ್ರೀ ರಂಗಪ್ಪ, ಕಳ್ಳಂಬೆಳ್ಳದ ಶ್ರೀ ಮುದ್ದಪ್ಪ ಅವರುಗಳ ವಶದಲ್ಲಿದ್ದ ಈ ತಾಮ್ರಪತ್ರವನ್ನು ಶಿರಾದ ಕ. ವಿ. ಮಂಡಳಿಯ ಕಛೇರಿಯಲ್ಲಿ ಕ್ಯಾಷಿಯರ್ ಆಗಿರುವ ಮುದಿಗೆರೆಯ ಶ್ರೀ ಅನಂತರಾಜಪ್ಪ ಅವರು ಪರಿಶೀಲನೆಗೆ ಒದಗಿಸಿದ್ದಾರೆ.

೨೫.೫ ಸೆಂ. ಮೀ. ಉದ್ದ ಮತ್ತು ೧೨ ಸೆಂ.ಮೀ. ಅಗಲವಿರುವ ಒಂದೇ ಒಂದು ತಾಮ್ರಪತ್ರದ ಮೇಲೆ ಈ ಶಾಸನವನ್ನು ಕೊರೆಯಲಾಗಿದೆ. ಶಾಸನದ ಮೇಲ್ಭಾಗದಲ್ಲಿ ಎಡಭಾಗದಲ್ಲಿ ಚಕ್ರವೂ ಬಲಭಾಗದಲ್ಲಿ ಶಂಖವೂ ಮಧ್ಯೆ ನಾಮವೂ ಕೊರೆಯಲ್ಪಟ್ಟಿವೆ. ಚಕ್ರ ಮತ್ತು ನಾಮಗಳ ನಡುವೆ 'ಶ್ರೀ' ಎಂದೂ ನಾಮ ಮತ್ತು ಶಂಖಗಳ ನಡುವೆ 'ರಾಮಾ' ಎಂದೂ ಬರೆಯಲಾಗಿದೆ. ಶಾಸನಗಳ ಆರಂಭದಲ್ಲಿ ಕೊರೆಯಲಾಗಿರುವ ಚಿಹ್ನೆಗಳ ಮೂಲಕವೇ ಇದು ಶ್ರೀ ವೈಷ್ಣವ ಸಂಪ್ರದಾಯದ ಜನರಿಗೆ ಸಂಬಂಧಿಸಿದ ಶಾಸನ ಎನ್ನುವುದು ಸ್ಪಷ್ಟವಾಗುತ್ತದೆ.

ಶಾಸನದಲ್ಲಿ 'ಕಟ್ಟೇಮನೆ ಗೌಡರು', 'ವೃಪ್ಪಾರ ದೈವದವರು' ಮತ್ತು 'ದೇಶಭಾಗದವರು' ಪ್ರಸ್ತಾಪಿತರಾಗಿದ್ದಾರೆ. ಆದರಲ್ಲಿ ಪ್ರಮುಖವಾಗಿ ದೇಶಭಾಗದವರು 'ಗುರುವಾಂಚಲ್ಯ' ಮತೀಯ ಮುದ್ರೆಗಳನ್ನು ರಕ್ಷಿಸಿದ ಕೀರ್ತಿ ಮತ್ತು ಮುದ್ರೆಕರ್ತರೊಂದಿಗಿನ ಒಪ್ಪಂದವನ್ನು ವಿವರಿಸಲಾಗಿದೆ. ಮೂರೂ ಪಂಗಡದವರು ಶ್ರೀ ವೈಷ್ಣವ ಧರ್ಮವನ್ನೇ ಅನುಸರಿಸುವವರು ಎಂಬುದು ತಿಳಿದ ಸಂಗತಿ. ವೃಪ್ಪಾರ ಜನಾಂಗದವರು ತಮ್ಮನ್ನು ತಾವು ಸಕ್ಕರೆಯ ಕುಲದವರು-ಸಗರದವರು[1] ಎಂದೂ ಕರೆದುಕೊಳ್ಳುತ್ತಾರೆಂದು ಸಿ. ಹಯವದನರಾಯರ ಮೈಸೂರು ಗೆಜೆಟಿಯರ್‌ನ ಸಂಪುಟ–೧ ರಿಂದ ತಿಳಿಯುತ್ತದೆ. ಈ ಶಾಸನದಲ್ಲೂ ಸಗರದ ವೃಪ್ಪಾರದೈವದವರು ಎಂದೇ ಉಲ್ಲೇಖಿಸಲಾಗಿದೆ.

ಈ ಶಾಸನದ ಪ್ರಕಾರ, ಕಟ್ಟೇಮನೆ ಗೌಡರು ಮತ್ತು ಸಗರದ ವೃಪ್ಪಾರದೈವದವರ ಮುದ್ರೆಕರ್ತರು ಮಾತ್ರ ಮುಸವನೂರ ದೇವಾಲಯದಲ್ಲಿದ್ದರು. ನಂತರ ದೇಶಭಾಗದವರು ಆ ಮುದ್ರೆಕರ್ತರನ್ನು ಒಪ್ಪಿಕೊಂಡರು.

---

1. ಮೈಸೂರು ಗೆಜೆಟಿಯರ್, ಸಂ. ೧, ಸಿ. ಹಯವದನರಾವ್

ಶಾಸನದ ಪಾಠ

ಶ್ರೀ[2] ರಾಮಾ[3]

೧ ಶ್ರೀಮತೆ ರಾಮಾನುಜಾಯ ನಮಃ
೨ ತಿರುಮಲ ತಾಥಾಚಾರ್‍ಯರ ಮುಖಾಂತ್ರ ಮುಸವನೂರ
೩ ತಿರುಮಾಳಿಗೆಯಲ್ಲು ಯಿರುವಂತ ಮುಧ್ರೆಕರ್ತರು । ಪುರುಶಾಕಾ
೪ ರಿ ಕ್ರಿಷ್ಣೈಯ । ರಾಮಾನೂಜೈಯ್ಯನವರ ಮೂಖಾಂತ್ರ ॥
೫ ಕಟ್ಟಿಮನೆಗೌಡರು । ಸಗರದ ವುಪ್ಪಾರ ದೈವದವರ ಮು
೬ ಖಾತ್ರ । ಹಾದದು ಸಹಜ । ಸರದಾರ ಗೊಕಿಲ್ಯನ ಮೇಲೆ ಮಾಡಿ
೭ ದ ಕಾರ್‍ಯ್ಯ । ಸ್ತಾಳದ ಹನುಮ ದಾಸಾ । ಸಿರೆದ ಯಿಾರ ದಾಸಾ । ದಂ
೮ ಡಿನ ತೊಳಸಿ ರಾಮದಾಸಾ । ಯಿ ದೇಶಭಾಗದವರ ಕಂಡು । ಹಾ । ಗೊಕಿಲೆ
೯ ಕೂವಾಡ ಮಾಡಿ । ಶೆಂಕು ಜಾಗಟೆ ಸಸ್ಯಗಳಂನು । ಕಸುಕೊ ಬೆಕು
೧೦ ಯಂತ ಕುವಾಡ ಮಾಡಲಿಕಾಗಿ । ಹದಕ್ಕೆ ಸ್ತಳದ ವನುಮ ದಾಸಾ ।
೧೧ ಸಸ್ಯವಡದನು । ಯಿರದಾಸಾ ಬಾಕು ಕಿತ್ತೂ ಪವಾಡ ಮಾಡುತ ನಿಂ
೧೨ ತ್ತನು । ತುಳಸಿ ರಾಮಾದಾಸಾ । ಬಿಕರ ಮಾಡುತ ನಿಂತನು । ಯಿದ ಕಂ
೧೩ ಡು ಹಾ ಸರಧಾರ ಯದರ್‍ರಿ । ಸಾಷ್ಟಂಗ ಬಿದ್ದು । ನಂನಿಂದ ಹಪರಾದ
೧೪ ವಾಯಿತ್ತೆಂದು । ವಿಳ್ಯಂವೆಂನು ಕೊಟ್ಟನು । ಹಾ ವಿಳ್ಯವಂನು ತಕೊಂ
೧೫ ಡು । ಹ ಸ್ತಳದ ಮುದ್ರೆಕರ್ತರಲ್ಲಿಗೆ । ಯಿ ದೇಶ ಭಾಗದವರು ಬಂದರು ।
೧೬ ಯಿ ಮಕ್ಕಳು ಗುರು ವಾಂಚಲ್ಯಕ್ಕೆ ಕಿರ್ತಿ ತರ್‍ರಿಶಿದರು ಯಂದು । ಹ
೧೭ ಳದಿ ಬಿಳದಿ ಭಾರಿಯಷ್ಮು ಬಿರುದಂನ್ನು ಸಿರ್‍ರೆದಾ ಯಿರದಾಸಗೆ
೧೮ ಕೊಟ್ಟದು ಸಹಜ । ಹಾ ಸ್ತಾಳದಲ್ಲಿ ದೇಶ ಭಾಗದ ಕವಳ ಯಿಾ
೧೯ ರ ದಾಸನ್ನು ಕೊಟ್ಟದು ಸಹಜ । ದೇಶಮುದ್ರೆ ಕರ್ತ । ದಳವಾಯಿ
೨೦ ಯಿಾ ಯಿಕ್ಕರ್ತರು ಕೂಡಿ । ಸ್ತಳದ ಕವಳನಂತ್ತು ಕೊಟೆ । ಯಿಂನು
೨೧ ದಿಕ್ಕು ದೇಶ ಭಾಗದ ಕವಳ ನಂ ಮುಖಾಂತ್ರ ಕೊಡುಯಂದಲ್ಲಿ
೨೨ ಹಾನಗಲ್ಲ ಸ್ತಳದಲ್ಲು । ಸಮೆ ಕೊಮಾರ ಗುಂಮಗಟ್ಟಿ ಬಿಯದಾ
೨೩ ಸೈಯ । ದಳವಾಯಿ ಹನುಮು ದಾಸೈಯ್ಯ । ಚರಪತ್ತಿ ರಾಮದಾ
೨೪ ಸೈಯ । ಮತ್ತು ಯಿರುವಂತ್ತ ಲಂಡಪುಂಡ ದೆಶಾಬಾಗಕ್ಕೆ । ಸ
೨೫ ಹಾ । ಯಿಾ । ಯಿಾರದಾಸನೂ ದೆಶಬಾಗದ ಕವಳ ಕೊಟ್ಟದು ಸಹ
೨೬ ಜ । ಯಿದಕ್ಕೆ । ಯಿ ದೆಶ ಬಾಗದವರ । ಮತ್ತು ಯಾರಾದರ್‍ರು
೨೭ ಹಿಂಡಿದು ಕೆಳಲಾಗದು । ಕೆಳಿದಲ್ಲಿ ತಿರುಮಲತಾಥ ಸಾ
೨೮ ಮುದ್ರೆಗೆ ಬಾರಸ್ತರು ।
೨೯ ಪಿಂಗಳ ನಾಮ ಸಂ । ರದ ಪುಶ್ಯ ಶು ೫ ಶನಿವಾರಾದ
೩೦ ಲ್ಲು ರುಜ್ರು ಶ್ರೀ ರಾಮಾ ॥

---

2. ಚಕ್ರ ಮತ್ತು ನಾಮಗಳ ನಡುವೆ
3. ನಾಮ ಮತ್ತು ಶಂಖಗಳ ನಡುವೆ

ಸಾರಾಂಶ

ರಾಮಾನುಜರ ಸ್ಮರಣೆಯೊಂದಿಗೆ ಆರಂಭವಾಗುವ ಶಾಸನವು ಮುಸವನೂರ ದೇವಾಲಯದಲ್ಲಿ ತಿರುಮಲೆ ತಾಥಾಚಾರ್ಯರ ಮುಖಾಂತರ ಇರುವ ಮುದ್ರೆಕರ್ತರನ್ನು ಪ್ರಸ್ತಾಪಿಸುತ್ತದೆ. ರಾಮಾನುಜ್ಜೈಯನವರ ಮುಖಾಂತರ ಪುರುಷಾಕಾರಿ ಕೃಷ್ಣೈಯ್ಯ ಮತ್ತು ಸಗರದ ವುಪ್ಪಾರದೈವದವರ ಮುಖಾಂತರ ಕಟ್ಟೆಮನೆ ಗೌಡರು ಮುದ್ರೆ ಕರ್ತರಾಗಿದ್ದುದು ಸಹಜ. ಮುಂದುವರಿದ ಶಾಸನವು ಸರದಾರ ಗೋಕಿಲ್ಯನ ಮೇಲೆ ನಡೆದ ಕಾರ್ಯವನ್ನು ತಿಳಿಸುತ್ತದೆ. ಸರದಾರ ಗೋಕಿಲ್ಯನು ಸ್ಥಳದ ಹನುಮದಾಸ, ಸಿರೆದ ಯಿಾರದಾಸ ಮತ್ತು ದಂಡಿನ ತೊಳಸಿ ರಾಮದಾಸಾ ಎಂಬ ಮೂವರು ದೇಶಭಾಗದವರನ್ನು ಕಂಡು (ಮುದ್ರೆ ಕರ್ತರ ಬಳಿಯಿರುವ) ಶೆಂಕು ಜಾಗಟೆ ಸಸ್ಯಗಳನ್ನು ಕಸಿದುಕೊಳ್ಳುವಂತೆ ಕುವಾದ ಮಾಡುತ್ತಾನೆ. ಆಗ ಸ್ತಳದ ಹನುಮದಾಸ ಸಸ್ಯ ವಡದನು, ಯಿಾರದಾಸ ಬಾಕು ಕಿತ್ತು ಪವಾಡ ಮಾಡಿದನು. ತುಳಸಿ ರಾಮದಾಸ ಬಿಕರ ಮಾಡುತ್ತ ನಿಂತನು. ಇದನ್ನು ಕಂಡ ಸರದಾರ (ಗೋಕಿಲ್ಯ) ಹೆದರಿ ಸಾಷ್ಟಾಂಗ ನಮಸ್ಕರಿಸಿ 'ನನ್ನಿಂದ ಅಪರಾಧ ಆಯಿತು' ಎಂದು ವೀಳ್ಯವನ್ನು ಕೊಟ್ಟನು. ಆ ವೀಳ್ಯವನ್ನು ತೆಗೆದುಕೊಂಡು ದೇಶಭಾಗದ ಮೂರು ಜನರೂ ಸ್ತಳದ ಮುದ್ರೆ ಕರ್ತರಲ್ಲಿಗೆ ಬಂದಾಗ, ಮುದ್ರೆಕರ್ತರು 'ಗುರುವಾಂಚಲ್ಯಕ್ಕೆ ಕೀರ್ತಿ ತರಿಸಿದ' ಮೂವರನ್ನೂ ಮೆಚ್ಚಿ ಸಿರದ ಯಿಾರದಾಸನಿಗೆ ಹಳದಿ ಬಿಳದಿ ಭಾರಿಯಷ್ಟು ಬಿರುದನ್ನು ಕೊಟ್ಟರು. ಆಗ ಸಿರದ ಯಿಾರದಾಸನು ದೇಶಭಾಗದ ಕವಳವನ್ನು ನೀಡಿದ. ದೇಶಮುದ್ರೆ ಕರ್ತ, ದಳವಾಯಿ ಮತ್ತಿತರ ಕರ್ತರು ಕೂಡಿ ಸಿರದ ಯಿಾರದಾಸನಿಗೆ ನೀನು ಸ್ತಳದ ಕವಳವನ್ನಂತೂ ಕೊಟ್ಟೆ. ಇನ್ನು ಸುತ್ತಮುತ್ತಿನ (ದಿಕ್ಕು) ದೇಶಭಾಗದ ಕವಳವನ್ನೂ ನಮ್ಮ ಮುಖಾಂತರ ಕೊಡು ಎಂದಾಗ ಹಾನಗಲ್ಲು ಸ್ತಳದ ಸಮೆಕೊಮಾರ, ಗು ಂ ಮ ಗ ಟ್ಟಿ ಬಿಯದಾಸ್ಯೆಯ, ದಳವಾಯಿ ಹನುಮ ದಾಸ್ಯೆಯ್ಯ, ಚರಪತ್ತಿ ರಾಮದಾಸಯ್ಯ ಮತ್ತಿತರ ಎಲ್ಲಾ ವರ್ಗದ ದೇಶಭಾಗಕ್ಕೆ ಸಹ ಯಿಾರದಾಸನು ದೇಶಭಾಗದ ಕವಳ ಕೊಟ್ಟದು ಸಹಜ. ಇದಕ್ಕೆ ಈ ದೇಶಭಾಗದವರನ್ನು ಯಾರೂ ಹಿಡಿದು ಕೇಳಲಾಗದು. ಕೇಳಿದರೆ ತಿರುಮಲ ತಾಥ ಸಾಮುದ್ರೆಗೆ ಬಾರಸ್ತರು.

ಪಿಂಗಳನಾಮ ಸಂ॥ರದ ಪುಶ್ಯ ಶುದ್ಧ ೫ ಶನಿವಾರದಲ್ಲು ರುಜು-ರುಜು ಶ್ರೀರಾಮಾ ಎಂದಿದೆ.

ವಿವರಣೆ

ಶಾಸನದ ಆರಂಭದಲ್ಲೇ ಚಕ್ರ, ನಾಮ ಮತ್ತು ಶಂಖಗಳನ್ನು ಕೊರೆದಿರುವುದರಿಂದ ಮತ್ತು ಶ್ರೀರಾಮಾ ಎಂದು ಬರೆದಿರುವುದರಿಂದ ಇದು ಶ್ರೀವೈಷ್ಣವ ಧರ್ಮದ ವಿಷಯಕ್ಕೆ ಸಂಬಂಧಿಸಿದ ಶಾಸನ ಎಂಬುದು ಸ್ಪಷ್ಟವಾಗುತ್ತದೆ. ನಂತರ ರಾಮಾನುಜರ ಸ್ಮರಣೆಯೊಂದಿಗೆ ಮುಂದುವರಿದ ಶಾಸನ ಉಲ್ಲೇಖಿಸುವ ತಿರುಮಲ ತಾಥಾಚಾರ್ಯರು ಕನಕದಾಸರು ಮೋಹನ ತರಂಗಿಣಿಯಲ್ಲಿ ಸ್ತುತಿಸಿರುವ ತಾತಾಚಾರಿಯರೇ ಇರಬೇಕು.[4] ರಾಮಾನುಜಾಚಾರ್ಯರ ನಂತರ ವೈಷ್ಣವ ಧರ್ಮದ ಏಳಿಗೆಗಾಗಿ ಶ್ರಮಿಸಿದ ತಾತಾಚಾರ್ಯರ ವಂಶದವರು ವಿಜಯನಗರದ ಆಸ್ಥಾನದಲ್ಲಿ ಬಹಳ ಪ್ರಭಾವಶಾಲಿಗಳಾಗಿದ್ದು, ನಂತರ ಕ್ರಿ.ಶ. ೧೬೬೩ರ ಸುಮಾರಿನಲ್ಲಿ ಮೈಸೂರು ಒಡೆಯರ ಆಶ್ರಯದಲ್ಲಿ ನೆಲೆಸಿದರು. ರಾಜರ ಆಶ್ರಯ ಪಡೆದಿದ್ದ ತಾತಾಚಾರ್ಯರ ವಂಶದವರು ಶ್ರೀ ವೈಷ್ಣವ ಧರ್ಮದ ಅಭಿವೃದ್ಧಿಗೆ ಸಲ್ಲಿಸಿರುವ ಸೇವೆ ಗಣನೀಯ ಪ್ರಮಾಣದ್ದೇ ಆಗಿದೆ.[5] ಈ ಶಾಸನದ ಮೂಲಕ ತಿರುಮಲೆಯ ತಾಥಾಚಾರ್ಯರಿಗೆ ಮುದ್ರೆಕರ್ತರನ್ನು ನೇಮಿಸುವ ಅಧಿಕಾರವೂ ಇತ್ತೆಂದು ತಿಳಿಯಬಹುದಾಗಿದೆ. ಇವರ ಮುಖಾಂತರ ಮುಸವನೂರಿನ ದೇವಾಲಯ(ತಿರುಮಾಳಿಗೆ) ದಲ್ಲಿದ್ದ ಮುದ್ರೆಕರ್ತರು ಎರಡು ಪಂಗಡಗಳವರಿಂದ ಮಾನ್ಯತೆ ಪಡೆದಿದ್ದರು. ಕಟ್ಟೆಮನೆಯವರು ಸಗರದ ವುಪ್ಪಾರದೈವದವರಿಂದಲೂ ರಾಮಾನುಜ್ಜೈಯ್ಯನವರಿಂದ ಪುರುಷಾಕಾರಿ ಕೃಷ್ಣಯ್ಯನೂ ಮುದ್ರೆಕರ್ತರಾಗಿದ್ದರು. ಈ ಮುದ್ರೆಕರ್ತರನ್ನು ದೇಶ

---

4. ಕನಕ-ಕಿರಣ : ಸಂ. : ಕಾ. ತ. ಚಿಕ್ಕಣ್ಣ, ಲೇ : ಕನಕದಾಸರ ಕಾಲ, ದೇಶ, ಮತ ಮತ್ತು ಜೀವನ-ಡಾ॥ ಜಿ. ವರದರಾಜರಾವ್
5. ಹಿಸ್ಟರಿ ಆಫ್ ಮೈಸೂರ್ ಸಂ.೧, ಅ : ೧೦

ಭಾಗದವರೂ ಒಪ್ಪಿಕೊಂಡ ವಿಷಯವನ್ನು ಈ ಶಾಸನವು ತಿಳಿಸುತ್ತದೆ.

ಕಟ್ಟಿಮನೆಯವರು, ವುಪ್ಪಾರದೈವದವರು ಮತ್ತು ದೇಶಭಾಗದವರೆಲ್ಲರೂ ಶ್ರೀ ವೈಷ್ಣವ ಸಂಪ್ರದಾಯಕ್ಕೇ ಸೇರಿದ ಪಂಗಡಗಳವರು.

ಕಟ್ಟಿಮನೆಯವರು ಮತ್ತು ವುಪ್ಪಾರದೈವದವರ ಮಟ್ಟಿಗೆ ಮುದ್ರೆಕರ್ತರಾಗಿದ್ದ ಮುಸುವನೂರ ದೇವಾಲಯದಲ್ಲಿನ ಮುದ್ರೆಕರ್ತರ ಬಳಿಯ ಮುದ್ರೆಗಳನ್ನು ಅಥವಾ ಶಂಖ, ಜಾಗಟೆ, ತುಳಸಿ(ಸಸ್ಯ)ಗಳನ್ನು ಕಸಿದುಕೊಳ್ಳಲು ಸರದಾರ ಗೊಕಿಲ್ಯನೆಂಬುವನು ದೇಶಭಾಗದವರೊಡನೆ ಕುವಾದ ಮಾಡಿದ ಸಂದರ್ಭದಲ್ಲಿ ಸ್ಥಳದ ಹನುಮದಾಸ, ಸಿರದ ಯೀರದಾಸ ಮತ್ತು ದಂಡಿನ ತೊಳಸಿ ರಾಮದಾಸ ಅವರು ಸರದಾರ ಗೊಕಿಲ್ಯನನ್ನು ವಿರೋಧಿಸಿದರು. ಶೌರ್ಯ ಪ್ರದರ್ಶನದಿಂದ ಪವಾಡ ಮಾಡಿದರು. ಆಗ ಸರದಾರ ಗೊಕಿಲ್ಯನು ಹೆದರಿ, ತನ್ನ ಅಪರಾಧವನ್ನು ಒಪ್ಪಿಕೊಂಡು, ವೀಳ್ಯವನ್ನು ನೀಡಿದನು.

ಶಂಖ, ಚಕ್ರಗಳು ಶ್ರೀ ವೈಷ್ಣವ ಮುದ್ರೆಗಳೆಂದು ಪರಿಗಣಿತವಾಗಿವೆ. ಆದರೆ ಈ ಶಾಸನದಲ್ಲಿ ಚಕ್ರವನ್ನು ಉಲ್ಲೇಖಿಸದೆ ಜಾಗಟೆಯನ್ನು ಉಲ್ಲೇಖಿಸಲಾಗಿದೆ. ಬಹುತೇಕ ದೇಶಭಾಗದವರು ಸಾಮಾನ್ಯವಾಗಿ ದಾಸಯ್ಯಗಳೆಂದು ಕರೆದುಕೊಂಡು ದೇಶಾವಾರದ ವೃತ್ತಿಯನ್ನವಲಂಬಿಸಿ ಶಂಖ, ಜಾಗಟೆಗಳನ್ನೇ ಹೆಚ್ಚು ಬಳಸುವುದರಿಂದ ಅವರಿಗೆ ಸಂಬಂಧಿಸಿದ ಈ ಶಾಸನದಲ್ಲಿ ಶಂಖ, ಜಾಗಟೆಗಳನ್ನೇ ಉಲ್ಲೇಖಿಸಲಾಗಿದೆ ಎಂದು ಭಾವಿಸಬಹುದು. ಸಸ್ಯಗಳನ್ನು ಕುರಿತು 'ಬೆಳೆ' ಎಂಬ ಅರ್ಥದಲ್ಲಿ ಸ್ವೀಕರಿಸಬಹುದೆಂಬ ಅಭಿಪ್ರಾಯವಿದ್ದರೂ ಶ್ರೀ ವೈಷ್ಣವರಿಗೆ ಬಹಳ ಪವಿತ್ರವಾದ ತುಳಸಿಯೇ ಈ ಶಾಸನದಲ್ಲಿ ಉಕ್ತವಾಗಿರುವ 'ಸಸ್ಯ'ದ ಅರ್ಥವೆಂದು ತಿಳಿಯಲಾಗಿದೆ.

ದೇಶಭಾಗದವರನ್ನು ಕುವಾದದಿಂದ ಕೆಣಕಿ, ಮುದ್ರೆಗಳನ್ನು ಕಸಿಯುವಂತೆ ಪ್ರೇರೇಪಿಸಿ, ಅವರ ವೀರ ಪವಾಡಕ್ಕೆ ಹೆದರಿ ಅಪರಾಧವನ್ನು ಒಪ್ಪಿಕೊಂಡ ಸರದಾರ ಗೊಕಿಲ್ಯ ಎಂಬುವವನು ಯಾರು ಎಂದು ಖಚಿತವಾಗಿ ತಿಳಿಯಲು ಸಾಧ್ಯವಾಗಿಲ್ಲ. ಸಿರಾವನ್ನು ಆಳಿದ ಮುಸ್ಲಿಮರಲ್ಲಿ ಕೆಲವರು ಗಾಕುಲಿಖಾನ್, ದಾರಗಾಕುಲಿಖಾನ್ ಎಂದು ಇದ್ದಾರೆ. ಸಿರಾ ತಾಲ್ಲೂಕಿನ ಬರಗೂರ ಹೋಬಳಿಯ ಬರಗೂರ ತಾಮ್ರಶಾಸನದಲ್ಲಿ[6] ನವಾಬ ದಾರಗಾಕುಲಿ ಖಾನ್ ಎಂಬುವನ ಹೆಸರಿದೆ. ಆದರೆ ಅದು ನವಾಬದಾರ ಗಾಕುಲಿಖಾನ್ ಆಗಿರಬಹುದು ಎಂದು ಒಂದು ಊಹೆ. ಆತನನ್ನೇ ಈ ಶಾಸನದ ಗೊಕಿಲ್ಯ ಎಂದು ಭಾವಿಸುವುದಾದರೆ ಈ ಶಾಸನದ ಕಾಲವನ್ನು ಕ್ರಿ. ಶ. ೧೭೩೮ ಎಂದು ಒಪ್ಪಬಹುದು. ನವಾಬದಾರ ಗಾಕುಲಿಖಾನ್‌ನ ಉಲ್ಲೇಖವಿರುವ ಮೇಲೆ ಹೇಳಿದ ತಾಮ್ರಶಾಸನದ ಕಾಲ ಕ್ರಿ. ಶ. ೧೭೨೦. ಆ ನಂತರದ ಪಿಂಗಳ ಸಂವತ್ಸರವು ಕ್ರಿ. ಶ. ೧೭೩೮ರಲ್ಲಿ ಘಟಿಸಿತ್ತು.

ವೀಳ್ಯವನ್ನು ಕೊಟ್ಟು-ಪಡೆಯುವುದರ ಮೂಲಕ ಒಪ್ಪಂದಕ್ಕೆ ಬರುವುದು ನಮ್ಮಲ್ಲಿ ಮೊದಲಿನಿಂದ ಬಂದಿರುವ ಪದ್ಧತಿ ಕವಳ ಎನ್ನುವುದನ್ನೂ ವೀಳ್ಯಕ್ಕೆ ಸಮಾನಾರ್ಥದಲ್ಲೇ ಸ್ವೀಕರಿಸಬೇಕಾಗುತ್ತದೆ.

ಅಪರಾಧವನ್ನೊಪ್ಪಿಕೊಂಡ ಗೊಕಿಲ್ಯನಿಂದ ವೀಳ್ಯವನ್ನು ಪಡೆದ ಹನುಮದಾಸಾ, ಯೀರದಾಸಾ, ತುಳಸಿ ರಾಮದಾಸಾ ಎಂಬ ಮೂವರು ದೇಶಭಾಗದವರೂ ಆ ಸ್ಥಳದ ಮುದ್ರೆಕರ್ತರಲ್ಲಿಗೆ ಬಂದಾಗ, ಮುದ್ರೆಕರ್ತರು ಆ ಮೂವರೂ ಗುರು ವಾಂಛಲ್ಯಕ್ಕೆ ಕೀರ್ತಿ ತರಿಸಿದರು ಎಂದು ಮೆಚ್ಚಿ ಸಿರದ ಯಿರಾದಾಸನಿಗೆ ಬಾರಿಯಾದ ಬಿರುದನ್ನು ನೀಡಿದರು. 'ಹಳದಿ ಬಿಳದಿ ಭಾರಿಯಪ್ಪು ಬಿರುದನ್ನು ಕೊಟ್ಟದು' ಎಂಬುದಕ್ಕೆ ಗೋಪೀಚಂದನ, ಬಿಳಿಯ ನಾಮ ಮುಂತಾದ ವೈಷ್ಣವ ಲಾಂಛನಗಳು ಎಂದು ಭಾವಿಸಲಾಗಿದೆ.

ಬಿರುದನ್ನು ಪಡೆದ ಸಿರದ ಯೀರದಾಸ ಮುದ್ರೆಕರ್ತರಿಗೆ ಆ ಸ್ಥಳದ ಕವಳವನ್ನು ಕೊಟ್ಟಾಗ, ದೇಶ ಮುದ್ರೆಕರ್ತ ಮತ್ತು ದಳವಾಯಿ ಮುಂತಾದ ಕರ್ತರು ಕೂಡಿ

---

6. ಎ. ಕ, ೧೨, ಸಿರಾ ೧೧೨

ಸ್ಥಳದ ಕವಳವನ್ನಂತೂ ಕೊಟ್ಟೆ ಇನ್ನು ದಿಕ್ಕು ದೇಶ ಭಾಗದ ಕವಳವನ್ನೂ ನಮ್ಮ ಮುಖಾಂತರ ಕೊಡು ಎಂದಾಗ ಹಾನಗಲ್ಲ ಸ್ಥಳದಲ್ಲಿ ಸಮೆಕೊಮಾರ, ಗುಂಮ ಗಟ್ಟಿ ಬಿಯದಾಸೈಯ್ಯ, ಚರಪತ್ತಿ ರಾಮದಾಸೈಯ ಮತ್ತಿತರ ದೇಶಭಾಗಕ್ಕೆ ಸಹಾ ಯಿರದಾಸನು ದೇಶಭಾಗದ ಕವಳ ಕೊಟ್ಟನು. ಇದಕ್ಕಾಗಿ ಈ ದೇಶಭಾಗದವರನ್ನು ಯಾರೂ ಹಿಡಿದು ಕೇಳಲಾಗದು. ಕೇಳಿದರೆ ತಿರುಮಲ ತಾಥನ ಮುದ್ರೆಗೆ ಜವಾಬ್ದಾರರಾಗಿರುತ್ತಾರೆ.

ಸಿರದ ಯೀರದಾಸನಿಂದ ಸ್ಥಳದ ಒಪ್ಪಿಗೆ ಪಡೆದ ನಂತರ ಸುತ್ತಮುತ್ತಿನ ದೇಶಭಾಗದವರ ಒಪ್ಪಿಗೆಯನ್ನೂ ಮುದ್ರೆಕರ್ತರು ಪಡೆದರು. ಸಿರದ ಸುತ್ತಿನ ದೇಶಭಾಗ ದವರೆಲ್ಲರೂ ಮುಸವನೂರ ತಿರುಮಾಳಿಗೆಯ ಮುದ್ರೆಕರ್ತರನ್ನು ಒಪ್ಪಿಕೊಂಡರು.

ಈ ಶಾಸನದಲ್ಲಿ ಪ್ರಸ್ತಾಪಿತವಾಗಿರುವ ಊರುಗಳಲ್ಲಿ ಸಿರದ ವಿನಹ ಮತ್ತಾವ ಊರುಗಳನ್ನೂ ಖಚಿತವಾಗಿ ಗುರುತಿಸಲು ಸಾಧ್ಯವಾಗಿಲ್ಲ. ಈಗಿನ ತಾಲ್ಲೂಕು ಕೇಂದ್ರ ಶಿರಾವನ್ನು 'ಸಿರಾ' ಎಂದು ತಿಳಿಯಬಹುದು. ಶಾಸನದ ಪ್ರಕಾರ ತಿರುಮಾಳಿಗೆ (ದೇವಾಲಯ) ಇದ್ದ ಮುಸವನೂರು ಮತ್ತು ಹಾನಗಲ್ಲುಗಳನ್ನು ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲ್ಲೂಕಿನ ಮುಚನೂರು ಮತ್ತು ಹಾನಗಲ್ಲುಗಳಾಗಿರಬಹುದು ಎಂದು ಊಹಿಸಲಾಗಿದೆ.

ಶಾಸನದಲ್ಲಿ ಉಲ್ಲೇಖಿತವಾಗಿರುವ ಪಿಂಗಳ ಸಂವತ್ಸರವು ಕ್ರಿ. ಶ. ೧೭೩೮ ಆಗಿರಬಹುದೆಂದು ಕೆಳಕಂಡ ಕಾರಣಗಳಿಂದ ತಿಳಿಯಲಾಗಿದೆ. ಗಾಕುಲಿಖಾನ್ ಅಥವಾ ದಾರಗಾಕುಲಿಖಾನ್ ಎಂಬ ನವಾಬದಾರ ಅಥವಾ ನವಾಬನ ಉಲ್ಲೇಖವಿರುವ ಸಿರಾ ತಾಲ್ಲೂಕು ಬರಗೂರಿನ ತಾಮ್ರಶಾಸನದ ಕಾಲ ಕ್ರಿ. ಶ. ೧೭೨೦ ಮತ್ತು ಶಾಸನದ ಲಿಪಿ ಸ್ವರೂಪವು ಕ್ರಿ.ಶ. ೧೮ನೆಯ ಶತಮಾನದ ಲಿಪಿ ಸ್ವರೂಪದೊಂದಿಗೆ ಹೋಲುತ್ತದೆ. ಆದ್ದರಿಂದ ಈ ಶಾಸನದ ಕಾಲವು ಕ್ರಿ. ಶ. ೧೭೩೮ ಆಗಿರುವ ಸಾಧ್ಯತೆಗಳು ಹೆಚ್ಚು.

ಶಾಸನದಲ್ಲಿ ಬಳಸಿರುವ ಭಾಷೆಯು ಶುದ್ಧವಾಗಿಲ್ಲ. 'ಆ' ಕಾರದ ಬದಲಿಗೆ 'ಹ' ಕಾರ (ಆದುದ–ಹಾದದು, ಆಸ್ಥಳ-ಹಾಸ್ತಾಳ, ಇತ್ಯಾದಿ)ವನ್ನೂ ಹೆದರಿ ಎನ್ನುವುದಕ್ಕೆ ಬದಲಿಗೆ ಯದರ್ರಿ ಎಂದೂ-ಅಶುದ್ಧ ಪ್ರಯೋಗಗಳಿವೆ.

ಈ ಶಾಸನದಲ್ಲಿ ಉಲ್ಲೇಖಿತವಾಗಿರುವ ಮುಸವನೂರಿಗೂ ಈ ಶಾಸನ ದೊರೆತ ರಂಗನಾಥಪುರ ಗ್ರಾಮಕ್ಕೂ ಇರುವ ಸಂಬಂಧವನ್ನೂ ಮುವನೂರು, ಹಾನಗಲ್ಲು ಮತ್ತಿತರ ಉಲ್ಲೇಖಿತ ಸ್ಥಳಗಳನ್ನೂ ಸರಿಯಾಗಿ ಪತ್ತೆಮಾಡುವ ಕಾರ್ಯ ಆಗಬೇಕಾಗಿದೆ.

ಕಟ್ಟಿಮನೆ, ಸಗರದ ವುಪ್ಪಾರದೈವದವರು, ದೇಶ ಭಾಗದವರಿಗಿದ್ದ ಮುದ್ರೆಕರ್ತರ ಬಗೆಗೆ ಈ ಶಾಸನವು ಸ್ಪಷ್ಟವಾಗಿ ತಿಳಿಸುತ್ತದೆ.

ಬಿ. ಎಂ. ಚಂದ್ರಶೇಖರಯ್ಯ

ಪಾಂಡುರಂಗ ನಿರಾಕರಿಸಿದ ಭವ್ಯಮಂದಿರ

ಇಂತಿಂತು ನೋಡುತುಂಬರೆ
ಮುಂತಿರ್ದುದು ತರಳ ತರತರಂಗ ಪ್ರಯುತಾ
ನಂತನವಫೇನ ಜಲಚರ
ಸಂತಾನಂ ತುಂಗಭದ್ರೆ ಗಂಗಾ ಪ್ರಾಯಂ ॥

ನೆನೆದನೆ ಧನ್ಯಂ ನೋಡಿದ
ನನಘಂ ಸೋಂಕಿದವನಮರ ನಘಮರ್ಷಣಮಿ
ರ್ದನೆ ಮುಕ್ತಂ ಕೇಳ ತುಂಗಭದ್ರೆಯ ಜಳಮಂ ॥

ಎಂದು ತುಂಗಭದ್ರೆಯನ್ನು ಮಹಾಕವಿ ಹರಿಹರನು ಮುಕ್ತಕಂಠದಿಂದ ಹೊಗಳಿದ್ದಾನೆ. ಪುರಾಣ ಪ್ರಸಿದ್ಧ ಈ ಪಂಪಾ ಪರಿಸರದಲ್ಲಿ ತುಂಗಭದ್ರೆಯ ದಡದ ಮೇಲೆ ಜಗತ್ತು ಕಂಡು ಕೇಳರಿಯದ ನಗರ ವಿಜಯನಗರವು ಸ್ಥಾಪನೆಯಾಗಿ, ಶ್ರೇಯೋಭಿವೃದ್ಧಿ ಸಾಧಿಸಿತು ; ಅದ್ಭುತ ಪ್ರಮಾಣದಲ್ಲಿ ವಿಸ್ತಾರವನ್ನೂ ಸಮೃದ್ಧಿಯನ್ನೂ ಪಡೆದು ದೇಶಾಂತರಗಳಲ್ಲಿ ಪ್ರಖ್ಯಾತವಾಯಿತು. ಪ್ರಪಂಚದಲ್ಲೇ ಅಸದೃಶವೆಂಬ ಕೀರ್ತಿಯಿಂದ ಶೋಭಿಸಿತು. ವಿಜಯನಗರದ ಈ ಸೌಂದರ್ಯ, ವಿಸ್ತಾರ ಮತ್ತು ವೈಭವಕ್ಕೆ ನೆರವಾದವಳು ತುಂಗಭದ್ರೆ. ಈ ನದಿಯು ಒದಗಿಸಿದ ಅಪಾರ ಜಲಭಾಂಡಾರ, ಜಲಸೌಕರ್ಯ, ನೀರಾವರಿ ಮೊದಲಾದ ಸಂಪನ್ಮೂಲಗಳಿಂದ ವಿಜಯನಗರದ ಬೆಳವಣಿಗೆ ಅಬಾಧಿತವಾಗಿ ನಡೆಯಿತು.

ತುಂಗಭದ್ರಾ ಪ್ರದೇಶದಲ್ಲಿ ವಿಪುಲವಾಗಿ ದೊರೆಯುವ ಶಿಲಾ ಸಮೂಹವೇ ವಿಜಯನಗರದ ದೇವಾಲಯಗಳ ನಿರ್ಮಾಣಕ್ಕೆ ಸಹಾಯವಾಯಿತು. ವಿಜಯನಗರದ ಶಿಲ್ಪಿಗಳ ಕಲಾತ್ಮಕ ಕೈಗಳಲ್ಲಿ ಈ ಕಪ್ಪುಶಿಲೆಗಳು ಸುಂದರ ಮೂರ್ತಿಗಳಾಗಿಯೂ ಭವ್ಯ ದೇವಾಲಯಗಳಾಗಿಯೂ ಪರಿವರ್ತನೆಗೊಂಡವು.

ದ್ರಾವಿಡ ಮತ್ತು ಹೊಯ್ಸಳ ಶೈಲಿಗಳ ಸಂಯೋಜನೆಯನ್ನು ರೂಢಿಸಿ. ರೂಪಿಸಿಕೊಂಡ ವಿಜಯನಗರ ಶಿಲ್ಪಿಗಳು 'ವಿಜಯನಗರ ಶೈಲಿ'ಯೆಂದೇ ಕರೆಯಲಾದ ನವೀನವೂ ಖಚಿತವೂ ಆದ ಶೈಲಿಯ ಪ್ರವರ್ತಕರಾದರು. ವಿಸ್ತಾರವಾದ ಆವರಣ, ಭವ್ಯ ಮಂಟಪಗಳು, ಕಂಬಗಳ ಕೆತ್ತನೆಯಲ್ಲಿ ತಮ್ಮದೇ ಆದ ವೈಶಿಷ್ಟ್ಯ— ಇವು ವಿಜಯನಗರ ಶೈಲಿಯ ಮುಖ್ಯ ಲಕ್ಷಣಗಳು. ಈ ಶೈಲಿಯಲ್ಲಿ ಕುಶಲ ಶಿಲ್ಪಿಗಳು ಶ್ರಮವಹಿಸಿ ಬಹು ಎಚ್ಚರದಿಂದ ರಚಿಸಿದ ಕಟ್ಟಡವೇ ಜಗತ್ಪ್ರಸಿದ್ಧ ಸುಂದರ ವಿಜಯ ವಿಠ್ಠಲನ ಮಂದಿರ.

ತುಂಗಭದ್ರೆಯ ಬಲದಂಡೆಯ ಮೇಲೆ ನಿಂತಿರುವ ವಿಜಯ ವಿಠ್ಠಲನ ಮಂದಿರವು ಹಂಪೆಯ ಧಾರ್ಮಿಕ ಮಹಾಮಂದಿರಗಳಲ್ಲೇ ಅತ್ಯಂತ ಭವ್ಯವಾದುದು. ಆದರೆ, ಈ ಭವ್ಯಮಂದಿರವು ಅಪೂರ್ಣವಾಗಿದ್ದು, ವಿಠ್ಠಲನ ಮೂರ್ತಿಯ ಪ್ರತಿಷ್ಠಾಪನೆಯಾಗಲೇ ಇಲ್ಲವೆಂಬ ಅಭಿಪ್ರಾಯವೂ ವಾಡಿಕೆಯಲ್ಲಿದೆ. ಇದಕ್ಕೆ ಪೂರಕವಾಗಿ, ಪಂಢರಪುರದಿಂದ ಬಂದ ಪಾಂಡುರಂಗ ವಿಠ್ಠಲನು ಶ್ರೀನಿವಾಸನಾದರೂ ಮಂದಿರದ ಭವ್ಯತೆ, ವೈಶಾಲ್ಯ ಮತ್ತು ಕಲಾಶ್ರೀಗಳನ್ನು ಕಂಡು ಅಲ್ಲಿ ನೆಲೆಸಲು

ನಿರಾಕರಿಸಿ, ತನ್ನ ಬಡತನದ ಸರಳ ನಿವಾಸಕ್ಕೆ ಹಿಂದಿರುಗಿದನೆಂದು ಹೇಳುವ ದಂತಕತೆಯೊಂದು ಪ್ರಚಲಿತವಿದೆ.

ಆದರೆ ಇದುವರೆವಿಗೆ ದೊರೆತಿರುವ ಕ್ರಿ.ಶ. ೧೫೧೩ ರಿಂದ ೧೫೬೪ರ ಕಾಲದ ಅವಧಿಯ ಸುಮಾರು ೨೩ ಶಾಸನಗಳು ಮತ್ತು ಇತರ ಗ್ರಾಂಥಿಕ ಉಲ್ಲೇಖಗಳು ತಿಳಿಸುವಂತೆ, ಇಲ್ಲಿ ವಿಜಯ ವಿಠ್ಠಲನ ಪೂಜೆಯು ರಕ್ಕಸ ತಂಗಡಿ ಯುದ್ಧಾನಂತರ ವಿಜಯನಗರವು ದಾಳಿಕಾರರ ವಶವಾಗುವವರೆಗೂ ನಿರಂತರವಾಗಿ ನಡೆಯುತ್ತಿತ್ತು.

ಪ್ರೌಢ ದೇವರಾಯನೆಂದು ಪ್ರಸಿದ್ಧನಾದ ಇಮ್ಮಡಿ ದೇವರಾಯನ (೧೪೨೨-೪೬) ದಂಡನಾಯಕನಾಗಿದ್ದ ಪ್ರೋಲುಗಂಟಿ ತಿಪ್ಪನು ಈ ಮಂದಿರಕ್ಕೆ ಭೋಗಮಂಟಪವನ್ನು ನಿರ್ಮಿಸಿದನೆಂದು ತಿಳಿದುಬರುವುದರಿಂದ ಇದು ಕೂಡ ವಿಜಯನಗರದ ಪ್ರಾಚೀನ ಮಂದಿರಗಳಲ್ಲಿ ಒಂದೆಂದು ಹೇಳಬಹುದು. ಅಲ್ಲದೆ ಸ್ವತಃ ಕೃಷ್ಣದೇವರಾಯನೇ ವಿಠ್ಠಲನ ಪೂಜೆ, ನೈವೇದ್ಯಗಳಿಗಾಗಿ ಅನೇಕ ಚಿನ್ನ, ಬೆಳ್ಳಿಯ ಹರಿವಾಣಗಳನ್ನು ನೀಡಿದುದಲ್ಲದೆ, ದತ್ತಿಗಳನ್ನು ಬಿಟ್ಟುದುದಾಗಿ ಅಲ್ಲಿರುವ ಶಾಸನದಿಂದಲೇ ತಿಳಿದುಬರುತ್ತದೆ. ಇನ್ನೊಂದು ಶಾಸನವು ತಿಳಿಸುವಂತೆ, ಕೃಷ್ಣದೇವರಾಯನ ಇಬ್ಬರು ರಾಣಿಯರು ರಾಯಗೋಪುರಗಳನ್ನು ನಿರ್ಮಿಸಿದುದಲ್ಲದೆ ಬಂಗಾರದ ಹರಿವಾಣಗಳನ್ನು ದೇವಾಲಯಕ್ಕೆ ನೀಡಿದ್ದಾರೆ. ಅಲ್ಲದೆ ಸಾಮ್ರಾಟರಾದ ಅಚ್ಯುತರಾಯ ಮತ್ತು ಸದಾಶಿವರಾಯರು ಅನೇಕ ದತ್ತಿಗಳನ್ನು ನೀಡಿದ ಬಗ್ಗೆ ಶಾಸನಗಳು ತಿಳಿಸುತ್ತವೆ.

ಅತ್ಯುತ್ತಮ ಮಾದರಿ

ಹಂಪೆಯ ದೇವಾಲಯಗಳಲ್ಲೆಲ್ಲಾ ಅತಿ ಸುಂದರವಾದ ವಿಠ್ಠಲನ ಮಂದಿರವು ವಿಜಯನಗರ ಶೈಲಿಯ ಅತ್ಯುತ್ತಮ ಮಾದರಿಯೆನ್ನಬಹುದು. ಶಿಲ್ಪಕಲೆಯಲ್ಲಿ ಇದನ್ನು ಮೀರಿಸುವ ಭವ್ಯಮಂದಿರವು ಇಡೀ ದಕ್ಷಿಣ ಭಾರತದಲ್ಲಿಯೇ ಮತ್ತಿಲ್ಲವೆಂದು ಪ್ರಸಿದ್ಧ ಆಂಗ್ಲ ವಿದ್ವಾಂಸ ಲಾಂಗ್‌ಹರ್ಸ್ಟ್‌ನು ಉದ್ಗರಿಸಿದ್ದಾನೆ.

ಮಂದಿರವು ಅತ್ಯಂತ ವಿಶಾಲವಾದ ಎಂದರೆ ೧೫೨ ಮೀಟರ್ ಉದ್ದ ಮತ್ತು ೯೪ ಮೀಟರ್ ಅಗಲದ ಬೃಹತ್ ಆವರಣವನ್ನೊಳಗೊಂಡಿದ್ದು, ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ವಿಜಯನಗರದ ವಿಶಿಷ್ಟ 'ರಾಯಗೋಪುರ'ಗಳಿಂದ ಕೂಡಿದೆ. ಈಗ ಜೀರ್ಣಾವಸ್ಥೆಯಲ್ಲಿರುವ ಈ ಗೋಪುರಗಳಲ್ಲೆಲ್ಲಾ ದಕ್ಷಿಣದ ಗೋಪುರವು ಅತ್ಯಂತ ಆಲಂಕಾರಿಕವಾದುದು. ಆವರಣದ ಮಧ್ಯದಲ್ಲಿ ವಿಠ್ಠಲನ ಮಂದಿರವಿದ್ದು, ಅಮ್ಮನಗುಡಿ, ಕಲ್ಯಾಣಮಂಟಪ, ಡೋಲೋತ್ಸವ ಮಂಟಪ, ನೂರು ಕಂಬಗಳ ಮಂಟಪ ಮತ್ತು ಪ್ರಸಿದ್ಧ ಕಲ್ಲಿನ ತೇರನ್ನೊಳಗೊಂಡಿದೆ.

ವ್ಯಾಸರಾಯರ ಪ್ರಭಾವ

ಕೃಷ್ಣದೇವರಾಯನ ಕಾಲದಲ್ಲಿ ರಾಜಗುರು ವ್ಯಾಸರಾಯರ ಪ್ರಭಾವಕ್ಕೊಳಗಾಗಿ ವಿಠ್ಠಲನ ಮಂದಿರವು ತನ್ನ ಮೂಲ ಆಕಾರವನ್ನೇ ಬದಲಾಯಿಸಿಕೊಂಡು, ಭವ್ಯ ಮಂದಿರವಾಗಿ ಪರಿವರ್ತನೆಗೊಂಡಿತು. ಬಹುಶಃ ಈ ಕಾಲದಲ್ಲೇ ಗರ್ಭಗೃಹದ ಸುತ್ತಲಿನ ಪ್ರದಕ್ಷಿಣಾಪಥದ ನಿರ್ಮಾಣವಾಗಿರಬೇಕು. ಅಲ್ಲದೆ ಸುಂದರ ಅಂತರಾಳ ಮತ್ತು ನೂರು ಕಂಬಗಳ ಮಂಟಪಗಳು ಕೂಡಾ ವಿಜಯನಗರ ಶೈಲಿಗೆ ಕೃಷ್ಣದೇವರಾಯನು ನೀಡಿದ ಉತ್ತಮ ಕಲಾಕೃತಿಗಳಾಗಿವೆ.

ಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿ ಹರಿದಾಸ ಚಳುವಳಿಯು ತನ್ನ ಚಟುವಟಿಕೆಯ ಶಿಖರವನ್ನು ಮುಟ್ಟಿತ್ತು. ವ್ಯಾಸರಾಯರ ಶಿಷ್ಯರೂ ಕರ್ನಾಟಕ ಸಂಗೀತದ ಪಿತಾಮಹರೂ ಆದ ಪುರಂದರದಾಸರು, ಸಂತಕವಿ ಕನಕದಾಸರು ಮೊದಲಾದ ದಾಸವರೇಣ್ಯರು ರಾಜಧಾನಿಯಲ್ಲಿದ್ದರು. ಪುರಂದರದಾಸರು ತಮ್ಮ ಪದಗಳಲ್ಲಿ ವರ್ಣಿಸಿರುವ ಶ್ರೀ ಕೃಷ್ಣನ ಬಾಲಲೀಲೆಗಳನ್ನು ವಿಠ್ಠಲನ ಮಂದಿರದ ಕಂಬ, ತೊಲೆ, ಬೋದಿಗೆಗಳಲ್ಲಿ ಅಲ್ಲದೆ ದೇವಾಲಯದ ಎಲ್ಲ ಕಡೆಗಳಲ್ಲೂ ಕಂಡರಿಸಿದ್ದಾರೆ.

ವಿಠ್ಠಲನ ಮಂದಿರವು ಐದು ಅಡಿ ಎತ್ತರದ ಜಗಲಿಯ ಮೇಲೆ ನಿಂತಿದ್ದು, ಗರ್ಭಗುಡಿ, ಅರ್ಧ ಮಂಟಪ ಅಥವಾ ಮಧ್ಯರಂಗ ಮತ್ತು ಹೊರಗಿನ ಮಹಾಮಂಟಪಗಳನ್ನೊಳಗೊಂಡಿದೆ. ಗರ್ಭಗೃಹದ ಸುತ್ತಲೂ ಇರುವ ಪ್ರದಕ್ಷಿಣ ಪ್ರಾಕಾರವು ಉತ್ತಮ ಶಿಲ್ಪಕಲೆಯಿಂದ ಕೂಡಿದ್ದು, ಈ ಮಂದಿರದ ಅತ್ಯಂತ ವಿಶಿಷ್ಟ ಅಂಶವಾಗಿದೆ.

ಮಹಾಮಂಟಪದ ಕೆತ್ತನೆ ಕೆಲಸವಂತೂ ಅಸದಳ, ಅನ್ಯಾದೃಶ್ಯ. ಇಲ್ಲಿ ವಿಜಯನಗರದ ಶಿಲ್ಪಿಗಳ ಅತ್ಯಂತ ನಾಜೂಕಾದ ಮತ್ತು ನವಿರಾದ ಶಿಲ್ಪಕಲಾ ಕೌಶಲ್ಯವನ್ನು ಕಾಣಬಹುದು. ಮಂಟಪದ ಅಧಿಷ್ಠಾನದ ಮೇಲೆ ಕೆತ್ತಿರುವ ಕುದುರೆಗಳು, ಸೈನಿಕರು ಮತ್ತು ಹಂಸಗಳ ಸಾಲು ಚಿತ್ರಗಳು ಬಹಳ ಚಮತ್ಕಾರದಿಂದ ಕೂಡಿ ಜೀವತಳೆದಿವೆ.

ಸಂಗೀತ ಕಂಬಗಳು

ಈ ಮಂಟಪದಲ್ಲಿ ೫೬ ಕಂಬಗಳಿದ್ದು ಅದರಲ್ಲಿ ೧೬ ಕಂಬಗಳು ಮಧ್ಯದ ಅಂಕಣದಲ್ಲಿವೆ. ಉಳಿದ ೪೦ ಕಂಬಗಳು ಮಂಟಪದ ನಾಲ್ಕು ಬದಿಗಳಲ್ಲಿ ಹೊರಗಡೆ ಮುಖ ಮಾಡಿ ನಿಂತಿವೆ. ಈ ಕಂಬಗಳು ಕ್ರಿಯಾಪ್ರಧಾನ ಶಿಲ್ಪ ವಿನ್ಯಾಸದ ಉತ್ಕೃಷ್ಟ ಮಾದರಿಗಳಾಗಿವೆ. ಒಂದೇ ಅಖಂಡ ಶಿಲೆಯಲ್ಲಿ ಅದ್ಭುತ ರೀತಿಯಲ್ಲಿ ಹಲವು ಸಣ್ಣ ಸಣ್ಣ ಕಂಬಗಳನ್ನು ಬಿಡಿಬಿಡಿಯಾಗಿ ಕೊರೆದು ನಿರ್ಮಿಸಿ, ಅವುಗಳಲ್ಲಿ ಸಪ್ತಸ್ವರಗಳು ಹೊಮ್ಮಿಬರುವಂತೆ ಅಳವಡಿಸಿರುವುದು ಅತ್ಯಂತ ಅಭೂತಪೂರ್ವವಾದ ಅಂಶವೆಂದು ಲಾಂಗ್‌ಹರ್ಸ್ಟ್ ಮತ್ತೊಮ್ಮೆ ಉದ್ಗರಿಸಿದ್ದಾನೆ. ಈ ಕಂಬಗಳ ಅದ್ಭುತ ಕಲ್ಪನೆಯೇ ವಿಜಯನಗರದ ಶೈಲಿಯ ವಿಶಿಷ್ಟ ಅಂಶಗಳಲ್ಲೆಲ್ಲಾ ಪ್ರಧಾನವಾದುದು. ಈ ಅದ್ಭುತ ಸುಂದರ, ಸ್ವರನಿನಾದಿತ ಕಂಬಗಳ ನಡುವೆ ನಿಂತರೆ ಕಿನ್ನರಲೋಕದಲ್ಲೆಲ್ಲೋ ವಿಹರಿಸಿದಂತೆ ಭಾಸವಾದರೆ ಅಚ್ಚರಿಪಡಬೇಕಿಲ್ಲ.

ಮಂಟಪದ ದಕ್ಷಿಣ ಕಡೆಯ ಕಂಬಗಳಲ್ಲಿ ಯಾಳಿಯ ಶಿಲ್ಪಗಳನ್ನು ಮತ್ತು ಉತ್ತರ ಭಾಗದ ಕಂಬಗಳಲ್ಲಿ ನರಸಿಂಹನ ಶಿಲ್ಪಗಳನ್ನು ಪ್ರಮುಖವಾಗಿ ಕಾಣಬಹುದು. ಒಳಭಾಗದ ಕಂಬಗಳಲ್ಲಿ ಸುಂದರ ನರ್ತಕಿಯರ ಮತ್ತು ವಾದ್ಯಗಾರರ ಶಿಲ್ಪಗಳನ್ನು ಕಾಣಬಹುದು.

ಅರ್ಧ ಮಂಟಪದ ಮೇಲ್ಛಾವಣಿಯು ಹಾಳಾಗಿದೆ. ಕಮಲಗಳ ಚಿತ್ರಗಳಿಂದ ಕೂಡಿದ ಛಾವಣಿಯ ಬಂಡೆಗಳು ಈಗ ಕೆಳಗಡೆ ಬಿದ್ದಿವೆ. ಗರ್ಭಗುಡಿಯ ಮೇಲೆ ಇಟ್ಟಿಗೆಯಿಂದ ಕಟ್ಟಿರುವ ಶಿಖರವು ಬಹಳ ಜೀರ್ಣಾವಸ್ಥೆಯಲ್ಲಿದೆ. ದೇವರಿಲ್ಲದ ಗರ್ಭಗುಡಿಯಲ್ಲಿ ಕೇವಲ ಎರಡು ಪೀಠಗಳನ್ನು ಕಾಣಬಹುದಾಗಿದೆ.

ಕಲ್ಲಿನ ರಥ


ಮಹಾಮಂಟಪದ ಎದುರಿಗೆ ಹಂಪೆಯಲ್ಲೇ ಅತ್ಯಾಶ್ಚರ್ಯಕರವಾದ ಮಹಾದ್ಭುತವೊಂದು ಕಣ್ಣಿಗೆ ಬೀಳುತ್ತದೆ. ಅದೇ ಏಕ ಶಿಲೆಯಲ್ಲಿ ಕಡೆದು ನಿರ್ಮಿಸಿರುವ ೨೬ ಅಡಿ ಎತ್ತರದ ಕಲ್ಲಿನ ರಥ. ಇದೊಂದು ಸಂಕೀರ್ಣ, ಸ್ವಾರಸ್ಯಕರ ಶಿಲ್ಪ. ಶಿಲೆಯಲ್ಲಿ ರಥದ ಪ್ರತಿಕೃತಿಯನ್ನು ಅತ್ಯಂತ ಸೂಕ್ಷ್ಮ ವಿವರಗಳ ಸಹಿತ ಶಿಲ್ಪಿ ಕಂಡರಿಸಿದ್ದಾನೆ. ರಥವನ್ನು ಸುಂದರ ಗಜಗಳೆರಡು ಎಳೆಯುತ್ತಿರುವಂತೆ ಕೆತ್ತಿರುವುದಂತೂ ವಿಶೇಷ ಕಂಡರಿಕೆ. ಕಲ್ಲಿನ ಇರಚಿಯ ತುದಿಯಲ್ಲಿ ತಿರುಗುವ, ಕಮಲದ ಆಕಾರದಲ್ಲಿ ಕೆತ್ತಲಾಗಿರುವ ಚಿತ್ರಗಳು ಕಲ್ಪನೆಗೂ ಮೀರಿದ ಶಿಲ್ಪ ಚಮತ್ಕೃತಿಯಾಗಿವೆ. ಕಲಾ ವಿಮರ್ಶಕರು ಜಗತ್ತಿನ ಆಶ್ಚರ್ಯಗಳಲ್ಲಿ ಇದೂ ಒಂದೆಂದೂ ಪರಿಗಣಿಸಿದ್ದಾರೆ.

ದೇವಾಲಯದ ಆವರಣದಲ್ಲೇ ಆಗ್ನೇಯ ದಿಕ್ಕಿನಲ್ಲಿರುವ ಶಿಲಾ ಮಂಟಪವು ಬಹಳ ಸುಂದರವಾಗಿದ್ದು, ಲೋಕೋತ್ತರವಾದ ತನ್ನ ಶಿಲ್ಪಕಲಾ ಪ್ರೌಢಿಮೆಯಲ್ಲಿ ಮಹಾಮಂಟಪವನ್ನೇ ಮೀರಿಸುವಂತಿದೆ. ಇದನ್ನು ಕ್ರಿ.ಶ. ೧೫೫೪ರಲ್ಲಿ ಸದಾಶಿವರಾಯನು ವಿಜಯನಗರವನ್ನು ಆಳುತ್ತಿರುವಾಗ ನಿರ್ಮಿಸಲಾಯಿತೆಂದು ಶಾಸನವೊಂದು ತಿಳಿಸುತ್ತದೆ. ಈ ಮಂಟಪದ ಛಾವಣಿಯು ವರ್ಣಚಿತ್ರಗಳಿಂದ ಕೂಡಿತ್ತು ಎಂಬುದನ್ನು ಇಂದಿಗೂ ಉಳಿದು ಬಂದಿರುವ ಕುರುಹುಗಳಿಂದ ಕಾಣಬಹುದು. ಇದನ್ನು ವಿಠ್ಠಲನ ಡೋಲೋತ್ಸವಕ್ಕೆ (ಉಯ್ಯಾಲೆ) ಉಪಯೋಗಿಸುತ್ತಿದ್ದುದಾಗಿ ತಿಳಿದುಬರುತ್ತದೆ.

ನೈಋತ್ಯ ದಿಕ್ಕಿನಲ್ಲಿಯೂ ಮತ್ತೊಂದು ಮಂಟಪವಿದೆ. ಕಲ್ಯಾಣಮಂಟಪವೆಂದು ಕರೆಯಲಾಗುವ ನೂರು ಕಂಬಗಳ ಈ ಮಂಟಪವನ್ನು ಕೃಷ್ಣದೇವರಾಯನು ಕ್ರಿ. ಶ. ೧೫೧೬ರಲ್ಲಿ ನಿರ್ಮಿಸಿದನೆಂದು ಅಲ್ಲಿನ ಶಾಸನವೊಂದು ತಿಳಿಸುತ್ತದೆ. ಈ ಮಂಟಪವು ಸುಂದರ, ಸರಳ ಶಿಲ್ಪದಿಂದ ಕೂಡಿ ಆಕರ್ಷಕವಾಗಿದೆ.

ಪುರಂದರ ಮಂಟಪ

ದೇವಾಲಯಕ್ಕೆ ಅನತಿ ದೂರದಲ್ಲೇ ತುಂಗಭದ್ರೆಯ ದಡದಲ್ಲಿ ಮಂಟಪವೊಂದಿದೆ. ಪುರಂದರದಾಸರು ಈ



೧



೨

೧. ವಿಜಯನಗರ ಕಾಲದ ಕಲಾಶೈಲಿಗೆ ಉತ್ತಮ ಮಾದರಿಯೆನಿಸಿರುವ ವಿಜಯವಿಠ್ಠಲ ದೇವಾಲಯದ ಯಾಳಿಸ್ತಂಭಗಳಲ್ಲೊಂದು

೨. 'ಭಾಗವತ'ದಲ್ಲಿ ಉಕ್ತವಾಗಿರುವ ಕೃಷ್ಣನಿಗೆ ಸಂಬಂಧಿಸಿದ ಕತೆಗಳನ್ನು ಸ್ತಂಭದ ಮೇಲೆ ಚಿತ್ರಿಸಿರುವುದು

೧



೨



೧. ಗೌಡನಹಳ್ಳಿಯ ಶಿಲಾಶಾಸನ (ಈಗ ಇರುವಂತೆ)
(ಸೌಜನ್ಯ : ಶ್ರೀ ಮಹ್ಮದ್ ರಝುಡ್. ಜಫ್ರುಲ್ಲಾ ಮತ್ತು ಶ್ರೀ ಎಲ್. ನಾಗರಾಜು, ಚಿತ್ರದುರ್ಗ)

೨. ಶಿಲಾಶಾಸನದ ಪ್ರತಿ
(ಚಿತ್ರ : ಶ್ರೀ ಭವಾನಿ ಸ್ಟುಡಿಯೋ, ಚಿತ್ರದುರ್ಗ)

ಮಂಟಪದಲ್ಲೇ ವಾಸಿಸುತ್ತಿದ್ದರೆಂದು ಹೇಳಲಾಗುತ್ತಿದ್ದು ಅಲ್ಲಿಯ ಕಂಬವೊಂದರ ಮೇಲೆ ಅವರ ಮೂರ್ತಿಯನ್ನು ಕೆತ್ತಲಾಗಿದೆ.

ಹಂಪೆಯ ಪ್ರವಾಸಿಗಳು ಸಾಮಾನ್ಯವಾಗಿ ಈ ಮಂಟಪಕ್ಕೆ ತಪ್ಪದೆ ಭೇಟಿ ನೀಡುತ್ತಾರೆ. ದಾಸರು ತಮ್ಮ ಅಂತ್ಯಕಾಲದಲ್ಲಿ ಒಂದು ದಿನ ತಾಳ ತಂಬೂರಿಗಳನ್ನು ನುಡಿಸುತ್ತಾ, ಅವರ ಆರಾಧ್ಯದೈವ ವಿಠ್ಠಲನನ್ನು ಭಜಿಸುತ್ತಾ ತುಂಬಿ ಹರಿಯುತ್ತಿದ್ದ ತುಂಗಭದ್ರಾ ನದಿಯೊಳಗೆ ನಡೆದು ಈ ಪ್ರಪಂಚದಿಂದ ಮರೆಯಾದರೆಂದು ಐತಿಹ್ಯವೊಂದು ಹೇಳುತ್ತದೆ.

ಬಿ. ರಾಜಶೇಖರಪ್ಪ

ಗೌಡನಹಳ್ಳಿಯ ಶಿಲಾಶಾಸನ: ಒಂದು ಪುನರಧ್ಯಯನ

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕು, (ಕಸಬಾ ಹೋಬಳಿ) ಗೌಡನಹಳ್ಳಿಯಲ್ಲಿ, ಚಿತ್ರದುರ್ಗದ ಕೊನೆಯ ಪಾಳೆಯಗಾರ ದೊರೆ ಕೊನೆಯ (ಅಥವಾ ಐದನೆಯ) ಮದಕೆ(ೕ)ರಿ ನಾಯಕನ (ಶಾಸನಗಳಲ್ಲಿ 'ಮದಕೆರಿ' 'ಮದಕೇರಿ', 'ಮದಿಕೆರಿ' ಇತ್ಯಾದಿ ರೂಪಗಳೆ ಇರುವುದರಿಂದ ಅಂಥ ರೂಪವನ್ನೇ ಬಳಸುವುದು ಸೂಕ್ತ ಎಂದು ಇಲ್ಲಿ ಹಾಗೇ ಬಳಸಿರುತ್ತೇನೆ.) ತಂದೆಯ ಹೆಸರಿರುವ ಕ್ರಿ. ಶ. ೧೭೫೬ ರ ಒಂದು ಶಿಲಾಶಾಸನ, ಶ್ರೀ ಝಡ್. ಮಹಮ್ಮದ್ ಜಫ್ರುಲ್ಲಾ ಅವರಿಂದ ಹೊಸದಾಗಿ ಪತ್ತೆಯಾಗಿದೆ ಎಂಬ ವರದಿಯೊಂದು ಈಚೆಗೆ (ಪ್ರಜಾವಾಣಿ, ದಿ. ೧೯–೮–೧೯೮೬) ಬಂದಿತಷ್ಟೆ. ಇದರಿಂದ ಆ ದೊರೆಯ ತಂದೆಯ ಹೆಸರು, ಈವರೆಗೆ ತಿಳಿದಿದ್ದಂತೆ 'ಜಾನಕಲ್ಲಿನ ತೊದಲು ಬರಮಣ್ಣನಾಯಕ' ಅಲ್ಲ, 'ದುಗಣಪಣ ನಾಯಕ' ಎಂದು (ಇಲ್ಲಿ ಸ್ವಲ್ಪ ಮುದ್ರಣ ದೋಷ ಆಗಿರಲೂಬಹುದು) ತಿಳಿದು ಬರುವುದಾಗಿ ಹೇಳಲಾದುದರಿಂದ ನಿಜವಾದ ಹೆಸರಿನ ಬಗೆಗೆ ಓದುಗರಲ್ಲಿ ಒಂದು ಜಿಜ್ಞಾಸೆ ಮೂಡುವಂತಾಗಿದೆ.

ಈ ವರದಿ ಓದಿದಾಗ, ಹಿಂದೆ ೧೯೦೩ ರಲ್ಲಿ, ಶ್ರೀ ಬಿ. ಎಲ್. ರೈಸ್ ಅವರು, ಅದೇ ಹಳ್ಳಿಯ, ಅದೇ ಕ್ರಿ. ಶ. ೧೭೫೬ ರ, ಅದೇ ದೊರೆಯ ತಂದೆಯ ಹೆಸರು 'ದುಗಪಣಯಕ' ಎಂದು ಬಂದಿದ್ದ ಒಂದು ಶಾಸನವನ್ನು (ಎ. ಕ., ಸಂ. ೧೧, ಹಿರಿಯೂರು ೫೩) ಪ್ರಕಟಿಸಿದ್ದುದು ನನ್ನ ಗಮನಕ್ಕೆ ಬಂತು. ಕ್ರಿ. ಶ. ೧೭೫೬ ರಲ್ಲಿ ದೊರೆ ಮದಕೆ(ೕ)ರಿ ನಾಯಕ ಯಾರೋ ಒಬ್ಬರ ಹೆಸರಲ್ಲಿ ಹಿರಿಯೂರಲ್ಲಿ ಮಾಡಿಸಿದ್ದ ಅನ್ನಛತ್ರದ ಮಠಕ್ಕೆ, ತಮ್ಮ ಹಿರಿಯರಿಗೆ ಪುಣ್ಯವಾಗಲಿ ಎಂದು, ಅವನ ಆಳ್ವಿಕೆಯ ರಾಜ್ಯದ ಹಿರಿಯೂರು ಸೀಮೆಯ ಗೌಡನಹಳ್ಳಿ ಗ್ರಾಮವನ್ನು ದಾನ ನೀಡಿದ–ಎಂದು ಹೇಳುವ ಶಾಸನ ಅದು. ರೈಸರು ಪ್ರಕಟಿಸಿದ್ದುದು ದೊರೆಯು ಅನ್ನಛತ್ರದ ಮಠಕ್ಕೆ ದಾನ ಕೊಟ್ಟುದರ ಶಾಸನ, ಆದರೆ, ಜಫ್ರುಲ್ಲಾ ಅವರು ಪತ್ತೆ ಮಾಡಿದುದು ಊರು ಕಟ್ಟಿಸಿ ದಾನ ಮಾಡಿದುದರ ಶಾಸನ ಎನ್ನಲಾಗಿತ್ತು. ಇದೊಂದು ಅಂಶ ಬಿಟ್ಟರೆ ಉಳಿದೆಲ್ಲ ಅಂಶಗಳಲ್ಲಿ ಸಾಮ್ಯ ಇರುವುದು ಕಂಡಿತು. ಹೀಗಾಗಿ ಈ ಶಾಸನ ಕುರಿತು ತೀವ್ರ ಕುತೂಹಲ ಮತ್ತು ಶಂಕೆ ಮೂಡಿದುವು.

ಕೊನೆಯ ಮದಕೆ(ೕ)ರಿ ನಾಯಕನು (೧೭೫೪-೭೯) (ಹೊಸದುರ್ಗ ತಾಲ್ಲೂಕಿನಲ್ಲಿರುವ) ಜಾನಕಲ್ಲು ಗ್ರಾಮದ ತೊದಲು ಬರಮಣ್ಣನಾಯಕನ ಮಗನಿದ್ದು, ಚಿತ್ರದುರ್ಗದ ದೊರೆ ೨ನೇ ಕಸ್ತೂರಿ ರಂಗಪ್ಪನಾಯಕನ ಮರಣಾನಂತರದಲ್ಲಿ, (ಅವನಿಗೆ ದತ್ತು ಮಗನೆನ್ನಿಸುವಂತೆ) ಉತ್ತರಾಧಿಕಾರಿಯಾಗಿ ಮಾಡಲ್ಪಟ್ಟನೆಂದು ಪಾಳೆಯಗಾರರ ಚರಿತ್ರೆಯ ಹಸ್ತಪ್ರತಿಗಳು ಮುಂತಾದವು ಹೇಳುತ್ತವೆ. ಜನ್ಮದಾತ ತಂದೆಯೊಬ್ಬನಿದ್ದರೂ ಪಾಳೆಯಗಾರರು ತಮ್ಮ 'ದತ್ತು ಸಂಬಂಧದ ತಂದೆ'ಯನ್ನೇ ತಮ್ಮ ತಂದೆಯೆಂಬಂತೆ ಉಲ್ಲೇಖಿಸುತ್ತಿದ್ದುದು ಸಂಪ್ರದಾಯ. ಅದರಂತೆಯೆ ಕೊನೆಯ ಮದಕೆ(ೕ)ರಿ ನಾಯಕನು ಸಹ ತನ್ನ ದತ್ತು ಸಂಬಂಧದ ತಂದೆ ಇಮ್ಮಡಿ ಕಸ್ತೂರಿ ರಂಗಪ್ಪನಾಯಕನ ಹೆಸರನ್ನೆ ತನ್ನ ತಂದೆಯ ಹೆಸರೆಂಬಂತೆ ತನ್ನ ಶಾಸನ,

ನಿರೂಪ, ಲೇಖನಗಳಲ್ಲಿ ಉಲ್ಲೇಖಿಸಿರುವುದುಂಟು. ಹಾಗೇ ಇಲ್ಲೂ ಅದೇ ಹೆಸರನ್ನು (ಅಂದರೆ – ರಂಗಪ್ಪ ನಾಯಕ ಎಂಬುದನ್ನು-ರಂಗಪನಾಯಕ ಎಂದೇನಾದರೂ) ಉಲ್ಲೇಖಿಸಿದ್ದು, ಅದು ಕೆತ್ತನೆಯ ತಪ್ಪಿನಿಂದ ಅಥವಾ ಓದಿಕೆಯ ತಪ್ಪಿನಿಂದ ('ರಂ' ಇದ್ದುದು 'ದು' ಎಂಬಂತಾಗಿ) 'ದುಗಪಣಯಕ' ಅಥವಾ 'ದುಗಣಪಣ ನಾಯಕ' ಎಂದಾಗಿರಬಹುದೆ?- ಎಂಬ ಶಂಕೆಯೂ ಹುಟ್ಟಿತು. ಇಂಥ ಲಿಪಿದೋಷ ಪಾಠದೋಷಗಳು ಹಲವಾರು ಶಾಸನಗಳಲ್ಲಿ ಆಗಿರುವುದುಂಟು. ಅಂಥ ಕೆಲವನ್ನು ಈಗಾಗಲೇ ನಾನು ಗುರುತಿಸಿದ್ದುದರಿಂದ ಆ ಶಂಕೆ ಇನ್ನೂ ಬಲವಾಯಿತು.[1]

ಅಂತೂ ಇಂಥ ಎಲ್ಲ ಶಂಕೆಗಳಿಗೂ ಸರಿಯಾದ ಉತ್ತರ, ಪರಿಹಾರ, ಶಾಸನದ ಪ್ರತ್ಯಕ್ಷ ಮರುಪರಿಶೀಲನೆಯಿಂದ ಮಾತ್ರ ಸಾಧ್ಯ. ಆದುದರಿಂದ ನಾನು ಆ ಹಳ್ಳಿಗೆ ಹೋಗಿ ಶಾಸನದ ಪುನರಭ್ಯಾಸವನ್ನು ಕೈಗೊಳ್ಳಬೇಕಾಯಿತು.[2] ನಾನು ಇದರ ಮರುಪರಿಶೀಲನೆ ಕೈಗೊಂಡಿದ್ದಾಗ, ಈ ಶಾಸನ ಪತ್ತೆ ಕುರಿತು ಒಂದು ಪ್ರತಿಕ್ರಿಯೆಯೂ ಬಂದಿತು (ಪ್ರಜಾವಾಣಿ, ದಿ. ೨೪_೮_೧೯೮೬). ಆದರಲ್ಲಿ ಶ್ರೀ ಲಕ್ಷ್ಮಣ್ ತೆಲಗಾವಿ ಅವರು ಈ ಶಾಸನ (ಈಹಿಂದೆ ನಾನು ಹೇಳಿದ) ರೈಸರಿಂದ ಪ್ರಕಟವಾದ ಶಾಸನವೇ ಎಂದೂ ಶ್ರೀ ಆರ್.ಎಸ್. ಸಾಲೆತ್ತೂರ್ (ಅನೇಕರು ಬರೆಯುವಂತೆ 'ಸಾಲತೊರೆ', 'ಸಾಲೆತ್ತೊರೆ' ಅಲ್ಲ) ಅವರು 'ದುರುಗಪ್ಪ ನಾಯಕ' ಹೆಸರಿನ ಬಗೆಗೆ ಹಿಂದೆಯೇ ೧೯೪೦ ರಲ್ಲಿ (ಮುಂಬಯಿ ವಿಶ್ವವಿದ್ಯಾನಿಲಯದ ನಿಯತಕಾಲಿಕೆಯಲ್ಲಿ) ವಿವೇಚಿಸಿ, ಬಲವಾದ ಊಹೆಗಳನ್ನು ಮಾತ್ರ ಮುಂದಿಟ್ಟಿದ್ದರೆಂದೂ ರೈಸರ ಪಾಠದಲ್ಲಿನ 'ಕಸ್ತುರ್ರಿ ದುಗಪಣಯಕ' ಎಂಬುದು 'ಕಸ್ತೂರಿ ರಂಗಪ್ಪ ನಾಯಕ' ಎಂದು ಭಾವಿಸಲು ಆಸ್ಪದವಿದೆಯೆಂದೂ ಬರೆದಿದ್ದಾರೆ. ಹಾಗೆಯೇ, 'ಗೌಡನಹಳ್ಳಿ ಶಾಸನಪಾಠದ ಮರುಪರಿಶೀಲನೆಯ ತರುವಾಯ ರಾಜಾ ಮದಕರಿ ನಾಯಕನ ತಂದೆಯ ವಿಚಾರದಲ್ಲಿ ಸ್ಪಷ್ಟವಾಗಿ ಹೇಳಲು ಸಾಧ್ಯವಾಗಬಹುದೇ ಹೊರತು ಅವಸರದ ನಿರ್ಣಯ ಸಲ್ಲದು' ಎಂದೂ ಅವರು ಹೇಳಿದ್ದಾರೆ. ಅವರ ವಿಚಾರ ಸರಣಿಯೂ ನನ್ನ ವಿಚಾರ ಸರಣಿಯ ದಾರಿಯಲ್ಲೇ ಇದ್ದಿತಲ್ಲದೆ ಶಾಸನ ಪಾಠದ ಮರುಪರಿಶೀಲನೆಯಾಗದೆ ಯಾವುದನ್ನೂ ನಿರ್ದಿಷ್ಟವಾಗಿ ಹೇಳಲಾಗದು ಎಂಬ ನಿಲವನ್ನೇ ವ್ಯಕ್ತಪಡಿಸಿದೆ.

ಪುನರಧ್ಯಯನದ ಫಲಿತಾಂಶಗಳು

ಹಿಂದೆ ಹೇಳಿದಂತೆ ನಾನು ಕೈಕೊಂಡ ಮರುಪರಿಶೀಲನೆಯ ಫಲಿತಾಂಶಗಳನ್ನು, ಆ ಶಾಸನದ ಪ್ರತಿಯ ಛಾಯಾಚಿತ್ರದೊಂದಿಗೆ ಇಲ್ಲಿ ಕೊಡುತ್ತಿದ್ದೇನೆ :

೧. ಗೌಡನಹಳ್ಳಿಗೆ ಹೋಗಿ ಶಾಸನದ ಬಗ್ಗೆ ವಿಚಾರಿಸಿದಾಗ ಆ ಊರಲ್ಲಿ ಇರುವುದು ಒಂದೇ ಶಾಸನ ಎಂದು ತಿಳಿಯಿತು. ಹಾಗೂ ಈ ಶಾಸನ ಇರುವ ಜಾಗ, ಅದರ ಪ್ರಮಾಣ, ಪಾಠ ಇವನ್ನು ನೋಡುತ್ತಿದ್ದಂತೆಯೇ ಹಿಂದೆ ರೈಸರು ಪ್ರಕಟಿಸಿದ್ದ ಶಾಸನವೇ ಇದು, ಬೇರೆಯಲ್ಲ ಎಂದು ಸ್ಪಷ್ಟವಾಯಿತು. ಆದುದರಿಂದ ಇದು ಈಗ ಹೊಸದಾಗಿ ಪತ್ತೆಯಾಗಿರುವ ಶಾಸನ ಎಂದು ಹೇಳಿರುವುದು ಸರಿಯಲ್ಲ.

ಈ ಶಾಸನವು ಬಲಭಾಗದಲ್ಲಿ ಮಧ್ಯೆ ಓರೆಯಾಗಿ ಒಡೆದು ಹೋಳಾಗಿರುವುದಲ್ಲದೆ, ಕೆಳಭಾಗದ ಚಕ್ಕಳ ಪೂರ್ಣ ಸುಲಿದು ಹೋಗಿದೆ. ಹೀಗಾಗಿ ಕೆಳಭಾಗದ ಬರಹ ಪೂರ್ಣ ನಷ್ಟವಾಗಿದ್ದು ಮೇಲಿನ ಅರ್ಧಭಾಗದ ಬರಹ ಮಾತ್ರ ಈಗ ಉಳಿದಿದೆ. ಇದು ಹೀಗಾಗಲಿಕ್ಕೆ ಈಗ್ಗೆ ಕೆಲವು ವರ್ಷಗಳ ಹಿಂದೆ ಇಲ್ಲಿ ಆದ ಒಂದು ಬೆಂಕಿ–ಆಕಸ್ಮಿಕ ಕಾರಣ ಎಂದು ಗ್ರಾಮಸ್ಥರಿಂದ ತಿಳಿಯಿತು. ಬರಹದ ಮೇಲಿನ ಅರ್ಧಭಾಗ ಮಾತ್ರ ಉಳಿದಿದ್ದರೂ ಬಹುಮುಖ್ಯವಾದ ಭಾಗವೇ ಉಳಿದಿದೆ ಎನ್ನುವುದು ಸಮಾಧಾನದ ಸಂಗತಿ.

---

1. ನೋಡಿ : ೧. 'ಚಂದ್ರವಳ್ಳಿ ಶಾಸನದ ಮೇಲೆ ಹೊಸ ಬೆಳಕು', ಕಸಾಪಪ' ೬೯–೨, ಡಿಸೆಂಬರ್ ೧೯೮೪, ಪುಟ ೮೯-೧೦೦ ; ಹಾಗೂ ೨. 'ಶಾಸನಗಳ ಮರುಪರಿಶೀಲನೆ : ಒಂದು ತೀವ್ರ ಅಗತ್ಯ'–'ಹರತಿ ಸಿರಿ', ಸಂ. : ಲಕ್ಷ್ಮಣ್ ತೆಲಗಾವಿ–ಈ ಸಂಪುಟ ಇಷ್ಟರಲ್ಲೇ ಹೊರಬೀಳಲಿದೆ.
2. ಈ ಶಾಸನದ ಪುನರಭ್ಯಾಸ ಕುರಿತ ಈ ಲೇಖನದ ಸಂಕ್ಷಿಪ್ತರೂಪವನ್ನು ನಾನು ಆಗಲೇ 'ಪ್ರಜಾವಾಣಿ'ಗೆ ಕಳುಹಿಸಿದೆನಾದರೂ ಅದು ಪ್ರಕಟವಾಗಲಿಲ್ಲ.

೨. ಇದು ಹಿಂದೆ ರೈಸರಿಂದ ಪ್ರಕಟವಾಗಿದ್ದ ಶಾಸನ ಎನ್ನುವಲ್ಲಿಯೇ, ಇದು ಜಫ್ರುಲ್ಲಾ ಅವರು ತಿಳಿಸಿರುವಂತೆ ದೊರೆಯು ಊರು ಕಟ್ಟಿಸಿ ದಾನ ಮಾಡಿದ ಶಾಸನ ಅಲ್ಲ,-ತಾನು ಕಟ್ಟಿಸಿದ ಅನ್ನಛತ್ರದ ಮಠಕ್ಕೆ (ಆಗಲೇ ಇದ್ದ ಗೌಡನಹಳ್ಳಿಯನ್ನು) ದಾನ ನೀಡಿದ ಶಾಸನ—ಎನ್ನುವುದು ಕೂಡ ಸ್ಪಷ್ಟಪಡುತ್ತದೆ.

೩. ಈ ಹಿಂದೆ ದೊರೆಯ ತಂದೆಯ ಹೆಸರನ್ನು ಕುರಿತಂತೆ ನನಗೆ ಮೂಡಿದ್ದ ಶಂಕೆ ಹಾಗೂ ಲಕ್ಷ್ಮಣ್ ತೆಲಗಾವಿ ಅವರು (ಆರ್. ಎನ್. ಸಾಲೆತ್ತೂರ್ ಅವರ ಬಗ್ಗೆ ಪ್ರಸ್ತಾಪಿಸುತ್ತಾ) ವ್ಯಕ್ತಪಡಿಸಿರುವ ಊಹೆ–ಸರಿಯಾದವು ಎಂಬುದನ್ನು ಪುನರ್ ಪರಿಶೀಲನೆಯು ದೃಢಪಡಿಸಿದೆ. ಅಂದರೆ ಈ ಶಾಸನದಲ್ಲಿ ದೊರೆಯ ತಂದೆಯ ಹೆಸರು ರೈಸರಂತೆ 'ದಗಪಣಯಕ' ಎಂದಾಗಲಿ, ಅಥವಾ ಜಫ್ರುಲ್ಲಾರಂತೆ 'ದುಗಣಪಣನಾಯಕ' ಎಂದಾಗಲಿ ಇಲ್ಲ, 'ರಂಗಪಣಯಕ' ಎಂದಿದೆ. ಅಂದರೆ ಇಲ್ಲಿರುವ ಹೆಸರಿನ ಪೂರ್ತಿ ಪಾಠ 'ಕಸ್ತರ್ರಿ ರಂಗಪಣಯಕ' ಎಂದು. ಇದು 'ಕಸ್ತೂರಿ ರಂಗಪ್ಪನಾಯಕ' ಎಂಬುದಕ್ಕೆ ಶಾಸನಕಾರರಿಂದ ಆಗಿರುವ ಅಪಲಿಖಿತ. ಇಲ್ಲಿ ಹೆಸರಿನ ಸಮಸ್ಯೆಗೆ ಮುಖ್ಯ ಕಾರಣವೆಂದರೆ ಆರಂಭದ ಅಕ್ಷರದ ಕೆತ್ತನೆಯೆ. (ಚಿತ್ರದಲ್ಲಿ, ಏಳನೆಯ ಪಂಕ್ತಿಯಲ್ಲಿ, ಅರ್ಧದ ನಂತರದಲ್ಲಿ ಬರುವ ಈ ಹೆಸರಿನ ಲಿಪಿಯನ್ನು ಗಮನಿಸಿ).

ಇಲ್ಲಿ 'ರಂ' ಎಂಬುದರಲ್ಲಿನ 'ರ'ದ ಕೆಳಭಾಗ ದುಂಡಾಗಿಲ್ಲದಿರುವುದೆ ಅದನ್ನು 'ದ'ಕಾರ ಎಂದು ತಿಳಿಯಲು ಕಾರಣವಾಗಿದೆ. ಈ ಶಾಸನದ ಲಿಪಿಯಲ್ಲಿ ಹಲವೆಡೆಗಳಲ್ಲಿ ಬರುವ 'ದ'ಕಾರದ ಕೆತ್ತನೆಯನ್ನು ನೋಡಿದರೆ, ಎಲ್ಲ ಕಡೆಯಲ್ಲೂ ಅದರ ಕೆಳಭಾಗ ಸ್ಪಷ್ಟವಾಗಿ ಮಧ್ಯದಲ್ಲಿ ಒಡೆದು ಎರಡು ದುಂಡು ತಳಗಳನ್ನು ಹೊಂದಿರುವುದು ಕಾಣುತ್ತದೆ. ಆದರೆ ಇಲ್ಲಿ ಹಾಗಿಲ್ಲ. ಮತ್ತು 'ರ' ಕಾರದ ಕೆಳಭಾಗವು ನಸು ಚಪ್ಪಟೆಯಾಗಿರುವಂತೆ ಕೆತ್ತಲಾಗಿರುವುದನ್ನು ಕೆಲವೆಡೆ ಕಾಣಬಹುದು. ಇದರಿಂದ ಇಲ್ಲಿರುವುದು 'ರ'ವೇ ಎನ್ನುವುದು ನಿಶ್ಚಿತವಾಗುತ್ತದೆ.

ಇನ್ನು ಅದರ ಮುಂದೆ ಇರುವುದು (ಉತ್ವಸೂಚಕವಾದ) ಕೊಂಬು (ು) ಅಲ್ಲ, ಬಿಂದುವಿನ ದುಂಡು ರೇಖೆ (೦). ಇಲ್ಲಿನ ಬರಹದಲ್ಲಿ ಅಲ್ಲಲ್ಲಿ ಬರುವ ಕೊಂಬು ಮತ್ತು ಬಿಂದುಗಳ ಕೆತ್ತನೆಯನ್ನು ಪರಿಶೀಲಿಸಿದರೆ ಇದು ಸ್ಪಷ್ಟವಾಗುತ್ತದೆ. ಎಲ್ಲ ಕಡೆಯಲ್ಲೂ ಕೊಂಬು ಅಕ್ಷರದ ಕೆಳಭಾಗದಲ್ಲಿ ಅಂಟಿಕೊಂಡಿದ್ದು ನಂತರ ಮೇಲಕ್ಕೆ ಹೋದಂತೆ ಕೆತ್ತಲ್ಪಟ್ಟಿದೆ. ಅಲ್ಲದೆ ಅಕ್ಷರದ ತಲೆಕಟ್ಟಿಗೆ ಅಂಟಿಕೊಂಡಂತೆ ಕೊಂಬಿನ ಕೆತ್ತನೆ ಎಲ್ಲೂ ಇರುವುದಿಲ್ಲ. ಇಲ್ಲಿನ ದುಂಡು ರೇಖೆ ಮೇಲು ಭಾಗದಲ್ಲಿ ಪೂರ್ಣ ಕೂಡಿಕೊಂಡಿಲ್ಲದಂತಿರುವುದೇ ಇದು ಕೊಂಬು ಎಂದು ತಿಳಿಯಲು ಕಾರಣವಾಗಿದೆ. ಆದರೆ ಕೊಂಬಿನ ದುಂಡುತನಕ್ಕಿಂತ ಇಲ್ಲಿನ ರೇಖೆಯ ದುಂಡುತನ ಹೆಚ್ಚಾಗಿರುವುದಲ್ಲದೆ, ಅದನ್ನು ಪೂರ್ಣಗೊಳಿಸಲು ಮೇಲೆ ಒಂದು ಚಿಕ್ಕ ಕೂಡುಗೆರೆ ಮೂಡಿಸಿರುವುದನ್ನು ನೋಡಬಹುದು. ಆದುದರಿಂದ ಇಲ್ಲಿರುವುದು ಕೊಂಬು ಅಲ್ಲ, ಬಿಂದು ಎಂದು ಸ್ಪಷ್ಟಪಡುತ್ತದೆ.

ಈ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿದ್ದಿದ್ದರೆ 'ದುಗಪಣಯಕ'ನಿಗೆ ಬದಲು, 'ರಂಗಪಣಯಕ'ನೇ ರೈಸರಿಗೆ ಹಿಂದೇ ಕಂಡಿರುತ್ತಿದ್ದ. ಪಾಳೆಯಗಾರ ದೊರೆಗಳು ತಮ್ಮ ಜನ್ಮದಾತ ತಂದೆಯೊಬ್ಬನಿರುತ್ತಿದ್ದರೂ ತಮ್ಮ ಪೂರ್ವಾಧಿಕಾರಿಯಾದ 'ದತ್ತು ಸಂಬಂಧದ ತಂದೆ'ಯನ್ನೇ ತಮ್ಮ ತಂದೆಯೆಂಬಂತೆ ಉಲ್ಲೇಖಿಸುತ್ತಿದ್ದ ಸಂಪ್ರದಾಯಕ್ಕೆ ಅನುಸಾರವಾಗಿಯೇ ಈ ಶಾಸನವೂ ಇದೆ, ಎನ್ನುವುದು ಇದರಿಂದ ವ್ಯಕ್ತವಾಗುತ್ತದೆ. ಕೊನೆಯ ಮದಕೆ(ೇ)ರಿ ನಾಯಕನು ತನ್ನ ಇತರ ಶಾಸನ, ನಿರೂಪ, ಲೇಖನಗಳಲ್ಲಿ ಹೇಗೋ ಹಾಗೆ ಇಲ್ಲೂ ತನ್ನ 'ದತ್ತು ಸಂಬಂಧದ ತಂದೆ'ಯನ್ನೇ ತನ್ನ ತಂದೆಯೆಂಬಂತೆ ಉಲ್ಲೇಖಿಸಿದ್ದಾನೆ. ಆದುದರಿಂದ 'ದುರುಗಪ್ಪನಾಯಕ' ಇತ್ಯಾದಿ ಹೆಸರನ್ನೂ ಈ ಸಂಬಂಧದ ಊಹೆಗಳನ್ನೂ ಕೈಬಿಡಬೇಕಾಗುತ್ತದೆ.

೪. ಗೌಡನಹಳ್ಳಿ ಗ್ರಾಮಸ್ಥರಿಂದ ತಿಳಿದು ಬಂದ ಇನ್ನೊಂದು ಅಂಶವೂ ಇಲ್ಲಿ ಗಮನಾರ್ಹ. ಈ ಗ್ರಾಮದ ಬಳಿಯಲ್ಲಿ ಒಂದು ದೊಡ್ಡ ಕೆರೆ ಇದೆ. ಇದನ್ನು (ಈ ಊರನ್ನು ಆಳಿದ) ರಂಗಪ್ಪನಾಯಕ ಎನ್ನುವ ರಾಜನೊಬ್ಬ ಕಟ್ಟಿಸಿದ್ದನಂತೆ ಎಂದು (ತಮ್ಮ ಹಿರಿಯರು ಹೇಳುತ್ತಿದ್ದುದಾಗಿ) ಇಲ್ಲಿನ ನಿರಕ್ಷರಕುಕ್ಷಿಗಳಾದ (ಹಾಗೂ ಈ ಶಾಸನದ ವಿಷಯವಾಗಿ ಏನೂ ಅರಿಯದಿರುವ) ಹಳ್ಳಿಗರು ಹೇಳುತ್ತಾರೆ. ಇದು ನಿಜವಿದ್ದರೆ, ಜನ ಹೇಳುವ

ಆ ರಂಗಪ್ಪನಾಯಕ ಶಾಸನದಲ್ಲಿ ಹೇಳಿರುವ (೨ನೇ) ಕಸ್ತೂರಿ ರಂಗಪ್ಪನಾಯಕನೇ ಇರಬಹುದೆ? ಮತ್ತು ತನ್ನ ಹಿರಿಯರಿಂದ ಅಭಿವೃದ್ಧಿ ಕಾರ್ಯ ನಡೆದಿದ್ದ ಗ್ರಾಮವಿದೆಂಬ ಕಾರಣದಿಂದಾಗಿ (೫ನೇ) ಮೆದಕೆ(೧)ರಿ ನಾಯಕ ದೊರೆ, ತಮ್ಮ ಹಿರಿಯರಿಗೆ ಪುಣ್ಯವಾಗಲಿ ಎಂದು, ಈ ಗ್ರಾಮವನ್ನು ದಾನ ಕೊಡಲು ಆಯ್ಕೆ ಮಾಡಿರಬಹುದೆ?—ಈ ಯೋಚನೆಗಳೂ ಮೂಡುತ್ತವೆ. ಕೆರೆಯ ಬಳಿಯಲ್ಲಿ 'ರಂಗಾಪುರ' ಎನ್ನುವ ಹಳ್ಳಿಯೊಂದಿರುವುದೂ ಗಮನಾರ್ಹವಾಗಿದೆ.

ಕ್ರಿ. ಶ. ೧೭೫೪ರಲ್ಲಿ, ೨ನೇ ಕಸ್ತೂರಿ ರಂಗಪ್ಪನಾಯಕನ ಮರಣಾನಂತರದಲ್ಲಿ ಅವನ ಉತ್ತರಾಧಿಕಾರಿಯಾದ ಮೆದಕೆ(೧)ರಿ ನಾಯಕ ಆಗ ಇನ್ನೂ ೧೨ ವರ್ಷದ ಬಾಲಕನಾಗಿದ್ದ ಎಂಬಂತೆ ತಿಳಿದು ಬರುತ್ತದೆ. ಹಾಗಿದ್ದಲ್ಲಿ ಕ್ರಿ.ಶ. ೧೭೫೬ ರಲ್ಲಿ ಅವನಿಗೆ ಇನ್ನೂ ೧೪ ವರ್ಷ ಎಂದು ತಿಳಿಯಬೇಕಾಗುತ್ತದೆ. ಅವನು ಈ ವಯಸ್ಸಿಗೆ ಹಿರಿಯೂರಿನಲ್ಲಿ ಒಂದು ಅನ್ನಛತ್ರದ ಮಠವನ್ನು ಮಾಡಿಸಿದ್ದು, ಅದಕ್ಕೊಂದು ಹಳ್ಳಿಯನ್ನೂ ದಾನ ನೀಡಿದ್ದು, ಶಾಸನ ಹಾಕಿಸಿದ್ದು ಇವೆಲ್ಲ ಸೋಜಿಗವನ್ನು ತರಬಹುದಾದರೂ ಆಸ್ಥಾನದ ಅಥವಾ ಅಧಿಕಾರವರ್ಗದ ಹಿರಿಯರಿಂದ ಈ ಕಾರ್ಯಗಳೆಲ್ಲ ಜರುಗುತ್ತಿದ್ದು, ಅವರ ಸಲಹೆಯಂತೆ,-ಕಿರಿಯ ವಯಸ್ಸಿನವರಾದರೂ ದೊರೆಯಾಗಿ-ಮೆದಕೆ(೧)ರಿ ನಾಯಕನು ಇವೆಲ್ಲದಕ್ಕೂ ತನ್ನ ಒಪ್ಪಿಗೆ ನೀಡಿದ್ದಿರಬೇಕು ಎಂದು ಹೇಳಬಹುದು.

೫. ಇನ್ನು ಹಿರಿಯೂರಲ್ಲಿ ದೊರೆಯು ಅನ್ನಛತ್ರದ ಮಠವನ್ನು ಮಾಡಿಸಿದ್ದು ಯಾರ ಹೆಸರಿನಲ್ಲಿ ಎನ್ನುವ ವಿಚಾರ : ಈ ಶಾಸನದ ೯ನೆಯ ಪಂಕ್ತಿಯ ಆರಂಭದಲ್ಲೆ ಬರುವ ಆ ಹೆಸರಿನ ಭಾಗದ ಪಾಠವನ್ನು ರೈಸರು-ಕನ್ನಡ ಲಿಪಿಯಲ್ಲಿ ಕೊಡುವಾಗ 'ಪೂತನಾಯರವರ ಹೆಸರಲ್ಲು' ಎಂದೂ ರೋಮನ್ (ಇಂಗ್ಲಿಷ್) ಲಿಪ್ಯಂತರದಲ್ಲಿ ಯಾರ ಹೆಸರನ್ನೂ ಕೊಡದೆ, '..... ವರ ಹೆಸರಲ್ಲು' ಎಂದೂ-ಬೇರೆ ಬೇರೆಯ ರೀತಿಯಲ್ಲೆ ಕೊಟ್ಟಿದ್ದಾರೆ. ಅಂದರೆ ಇಲ್ಲಿನ ಹೆಸರಿನ ಭಾಗದ ಅವರ ಓದಿಕೆ ಅವರಿಗೇ ಸಂದೇಹ ತಂದಿದೆ. ಆದರೆ ಶಾಸನದಲ್ಲಿ ಈ ಭಾಗವನ್ನು ಈಗ ಪರಿಶೀಲಿಸಿದಾಗ, ಇಲ್ಲಿನ ಪಾಠ ರೈಸರು ಕೊಟ್ಟಂತಿರದೆ 'ಪೂ॥ ॥ಯವರ ಹೆಸರಲ್ಲು' ಎಂದು ಮಾತ್ರ ಇರುವುದು ಕಂಡು ಬರುತ್ತದೆ. ಇಲ್ಲಿ ಕೆಳಗೆ ಕಲ್ಲಿನ ಚಕ್ಕಳ ಹಾರಿದ್ದರೂ ಇಲ್ಲಿರುವುದು 'ಪೂ'ವೇ ಎಂದು ಸ್ಪಷ್ಟವಾಗುವಂತಿದೆ. ಇದರ ನಂತರ ಮುಂದೆ ಎರಡು ದಂಡಗಳನ್ನೂ ಸ್ವಲ್ಪ ಅಂತರ ಬಿಟ್ಟು ಮತ್ತೆರಡು ದಂಡಗಳನ್ನೂ ಹಾಕಲಾಗಿದೆ. ಹೀಗಾಗಿ ಇದು ವ್ಯಕ್ತಿಯೊಬ್ಬರ ಹೆಸರನ್ನು ಬಹುಶಃ ಅವರ ಹೆಸರಿನ ಆದ್ಯಕ್ಷರದ ಸಂಕೇತದ ಮೂಲಕ, ಸೂಚಿಸುವ ಪಾಠ ಎನ್ನಬಹುದು. ಈ 'ಪೂ॥ ಯವರ' ಎನ್ನುವುದು ಇದೇ ಮೆದಕೆ(೧)ರಿ ನಾಯಕನ ಒಂದು ನಿರೂಪದಲ್ಲಿ 'ಪೂರ್ವಣಿ ॥ ಸ್ವಾಮಿಗಳವರು' ಎಂದು ಬಂದಿರುವುದನ್ನೂ ನೆನಪಿಗೆ ತರುತ್ತದೆ.[3] ಹೆಸರನ್ನು ಪೂರ್ಣವಾಗಿ ವಿಸ್ತರಿಸಿ ಬರೆಯದಿರಲು ಕಾರಣವಾಗಲಿ, ಆ ಹೆಸರಾದರೂ ಏನಿರಬಹುದು ಎಂಬುದಾಗಲಿ ಇಲ್ಲಿ ತಿಳಿಯದಾಗಿದೆ.

೬. ದೊರೆಯು ಹಿರಿಯೂರಲ್ಲಿ ಮಾಡಿಸಿದ ಆ ಅನ್ನಛತ್ರದ ಮಠ ಯಾವುದು? ಯಾವ 'ಸಂಪ್ರದಾಯ'ಕ್ಕೆ ಸೇರಿದುದು? ಇದರ ನಿರ್ವಾಹಕರು ಅಥವಾ ಗುರುಗಳು ಯಾರಾಗಿದ್ದರು?-ಇದಾವುದರ ವಿವರವೂ ಶಾಸನದಲ್ಲಿಲ್ಲ. ಆದರೆ ಶಾಸನದ ಮೇಲು ಭಾಗದಲ್ಲಿ ಕೆತ್ತಿರುವ ಶಿವಲಿಂಗ, ಲಿಂಗದ ಮುದ್ರೆ, ಒತ್ತಲಾಗಿರುವ ನಂದಿ, ಇವುಗಳ ನಸು ಉಬ್ಬು ಚಿತ್ರ, (ಟೊಪ್ಪಿಗೆ ಚಲ್ಲಣಗಳನ್ನು ಧರಿಸಿ ಛತ್ರಿಯನ್ನು ಹಿಡಿದು ನಿಂತಿರುವ ಪುರುಷನೊಬ್ಬನ ಒರಟು ರೇಖಾ ಚಿತ್ರ) : ಹಾಗೇ ರೈಸರಲ್ಲಿ ಗೌಡನಹಳ್ಳಿಯನ್ನು 'ಶಿವಾರ್ಪಿತವಾಗಿ' ದಾನ ನೀಡಲಾಯಿತೆಂದು ಬಂದಿರುವ ಪಾಠ (ಈ ಪಾಠವಿದ್ದ ಭಾಗ ಈಗ ಉಳಿದಿಲ್ಲ)-ಇವುಗಳಿಂದ ಈ ಹಳ್ಳಿಯನ್ನು ದಾನವಾಗಿ ಪಡೆದ ಅನ್ನಛತ್ರದ ಮಠ ಒಂದು ಶೈವ ಮಠ ಎನ್ನುವುದಂತೂ ನಿಶ್ಚಿತವಾಗಿದೆ. ಬಹುಶಃ ಇದು ಒಂದು ವೀರಶೈವ ಮಠವಾಗಿದ್ದಿರಬೇಕೆಂದು ತೋರುತ್ತದೆ. ಹಿರಿಯೂರಲ್ಲಿ ಈ ಅನ್ನಛತ್ರದ ಮಠ ಇದ್ದುದರ ಬಗ್ಗೆ ಈಗ ನಿರ್ದಿಷ್ಟವಾಗಿ ಏನೂ ತಿಳಿಯದು.

---

3. ಶ್ರೀ ಕೂಡ್ಲೀ ಶೃಂಗೇರೀ ಸಂಸ್ಥಾನದ ಪ್ರಾಚೀನ ಶಾಸನ-ಲೇಖನ ಸಂಗ್ರಹ, ಭಾಗ ೧, ಮೈಸೂರು, ೧೯೬೫, ಪುಟ ೮೦, ನಿರೂಪ ೧೨೩, ಕ್ರಿ.ಶ. ಸು. ೧೭೬೬

ಅನ್ನ ನೀಡುತ್ತಿದ್ದ ಇಂಥ ಒಂದು ಮಠವೇ ನಾದರೂ ಹಿರಿಯೂರಲ್ಲಿ ಇದ್ದಿತೇ ಎಂದು ವಿಚಾರಿಸಿದಾಗ, ಈಗ ಸುಮಾರು ಅರ್ಧ ಶತಮಾನದ ಹಿಂದೆ ಇಲ್ಲಿ ಮನೆಗಳಂಬಂತಿದ್ದ ಸಣ್ಣ ಸಣ್ಣ ಕೆಲವು ವೀರಶೈವ ಮಠಗಳಿದ್ದುದರ ವಿಚಾರ ತಿಳಿಯಿತು. ಆ ಮಠಗಳು ಇವು : ಪಂಚಾಕ್ಷರಯ್ಯನವರ ಮಠ ಅಥವಾ ಹಿರೇಮಠ, ಶಾಂತಯ್ಯನವರ ಮಠ, ಸಿದ್ಧಲಿಂಗಯ್ಯನವರ ಮಠ, ಗಂಗಾಧರಯ್ಯನವರ ಮಠ, ಗಂಗಯ್ಯನವರ ಮಠ (ಗಂಗಾಧರಯ್ಯನವರ ಮಠವನ್ನೇ ಸಂಕ್ಷೇಪಿಸಿ ಗಂಗಯ್ಯನವರ ಮಠ ಎಂದು ಕರೆಯುತ್ತಿದ್ದರೋ ಹೇಗೋ), ಗುಡಾಣದಯ್ಯನವರ ಮಠ, ಗೌರೀಮಠ ಎಂಬ ಮಠಗಳಿದ್ದುವು. ಊರ ಹೊರಗೆ ದೂರದಲ್ಲಿ ಪುರದ ಮಠ ಎನ್ನುವ ಒಂದು ಮಠವಿದ್ದ ಸ್ಥಳವೂ ಇದೆ. ಇವಲ್ಲದೆ ಈಗ ಚಿಟಕಮಲ್ಲಪ್ಪನ ಗುಡಿ ಎಂದು ಕರೆಯುವ, ಊರ ಪಶ್ಚಿಮ ಭಾಗದಲ್ಲಿರುವ ಒಂದು ಗುಡಿಯ ಸ್ಥಳದಲ್ಲಿ ಬ್ರಿಟೀಷರ ಕಾಲದಲ್ಲಿ 'ಕಿಚನ್' ಎಂದು ಕರೆಯಲಾಗುತ್ತಿದ್ದ, ಬಡಬಗ್ಗರಿಗೆ ರಾಗಿಮುದ್ದೆ ಸಾರು ನೀಡುತ್ತಿದ್ದ, ಒಂದು ವ್ಯವಸ್ಥೆ ಇತ್ತು ಎಂದು ಹೇಳುತ್ತಾರೆ. ಈಗ ಯಾವ ಮಠವೂ ಅಸ್ತಿತ್ವದಲ್ಲಿಲ್ಲದಿದ್ದರೂ ಗಂಗಾಧರಯ್ಯನವರ ಮಠದ ಹಿಂದಿನ ಒಬ್ಬ ಗುರುಗಳ ಗದ್ದಿಗೆ (ಸಮಾಧಿ) ಇರುವ ಮತ್ತು ಆ ಸಮಾಧಿ ಈಗಲೂ ಪೂಜೆಗೊಳ್ಳುತ್ತಿರುವ ವಾಸದ ಮನೆಯೊಂದಿದೆ. ಇದು ಊರಿನ ಪ್ರಮುಖ ದೇವಾಲಯವಾಗಿರುವ ತೇರು ಮಲ್ಲೇಶ್ವರ ದೇವಾಲಯದ ಒತ್ತಿನಲ್ಲೇ ಇದೆಯಲ್ಲದೆ ಈ ಮನೆಯ ಮಗ್ಗುಲ ಅಂಗಳದಲ್ಲಿ ಒಂದು ಲಿಂಗಮುದ್ರೆಯ ಕಲ್ಲು ಇದೆ. ಇಷ್ಟು ಬಿಟ್ಟರೆ ಇಲ್ಲಿನ ಮಠಗಳಲ್ಲಿ ಅನ್ನದಾನ ನಡೆಯುತ್ತಿತ್ತೆ ಎಂಬ ವಿಚಾರವಾಗಲಿ ಇತರ ವಿವರಗಳಾಗಲಿ ಸದ್ಯಕ್ಕೆ ತಿಳಿಯದು. ವಿವಿಧ ಮಠಗಳಿಗೆ ಸೇರಿದವರ ವಂಶೀಕರೆನ್ನುವ ಕೆಲವರು ಈಗಲೂ ಇದ್ದಾರೆ. ಈ ಮಠಗಳ ಬಗ್ಗೆ ಇನ್ನೂ ಹೆಚ್ಚಿನ ಶೋಧ ಅಗತ್ಯವಾಗಿದೆ.

೭. ಲಿಪಿ ದೋಷ, ಓದಿಕೆ ದೋಷ, ಮುದ್ರಣ ದೋಷಗಳಿಂದಾಗಿ ಶಾಸನಗಳಿಂದ ಲಭಿಸಬೇಕಾದ ಎಷ್ಟೋ ಮುಖ್ಯ ಹಾಗೂ ಸಮರ್ಪಕ ಸಂಗತಿಗಳು ಎರವಾಗಿ ಹೋಗಿವೆ. ಇದಲ್ಲದೆ ವಿವಾದಗ್ರಸ್ತ ಹಾಗೂ ಅಸಮರ್ಪಕ ಸಂಗತಿಗಳಿಗೆ ಎಡೆಯುಂಟಾಗಿದೆ. ಆದುದರಿಂದ ಈ ಹಿಂದೆ ಪ್ರಕಟವಾಗಿರುವ ಶಾಸನಗಳನ್ನು-ಎಲ್ಲವನ್ನು ಅಲ್ಲದಿದ್ದರೂ ಬಹು ಮುಖ್ಯವಾದುವನ್ನಾದರೂ-ಪುನರ್ ಪರಿಶೀಲಿಸುವುದು ತುಂಬ ಜರೂರಾಗಿ ಆಗಬೇಕಾಗಿದೆ. ಈ ಶಾಸನದ ಪ್ರಕರಣವೂ ಇದನ್ನು ಎತ್ತಿ ತೋರುತ್ತದೆ.

ಪ್ರಸ್ತುತ ಶಾಸನದ, ಈಗ ಉಳಿದಿರುವ ಬರಹದ ಪರಿಷ್ಕೃತ ಪಾಠವನ್ನು ಇಲ್ಲಿ ಕೊಡುತ್ತಿದ್ದೇನೆ. ಈ ಸಂಬಂಧದಲ್ಲಿ ಕೆಲವು ಅಂಶಗಳನ್ನು ಇಲ್ಲಿ ಹೇಳುವುದು ಅಗತ್ಯ. ಶಾಸನದ ಎರಡು ಹೋಳುಗಳ ಬರಹವನ್ನು ಪ್ರತ್ಯೇಕವಾಗಿ ಪ್ರತಿ ತೆಗೆದು, ಆ ಪ್ರತಿಗಳನ್ನು ಪಂಕ್ತಿಗಳ ಕ್ರಮಕ್ಕೆ ಹೊಂದಿಸಿ ತೆಗೆದ ಛಾಯಾಚಿತ್ರವನ್ನು ಇಲ್ಲಿ ಕೊಟ್ಟಿದೆ. ಕಲ್ಲು ಓರೆಯಾಗಿ ಒಡೆದಿರುವುದನ್ನೂ ಕಲ್ಲಿನ ಎಡಭಾಗದಲ್ಲಿ ಹಾಗೂ ಕೆಳಗೆ ಚಕ್ಕಳ ಸುಲಿದಿರುವುದನ್ನೂ ಇದರಲ್ಲಿ ಸುಲಭವಾಗಿ ಗುರ್ತಿಸಬಹುದು. ಹಿಂದೆ ರೈಸರು ಓದಿದಾಗ್ಗೆ ಈ ಶಾಸನದಲ್ಲಿನ ೨೧ ಪಂಕ್ತಿಗಳು ಸುಸ್ಥಿತಿಯಲ್ಲಿದ್ದುವು. ಆದರೆ ಈಗ ಮೊದಲ ೭ ಪಂಕ್ತಿಗಳು ಮಾತ್ರ ಸಂಪೂರ್ಣ ಸುಸ್ಥಿತಿಯಲ್ಲಿವೆ. ನಂತರದ ೩ ಪಂಕ್ತಿಗಳಲ್ಲಿ ಕೆಲವು ಅಕ್ಷರಗಳೂ ನಂತರದ ೨ ಪಂಕ್ತಿಗಳಲ್ಲಿ ಕಡೆಯಲ್ಲಿನ ಒಂದೊಂದು ಅಕ್ಷರ ಬಿಟ್ಟು ಉಳಿದೆಲ್ಲ ಅಕ್ಷರಗಳೂ ಹಾಗೂ ೧೩ನೇ ಪಂಕ್ತಿಯಿಂದ ಮುಂದೆ ಎಲ್ಲ ಪಂಕ್ತಿಗಳ ಎಲ್ಲ ಅಕ್ಷರಗಳೂ ಸಂಪೂರ್ಣ ನಷ್ಟವಾಗಿವೆ.

ಎರಡನೆಯ ಪಂಕ್ತಿಯಲ್ಲಿ 'ವೇ । ತ್ರೈಲೋಕ್ಯ' ಎಂಬುದನ್ನು 'ವೇ । ತ್ರೈಲೋಕ್ಯ' ಎಂದು ಕೆತ್ತಲಾಗಿದೆ. ಅಲ್ಲದೆ ಇಲ್ಲಿ ಎತ್ವ ಒತ್ವಗಳ ದೀರ್ಘವನ್ನು ದೀರ್ಘಸೂಚಕ ಚಿಹ್ನೆ 'ಇಳಿ' ('ೀ')ಯನ್ನು ಬಳಸಿಯೆ ತೋರಿಸಲಾಗಿದೆ. ಉಳಿದೆಡೆಯಲ್ಲಿ ಈ ಚಿಹ್ನೆಯನ್ನು ಬಳಸಿರುವುದಿಲ್ಲ, ಆದುದರಿಂದ ಪರಿಷ್ಕೃತ ಪಾಠದಲ್ಲಿ ಈ ಭಾಗದಲ್ಲಿ ಮಾತ್ರ ದೀರ್ಘ ಸೂಚಕ ಚಿಹ್ನೆ 'ಇಳಿ'ಯನ್ನು ಬಳಸಿದ್ದು, ಉಳಿದೆಡೆ ಹ್ರಸ್ವವಿರುವಂತೆಯೇ ತೋರಿಸಲಾಗಿದೆ. ಹಿಂದೆ ರೈಸರು 'ಉ' ಎಂದು ಓದಿದ್ದುದನ್ನು ಇಲ್ಲಿ 'ವು' ಎಂದು ಓದಲಾಗಿದೆ, ಇದಲ್ಲದೆ ಕೆಲವೆಡೆಯಲ್ಲಿ ರೈಸ್ ಅವರು ಬಿಟ್ಟಿದ್ದ ದಂಡ ಚಿಹ್ನೆಗಳನ್ನು ಇಲ್ಲಿ ಕೊಡಲಾಗಿದೆ. ಕುತೂಹಲವುಳ್ಳವರು ರೈಸರ ಪಾಠದೊಂದಿಗೆ ಇಲ್ಲಿನ ಪರಿಷ್ಕೃತ ಪಾಠವನ್ನು ಹೋಲಿಸಿ ನೋಡಬಹುದು.

ಈಗ ಉಳಿದಿರುವ ಬರಹದ ಪರಿಷ್ಕೃತ ಪಾಠ :

೧) ನಮಸ್ತುಂಗ ಶಿರಶ್ಚುಂಬಿ ।
ಚೆಂದ್ರ ಚಾಮರ ಚಾರ

೨) ವೇ । ತ್ರೈಲೋಕ್ಯ ನಗರಾರಂಭ ।
ಮೂಲಸಂಭಾಯ ಶಂಭವೆ । ಸ್ವ

೩) ಸ್ತಿ ಶ್ರೀ ವಿಜೆಯಾಭ್ಯುದಯ
ಶಾಲ್ಲಿವಾಹನ ಶಕ । ವರುಶಂ

೪) ಗಳು । ಸಾ ೧೬೭೮ ನೆಯ ।
ದಾತ್ರು ನಾಮ ಸಂ । ವಯಿಶಾಕ ಬ

೫) ೧ ಸ್ತಿರವಾರದಲ್ಲು ।
ವಾಲ್ಮಿಕಿ ಗೊತ್ರದ ಸ್ರಿಮಂನ್ಮಾಹ

೬) ನಾಯಕಾಚಾರ್ಯ್ಯ । ಕಾಮಗೆತ್ತಿ ।
ಕಸುರ್‍ರಿ । ಮೆದಕೆರ್‍ರಿ ನಾ

೭) ಯಕರ । ಪವುತ್ರರದಾ ।
ಕಸ್ತರ್‍ರಿ ರಂಗಪಣಯಕರ ।

೮) ಪುತ್ರರಾದ । ರಾಜ ।
ಮೆದಕೆರ್‍ರಿ ನಾಯಕ.... ।

೯) ಪೂ ॥ ॥ ಯವರ ಹೆಸರಲ್ಲು ।
ಹಿರಿಯೂ...ಮಾಡಿ

೧೦) .... । ....ನ ಛತ್ರದ ಮಠಕೆ ।
ನಂಮ...ಯರ್‍ರಿ

೧೧) ....ಳು

೧೨)..ವು

(ಈ ಶಾಸನದ ಪ್ರತ್ಯಕ್ಷ ಅಧ್ಯಯನಕ್ಕೆಂದು ನಾನು ಹೋದಾಗ ಜತೆಯಲ್ಲಿ ಬಂದು ಸಹಕರಿಸಿದ ಶ್ರೀ ಎಲ್. ನಾಗರಾಜು ಅವರಿಗೆ ಮತ್ತು ಗೌಡನಹಳ್ಳಿಯ ಗ್ರಾಮಸ್ಥರಿಗೆ ಹಾಗೂ ಶ್ರೀ ಯಳನಾಡು ಅಂಜನಪ್ಪ ಅವರು, ಶ್ರೀ ಸಣ್ಣೀರನಾಯ್ಕರು (೮೦), ಶ್ರೀ ಆರ್.ಎಸ್. ಕಾಂತರಾಜು ಅವರು ಮತ್ತು ಹಿರಿಯೂರಿನ ಗ್ರಾಮ ಸ್ಥರು ಇವರಿಗೆ ನನ್ನ ಕೃತಜ್ಞತೆಗಳು.

ಡಾ|| ಕೆ. ಜಿ. ವಸಂತಮಾಧವ

ಕನ್ನಡ ಕರಾವಳಿಯ ಕೃಷಿ ವಿಸ್ತರಣೆಯಲ್ಲಿ ನಿಮ್ನಹಂತದ ಶೂದ್ರರ ಪಾತ್ರ : ಐತಿಹಾಸಿಕ ನೋಟ

ತುಳು, ಹೈವೆ ಮತ್ತು ಕೊಂಕಣವೆಂದು ಐತಿಹಾಸಿಕ ದಾಖಲೆಗಳಲ್ಲಿ ಕರೆಯಲ್ಪಡುವ ಕನ್ನಡ ಕರಾವಳಿ ಪ್ರದೇಶವು ಉತ್ತರದಲ್ಲಿ ಮಾಜಾಳಿಯಿಂದ ದಕ್ಷಿಣದಲ್ಲಿ ಚಂದ್ರಗಿರಿ ನದಿಯವರೆಗೆ ಹಬ್ಬಿದೆ. ಈ ಅಗಲ ಮತ್ತು ಕಿರಿದಾದ ಕರಾವಳಿಯಲ್ಲಿ ಹಲವಾರು ವಿಧದ ಕೃಷಿ ಭೂಮಿಗಳಿವೆ. ಮಕ್ಕಿ ಗುಡ್ಡ ತಿಟ್ಟು ಬಯಲು ಮಜಲು ಬೆದೆಕಾರು (ಮಳೆಗಾಲದ ನೀರಿನಲ್ಲಿ ಬೇಸಾಯ ಮಾಡುವ ಪ್ರದೇಶ) ಮತ್ತು ಬಾಗಾಯಿತುಗಳೆಂಬ ಕೃಷಿವರ್ಗಗಳ ಭೂಮಿಗಳು ಇವೆ. ಕರಾವಳಿಯಿಂದ ಪೂರ್ವಕ್ಕೆ ಹೋದಂತೆ ಕಾನು, ಕಾಡು ಮತ್ತು ಹೊಲಗಳಿವೆ. ಈ ಕನ್ನಡ ಕರಾವಳಿಯಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹರಿಯುವ ಅಸಂಖ್ಯ ನದಿಗಳಿವೆ. ಈ ನದಿ ಪ್ರದೇಶಗಳು ಫಲವತ್ತಾಗಿವೆ. ಕನ್ನಡ ಕರಾವಳಿಯಲ್ಲಿ ಕೃಷಿ ವಿಸ್ತರಣೆಯಾದುದನ್ನು ಮತ್ತು ಇದರಲ್ಲಿ ಕೆಳವರ್ಗದ ಶೂದ್ರಜಾತಿಯ ಪಾತ್ರವನ್ನು ಕೆಲವು ಶಾಸನಗಳೂ ಜನಜನಿತ ಪಾಡ್ದನಗಳೂ ಮತ್ತು ವಿದೇಶಿ ಬರಹಗಾರರ ಬರಹಗಳೂ ತಿಳಿಸುತ್ತವೆ. ಇಲ್ಲಿ ತಿಳಿಸುವ ನಿಮ್ನಹಂತದ ಶೂದ್ರರು ಮೊಗೇರ, ಕುಂಬಾರ, ಬಿಲ್ಲವ (ಹಳೆ ಪೈಕ), ಮಲೆಕುಡಿಯ, ಕೊರಗ, ಬಾಕುಡ, ಹೊಲೆಯ, ಇತ್ಯಾದಿ. ಕನ್ನಡ ಕರಾವಳಿ ಮತ್ತು ಅದಕ್ಕೆ ಹೊಂದಿಕೊಂಡ ಪ್ರದೇಶಗಳಲ್ಲಿ ಸಿಕ್ಕಿದ ಶಾಸನಗಳು ಶೂದ್ರ ಜನಾಂಗದವರು ೧೦೧ ಕುಲವೆಂದು ತಿಳಿಸಿದಲ್ಲಿ, ೧೮ ಜಾತಿಗಳಿವೆಯೆಂದೂ ಹೇಳಿ ಕೆಲವು ಪ್ರದೇಶಗಳಲ್ಲಿ ಶೂದ್ರವಾಡ ಇದ್ದುದನ್ನು ತಿಳಿಸುತ್ತವೆ.[1] ಮೇಲುಕೀಳೆಂದು ವರ್ಗೀಕರಿಸಿದ ಹಲವು ಪಂಗಡಗಳು ಶೂದ್ರರೆಂದು ಇಲ್ಲಿ ಅಭಿಪ್ರಾಯಪಡಬಹುದು. ಕೆಲವು ಶೂದ್ರ ಜನಾಂಗದವರು ಬ್ರಾಹ್ಮಣ ಸಂಸ್ಕೃತಿಗೆ ಒಳಗಾಗಿ ಮೇಲುಹಂತದ ಶೂದ್ರರಾದರು. ಇವರು ಹೆಚ್ಚಾಗಿ ಭೂ ಒಡೆಯರು ಮತ್ತು ಬೇಸಾಯಗಾರರಾಗಿದ್ದರೆಂದು ಹಲವಾರು ದಾಖಲೆಗಳ ಅಧ್ಯಯನದಿಂದ ತಿಳಿದು ಬರುತ್ತದೆ. ಆದರೆ ಈ ಶೂದ್ರ ವರ್ಗಕ್ಕಿಂತ, ಕೀಳುಮಟ್ಟದಲ್ಲಿರುವ ಶೂದ್ರರು ಕರಾವಳಿಯ ಕೃಷಿ ಭೂಮಿಯ ರಚನೆ (ವಿಸ್ತರಣೆ) ಯಲ್ಲಿ ಪಾತ್ರವಹಿಸಿದ್ದನ್ನು ಕೆಲವು ದಾಖಲೆಗಳು ತಿಳಿಸುತ್ತವೆ. ತುಳು ಪಾಡ್ದನದಂತೆ ಈ ಶೂದ್ರ ಜನಾಂಗವಾದ ಮೊಗೇರ, ಕೊರಗ, ಬಾಕುಡರು ಓಣಿ, ಕೊಪ್ಪ ಮತ್ತು ಬಯಲುಗಳಲ್ಲಿ ವಾಸಿಸಿ ಮೇಲುವರ್ಗದವರ ಕೃಷಿ ಭೂಮಿ ರಚನೆಯಲ್ಲಿ ಭಾಗವಹಿಸಿದ್ದರು.

ಮೀನು ಹಿಡಿಯುವ ವೃತ್ತಿಯವರಾದ ಮೊಗೇರರು,

---

1. *Epigraphia Carnatica*, VIII, Ti., Nos. 15, 85 ; *Mysore Archaeological Department* 1927, No. 57 ; Ibid., 1928, No. 97 ; Ibid., 1933, No. 28, p. 173 ; *Annual Report on Indian Epigraphy*, 1969, Ah A No. 9
2. Purchas, *Pilgrims*, X, p. 262

ಕಪ್ಪು ಜನಾಂಗದವರೆಂದು ಮತ್ತು ಅತ್ಯಂತ ಕಷ್ಟಗಾರರೆಂದು ಡಚ್ ಪ್ರವಾಸಿ ಲಿನ್ಸ್‌ಕೊತನ್ ತನ್ನ ವರದಿಯಲ್ಲಿ ಬಣ್ಣಿಸಿದ್ದಾನೆ.[2] ಈ ಜಾತಿಯವರು ಕೃಷಿಯಲ್ಲಿ ನಿರತರಾಗಿದ್ದರೆಂದು ಕೆಲವೇ ಶಾಸನಗಳ ಅಧ್ಯಯನದಿಂದ ತಿಳಿದುಬರುತ್ತದೆ. ಉದಾ. ಬಸ್ರೂರಿನ ಶಕ ೧೩೭೩ (ಕ್ರಿ. ಶ. ೧೪೫೧), ಪಡುಪಣಂಬೂರಿನ ಶಕ ೧೪೬೪ (ಕ್ರಿ. ಶ. ೧೫೪೨) ಮತ್ತು ಭಟ್ಕಳದ ಹತ್ತಿರದ ಕನ್ನರ ಬಯಲಿನ ಶಕ ೧೪೬೧ (ಕ್ರಿ. ಶ. ೧೫೩೮) ಶಾಸನಗಳು[3] ಮೊಗೇರರ ಗದ್ದೆಗಳನ್ನು ತಿಳಿಸಿವೆ. ಈ ಜಾತಿಯವರು ಸಮುದ್ರ ಕಿನಾರೆಯಲ್ಲಿ ನೆಲಸಿದ್ದರಿಂದ, ಪೋರ್ತುಗೀಜರೊಡನೆ ನಿಕಟ ಸಂಪರ್ಕಕ್ಕೆ ಬಂದರು. ಪೋರ್ತುಗೀಜರಿಗೆ ಅಗತ್ಯವಿರುವ ವಾಣಿಜ್ಯ ಬೆಳೆಗಳ ಕೃಷಿಗೆ ಈ ಮೊಗೇರ ಜಾತಿಯವರನ್ನು ಉಪಯೋಗಿಸಿಕೊಂಡಿದ್ದರೆಂದು ಡಚ್ ಪ್ರವಾಸಿ ಲಿನ್ಸ್‌ಕೊತೆನ್ ೧೫೮೦ ರಲ್ಲಿ ಹೇಳಿದ್ದಾನೆ. ಕ್ರಿ. ಶ. ೧೬೩೦ ರಲ್ಲಿ ಪೋರ್ತುಗೀಜರು ಗಂಗೊಳ್ಳಿಯನ್ನು ವಶಪಡಿಸಿಕೊಂಡ ನಂತರ, ಇಲ್ಲಿ ಜೀವಿಸಿದ್ದ ಮೊಗೇರರ ಜಾತಿಯವರ ಶ್ರಮದಿಂದ ಇಲ್ಲಿ ಕರಿಮೆಣಸು, ಭತ್ತ, ತೆಂಗು ಕೃಷಿ ಹೆಚ್ಚಿಸಲು ಇಚ್ಛಿಸಿದ್ದರೆಂದು ಇವರ ಒಂದು ದಾಖಲೆ ತಿಳಿಸುತ್ತದೆ.[4] ಇವರ ಶ್ರಮದಿಂದಲೇ ಗಂಗೊಳ್ಳಿಯ ಸಮುದ್ರ ಕಿನಾರೆ ಪ್ರದೇಶ ಫಲವತ್ತಾಗಿತ್ತು ಎಂದು ಕೆಲವು ದಾಖಲೆಗಳ ಅಧ್ಯಯನದಿಂದ ತಿಳಿದುಬರುತ್ತದೆ. ಅಂಕೋಲೆಯಿಂದ ಗಂಗೊಳ್ಳಿಯ (ದ.ಕ.)ವರೆಗಿನ ಪ್ರದೇಶದಲ್ಲಿ ನೆಲಸಿದ, ಮೊಗೇರ ಜಾತಿಯ ಹೆಚ್ಚಿನವರು ಕ್ರೈಸ್ತ ಮತವನ್ನು ಪೋರ್ತುಗೀಜರ ಪ್ರೇರಣೆಯಿಂದ ಸ್ವೀಕರಿಸಿದರು. ಇದರಿಂದ ಈ ಜನಾಂಗದವರು ಇನ್ನಿತರ ಹಿಂದು ಸಮಾಜದಿಂದ ಬಹಿಷ್ಕರಿಸಲ್ಪಟ್ಟಿದ್ದರಿಂದ ಅವರ ಮೀನುಗಾರಿಕೆ ಮತ್ತು ಕೃಷಿಯ ಉದ್ಯೋಗಕ್ಕೆ ಧಕ್ಕೆ ಉಂಟಾಗಿ ಅವರು ಈ ಪ್ರದೇಶಗಳಲ್ಲಿ ನಿಕೃಷ್ಟ ಸ್ಥಾನವನ್ನು ಹೊಂದಿದ್ದರೆಂದು ಕ್ರಿ.ಶ. ೧೬೭೬ರಲ್ಲಿ ಬಂದ ಆಂಗ್ಲ ಪ್ರವಾಸಿ ಡಾ॥ ಫ್ರಾಯರ ತನ್ನ ವರದಿಯಲ್ಲಿ ತಿಳಿಸಿದ್ದಾನೆ.[5]

ಮಂಗಳೂರಿನ ದಕ್ಷಿಣಕ್ಕೆ ಇರುವ ಮೊಗೇರ (ಮೊಕರಿ)ರು ಸಾಗರೋತ್ತರ ವ್ಯಾಪಾರದಲ್ಲಿ ನಿರತರಾಗಿದ್ದರು. ಇವರ ಸಹಾಯದಿಂದ ಕನ್ನಡ ಕರಾವಳಿಯ ಅರಸುಮನೆತನದವರು ತಮ್ಮ ವ್ಯಾಪಾರ ವಿಸ್ತರಿಸಿಕೊಂಡರು. ಇಷ್ಟಲ್ಲದೆ ಈ ಜಾತಿಯ ಕೆಲವು ಜನರು ಗಜನಿ[6] ಪ್ರದೇಶವನ್ನು ಫಲವತ್ತಾಗಿ ಮಾಡಿದ್ದರು. ಇಲ್ಲಿ ನೆಲಸಿದ ಮೊಗೇರ ಜನಾಂಗ ಮುಸ್ಲಿಂ ಮತವನ್ನು ಸ್ವೀಕರಿಸಿ ಬೊಬ್ಬರಿಯಾ ದೈವವನ್ನು ಆದರದಿಂದ ಗೌರವಿಸುತ್ತಿದ್ದರು.[7]

ಮಡಿಕೆ ಮಾಡುವ ಕುಂಬಾರರು ಉಪ್ಪುಂದ, ಗುಜ್ಜಾಡಿ, ಬಸ್ರೂರು, ಶಂಕರನಾರಾಯಣ, ಬಂಟವಾಳ, ಮಂಜೇಶ್ವರ ಮತ್ತು ಬಂಗಾಡಿಯಲ್ಲಿ ಕೃಷಿಕರಾಗಿದ್ದು ಹೆಚ್ಚಿನ ಬೆಟ್ಟು ಪ್ರದೇಶಗಳನ್ನು ಕೃಷಿ ಭೂಮಿಯಾಗಿ ಮಾಡಿದ್ದರೆಂದು ಶಾಸನಗಳು ಮತ್ತು ಸ್ಥಳೀಯ ದಾಖಲೆ ಪತ್ರಗಳಿಂದ ತಿಳಿದುಬರುತ್ತದೆ.[8] ಹಟ್ಟಿಯಂಗಡಿ

---

3. *SII*, IX, Pt. II, No. 457 ; Ibid., VII, 264 ; *KI*, III, No. 9, Lines-29, 30
4. ತಾ॥ ೧೬-೧-೧೬೩೦ ರ ಕ್ಯಾಪ್ಟನ್ ಮಿನೇಜಸನ ಪತ್ರ-*Panjim Archives*, folio 481-82 : Heras : The Expansion of Wars of Venkatappa Nayaka of Ikkeri, *Historical Records Commission*, XI, (1928), p. 113
5. *Calcutta Weekly Englishman*, (London, 1873), p. 388
6. ಸಮುದ್ರ ಹಿಂದೆ ಸರಿಯುವಿಕೆ ಅಥವಾ ನದಿ ಹರಿಯುವ ದಿಕ್ಕನ್ನು ಬದಲಾಯಿಸಿದಾಗ ಫಲವತ್ತಾದ ಭೂಮಿ ಆಗುತ್ತದೆ. ಇದನ್ನೇ ಗಜನಿ ಎನ್ನುತ್ತಾರೆ. ಮಂಗಳೂರಿನ ದಕ್ಷಿಣಕ್ಕೆ ಇರುವ ಗಜನಿಯಲ್ಲಿ ಕೃಷಿ ಮೊಗೇರ ಮತ್ತು ಕ್ರೈಸ್ತರ ಶ್ರಮದಿಂದಲೇ ಆಗಿದೆ.
7. ಕೆ. ವಾದಿರಾಜಭಟ್ಟ, ಪಾಡ್ದನಗಳು, (ಕಿನ್ನಿಗೊಳಿ, ೧೯೭೬), ಪು. ೧೯೧-೪
8. *SII*, IX, Pt. II, No. 517, Line 51 ; 620, Line 38 ; ಶಕ ೧೪೭೯ರ ಉಪ್ಪುಂದ ದುರ್ಗಾ ಪರಮೇಶ್ವರಿ ದೇವಾಲಯದ ಎರಡು ಶಾಸನಗಳು (ಅಪ್ರಕಟಿತ) : *ARSIE*, 1969, Ap No. 7, Line 4 ; ಐಗಳ ಎಮ್.ಜಿ . ಮಂಜೇಶ್ವರ, (ಮಂಗಳೂರು, ೧೯೨೪), Ah No. 31

ಯಲ್ಲಿರುವ ಬೆಟ್ಟು ಭೂಮಿ ಕುಂಬಾರ ಗದ್ದೆಯಾಗಿ ಪರಿಣಮಿಸಿದುದು ಮತ್ತು ಉಳ್ಳಾಳ ಗ್ರಾಮದಲ್ಲಿ ಹೊಲವನ್ನು ಕುಂಬಾರರು ಕೃಷಿ ಭೂಮಿಯಾಗಿ ಮಾಡಿದುದು ಬಸ್ರೂರಿನ ಶಕ ೧೪೬೮ (ಕ್ರಿ. ಶ. ೧೫೪೬) ಮತ್ತು ಮಂಜೇಶ್ವರ ಶಕ ೧೬೩೭ (ಕ್ರಿ. ಶ. ೧೭೧೫) [9] ಶಾಸನ ಮತ್ತು ಪತ್ರ ದಾಖಲೆಗಳಿಂದ ತಿಳಿದು ಬರುತ್ತದೆ. ಆದರೆ ಕುಂಬಾರರು ಉಳ್ಳಾಳದಲ್ಲಿ ಕೃಷಿ ಮಾಡಿದ ಭೂಮಿಯ ಸುಬ್ರಾಯ ಭಟ್ಟನಿಗೆ ಮೂಲಿಯನ್ನು ಕೆಳದಿ ಸೋಮಶೇಖರ ನಾಯಕನು ಕೊಟ್ಟನು. ಇದರಿಂದ ಕುಂಬಾರರು ವಕ್ಕಲಿಗರಾಗಿ ದೇವಸ್ಥಾನ ಭೂಮಿಯನ್ನು ಕೃಷಿ ಮಾಡಿಕೊಂಡು ಇರಬೇಕಾಯಿತು. ಬಿಲ್ಲವ ಅಥವಾ ಹಳೆಪೈಕರು ಕೃಷಿ ಭೂಮಿಯ ರಚನೆಗೆ ಬಹಳ ಸಹಕರಿಸಿದ್ದರೆಂದು ಸ್ಥಳೀಯ ಜನಜನಿತ ಐತಿಹ್ಯ ಮತ್ತು ದಾಖಲೆಗಳಿಂದ ತಿಳಿದು ಬರುತ್ತದೆ ; ಬಾರಕೂರು, ಚೊಕ್ಕಾಡಿ ಮತ್ತು ಹೆರೂರುಗಳಲ್ಲಿ ಬಿಲ್ಲವರು ಗದ್ದೆಗಳನ್ನು ಹೊಂದಿ ಬೇಸಾಯದಲ್ಲಿ ನಿರತರಾಗಿದ್ದರೆಂದು ಶಕ ೧೩೪೨ (ಕ್ರಿ. ಶ. ೧೪೨೦) ಮತ್ತು ೧೩೬೬ (ಕ್ರಿ.ಶ. ೧೪೪೪) ರ ಶಾಸನಗಳಿಂದ ತಿಳಿದುಬರುತ್ತದೆ.[10] **ಕೋಟಿ-ಚೆನ್ನಯ** ಪಾಡ್ದನವು ಬಿಲ್ಲವರು ಸುಗ್ಗಿ ಮತ್ತು ಕಾತಿ ಬೆಳೆಗಳನ್ನು ಬೆಳೆಸಿ ಪರಿಮಳೆ ಪಂಜ ಸೀಮೆಯ ಭೂಮಿಯನ್ನು ಕೃಷಿ ಪ್ರದೇಶವಾಗಿ ಮಾಡಿದ್ದನ್ನು ತಿಳಿಸುತ್ತದೆ.[11] ಕಲ್ಯಾಣಪುರ ಹೊಳೆಯಿಂದ ಉತ್ತರಕ್ಕಿರುವ ಕರಾವಳಿ ಪ್ರದೇಶದಲ್ಲಿ ಬಿಲ್ಲವರು, ಸಮ ಜಾತಿಯವರು ಹಳೆಪೈಕರು ಇವರು ಇಲ್ಲಿ ಪ್ರಾಬಲ್ಯ ಹೊಂದಿದ್ದರು. ಶೂರತ್ವದಿಂದ ವಿಜಯನಗರ ಅರಸರ ಗೌರವ ಪಡೆದು ಭೂಮಿಯನ್ನು ಅವರಿಂದ ಹೊಂದಿ ಆ ಭೂಮಿ ಕೃಷಿಗೆ ಯೋಗ್ಯವಾಗುವಂತೆ ಪ್ರಯತ್ನಿಸಿದ್ದರೆಂದು ಸ್ಥಳೀಯ ಐತಿಹ್ಯದಿಂದ ತಿಳಿದುಬರುತ್ತದೆ.[12] ಕೆಳದಿ ಅರಸರಿಗೆ ಅವರ ರಾಜ್ಯ ಬಾರಕೂರಿನವರೆಗೆ ವಿಸ್ತರಿಸಲು ಹಳೆಪೈಕರು ಬಹಳ ಸಹಾಯ ಮಾಡಿದ್ದರು. ಇದರಿಂದಾಗಿ, ಈ ಹಳೆಪೈಕರು ಗೇರಸೊಪ್ಪೆ, ಭಟ್ಕಳ, ಬಸ್ರೂರ, ಕುಂದಾಪುರ ಮತ್ತು ಬಾರಕೂರಿನವರೆಗಿನ ಪ್ರದೇಶಗಳಲ್ಲಿ ಉತ್ತಮ ಕೃಷಿಕರಾಗಿ ಭೂಹಿಡುವಳಿಗಾರರಾಗಿದ್ದರು. ಹೆಚ್ಚಿನ ಜವುಗು ಪ್ರದೇಶವನ್ನು ಕೃಷಿ ಭೂಮಿ ಮಾಡಿದ್ದು ಇದರ ಶ್ರಮದಿಂದಾಗಿಯೇ. ಬ್ರಿಟಿಷರ ಆಳ್ವಿಕೆ ಸ್ಥಾಪನೆಯಾದೊಡನೆ ಹೆಚ್ಚಿನ ಹಳೆಪೈಕರು ಭೂಮಿಯನ್ನು ಕಳೆದುಕೊಂಡು, ಕೃಷಿಯ ಶ್ರಮಜೀವಿಗಳಾದರೆಂದು ಆಂಗ್ಲ ದಾಖಲೆ ಮತ್ತು ಆಂಗ್ಲ ಪ್ರವಾಸಿ ಬುಕಾನನ್ ವರದಿಯಿಂದ ತಿಳಿದುಬರುತ್ತದೆ.[13]

ಮಲೆಕುಡಿಯರು ಹೆಚ್ಚಿನ ಗುಡ್ಡಕಾಡು ಪ್ರದೇಶವನ್ನು ಕುಮರಿ ಬೇಸಾಯದಿಂದ ಫಲವತ್ತಾಗಿ ಮಾಡಿದ್ದರು. ಈ ಕುಮರಿ ಬೇಸಾಯ ಕ್ರಿ. ಶ. ೧೩೪೮ರಲ್ಲಿ ಆರಂಭವಾಗಿದೆಯೆಂದು ಇಡಗುಂಜೆಯ ಶಾಸನದಿಂದ ತಿಳಿದು ಬರುತ್ತದೆ.[14] ಸಹ್ಯಾದ್ರಿ ಬೆಟ್ಟದ ತಪ್ಪಲು ಕೃಷಿ ಭೂಮಿ ಮಾಡಿದ್ದು ಈ ಮಲೆಕುಡಿಯರ ಕುಮರಿ ಬೇಸಾಯದಿಂದಲೆಂದು ಸ್ಥಳೀಯ ಐತಿಹ್ಯ ಮತ್ತು ಬುಕಾನನ್‌ನ ವರದಿಗಳ ಅಧ್ಯಯನದಿಂದ ತಿಳಿಯಬಹುದು.[15] ಇವರು ಬೆಟ್ಟಗಳ ಓರೆಗಳಲ್ಲಿದ್ದ ಗಿಡಮರಗಳನ್ನು ಕಡಿದು ರಾಗಿಯನ್ನು ಬಿತ್ತುತ್ತಿದ್ದರು. ಆಮೇಲೆ ಮತ್ತೆ

9. *SII*, IX, No. 620; ಐಗಳ, ಅದೇ, ಈ ಮೂಲಿಭೂಮಿ ಮಂಜೇಶ್ವರದ ಶ್ರೀಮದನಂತೇಶ್ವರ ದೇವಾಲಯಕ್ಕೆ ಸೇರಿತು.
10. Ibid, VII, 365 ; *ARSIE*, 1930, No. 588 and 579
11. *Indian Antiquary*, XIII, p. 34-48
12. Thurston, *Castes and Tribes of Southern India*, (New Delhi, 1975), II, p. 320-2,
13. *Calcutta Review*, XI, p. 365 ; Kanara II, p. 146 ; Buchanan, *A Journey from Madras Through the Countries of Mysore, Canara & Malabar*, II, (Madras, 1870), p. 239
14. *KI*, III, Pt. I, No. 6, p. 11
15. ಎಲ್. ಆರ್. ಹೆಗಡೆ, ಕುಮರಿ ಮರಾಠಿಗರ ಕಥೆಗಳು, (ಕುಮಟಾ, ೧೯೮೧) ಪು. ೧, ೧೦-೧೨, ೧೬೯, ೧೭೬ ; Buchanan, p. 252

ಬೇರೆ ಗುಡ್ಡಗಳಿಗೆ ಹೋಗಿ ಅದೇ ಹೋರೆಯನ್ನು ಮುಂದುವರಿಸುತ್ತಿದ್ದರು. ಇಷ್ಟಲ್ಲದೆ ಭತ್ತ ಮತ್ತು ತರಕಾರಿ ಬೆಳೆಸುವುದರಲ್ಲೂ ಇವರು ಆಸಕ್ತರಾಗಿದ್ದರು. ಕೊರಗ, ಬಾಕುಡ, ಹೊಲೆಯ-ಈ ಜಾತಿಯವರು ಮೂಲತಃ ಕನ್ನಡ ಕರಾವಳಿಯಲ್ಲಿ ಬೇಸಾಯ ಮಾಡಿದವರು. ಸ್ಥಳೀಯ ಐತಿಹ್ಯದಲ್ಲಿ ಪ್ರಚಾರವಿದ್ದಂತೆ ಹುಂಬಾಸಿ ಮತ್ತು ನಂದುರಾಯರೆಂಬ ಹೊಲೆಯರು ಕನ್ನಡ ಕರಾವಳಿಯ ಹೆಚ್ಚಿನ ಪ್ರದೇಶದ ಅರಸರಾಗಿದ್ದು ಅವರ ನೇತೃತ್ವದಲ್ಲಿ ಹೊಲೆಯರು ಭೂ ಮಾಲೀಕ ಮತ್ತು ಕೃಷಿಕರಾಗಿದ್ದರೆಂದು ತಿಳಿಯಲು ಆಸ್ಪದವಿದೆ. ಇಷ್ಟಲ್ಲದೆ ಕನ್ನಡ ಕರಾವಳಿಯ ಪ್ರಮುಖ ದೇವಾಲಯಗಳ ಸ್ಥಳೀಯ ಇತಿಹಾಸದಂತೆ, ಈ ದೇವಾಲಯಗಳ ಭೂಮಿಗಳನ್ನು ಹೊಲೆಯರು ಆಕ್ರಮಿಸಿ ಬೇಸಾಯ ಮಾಡಿ, ದೇವರ ಪೂಜಾಕ್ರಮಕ್ಕೆ ಭಂಗ ತಂದಾಗ ಕದಂಬ ಅರಸರು ಇವರ ಉಪಟಳ ನಿಲ್ಲಿಸಿ, ಭೂಮಿಗಳನ್ನು ಅವರಿಂದ ಕಸಿದುಕೊಂಡು ಬ್ರಾಹ್ಮಣರಿಗೆ ದೇವಪೂಜೆ ಮತ್ತು ಧಾರ್ಮಿಕ ಕಟ್ಟಳೆಗಳನ್ನು ನಡೆಸಿಕೊಂಡು ಬರಲು ದಾನ ಮಾಡಿದರು.[16] ಈ ದಂತಕತೆಗಳಲ್ಲಿ ಕಾಲಾನುಕ್ರಮ ಪಟ್ಟಿ ಮತ್ತು ಅರಸರ ಹೆಸರುಗಳು ಒಂದಕ್ಕೊಂದು ವಿರೋಧವಿದ್ದರೂ ಹೊಲೆಯರು ಕೃಷಿಯ ಜೀವನದಲ್ಲಿ ಮುಖ್ಯ ಪಾತ್ರ ವಹಿಸಿದ್ದರೆಂದು ತಿಳಿಯಲು ಆಸ್ಪದವಿದೆ. ಮಧ್ಯಕಾಲೀನ ಇತಿಹಾಸದಲ್ಲಿ ಹೊಲೆಯರು ಭೂಮಿ ಒಡೆಯರಾದದ್ದು ಬಹಳ ಕಡಿಮೆ. ಉಪ್ಪುಂದ ದುರ್ಗಾ ಪರಮೇಶ್ವರಿ ದೇವಾಲಯದ ಎರಡು ತಾಮ್ರ ಶಾಸನ (ಕ್ರಿ. ಶ. ೧೫೫೫)ಗಳಲ್ಲಿ ಹೊಲೆಯರ ಗದ್ದೆಯ ವಿಚಾರ ಉಲ್ಲೇಖವಿದ್ದರೂ ಇವರು ಈ ದೇವಾಲಯದ ದೇವಪ್ಪ ಗದ್ದೆಯ ಒಕ್ಕಲಾಗಿಯೇ ಇದ್ದರು. ಹದಿನೈದನೇ ಶತಮಾನದ ಕೆಲವು ಶಾಸನಗಳು ಈ ಹೊಲೆಯರನ್ನು ಕೃಷಿ ಗುಲಾಮರೆಂದು (ಹೊಲೆಯಾಳು, ಮಣ್ಣಾಳು, ಹುಟ್ಟಾಳು) ತಿಳಿಸಿ ಇವರ ವಿಕ್ರಯವಾಗುವುದನ್ನು ತಿಳಿಸಿವೆ. ಇದು ಹದಿನೆಂಟನೇ ಶತಮಾನದವರೆಗೆ ಮುಂದುವರಿಯಿತು.[17] ಇದರಿಂದ ವ್ಯಕ್ತವಾಗುವುದೇನೆಂದರೆ ಕೃಷಿಯ ಭೂಮಿಯ ರಚನೆಗೆ ಈ ಹೊಲೆಯರ ಸೇವೆ ಅತ್ಯಗತ್ಯವಿತ್ತು. ಇದರಿಂದಾಗಿಯೇ ಭೂಮಿ ವಿಕ್ರಯವಾಗುವುದಾಗಲಿಲ್ಲ. ಬೇಸಾಯದಲ್ಲಿ ನಿರತರಾಗಿದ್ದ ಕೂಲಿಯಾಳುಗಳಾದ ಹೊಲೆಯರ ಸೇವೆಯನ್ನು ಭೂ ಹಿಡುವಳಿಗಾರರು ಅಪೇಕ್ಷಿಸುತ್ತಿದ್ದರು. ಕೆಸರಿನ ಭೂಮಿ (ಕಳವು ಗದ್ದೆ), ಜವುಗು ಪ್ರದೇಶ, ಗುಡ್ಡ ಮತ್ತು ಕಾಡು ಪ್ರದೇಶಗಳು ಕೃಷಿ ಭೂಮಿಯಾಗಿ ಮಾರ್ಪಡಲು ಹೊಲೆಯರು ಶ್ರಮ ವಹಿಸಿದ್ದರು. ಈ ಹೊಲೆಯ ಅಥವಾ ಬಾಕುಡರ ಶ್ರಮ, ಇದರಿಂದಾದ ಕೃಷಿ ಭೂಮಿಗಳು ಮತ್ತು ಇವರ ಬೇಸಾಯ ಪದ್ಧತಿಗಳನ್ನು ಪ್ರವಾಸಿ ಬುಕಾನನ್ ವಿವರಿಸಿದ್ದಾನೆ.[18] ಈ ಜಾತಿಯವರ ಶ್ರಮದಿಂದಾಗಿ ಕನ್ನಡ ಕರಾವಳಿಯಲ್ಲಿ ಕೃಷಿ ಭೂಮಿ ಹೆಚ್ಚಿತೆಂದು ಅಭಿಪ್ರಾಯಪಡಬಹುದು.

---

16. ಕೆ. ಕೆ. ಕುಡ್ವ, ಕನ್ನಡ ಜಿಲ್ಲೆಯ ಇತಿಹಾಸ, (ಮಂಗಳೂರು, ೧೯೪೮), ಪು. ೪೮ ; ಗಣಪತಿ ಶಿವಭಟ್ಟ, ಗೋಕರ್ಣ ಕ್ಷೇತ್ರ ಮಹಾತ್ಮೆ, ಪು. ೪೯; Buchanan, p. 271
17. *SII*, VII, 198, 365, 417; A. K. Shastry, *Sringeri Dharma Samasthana*, (Sringeri, 1983), p. 187
18. Buchanan, pp. 271-72

ಲಕ್ಷ್ಮಣ್ ತೆಲಗಾವಿ

ಚಿತ್ರದುರ್ಗ ರಾಜಾ ಮದಕರಿನಾಯಕನ ಗೌಡನಹಳ್ಳಿ ಶಾಸನ : ಮರು ಪರಿಶೀಲನೆ

ಬಿ. ಲೂಯಿ ರೈಸ್ ಅವರು ಪ್ರಕಟಿಸಿದ ಚಿತ್ರದುರ್ಗ ಜಿಲ್ಲೆಯ ಶಾಸನಗಳನ್ನು ಒಳಗೊಂಡ ಸಂಪುಟದಲ್ಲಿ,[1] ಚಿತ್ರದುರ್ಗ ನಾಯಕರಿಗೆ ಸಂಬಂಧಿಸಿದ ಸುಮಾರು ೪೮ ಶಾಸನಗಳಿವೆ. ಇದೇ ಜಿಲ್ಲೆಯ ಹಿರಿಯೂರು ತಾಲ್ಲೂಕಿಗೆ ಸೇರಿದ ಹಾಗೂ ಜವನಗೊಂಡನಹಳ್ಳಿ ಹೋಬಳಿಯಲ್ಲಿರುವ ಗೌಡನಹಳ್ಳಿ ಶಾಸನವು (ಸಂಖ್ಯೆ ೫೭) ಅವುಗಳಲ್ಲೊಂದು. ಇದರ ಕಾಲ ಶಕ ೧೬೭೮ (ಕ್ರಿ. ಶ. ೧೭೫೬). ಇದು ದಾನಶಾಸನವಾಗಿದ್ದು, ಚಿತ್ರದುರ್ಗ ರಾಜ್ಯದ ಕೊನೆಯ ಅರಸ ರಾಜಾ ಮದಕರಿನಾಯಕನು (ಕ್ರಿ. ಶ. ೧೭೫೮-೧೭೭೯) ತನ್ನ ಹಿರಿಯರಿಗೆ ಪುಣ್ಯವಾಗಲೆಂದು ಹಿರಿಯೂರಿನಲ್ಲಿ ಅನ್ನಛತ್ರದ ಮಠವನ್ನು ಮಾಡಿಸಿ, ಅದನ್ನು ನಡೆಸಿಕೊಂಡು ಹೋಗಲು ಅದೇ ಸೀಮೆಯ ಗೌಡನಹಳ್ಳಿಯನ್ನು ಶಿವಾರ್ಪಿತವಾಗಿ ಕೊಟ್ಟಿರುವನೆಂಬುದೇ ಇಲ್ಲಿಯ ವಿಷಯ. ಈ ನಾಯಕರು ಈ ಬಗೆಯ ದಾನಶಾಸನಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಕೊಟ್ಟಿರುವರೆಂಬುದನ್ನು ಗಮನಿಸಬಹುದು.

ಈ ಶಾಸನ ಸಂಪುಟಕ್ಕೆ ಬರೆದ ಪೀಠಿಕೆಯಲ್ಲಿ, ಲೂಯಿ ರೈಸ್ ಅವರು, ಚಿತ್ರದುರ್ಗ ನಾಯಕರ ವಂಶಾನುಕ್ರಮಣಿಕೆಯನ್ನು ರಚಿಸಿ ಪ್ರಕಟಿಸಿರುವರು (ಪು. ೨೯). ಸಂಪುಟದಲ್ಲಿರುವ ಈ ನಾಯಕರನ್ನು ಕುರಿತ ಶಾಸನಗಳನ್ನು ಆಧರಿಸಿ ಈ ವಂಶಾವಳಿಯನ್ನು ರಚಿಸಿರುವುದಾಗಿಯೂ ಇದು ಅಷ್ಟು ಅಧಿಕೃತವಲ್ಲವೆಂತಲೂ ಅಲ್ಲಿಯೇ ಸೂಚನೆ ಸಹ ನೀಡಿರುವರು. ವಂಶಾನುಕ್ರಮಣಿಕೆಯಲ್ಲಿ ದುರ್ಗದ ಕಡೆಯ ಅರಸ ರಾಜಾ ಮದಕರಿನಾಯಕನು (ಶಾಸನದಲ್ಲಿ 'ರಾಜಾ ಮದಕೆರ್ರಿನಾಯಕ' ಎಂದಿದೆ) 'ದುಗಪ' (ಇಂಗ್ಲಿಷ್‌ನಲ್ಲಿ '**Duggapa**') ನಾಯಕನ ಮಗನೆಂಬುದಾಗಿ ತೋರಿಸಿರುವರು. ಅವರು ಇಂತಹ ನಿರ್ಣಯಕ್ಕೆ ಬರಲು ಕಾರಣವಾದುದು ಗೌಡನಹಳ್ಳಿಯ ಶಾಸನವೇ. 'ದುಗಪನಾಯಕ' ಎಂಬ ವ್ಯಕ್ತಿಯು ಇದ್ದುದು, ಅವನು ದುರ್ಗದ ಕಡೆಯ ಅರಸನ ತಂದೆಯೆನಿಸಿದುದು ಅವರಿಗೆ ಅತ್ಯಂತ ವಾಸ್ತವ ಅಂಶವಾಗಿ ತೋರಿದ್ದಿರಬಹುದು. ಈ ಸಂಬಂಧದಲ್ಲಿ ಸಂಪುಟದ ಪೀಠಿಕೆಯಲ್ಲೂ ಅವರು ಯಾವ ವಿವರಣೆಯನ್ನು ನೀಡಲಾಗಲೀ ಶಂಕೆಯನ್ನು ವ್ಯಕ್ತಪಡಿಸಲಾಗಲೀ ಹೋಗಿಲ್ಲ. ಅವರು ರಚಿಸಿಕೊಟ್ಟ ಈ ವಂಶಾನುಕ್ರಮಣಿಕೆಯನ್ನು ಗಮನಿಸಿ, ಆ ಬಗೆಗೆ ಸಾಕಷ್ಟು ವಿವರಗಳುಳ್ಳ ಪ್ರತ್ಯೇಕ ಲೇಖನವೊಂದನ್ನು ಬರೆದು ಪ್ರಕಟಿಸಿದವರು ಆರ್. ಎಸ್. ಸಾಲೆತ್ತೂರೆ ಅವರು.

* * *

ಗೌಡನಹಳ್ಳಿಯ ಶಾಸನದಲ್ಲಿಯ ಅಂಶಗಳನ್ನು ಪರಿಶೀಲಿಸುವ ಮುನ್ನ, ಈ ದಿಸೆಯಲ್ಲಿ ಮತ್ತೊಮ್ಮೆ

---

1. *Epigraphia Carnatica*, Vol. XI, Inscriptions in the Chitaldroog District, Bangalore, 1903

ಗಮನ ಹರಿಸಲು ಒದಗಿ ಬಂದ ಸಂದರ್ಭದ ಹಿನ್ನೆಲೆಯನ್ನು ಪ್ರಸ್ತಾಪಿಸುವುದು ಅಗತ್ಯ. ಚಿತ್ರದುರ್ಗದ ಸರ್ಕಾರಿ ಕಲಾ ಕಾಲೇಜಿನ ಇತಿಹಾಸ ಅಧ್ಯಾಪಕ ಡಾ. ಮಹ್ಮದ್ ಜಫ್ರುಲ್ಲಾ ಅವರು ಎ. ಕ. ಸಂಪುಟದಲ್ಲಿರುವ ಗೌಡನಹಳ್ಳಿ ಶಾಸನದ ಪಾಠವನ್ನು ಅವಲೋಕಿಸಿ, ಗೌಡನಹಳ್ಳಿಗೆ ಭೇಟಿ ನೀಡಿ ಈ ಶಾಸನವನ್ನು ಸ್ವತಃ ಪರಿಶೀಲಿಸಿದ ತರುವಾಯ, ಲೂಯಿ ರೈಸ್ ಅವರು ಗುರುತಿಸಿದ 'ದುಗಪಣಯಕ' ಎಂಬ ಹೆಸರನ್ನೆ ಸಮರ್ಥಿಸಿ, ಆದರೆ ಯಾವುದೋ ಆಕಸ್ಮಿಕ ಕಾರಣಕ್ಕೆ ಈ ಶಾಸನ ಹೊಸದಾಗಿ ಪತ್ತೆ ಯಾದಂತೆ ಸೂಚಿಸಿ, 'ಮದಕರಿ ನಾಯಕನ ತಂದೆ ಹೆಸ ರಿರುವ ಶಾಸನ ಪತ್ತೆ' ಎಂಬ ಶೀರ್ಷಿಕೆಯೊಂದಿಗೆ ಈ ಸಂಬಂಧದ ಸುದ್ದಿಯು ಪತ್ರಿಕೆಯೊಂದರಲ್ಲಿ[2] ಪ್ರಚಾರ ಗೊಳ್ಳಲು ಕಾರಣರಾದರು. "ಮದಕರಿ ನಾಯಕನ ತಂದೆಯ ಹೆಸರು 'ಜಾನುಕಲ್ಲಿನ ತೊದಲು ಭರಮಪ್ಪ ನಾಯಕ' ಎಂದು ಇತಿಹಾಸಕಾರರ ಅಭಿಪ್ರಾಯ... ಗೌಡನಹಳ್ಳಿಯಲ್ಲಿ ಪತ್ತೆಹಚ್ಚಿರುವ ಶಾಸನದಲ್ಲಿ ಮದಕರಿ ನಾಯಕನ ಮುತ್ತಾತನ ಹೆಸರು ಕಾಮಗೇತಿ ಕಸ್ತೂರಿ ಮದಕರಿ ನಾಯಕ, ತಂದೆಯ ಹೆಸರು ಕಾಮಗೇತಿ ಕಸ್ತೂರಿ ದುಗಣಪಣ ನಾಯಕರೆಂದು ಇದೆ" ಎಂಬುದೇ ಈ ಸುದ್ದಿಯ ಮುಖ್ಯ ಸಾರ.

ಪತ್ರಿಕೆಯಲ್ಲಿ ಪ್ರಕಟವಾದ ಈ ವಿಶೇಷ ವರದಿಗೆ ಪ್ರತಿಕ್ರಿಯೆ ರೂಪದಲ್ಲಿ, ಇದು ಈಗಾಗಲೇ ಪ್ರಕಟ ಗೊಂಡಿರುವ ಶಾಸನವೆಂದೂ ಶಾಸನದಲ್ಲಿ ಬರುವ 'ದುಗಪಣಯಕ' ಎಂಬ ಹೆಸರು 'ದುಗಣಪಣ ನಾಯಕ' ಎಂದು ವರದಿಯಲ್ಲಿ ಪ್ರಕಟವಾಗಿರುವುದು ಸರಿಯಲ್ಲ ವೆಂದೂ ಈ 'ದುಗಪಣಯಕ' ('ದುಗ್ಗಪ್ಪ' ಅಥವಾ 'ದುರುಗಪ್ಪ' ಎನ್ನಬಹುದಾದ) ಹೆಸರು ಚಿತ್ರದುರ್ಗ ನಾಯಕರಿಗೆ ಸಂಬಂಧಿಸಿದ ಯಾವ ದಾಖಲೆಗಳಲ್ಲಿಯೂ ಉಲ್ಲೇಖಗೊಂಡಿಲ್ಲವೆಂದೂ ಜಾನಕಲ್ಲು ಗ್ರಾಮದ ತೊದಲು ಭರಮಪ್ಪನಾಯಕನ ಮಗನೇ ಈ ರಾಜಾ ವೀರ ಮದಕರಿನಾಯಕನೆಂಬುದು ಆಧಾರಗಳಿಂದ ಖಚಿತವಾಗಿ ವ್ಯಕ್ತಪಟ್ಟಿರುವ ಅಂಶವೆಂದೂ ಗೌಡನಹಳ್ಳಿ ಶಾಸನದ ಪಾಠದಲ್ಲಿಯ ವ್ಯಕ್ತಿನಾಮಗಳು ದೋಷಪೂರಿತವೆಂದೂ 'ಕಸ್ತುರಿ ದುಗಪಣಯಕ' ಎಂಬುದು 'ಕಸ್ತೂರಿ ರಂಗಪ್ಪ ನಾಯಕ' ಎಂದಿರಬಹುದೆಂದೂ ಈ ಶಾಸನ ಪಾಠದ ಮರು ಪರಿಶೀಲನೆಯ ತರುವಾಯ ರಾಜಾ ಮದಕರಿ ನಾಯಕನ ತಂದೆಯ ವಿಚಾರದಲ್ಲಿ ಸ್ಪಷ್ಟವಾಗಿ ಹೇಳಲು ಸಾಧ್ಯವಾಗಬಹುದೆಂದೂ ಇನ್ನಿತರ ಸಂಗತಿಗಳನ್ನೂ 'ಅವಸರದ ನಿರ್ಣಯ ಸಲ್ಲದು' ಎಂಬ ಹೆಸರಿನಲ್ಲಿ ನಾನು ಬರೆದ ದೀರ್ಘ ಪತ್ರವು ಅದೇ ಪತ್ರಿಕೆಯಲ್ಲಿಯೇ (ದಿನಾಂಕ ೨೪-೮-೮೬) ಪ್ರಕಟಗೊಂಡಿತು.

ಈ ಹಿನ್ನೆಲೆಯಲ್ಲಿ, ದಿನಾಂಕ ೧೩-೧೦-೮೬ ರಂದು ಗೌಡನಹಳ್ಳಿಗೆ ಭೇಟಿಕೊಟ್ಟು ಮೇಲ್ಕಂಡ ವಿಷಯವನ್ನುಳ್ಳ ಶಾಸನವನ್ನು ಸ್ವಯಂ ಪರಿಶೀಲಿಸಿ, ಪ್ರತಿಕ್ರಿಯೆಯಲ್ಲಿ ನಾನು ವ್ಯಕ್ತಪಡಿಸಿದ್ದ ಊಹೆಯು ನೈಜವಾದುದೆಂದೂ ಲೂಯಿ ರೈಸ್ ಅವರು ಪ್ರಕಟಿಸಿದ ಈ ಶಾಸನದ ಪಾಠ ವನ್ನು ಕೆಲವೆಡೆ ತಿದ್ದುವ ಅಗತ್ಯವಿದೆಯೆಂದೂ ಮನಗಂಡೆ.[3] ಈ ಶಾಸನದ ಪರಿಷ್ಕೃತ ಪಾಠವನ್ನು ಪ್ರಕಟಿಸುವುದರೊಡನೆ ಚಿತ್ರದುರ್ಗ ನಾಯಕರ ಚರಿತ್ರೆಗೆ ಪೂರಕವಾಗಿರುವ ಅದರಲ್ಲಿಯ ಕೆಲವಾರು ಅಂಶಗಳನ್ನು ಚರ್ಚಿಸಲು ಪ್ರಸ್ತುತ ಲೇಖನದಲ್ಲಿ ಪ್ರಯತ್ನಿಸಿರುವೆ.

* * *

ಚಿತ್ರದುರ್ಗ ನಾಯಕರ ಪೂರ್ವೋತ್ತರ, ಆಳಿದ ವರುಷ, ಆಡಳಿತ ವ್ಯವಸ್ಥೆ ಇನ್ನಿತರ ವಿಷಯಗಳನ್ನು

---

2. ಪ್ರಜಾವಾಣಿ (ದೈನಿಕ), ೧೯-೮-೧೯೮೬

3. ಗೌಡನಹಳ್ಳಿಯ ಕ್ಷೇತ್ರಕಾರ್ಯದಲ್ಲಿ ನನ್ನೊಡನಿದ್ದು ನೆರವಾದವರು ಚಿತ್ರದುರ್ಗದ ಲ. ನಾಗರಾಜ ಹೊಯ್ಸಳ ಅವರು. ಗೌಡನಹಳ್ಳಿಯ ಕೆ. ಪಾಂಡುರಂಗ, ಕೆ. ರಾಮಚಂದ್ರ ಹಾಗೂ ಗ್ರಾಮಸ್ಥರು ಈ ಶಾಸನದ ನಕಲು ತೆಗೆಯುವಲ್ಲಿ, ಕೆಲವು ಸಂಗತಿಗಳನ್ನು ಸಂಗ್ರಹಿಸಿಕೊಳ್ಳುವಲ್ಲಿ ಸಹಕರಿಸಿರುತ್ತಾರೆ.

ಇದಕ್ಕೆ ಮುನ್ನ ಈ ಶಾಸನವನ್ನು ಖುದ್ದಾಗಿ ಪರಿಶೀಲಿಸಿ ಬಂದಿದ್ದ ಚಿತ್ರದುರ್ಗದ ಬಿ. ರಾಜಶೇಖರಪ್ಪ ಅವರು ಸಹ (ಕೆಲವು ಅಕ್ಷರಗಳ ವ್ಯತ್ಯಾಸದ ವಿನಾ) ರಂಗಪ್ಪನಾಯಕನ ಹೆಸರನ್ನೆ 'ದುಗಪಣಯಕ' ಎಂದು ಓದಲಾಗಿದೆಯೆಂದು ತಿಳಿಸಿ ನನ್ನ ಊಹೆಯನ್ನು ಸಮರ್ಥಿಸಿದ್ದರು.

ವಿವರಿಸುವ ಲಿಖಿತ ದಾಖಲೆಗಳು (ವಂಶಾವಳಿಗಳು) ಇವೆ. ಈ ವರೆಗೆ ಈ ನಾಯಕರ ಚರಿತ್ರೆಯನ್ನು ಬರೆದವರನೇಕರು ಅವಲಂಬಿಸಿರುವುದು ಇಂತಹ ದಾಖಲೆಗಳನ್ನೇ. ಇವು ದುರ್ಗದ ಅರಸರ ಸಮಕಾಲೀನ ಆಗುಹೋಗುಗಳನ್ನು ಕರಾರುವಾಕ್ಕಾಗಿ ದಾಖಲಿಸಿಕೊಂಡಿರುವ 'ಆರಂಭದ ಚರಿತ್ರಗ್ರಂಥಗಳು.' ಲೂಯಿ ರೈಸ್ ಅವರು ೧೯೦೩ರಲ್ಲಿ 'ಚಿತ್ರದುರ್ಗ ಜಿಲ್ಲೆಯ ಶಾಸನಗಳು' ಸಂಪುಟವನ್ನು ಹೊರತರುವ ಮುನ್ನ ೧೮೯೭ರಲ್ಲಿ ತಾವು ಪ್ರಕಟಿಸಿದ ಮೈಸೂರು ರಾಜ್ಯದ ಕೆಲವು ಜಿಲ್ಲೆಗಳ ಮಾಹಿತಿಯುಳ್ಳ ಗ್ಯಾಸೆಟಿಯರ್‌ನಲ್ಲಿ ಈ ಅರಸರ ಚರಿತ್ರೆಯನ್ನು ಸ್ವಲ್ಪ ಮಟ್ಟಿಗೆ ಕೊಟ್ಟಿದ್ದಾರೆ.[4] ವಂಶಾವಳಿಯಲ್ಲಿ ಸೂಚಿಸಿರುವಂತೆಯೇ ಇವರು ಸಹ (ರಾಜಾ) ಮದಕರಿನಾಯಕನು (ತೊಡಲು) ಬರಮಪ್ಪನಾಯಕನ ಮಗನೆಂಬುದಾಗಿ ಉಲ್ಲೇಖಿಸಿದ್ದಾರೆ. ಆದ್ದರಿಂದ ಅವರು ಗೌಡನಹಳ್ಳಿ ಶಾಸನದಲ್ಲಿಯ ಹೆಸರನ್ನು 'ದುಗಪಣಾಯಕ' ಎಂದು ಓದಿ ಅದನ್ನು 'ದುಗ್ಗಪನಾಯಕ' ಎಂದು ಕರೆದು, ಆ ಹೆಸರಿನ ವ್ಯಕ್ತಿಯು ರಾಜಾ ಮದಕರಿನಾಯಕನ ತಂದೆ ಎಂಬುದಾಗಿ ಭಾವಿಸಿದುದು ಕೇವಲ ಆಕಸ್ಮಿಕವೆಂದು ಇದರಿಂದ ವ್ಯಕ್ತಪಡುತ್ತದೆ.

ಶಾಸನ ಸಂಪುಟದಲ್ಲಿ ಲೂಯಿ ರೈಸ್ ಅವರು ತಕ್ಕ ಮಟ್ಟಿಗೆ ರಚಿಸಿಕೊಟ್ಟ ಚಿತ್ರದುರ್ಗ ನಾಯಕರ ವಂಶಾನುಕ್ರಮಣಿಕೆಯನ್ನು ಆಧರಿಸಿ ಆರ್. ಎನ್. ಸಾಲೆತ್ತೊರೆ ಅವರು ದೀರ್ಘವಾದ ಲೇಖನವೊಂದನ್ನು ಬರೆದು ಪ್ರಕಟಿಸಿರುವರು.[5] ಅವರು ಈ ನಾಯಕರ ಚರಿತ್ರೆಯ ಕೆಲವು ಅಂಶಗಳನ್ನು ತಮ್ಮ ಚರ್ಚೆಯ ಹಿನ್ನೆಲೆಯಲ್ಲಿ ಪ್ರಸ್ತಾಪಿಸಿರುವರು. ಈ ನಾಯಕರಿಗೆ ಸಂಬಂಧಿಸಿದ ಶಾಸನಗಳನ್ನೂ ಒಂದೆರಡು ಚರಿತ್ರೆಯ ಗ್ರಂಥಗಳನ್ನೂ ತಮ್ಮ ಪ್ರಬಂಧದಲ್ಲಿ ಉಪಯೋಗಿಸಿಕೊಂಡಿರುವರು. ಅವರ ಚರ್ಚೆಯ ಕೆಲವು ವಿಷಯಗಳು ಸ್ವಾರಸ್ಯಕರವಾಗಿವೆ. ಇತರ ಪೂರಕ ಚರ್ಚೆಯೊಡನೆ ಈ ನಾಯಕರ ಪರಿಷ್ಕೃತ ವಂಶಾನುಕ್ರಮಣಿಕೆಯನ್ನು ಪ್ರಕಟಿಸಿರುವುದು ಅವರ ಲೇಖನದ ಮುಖ್ಯ ವೈಶಿಷ್ಟ್ಯ.

ಸಾಲೆತ್ತೊರೆ ಅವರು ಗೌಡನಹಳ್ಳಿಯ ಶಾಸನವನ್ನು ಪ್ರಸ್ತಾಪಿಸಿ ಚಿತ್ರದುರ್ಗದ ಕೊನೆಯ ಅರಸ ರಾಜಾ ಮದಕರಿನಾಯಕನ ವಂಶಸ್ಥರನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಈ ನಾಯಕನು ಬಹುಶಃ ತನ್ನ ಚಿಕ್ಕಪ್ಪ ಇಮ್ಮಡಿ ಕಸ್ತೂರಿ ರಂಗಪ್ಪನಾಯಕನ ತರುವಾಯ ಪಟ್ಟಕ್ಕೆ ಬಂದಿರಬೇಕೆಂದು ಅವರು ಭಾವಿಸಿರುವರು. ಲಿಂಗಣ್ಣ ಕವಿಯು ತನ್ನ 'ಕೆಳದಿನೃಪವಿಜಯಂ' ಕಾವ್ಯದಲ್ಲಿ ನೀಡಿರುವ ದುರ್ಗದ ಅರಸರ ವಂಶಾನುಕ್ರಮಣಿಕೆಯಲ್ಲಿಯ ಒಂದೆರಡು ಹೆಸರುಗಳನ್ನು ಅವರು ಸಾಂದರ್ಭಿಕವಾಗಿ ಉಲ್ಲೇಖಿಸಿರುವರು. ಲಿಂಗಣ್ಣ ಕವಿಯು ದುರ್ಗದ ಅರಸರಲ್ಲದೆ ಕೆಳದಿ ಅರಸರ ಸಮಕಾಲೀನರಾಗಿದ್ದ ಕೆಲವು ಸಂಸ್ಥಾನಿಕರ ವಂಶಗಳನ್ನೂ ಪ್ರಸ್ತಾಪಿಸಿರುವನು. ದುರ್ಗದ ಸಂಸ್ಥಾನವನ್ನು ಕಸ್ತೂರಿ ತಿಮ್ಮಪ್ಪನಾಯಕ, ಸರ್ಜಪ್ಪನಾಯಕ, ಹಿರಿಯ ಚಿಕ್ಕಣ್ಣನಾಯಕ, ಹಿರಿಯ ಮೆದಕೆರೆನಾಯಕ, ಮೆದಕೆರೆನಾಯಕ, ಚಿಕ್ಕಣ್ಣನಾಯಕ, ಮದಕೆರೆನಾಯಕ, ರಂಗಪ್ಪನಾಯಕ, ರಘುವಪ್ಪನಾಯಕ ಮತ್ತು ರಂಗಪ್ಪನಾಯಕರೆಂಬುವರು ಆಳಿದರೆಂತಲೂ ಆ ಬಳಿಕ ಬಿಳಿಜೋಡಿ (ಬಿಳಿಚೋಡು) ಬರಮನಾಯಕನು ದುರ್ಗವನ್ನಾಳುತ್ತಿದ್ದನೆಂತಲೂ ಇದನ್ನು ಕ್ರಮದಿಂದ ಹೇಳಿರುವೆನೆಂತಲೂ ಈತನು ತನ್ನ ಕೃತಿಯಲ್ಲಿ ಪ್ರಸ್ತಾಪಿಸಿರುವನು.[6] ಈ ಬರಮನಾಯಕನ ತರುವಾಯ ಮೆದಕೆರೆನಾಯಕ ಹಾಗೂ ಅವನ ನಂತರ ಅವನ ಮಗ ಕಸ್ತೂರಿ ರಂಗನಾಯಕ

---

4. *Mysore*, Vol. 2, Westminster, 1897, p. 503
5. '*The Genealogy of the Medakere Nayakas of Citradurga*', University of Bombay, Vol. VIII, Part 4, January 1940, pp. 3-17
6. ಆರ್. ಶಾಮಶಾಸ್ತ್ರಿ (ಸಂ.) : ಲಿಂಗಣ್ಣಕವಿ ವಿರಚಿತ ಕೆಳದಿನೃಪವಿಜಯಂ, ಮೈಸೂರು, ೧೯೭೩, ದಶಮಾಶ್ವಾಸಂ ೨೫, ಪು. ೧೫೭-೫೮

ಇವರುಗಳು ದುರ್ಗವನ್ನು ಆಳುತ್ತಿದ್ದರೆಂಬುದನ್ನೂ ಲಿಂಗಣ್ಣ ಸೂಚಿಸಿದ್ದಾನೆ. 7 ಆದರೆ ಕೊನೆಯ ಅರಸನನ್ನು ಕುರಿತು ಈ ಕವಿಯು ಯಾವ ಸೂಚನೆಯನ್ನೂ ನೀಡಿಲ್ಲವೆನ್ನುವುದು ಮುಖ್ಯವಾದುದು.

ಈ ಸಂಬಂಧದಲ್ಲಿ ಸಾಲೆತ್ತೊರೆ ಅವರು, ಲಿಂಗಣ್ಣ ಕವಿಯು ಉಲ್ಲೇಖಿಸಿರುವುದನ್ನು ಅನುಸರಿಸಿ, ಮುಮ್ಮಡಿ ರಂಗಪ್ಪನೇ ರಘುವಪ್ಪನಾಯಕನಾಗಿರುವಂತೆ ತೋರಿ ಬರುವನೆಂದೂ ಅವನ ನಂತರ ನಾಲ್ಮಡಿ ರಂಗಪ್ಪನಾಯಕನೆಂಬ ಮತ್ತೋರ್ವನು ಬಂದನೆಂದೂ ಈ ನಾಯಕನು ನಾಲ್ಮಡಿ ರಂಗಪ್ಪನಾಯಕನ ತಮ್ಮನಾಗಿರುವ ಸಾಧ್ಯತೆ ಇದೆಯೆಂದೂ ವಿಚಾರ ಮಾಡಿರುವರು. ಆದರೆ ಸದ್ಯಕ್ಕೆ ಈ ನಾಯಕರುಗಳನ್ನು ಕುರಿತು ಶಾಸನಗಳು ದೊರೆಯದಿರುವುದರಿಂದ ಅವರುಗಳ ಬಗೆಗೆ ಏನನ್ನೂ ಹೇಳುವುದು ಕಷ್ಟವೆಂದೂ ಅಭಿಪ್ರಾಯಪಟ್ಟಿರುವರು. ಈ ಹಿನ್ನೆಲೆಯಲ್ಲಿ 'ದುರುಗಪ್ಪನಾಯಕ'ನ ('ದುಗಪಣಯಕ' ಎನ್ನುವುದನ್ನು ಅವರು ಕರೆದಿರುವುದು ಹೀಗೆ) ಪೀಳಿಗೆಯವರ ಬಗೆಗೆ ಖಚಿತವಾಗಿ ಅರಿಯುವುದು ಅಗತ್ಯವೆಂಬುದನ್ನು ಅವರು ಪ್ರತಿಪಾದಿಸಲೆತ್ನಿಸಿದ್ದು, ಈ 'ದುರುಗಪ್ಪನಾಯಕ'ನನ್ನು ಕುರಿತು ಅವರು ವ್ಯಕ್ತಪಡಿಸಿರುವ ಅನೇಕ ಅಭಿಪ್ರಾಯಗಳನ್ನು ಪರಿಶೀಲಿಸಬೇಕಾಗುತ್ತದೆ.

ಕ್ರಿಸ್ತಶಕ ೧೭೫೮ ರ ಗೌಡನಹಳ್ಳಿ ಶಾಸನವು, ಆ ವರುಷದಲ್ಲಿ ಚಿತ್ರದುರ್ಗದಲ್ಲಿ ಅರಸನಾಗಿದ್ದ ರಾಜಾ ಮೆದಕೆರೆನಾಯಕನು ಕಸ್ತೂರಿ ದುರುಗಪ್ಪನ ಮಗ ಹಾಗೂ ಕಾಮಗೇತಿ ಕಸ್ತೂರಿ ಮೆದಕೇರಿನಾಯಕನ ಮೊಮ್ಮಗನೆಂಬುದಾಗಿ ತಿಳಿಸುತ್ತದೆಂದೂ ಅವರಲ್ಲಿ ಒಬ್ಬೊಬ್ಬರಿಗೂ ಸುಮಾರು ೨೫ ವರುಷಗಳ ಅಂದಾಜು ಕಾಲಾವಧಿಯನ್ನು ಗೊತ್ತುಪಡಿಸಿದರೂ ದುರುಗಪ್ಪನಾಯಕನು ಕ್ರಿ.ಶ. ೧೭೩೧ ರಿಂದ ೧೭೫೮ ರ ವರೆಗೆ ಹಾಗೂ ಈತನ ತಂದೆ ಕಸ್ತೂರಿ ಮೆದಕೆರಿನಾಯಕನು ಕ್ರಿ.ಶ. ೧೭೦೬ ರಿಂದ ೧೭೩೧ ರ ವರೆಗೆ ಜೀವಿಸಿದ್ದಿರಬೇಕೆಂದು ಹೇಳಬಹುದೆಂದೂ ಕ್ರಿ.ಶ. ೧೭೨೧ ರಲ್ಲಿ ದುರ್ಗದ ಈರ್ವರು ಅರಸರಲ್ಲಿ ಪ್ರಸಿದ್ಧನಾದ ಒಂದನೆಯ ಭರಮಣ್ಣನಾಯಕ ಮತ್ತು ಅವನ ಮಗ ಕುಮಾರ ಅಥವಾ ಪಟ್ಟದ ಮುಮ್ಮಡಿ ಚಿಕ್ಕಣ್ಣ ಅವರುಗಳು ಇದ್ದರೆಂದೂ ದುರುಗಪ್ಪ(ನಾಯಕ)ನು ಈ ಈರ್ವರಲ್ಲಿ ಯಾರಾದರೊಬ್ಬ ರಾಜಪ್ರಮುಖನ ಮಗನಾಗಿದ್ದಿರಬೇಕೆಂದೂ ಒಂದು ವೇಳೆ ಈ ದುರುಗಪ್ಪನು ಒಂದನೇ ಭರಮಣ್ಣನ ಮಗನಾಗಿದ್ದಿದ್ದರೆ ಹಾಗೆಂದು ಸಹಜವಾಗಿಯೇ ಕರೆದುಕೊಳ್ಳುತ್ತಿದ್ದನೆಂದೂ ಆದರೆ ದುರುಗಪ್ಪನು ಮೆದಕೆರೆನಾಯಕನ ಮಗನೆಂಬುದಾಗಿ ಮಾತ್ರ ಗುರುತಿಸಿಕೊಂಡಿರವುದರಿಂದ, ಈತನು ಬಹುಮಟ್ಟಿಗೆ 'ಮೆದಕೆರೆನಾಯಕ ಕುಮಾರ ಅಥವಾ ಪಟ್ಟದ ಮುಮ್ಮಡಿ ಚಿಕ್ಕಣ್ಣ'ನ ಮಗನಾಗಿದ್ದಿರಬಹುದೆಂದೂ ಸಾಲೆತ್ತೊರೆ ಅವರು ತಮ್ಮ ಲೇಖನದಲ್ಲಿ ಚರ್ಚಿಸಿರುವರು; ರಾಜಾ ಮೆದಕೆರೆನಾಯಕನು ರಘುವಪ್ಪನಾಯಕನಿರಬಹುದೇ ಎಂಬ ಸಂದೇಹವನ್ನು ಸಹ ವ್ಯಕ್ತಪಡಿಸಿರುವರು. ಇಷ್ಟರ ವಿನಾ ಅವರು ಹೆಸರಿಸಿರುವ ಇತರ, ಅಂದರೆ ರಾಜಾ ಮೆದಕೆರೆನಾಯಕನ ಹಿಂದಿನ ಮತ್ತು ಅವನ ನಂತರದ ಅರಸರುಗಳ ಪ್ರಸ್ತಾಪವು ಇಲ್ಲಿ ಅಪ್ರಸ್ತುತ ಎನ್ನಬಹುದು.

ರಾಜಾ ಮದಕರಿಯು ಕ್ರಿ.ಶ. ೧೭೫೭ ರಲ್ಲಿ ನೀಡಿರುವ ತಾಮ್ರಪಟ (ದಾನ)ಶಾಸನವೊಂದನ್ನು ಡಾ॥ ಎಂ. ಶೇಷಾದ್ರಿ ಅವರು ಸಂಪಾದಿಸಿ ಪ್ರಕಟಿಸಿದ್ದಾರೆ. 8 ಆ ಪಟದಲ್ಲಿ ಕಂಡರಿಸಲಾಗಿರುವ 'ರಾಜಾ ಮದಕರ್ರಿನಾಯಕ' ಎಂಬ ಹೆಸರು 'ಮೆದಕೆರಿನಾಯಕ' ಎಂಬುದರಿಂದ ಭಿನ್ನವಿರಬಹುದೆಂದು ಭಾವಿಸಿ, ಲೂಯಿ ರೈಸ್ ಅವರು ಎ. ಕ. ೧೧ ರಲ್ಲಿ ಪ್ರಕಟಿಸಿರುವ ಹಿರಿಯೂರಿನ ೫೩ನೆಯ (ಗೌಡನಹಳ್ಳಿ) ಶಾಸನವನ್ನು ಪೂರಕವಾಗಿ ಉಲ್ಲೇಖಿಸಿ. 'ಮೆದಕರಿನಾಯಕ'ನು 'ದುಗಪ (Dugapa) ನಾಯಕ'ನ ಮಗನೆಂಬುದಾಗಿ ತಿಳಿದಿರುವುದರಿಂದ ಈ 'ಮದಕರಿನಾಯಕ'ನು ಬೇರೆ

7. ಅಲ್ಲೇ, ಏಕದಶಾಶ್ವಾಸಂ ೯, ೧೧, ೨೮, ೨೯ ಮತ್ತು ೩೦, ಪು. ೧೭೩–೭೪, ೧೭೯
8. *The Annual Report of the Mysore Archaeological Department*, 1947–56, Bangalore District, No. 1, pp. 64–66

ಯೆಂಬುದಾಗಿ ತೋರಿಬರುತ್ತದೆಂತಲೂ 'ಮದಕರಿ ನಾಯಕ'ನು ಇಮ್ಮಡಿ ಮೆದಕೆರಿನಾಯಕನ ಸಹೋದರ (ಬಿಚ್ಚುಗತ್ತಿ) ಬರಮಣ್ಣನಾಯಕನ ಸಂತತಿಯವನಾಗಿ ಕಂಡುಬರುವನೆಂತಲೂ ಆದರೆ 'ಮೆದಕೆರಿನಾಯಕ'ನು ಈ ಇಮ್ಮಡಿ ಮೆದಕೆರಿನಾಯಕನ ಸಂತತಿಯ ನೇರ ವಾರಸುದಾರನಾಗಿರುವನೆಂತಲೂ ಡಾ॥ ಶೇಷಾದ್ರಿ ಅವರು ತಾವು ಸಂಪಾದಿಸಿದ ಶಾಸನ ಪಾಠವನ್ನು ಕುರಿತು ಬರೆದಿರುವ ಟಿಪ್ಪಣಿಯಲ್ಲಿ ವಿಚಾರ ಮಾಡಿರುವರು. ಏನೇ ಇದ್ದರೂ ಲೂಯಿ ರೈಸ್ ಅವರು ಪ್ರಕಟಿಸಿದ ಗೌಡನಹಳ್ಳಿ ಶಾಸನದಲ್ಲಿಯ 'ದುಗಪಣಯಕ' ಎಂಬ ಹೆಸರು ವಿದ್ವಾಂಸರುಗಳನ್ನು ಬೇರೆ ಬೇರೆ ರೀತಿಯಲ್ಲಿ ಆಲೋಚಿಸುವಂತೆ ಮಾಡಿತೆಂಬುದಕ್ಕೆ ಇದು ಇನ್ನೊಂದು ಗಮನಾರ್ಹ ಉದಾಹರಣೆ ಎನ್ನಬಹುದು.

ಮೇಲೆ ಪ್ರಸ್ತಾಪಿಸಿದಂತೆ, ಲೂಯಿ ರೈಸ್, ಸಾಲೆತ್ತೊರೆ ಮತ್ತು ಲಿಂಗಣ್ಣಕವಿ ಅವರುಗಳು ಚಿತ್ರದುರ್ಗ ಅರಸರ ವಂಶಾನುಕ್ರಮಣಿಕೆಯ ಬಗೆಗೆ—ಮುಖ್ಯವಾಗಿ, ಕಡೆಯ ರಾಜಾ ಮದಕರಿನಾಯಕ ಹಾಗೂ ಅವನ ತಂದೆಯ ಬಗೆಗೆ ಕೊಟ್ಟಿರುವ ಸೂಚನೆಗಳನ್ನು ಇಲ್ಲಿ ಸ್ಥೂಲವಾಗಿಯಾದರೂ ಪರಿಶೀಲಿಸಬೇಕಾಗುತ್ತದೆ. ಲೂಯಿ ರೈಸ್ ಅವರು ಗೌಡನಹಳ್ಳಿ ಶಾಸನದಲ್ಲಿ ರಂಗಪ್ಪನಾಯಕನನ್ನು 'ದುಗಪಣಯಕ'ನೆಂದು ಭಾವಿಸಿ, ಅವನ ಹೆಸರನ್ನು ತಾವು ರಚಿಸಿದ ಈ ನಾಯಕರ ವಂಶಾನುಕ್ರಮಣಿಕೆಯಲ್ಲಿ ಕಡೆಯ ಮದಕರಿನಾಯಕನ ತಂದೆ ಎಂಬಂತೆ ತೋರಿಸಿದುದು, ಸಾಲೆತ್ತೊರೆ ಅವರು ತಮ್ಮ ನಿಶ್ಚಿತವಲ್ಲದ ಹಾಗೂ ಗೊಂದಲಮಯವಾದ ಊಹಾತ್ಮಕ ನಿರ್ಣಯಗಳನ್ನು ಮುಂಡಿಸುವ ದಿಸೆಯಲ್ಲಿ ವಿಚಾರ ಮಾಡುವಂತೆ ಪ್ರೇರೇಪಣೆ ನೀಡಿತೆನ್ನಬಹುದು. ಸಾಲೆತ್ತೊರೆ ಅವರು ತಮ್ಮ ಚರ್ಚೆಗೆ ಪೂರಕವಾಗಿ ಬಳಸಿಕೊಂಡಿರುವ ಲಿಂಗಣ್ಣ ಕವಿಯು ಪ್ರಸ್ತಾಪಿಸಿರುವ ಹೆಸರುಗಳು ಸಹ ಪರಿಶೀಲನೆಗೆ ಒಳಪಡುವಂತಹವಾದ್ದರಿಂದ, ಅವರು ರಚಿಸಿಕೊಟ್ಟಿರುವ ಚಿತ್ರದುರ್ಗ ನಾಯಕರ ಪರಿಷ್ಕೃತ ವಂಶಾನುಕ್ರಮಣಿಕೆಯನ್ನು ಪ್ರತ್ಯೇಕವಾಗಿಯೇ ಚರ್ಚಿಸಬೇಕಾಗುತ್ತದೆ. ಇನ್ನು ಡಾ॥ ಶೇಷಾದ್ರಿ ಅವರು ರಾಜಾ ಮದಕರಿಯ ತಂದೆಯ ಬಗೆಗೆ ಆಲೋಚಿಸಿರುವ ರೀತಿಯಾದರೂ ಸಾಲೆತ್ತೊರೆ ಅವರ ನಿರ್ಣಯಗಳ ಜಾಡನ್ನೇ ಅನುಸರಿಸಿದಂತಿದೆ.

ಚಿತ್ರದುರ್ಗ ನಾಯಕರ ವಂಶಾವಳಿಯನ್ನು ರಚಿಸಿದವರು, ದುರ್ಗದ ಸಿಂಹಾಸನವನ್ನು ಏರಿದ ಕಾಮಗೇತಿ ಕುಲದ ನಾಯಕರನ್ನು ಕ್ರಮವಾಗಿ ಮತ್ತಿ ತಿಮ್ಮಣ್ಣ ನಾಯಕ, ದದ್ಯಾನ್ನದ ಓಬಣ್ಣನಾಯಕ (ಗಡ್ಡದ ಮದಕರಿ ನಾಯಕ), (ಒಂದನೆಯ) ಕಸ್ತೂರಿ ರಂಗಪ್ಪನಾಯಕ, ಮದಕರಿನಾಯಕ, ಓಬಣ್ಣನಾಯಕ, ಚಿಕ್ಕಣ್ಣನಾಯಕ, ಮದಕರಿನಾಯಕ, ದೊಣ್ಣೆ ರಂಗಪ್ಪನಾಯಕ, (ಬಿಚ್ಚುಗತ್ತಿ) ಭರಮಣ್ಣನಾಯಕ, ಹಿರಿಯ (ದೊಡ್ಡ) ಮದಕರಿ ನಾಯಕ, (ಎರಡನೆಯ) ಕಸ್ತೂರಿ ರಂಗಪ್ಪನಾಯಕ, (ರಾಜಾ) ಮದಕರಿನಾಯಕ ಎಂದು ಉಲ್ಲೇಖಿಸಿದ್ದಾರೆ.[9] ರಾಜಾ ಮದಕರಿನಾಯಕನ ಆಸ್ಥಾನದಲ್ಲಿದ್ದ ಭೀಮಾಜಿ ಪಂತ್ ಎಂಬ ಮರಾಠಾ ರಾಯಭಾರಿಯು ಪುಣೆಯ ಪೇಶ್ವೆಗೆ ಬರೆದ ತನ್ನ ದೀರ್ಘವಾದ ಪತ್ರದಲ್ಲಿ, ಭರಮಣ್ಣ ನಾಯಕನಿಗಿಂತ ಹಿಂದಿನವರಲ್ಲಿ ಮುಖ್ಯರಲ್ಲದ ಕೆಲವರ ಹೆಸರುಗಳನ್ನು ಮಾತ್ರ ಕೊಟ್ಟಿದ್ದಾನೆ.[10] ಆದರೆ ಲಿಂಗಣ್ಣ ಕವಿಯು ಉಲ್ಲೇಖಿಸಿರುವ ವ್ಯಕ್ತಿಗಳಲ್ಲಿ ಕೆಲವರು ದುರ್ಗದ ಸಿಂಹಾಸನ ಏರಿದವರಲ್ಲ. ಉದಾಹರಣೆಗೆ, ಸರ್ಜಪ್ಪ ನಾಯಕನು (ಒಂದನೆಯ) ಕಸ್ತೂರಿ ರಂಗಪ್ಪನ ಮಗನೆಂಬುದಾಗಿ ವಂಶಾವಳಿಯಲ್ಲಿ ಹೇಳಿದೆ. ಆತನನ್ನು ಸಜ(ಜಿ)ರ್ರಾಯನೆಂದೂ ಕರೆದಿದೆ. ಅವನು ಅರಸನಾಗಿರಲಿಲ್ಲ. ಆದರೆ 'ಹಿರೇ ಕೊಮಾರನ ಮಗ ಚಿಕ್ಕಣ್ಣ' ಎಂದು ವಂಶಾವಳಿಯಲ್ಲಿ ಸಂಬೋಧಿಸಲ್ಪಟ್ಟಿರುವ ಚಿಕ್ಕಣ್ಣ ನಾಯಕನು ದುರ್ಗವನ್ನು ಆಳಿದವರಲ್ಲೊಬ್ಬನು. ಅರಸನಲ್ಲದ ರಘುವಪ್ಪನನ್ನು ಭರಮಣ್ಣನ ಮಕ್ಕಳಲ್ಲೊಬ್ಬನಂತೆ ವಂಶಾವಳಿಯಲ್ಲಿ ತೋರಿಸಿದೆ. 'ಚಿತ್ರದುರ್ಗದ ಬಖೈರು' ಈ ಭರಮಣ್ಣನಿಗೆ ಏಳು ಮಂದಿ ಮಕ್ಕಳಿದ್ದರೆಂದು

9. ಉದಾಹರಣೆಗೆ, 'ಶ್ರೀ ಚಿನ್ಮೂಲಾದ್ರಿ ಗಿರಿದುರ್ಗದಲ್ಲಿ ಆಳಿದ ಹಿಂದಿನ ಅರಸರುಗಳು', 'ಚಿನ್ಮೂಲಾದ್ರಿಯ ಪೂರ್ವಾಪರ ವಿಚಾರ ವಿಸ್ತಾರ' ಮೊದಲಾದ ಹಸ್ತಪ್ರತಿಗಳು.

10. ನೋಡಿ : ಹುಲ್ಲೂರು ಶ್ರೀನಿವಾಸ ಜೋಯಿಸ (ಸಂ.) : ಚಿತ್ರದುರ್ಗದ ಬಖೈರು, ಮೈಸೂರು, ೧೯೭೪, ಪು. ೬೯

ಹೇಳುತ್ತದಾದರೂ ಅವರಲ್ಲಿ ಐದು ಮಂದಿಯ ಹೊರತು ಉಳಿದವರ ಹೆಸರುಗಳನ್ನು ತಿಳಿಸುವುದಿಲ್ಲ. ಹೆಸರಿಸಿಲ್ಲದವರಲ್ಲಿ ರಘುವಪ್ಪನೂ ಒಬ್ಬನೆಂದು ಭಾವಿಸಬೇಕಾಗುತ್ತದೆ. ಭರಮಣ್ಣನ ತರುವಾಯ ಅವನ ಮಗ (ಹಿರಿಯ) ಮದಕರಿಯೂ ಅನಂತರ ಅವನ ಮಗ (ಎರಡನೆಯ) ಕಸ್ತೂರಿ ರಂಗಪ್ಪನೂ ಸಿಂಹಾಸನ ಏರಿದರೆಂದು ಲಿಂಗಣ್ಣನು ಸೂಚಿಸಿರುವ ಕ್ರಮ ಸರಿಯಾಗಿದೆ.

ಇಲ್ಲಿ ಪ್ರಸ್ತಾಪಿಸಬೇಕಾದ ಸಂಗತಿಯೆಂದರೆ, ರಾಜಾ ಮದಕರಿನಾಯಕನು ಸಹ (ಬಿಚ್ಚುಗತ್ತಿ) ಭರಮಣ್ಣನಾಯಕನ ಸಂತತಿಗೇ ಸೇರಿದವನು. ಮೇಲೆ ತಿಳಿಸಿದ ಈ ಭರಮಣ್ಣನ ಮಕ್ಕಳಲ್ಲಿ (ಜಾನುಕಲ್ಲು) ತೊದಲು ಭರಮ(ಣ್ಣ)ಪ್ಪನಾಯಕನು ಇನ್ನೋರ್ವನೆಂದೂ ಹಿರಿಯ ಮದಕರಿಯ ತಮ್ಮನೆಂದೂ ವಂಶಾವಳಿಯು ಸೂಚನೆ ನೀಡಿದರೂ ಆತನು ಏಪ್ಪನೆಯ ಮಗನಾಗಿದ್ದವನು, ಇತ್ಯಾದಿ ವಿವರಗಳನ್ನು ಹೇಳುವುದಿಲ್ಲ. ಆದರೆ (ಬಿಚ್ಚುಗತ್ತಿ) ಭರಮಣ್ಣನ ಇಬ್ಬರು ಪಟ್ಟದ ರಾಣಿಯರಲ್ಲಿ ಒಬ್ಬಳಾಗಿದ್ದ (ಎರಡನೆಯ ಹೆಂಡತಿ) ಚಿಕ್ಕಸಿದ್ಧಮ್ಮಾಜಿ ನಾಗತಿಯಲ್ಲಿ ಜನಿಸಿದವರಲ್ಲಿ ಮೂರನೆಯ ಪುತ್ರನೇ ಈ ತೊದಲು ಭರಮಪ್ಪನಾಯಕನೆಂಬ ಸಂಗತಿಯು ತಿಳಿದು ಬರುತ್ತದೆ.[11] ಈ ನಾಯಕನಿಗೆ ಜಾನುಕಲ್ಲಿನ ನಾಯಕತನವನ್ನು ವಹಿಸಲಾಗಿದ್ದಿತೆಂದು ದಾಖಲೆಯಲ್ಲಿ ಹೇಳಿದೆ. (ಎರಡನೆಯ) ಕಸ್ತೂರಿ ರಂಗಪ್ಪನು ಕ್ರಿ.ಶ. ೧೭೪೮ ರಿಂದ ೧೭೫೪ರ ವರೆಗಿನ ತನ್ನ ಆರು ವರುಷಗಳ ಆಳ್ವಿಕೆಯ ನಂತರ ಮಕ್ಕಳಿಲ್ಲದೆ ಮೃತನಾಗಲು, ಈ ತೊದಲು ಭರಮಪ್ಪನ ಮಗನನ್ನು ದುರ್ಗದ ಸಿಂಹಾಸನಕ್ಕೆ ಆಯ್ಕೆ ಮಾಡಲಾಯಿತು.


ಕಸ್ತೂರಿ ರಂಗಪ್ಪನಾಯಕನು ಸಂತಾನವಿಲ್ಲದೆ ಕಾಲವಾಗಿ ಹೋದಾಗ, ದುರ್ಗದ ಅಧಿಕಾರವನ್ನು ತನ್ನ ಕೈಗೆ ತೆಗೆದುಕೊಂಡವಳು ಆತನ ತಾಯಿ ಓಬಮ್ಮನಾಗತಿ.[12] ಸಿಂಹಾಸನಕ್ಕೆ ಸೂಕ್ತ ವಾರಸುದಾರನನ್ನು ಹುಡುಕಲು, ವಂಶಾವಳಿಯ ಪ್ರಕಾರ, ಆಕೆಯ ಸೂಚನೆಯ ಮೇರೆಗೆ, "ಸಕಲ ದಳವಾಯಿಗಳು, ಪ್ರಧಾನರು, ಬಲನಾಯಕರು, ಗುರಿಕಾರರು ಸಹ ಕೂಡಿ ಜಾನಕಲ್ಲೊಳಗೆ ನಾಯಕತನ ಮಾಡಿಕೊಂಡಿದ್ದ ತೊದಲು ಬರಮಣ್ಣನ ಮಗ ಮದಕರಿ ನಾಯಕರನ್ನು ಕರೆಯಿಸಿಕೊಂಡು ಈ ಓಬವ್ವನಾಗತಿಯ ಮಡಿಲೊಳಗೆ ಹಾಕಿದರು." ಈ ಮದಕರಿನಾಯಕನಿಗೆ ಶಕ ೧೬೭೬ ನೆಯ ಭಾವಸಂವತ್ಸರ ಆಶಾಢ ಶು ೧೨ ನೆಯ ದಿನ, ಅಂದರೆ ಕ್ರಿ.ಶ. ೧೭೫೪ ಜುಲೈ ೩೦ ಮಂಗಳವಾರದಂದು ದುರ್ಗದ ಬೆಟ್ಟದ ಮೇಲೆ (ಸಂಪಿಗೆ) ಸಿದ್ಧೇಶ್ವರನ ಗುಡಿಯಲ್ಲಿ ಪಟ್ಟ ಕಟ್ಟಲಾಯಿತು. ಈ ನಾಗತಿಯು ತಾನು ಸರ್ವಾಧಿಕಾರಿಯಾಗಿ ಮುಂದುವರೆದಳು. ತಾನು ದುರ್ಗದ ಅರಸನಾಗಿ ಪಟ್ಟಾಭಿಷಿಕ್ತನಾದ ಸಂದರ್ಭವನ್ನು, 'ದೊಡ್ಡ ದೊಡ್ಡ ಮನಸುಬೇದಾರರು ಮತ್ತು ಪ್ರಧಾನ್, ದಿವಾನ್, ಭಕ್ಷೀ, ಮುತ್ಸುದ್ದೇರು ಮತ್ತು ಸ್ವಜನರು ವಗೈರೇರು ಬಂಧುಜನ ಸಹಿತ ಕುಳಿತಿರುವಾಗ್ಗೆ' ಅವರೆಲ್ಲರ ಸಮ್ಮುಖದಲ್ಲಿ ಮದಕರಿನಾಯಕನೇ ಸ್ವತಃ ಹೇಳಿಕೊಂಡಂತೆ 'ಚಿತ್ರದುರ್ಗದ ಬಖೈರು'ನಲ್ಲಿ ಪ್ರಸ್ತಾಪಗೊಂಡಿರುವ ಮಾತುಗಳಿವು : "...ಸರ್ವರೂ ತಜವೀಜು ಮಾಡಿ ಆನೆ ಮೇಲೆ ಅಂಬಾರಿ ಹಾಕಿ ದಿವಾನ್ ವಗೈರೆ ಸರ್ವರೂ ಜಾನಕಲ್ಲಿಗೆ ಬಂದು ನಮಗೆ ಪಟ್ಟಾಕಟ್ಟಿ ಕರೆದುಕೊಂಡು ಬಂದರು. ಸಂಗಡಲೇ ಸಿಂಹಾಸನರೂಢರಾದಿವಿ. ಆಗ ಹನ್ನೆರಡು ವರ್ಷದ ವಯಸ್ಸು" (ಪು. ೪೮, ೫೫).

ಚಿತ್ರದುರ್ಗ ಇತಿಹಾಸದಲ್ಲಿ ಈ ಓಬಮ್ಮ ನಾಗತಿಯ ಸಂದರ್ಭವು ಉಲ್ಲೇಖನೀಯವಾದುದು. ತನ್ನ ಎರಡು ವರುಷಗಳ ಸರ್ವಾಧಿಕಾರತ್ವದಲ್ಲಿ, ದುರ್ಗದ ಆಡಳಿತದ ಮಟ್ಟಿಗೆ, ಈಕೆಯು ಜಾರಿಗೆ ತಂದ 'ಕಟ್ಟಾಜ್ಞೆ'ಗಳ ಬಗೆಗೆ ಪ್ರತ್ಯೇಕವಾಗಿಯೇ ಅಧ್ಯಯನ ಕೈಗೊಳ್ಳಬೇಕಾಗುತ್ತದೆಂದು ಭಾವಿಸಲಾಗುತ್ತದೆ. ವಂಶಾವಳಿ,

11. ರಾಜಾ ಬಿಚ್ಚುಕತ್ತಿ ಪರಶುರಾಮಪ್ಪನಾಯಕ : ಚಿತ್ರದುರ್ಗದ ಗಜಕೇಸರಿ, ಒಂದನೆಯ ಭಾಗ, ಚಿತ್ರದುರ್ಗ, ೧೯೬೧, ಪು. ೧೫೯ ; ಹಾಗೂ ಗಮನಿಸಿ : ಬಿ. ಎಸ್. ಶ್ರೀನಿವಾಸನಾಯಕ : ಚಿತ್ರದುರ್ಗದ ಕಾಮಗೇತಿ ಅರಸರು, ತರೀಕೆರೆ (ಚಿಕ್ಕಮಗಳೂರು ಜಿಲ್ಲೆ), ೧೯೮೪, ಪು. ೭-೮

12. ಈ ನಾಗತಿಯನ್ನು ವಂಶಾವಳಿ ಮತ್ತು ಬಖೈರ್‌ನ ಕೆಲವು ಪ್ರತಿಗಳಲ್ಲಿ 'ಓಬವ್ವನಾಗತಿ', 'ಓಬಳವ್ವನಾಗತಿ', 'ಓಬಕ್ಕ ನಾಗತಿ(ನಾಗ್ತಿ)' ಮುಂತಾಗಿ ಸಂಬೋಧಿಸಿದೆ.

ಬಖೈರು ಮತ್ತು ಇತರ ದಾಖಲೆಗಳಲ್ಲಿ ಈಕೆಯನ್ನು ಕುರಿತು ವಿಶೇಷವಾಗಿ ಹೇಳಿಲ್ಲವಾದರೂ ಆಗಿನ್ನೂ ಹುಡುಗನಾಗಿದ್ದ ರಾಜಾ ಮದಕರಿಯು ದುರ್ಗದ ಸಿಂಹಾಸನವನ್ನು ಪರಿಗ್ರಹಿಸಿದ ನಂತರದ ಮೊದಲ ಎರಡು ವರುಷಗಳಲ್ಲಿ ಈಕೆ ಸಂಸ್ಥಾನದ ಅಧಿಕಾರದ ಸರ್ವಸೂತ್ರಗಳನ್ನೂ ತನ್ನ ಮುಷ್ಟಿಯಲ್ಲಿ ಇರಿಸಿಕೊಂಡಿದ್ದಳೆಂಬುದು ವಾಸ್ತವ ಸಂಗತಿ. ಉದಾಹರಣೆಗೆ, "ಈತ [(ಎರಡನೆಯ) ಕಸ್ತೂರಿ ರಂಗಪ್ಪ ನಾಯಕ] ಆದಮೇಲೆ ಓಬವ್ವನಾಗತಿ ಎರಡು ವರ್ಷ ದೊರೆತನ ದರ್ಪ ನೆಡಿಸಿಕೊಂಡು ಪ್ರಧಾನಿಗಳ ಮುಖಾಂತರ ದರ್ಬಾರು ನೆಡಿಸಿಕೊಂಡಿದ್ದಳು" ಎಂಬ ಉಲ್ಲೇಖವು[13] ಇದನ್ನು ಸಮರ್ಥಿಸುತ್ತದೆ.



ಹೊರಕೆರೆದೇವರಪುರದ ಶಾಸನದಲ್ಲಿ ಓಬಮ್ಮನಾಗತಿಯನ್ನು ನಿರ್ದೇಶಿಸುವ 'ತಾಯಿ' ಎಂಬ ಉಲ್ಲೇಖವಿರುವ ಭಾಗ

ಈ ನಾಗತಿಯನ್ನು ಕುರಿತ ಸೂಚನೆಯು ಶಿಲಾಶಾಸನವೊಂದರಲ್ಲಿ ದೊರಕುತ್ತದೆಂಬುದನ್ನು ಈಚೆಗೆ ಶೋಧಿಸಲಾಗಿದ್ದು, ದುರ್ಗದ ಇತಿಹಾಸಕ್ಕೆ ಇದು ಹೊಸ ಅಂಶವೊಂದನ್ನು ಒದಗಿಸಿದೆ ಎಂಬುದನ್ನು ಇಲ್ಲಿ ಪ್ರಸ್ತಾಪಿಸಬಹುದು. ಈ ಶಾಸನವು ಎ. ಕ. ೧೧ ರಲ್ಲಿ ಪ್ರಕಟಗೊಂಡಿದ್ದು, ಹೊಳಲ್ಕೆರೆ ತಾಲ್ಲೂಕಿನ ಹೊರಕೆರೆದೇವರಪುರದಲ್ಲಿ ದೊರೆತ ಶಾಸನವೆಂದು (ಸಂಖ್ಯೆ ೫೪) ಗುರುತಿಸಲ್ಪಟ್ಟಿದೆ. ಇದು ದಾನಶಾಸನವಾಗಿದ್ದು, 'ಶಾಲಿವಾಹನ ಶಕ ವರುಷಂಗಳು ೧೬೭೮ನೆಯ ಭಾವಸಂವತ್ಸರದ ಮಾರ್ಗಶಿರ ಬ ೧೩ ಲು' ಈ ದಾನವನ್ನು ನೀಡಲಾಗಿದೆ. (ಇಲ್ಲಿಯ ಕಾಲಮಾನದ ವ್ಯತ್ಯಾಸ ಗಮನಿಸಿ).

ಒಂದೆರಡು ಅಂಶಗಳ ದೃಷ್ಟಿಯಿಂದ ಈ ಹೊರಕೆರೆ ದೇವರಪುರದ ಶಾಸನವು ಅತಿ ಮುಖ್ಯವಾದುದು. ಮೊದಲನೆಯದಾಗಿ, ವಂಶಾವಳಿಕಾರರ ಪ್ರಕಾರ, ಚಿತ್ರದುರ್ಗ ಸಂಸ್ಥಾನವನ್ನು ಪಾಲಿಸಿದ 'ಮತ್ತಿ ಸಂತತಿ'ಯ ಅರಸರ ತರುವಾಯ (ಮೊದಲನೆಯ ದೊರೆ ಮತ್ತಿ ತಿಮ್ಮಣ್ಣನಾಯಕನಿಂದ ದೊಣ್ಣೆ ರಂಗಪ್ಪನಾಯಕನವರೆಗೆ) ಬಿಚ್ಚುಗತ್ತಿ ಭರಮಣ್ಣನಾಯಕನು ಅಧಿಕಾರಕ್ಕೆ ಬರುವುದರೊಂದಿಗೆ 'ಬಿಳಿಚೋಡು ಸಂತತಿ'ಯ ಆಳ್ವಿಕೆಯು

---

13. 'ಜಾಜೂರು ಕಾಮಸಮುದ್ರ ಸ್ಥಳದ ಶ್ಯಾನುಭೋಗ ತಿಪ್ಪಣ್ಣನು' ಬರೆದಿರುವ 'ತನ್ನ ಹಿರಿಯರ ಸ್ಥಳಮನೆ ವಿದ್ಯಾಮಾನ ವಂಶ ಪಾರಂಪರೆ'ಯನ್ನು ಹೇಳುವ ಹಸ್ತಪ್ರತಿಯಲ್ಲಿ ಅಡಕವಾಗಿರುವ 'ಮತ್ಸಮುದ್ರಗ್ರಾಮ ಹುಟ್ಟಿದ್ದು' ವೃತ್ತಾಂತದ ಪುಟ ೧೨೦ ರಲ್ಲಿ ಇದು ಉಲ್ಲೇಖಗೊಂಡಿದೆ.

ದುರ್ಗದಲ್ಲಿ ಆರಂಭಗೊಂಡಿತು.[14] ಈ ಭರಮಣ್ಣ ನಾಯಕನಿಂದ ಕಡೆಯ ರಾಜಾ ಮದಕರಿನಾಯಕನ ವರೆಗೆ ದುರ್ಗವನ್ನಾಳಿದ ನಾಲ್ಕು ಮಂದಿ ಅರಸರ ಹೆಸರುಗಳನ್ನು ಕ್ರಮವಾಗಿ ಈ ಶಾಸನದಲ್ಲಿ ಪ್ರಸ್ತಾಪಿಸಲಾಗಿದೆ. ಅವರು ಗಳೆಂದರೆ, (ಬಿಚ್ಚುಗತ್ತಿ) ಭರಮಣ್ಣ, (ಹಿರಿಯ) ಮದಕರಿ ನಾಯಕ, (ಎರಡನೆಯ) ಕಸ್ತೂರಿ ರಂಗಪ್ಪನಾಯಕ, **ತಾಯಿ** (ಓಬಮ್ಮನಾಗತಿ) ಹಾಗೂ (ರಾಜಾ) ಮದಕರಿ ನಾಯಕ. ಎರಡನೆಯದಾಗಿ, ರಾಜಾ ಮದಕರಿಯ ಪರವಾಗಿ ಸರ್ವಾಧಿಕಾರಿಯಾಗಿದ್ದ ಓಬಮ್ಮನಾಗತಿ ಯನ್ನು ಇಲ್ಲಿ 'ತಾಯಿ' ಎಂದು ಕಾಣಿಸಿರುವುದು ಗಮನಾರ್ಹವಾದುದು (ಚಿತ್ರ ನೋಡಿ). ಲೂಯಿ ರೈಸ್ ಅವರು ಇದನ್ನು 'ಕಾಯಿ' ಎಂದು ತಪ್ಪಾಗಿ ಓದಿರುವುದನ್ನು ಇಲ್ಲಿ ಮುಖ್ಯವಾಗಿ ಗಮನಿಸಬೇಕು.[15]

ಕ್ರಿಸ್ತಶಕ ೧೭೫೪ ಡಿಸೆಂಬರ್ ೧೨ ರಂದು[16] ಈ ಹೊರಕೆರೆದೇವರಪುರದ ದಾನಶಾಸನವನ್ನು ಸಂಬಂಧಿಸಿದವರಿಗೆ ನೀಡುವ ಸಂದರ್ಭದಲ್ಲಿ ಓಬಮ್ಮನಾಗತಿಯು ಉಪಸ್ಥಿತಳಿದ್ದು, ಆಕೆಯ ನಿರ್ದೇಶನದ ಮೇರೆಗೆ ರಾಜಾ ಮದಕರಿಯ ಸಮ್ಮುಖದಲ್ಲಿ ಈ ಕಾರ್ಯ ನಡೆದಿರುವಂತೆ ತೋರುತ್ತದೆ. ಅದಕ್ಕಾಗಿಯೇ ಆಕೆಯ ಪ್ರಸ್ತಾಪ ಸೂಚ್ಯ

---

14. ದುರ್ಗದ ಸಂಸ್ಥಾನವನ್ನು ಈ ಎರಡು ಸಂತತಿಗಳ ಅರಸರು ಪಾಲಿಸಿದರೆಂಬ ಬಗೆಗೆ ಭಿನ್ನಾಭಿಪ್ರಾಯಗಳಿವೆ.

15. ಲೂಯಿ ರೈಸ್ ಅವರು 'ಕಾಯಿ' ಎಂಬ ಪದವನ್ನು ಇಂಗ್ಲಿಷ್‌ಗೆ ಲಿಪ್ಯಂತರಗೊಳಿಸುವಲ್ಲಿ '**ka...**' ಎಂದಷ್ಟೆ ಉಲ್ಲೇಖಿಸಿ (ಪು. ೨೦೧) ತಮ್ಮ ಓದಿಕೆ ಬಗೆಗೆ ತಾವೇ ಅನುಮಾನ ವ್ಯಕ್ತಪಡಿಸಿರುವುದು ಸ್ವಾರಸ್ಯಕರವಾದುದು. ಆದರೆ ಇಂಗ್ಲಿಷ್ ಅನುವಾದದಲ್ಲಿ 'ಕಾಯಿ' ಎಂಬುದಕ್ಕೆ '**guard**' (*'Kasturi–Rangappa–Nayaka's guard Medi-kere–Nayaka...'*) ಎಂಬಂತೆ ಅರ್ಥೈಸಿರುವರು (ಪು. ೧೨೧).

ಹೊರಕೆರೆದೇವರಪುರದ ಈ ದಾನಶಾಸನದ ಪ್ರಕಟಿತ ಪಾಠದ ಓದಿಕೆಯು ಹಲವಾರು ದೋಷಗಳಿಂದ ಕೂಡಿದ್ದು, ಸ್ವಯಂ ಪರಿಶೀಲನೆಯಿಂದ ಕಂಡುಕೊಂಡ ಅಂತಹವುಗಳನ್ನು ಶಾಸನ ಪಾಠದ ಮೊದಲ ಹತ್ತು ಸಾಲುಗಳಿಗೆ ಮಾತ್ರ ಸಂಬಂಧಿಸಿದಂತೆ ಪರಿಷ್ಕರಿಸಿ ಇಲ್ಲಿ ಕೊಟ್ಟಿದೆ:

೧. ಸ್ವಸ್ತಿಶ್ರೀ ವಿಜೆಯಾಬ್ಯುದಯ
೨. ಶಾಲಿವಾಹನ ಶಕ ವರುಷಂಗಳು
೩. ೧೬೭೮ನೆಯ ಭಾವ ಸಂವಾತ್ಸರ
೪. ಧ। ಮಾರ್ಗಶಿರ ಬ ೧೩ಲು ಶ್ರೀಮಂನ್ಮ
೫. ಹಾ ನಾಯಕಚಾರ್‍ಯ ಕಮಗೆತಿ ಕಸ್ತೂ
೬. ರ್‍ರಿ ಬರಮಂಣನಾಯಕರ ಮೆದಕೆ
೭. ರ್‍ರಿ ನಾಯಕರ ಕೊಮರ ಕಸ್ತೂರ್‍ರಿ ರಂ
೮. ಗಪನಾಯಕರ। ತಾಯಿ ಮೆದಕೆರ್‍ರಿ
೯. ನಾಯಕರು ಹೊರ್‍ರಕೆರ್‍ರಿ ರಂಗಧಮ
೧೦. ನ ದಡಿಗೆ ಧಸರು। ಕಂಗಳ ರಂಗದ

....

ದಿನಾಂಕ ೨೫–೧೨–೮೬ ರಂದು ನಾನು ಕೈಗೊಂಡ ಹೊರಕೆರೆದೇವರಪುರದ ಕ್ಷೇತ್ರಕಾರ್ಯದಲ್ಲಿ ಸಹಕರಿಸಿದವರು ಅಲ್ಲಿಯ ಶ್ರೀ ಲಕ್ಷ್ಮಿನರಸಿಂಹ ದೇವಸ್ಥಾನದ ಅರ್ಚಕರಾದ ಗೋಪಾಲಭಟ್ ಹಾಗೂ ಎಸ್. ಸಿದ್ದೇಶ್ವರ, ಟಿ. ಎಚ್. ಶಿವಣ್ಣ, ಆರ್. ಮಂಜಪ್ಪ, ಎಚ್. ಆರ್. ವಿಜಯ್ ಮತ್ತು ಗ್ರಾಮಸ್ಥರು. ಜತೆಗಿದ್ದು ನೆರವಾದವರು ಲ. ನಾಗರಾಜ ಹೊಯ್ಸಳ ಅವರು.

16. ಈ ಶಾಸನದಲ್ಲಿ ಶಕವರುಷ ೧೬೭೮ನೆಯ ಭಾವ ಸಂವತ್ಸರ ಎಂದಿದೆ. ಇಲ್ಲಿಯ ಕಾಲಮಾನವು ಕ್ರಿಸ್ತಶಕಕ್ಕೆ ಹೊಂದಾಣಿಕೆ ಯಾಗುವುದಿಲ್ಲ. ಈ ಸಂವತ್ಸರವು ಶಕ ೧೬೭೬ ರಲ್ಲಿ ಬಂದಿರುವುದರಿಂದಲೂ ಅದು ಓಬಮ್ಮನಾಗತಿಯ ಜೀವಿತಕಾಲಕ್ಕೆ ಹೊಂದುವುದರಿಂದಲೂ ಅದನ್ನು ಅಂತೆಯೇ ಒಪ್ಪಬೇಕಾಗುತ್ತದೆ. ಈ ಶಾಸನದಲ್ಲಿ ಶಕ ೧೬೭೮ ಎಂದು ತಪ್ಪಾಗಿ ಕಂಡರಿಸಿದುದರ ಉದ್ದೇಶವನ್ನು ಊಹಿಸಲಾಗುವುದಿಲ್ಲ.

ವಾಗಿಯಾದರೂ ಇಲ್ಲಿ ಬಂದಿದೆ. ಹಿರಿಯ ಮದಕರಿಯ ಪಟ್ಟದ ನಾಗತಿಯಾಗಿದ್ದ ಈಕೆಯು ಈ ಶಾಸನದಲ್ಲಿ ತನ್ನನ್ನು ಕಸ್ತೂರಿ ರಂಗಪ್ಪನ ತಾಯಿ ಎಂಬುದಾಗಿ ಗುರುತಿಸಿಕೊಂಡಿದ್ದಾಳೆ. ದುರ್ಗದ ಚರಿತ್ರೆಯ ಮಟ್ಟಿಗೆ ಇದೊಂದು ಅಪರೂಪದ ಶಾಸನ ಎನ್ನಬಹುದು.

ವಂಶಾವಳಿಗಳು ತಿಳಿಸುವಂತೆ, ಸರ್ವಾಧಿಕಾರಿಯಾಗಿದ್ದ ಓಬವ್ವನಾಗತಿಯು '(ಶಕ ೧೬೭೮ನೆಯ) ಧಾತು (ಧಾತ್ರಿ) ಸಂವತ್ಸರದ ಜೇಷ್ಟ ಬಹುಳ ೩ ರಲ್ಲು ಸ್ವರ್ಗಸ್ಥಳಾದಳು.' ಇದು ಕ್ರಿ. ಶ. ೧೭೫೬ ಜೂನ್ ೧೫ನೆಯ ಮಂಗಳವಾರಕ್ಕೆ ಹೊಂದುತ್ತದೆ.[17] ಈ ಹಿನ್ನೆಲೆಯಲ್ಲಿ, ಗೌಡನಹಳ್ಳಿ ಶಾಸನದ ತೇದಿಯನ್ನು ಗಮನಿಸಿದರೆ, ಲೂಯಿ ರೈಸ್ ಅವರ ಓದಿಕೆಯ ಪ್ರಕಾರ, ಇದನ್ನು 'ಶಕ ವರುಷ ೧೬೭೯ನೆಯ ಧಾತುನಾಮ ಸಂವತ್ಸರ ವಯಿಶಾಕ ಶು [18] ೧ ಸ್ಥಿರವಾರದಲ್ಲು' ಕೊಟ್ಟಿದೆ. ಇಂಗ್ಲಿಷ್ ತೇದಿಯ ಪ್ರಕಾರ, ಇದು ಕ್ರಿ.ಶ. ೧೭೫೬ ಏಪ್ರಿಲ್ ೩೦ ಶುಕ್ರವಾರಕ್ಕೆ ಹೊಂದುತ್ತದೆ. ಇಲ್ಲಿಯ 'ಶುಕ್ಲ ೧ ಸ್ಥಿರವಾರ'ವು ಲೂಯಿ ರೈಸ್ ಅವರ ಓದಿಕೆಯ ಮಟ್ಟಿಗೆ ಶುಕ್ರವಾರದಂದು ಆರಂಭಗೊಳ್ಳುತ್ತದೆ. ಆದರೆ 'ಬಹುಳ ೧ ಸ್ಥಿರವಾರ'ವು ಶನಿವಾರಕ್ಕೆ ಅನ್ವಯಿಸುತ್ತದಾದ್ದರಿಂದ ಇಲ್ಲಿ 'ಬಹುಳ' ಎಂಬುದೇ ಸರಿ. ಶಾಸನದಲ್ಲಿಯೂ ಹಾಗೆಯೇ ಹೇಳಿದೆ. ಆಗ ಈ ತೇದಿಯು ಕ್ರಿ.ಶ. ೧೭೫೬ ಮೇ ೧೫ ಶನಿವಾರಕ್ಕೆ ಹೊಂದುತ್ತದೆ. ಈ ದೃಷ್ಟಿಯಿಂದ ಓಬವ್ವನಾಗತಿಯು ಕಾಲವಾದುದಕ್ಕೂ ಈ ದಾನಶಾಸನ ಹಾಕಿಸಿದುದಕ್ಕೂ ಸಂಬಂಧ ಇದ್ದಿರಬೇಕೆಂಬ ಸಂಶಯವು ಮೇಲ್ನೋಟಕ್ಕೇ ಮೂಡದಿರಲಾರದು (ಶಾಸನ ಪಾಠ ನೋಡಿ).

ಆದರೆ ವಂಶಾವಳಿಯಲ್ಲಿ ಉಲ್ಲೇಖಿಗೊಂಡಿರುವ ಓಬವ್ವನಾಗತಿಯು ಕಾಲವಾದ ಸೂಚನೆಯುಳ್ಳ ತೇದಿಯು ಗೌಡನಹಳ್ಳಿ ಶಾಸನದಲ್ಲಿಯ ತೇದಿಗೆ ಹೊಂದಿಕೆಯಾಗುವುದಿಲ್ಲವೆಂಬುದು ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಾಗುತ್ತದೆ. ಈ ನಾಗತಿಯು ಮೃತಳಾಗುವ ಸುಮಾರು ಒಂದು ತಿಂಗಳು ಮೊದಲೇ ಗೌಡನಹಳ್ಳಿ ಶಾಸನವನ್ನು ಹಾಕಿಸಿರುವಂತೆ ಇಲ್ಲಿ ಕಂಡುಬಂದರೂ ವಾಸ್ತವವಾಗಿ ಆಕೆಯು ಮೃತಳಾದ ನಂತರವೇ ರಾಜಾ ಮದಕರಿನಾಯಕನು ಆಕೆಗೆ ಸದ್ಗತಿ ದೊರಕಲೆಂಬ ಉದ್ದೇಶದಿಂದ ಈ ದಾನಶಾಸನ ಹಾಕಿಸಿರುವನೆಂದು ಖಚಿತವಾಗಿ ಹೇಳಬಹುದು. ಈ ಶಾಸನವು ಈ ನಾಗತಿಯ ಹೆಸರಿನಲ್ಲೆ (ಆಕೆಯ ನೆನಪಿಗಾಗಿ) ಇದೆಯೆಂಬುದು ಸುಸ್ಪಷ್ಟ. ಆಕೆಯು ಕಾಲವಾದ ತೇದಿಯನ್ನು ಉಲ್ಲೇಖಿಸುವಲ್ಲಿ ವಂಶಾವಳಿಕಾರರು ವ್ಯತ್ಯಾಸ ಮಾಡಿರುವುದನ್ನು ಈ ಸಂಬಂಧದಲ್ಲಿ ಪರಿಶೀಲಿಸಬೇಕಾಗುತ್ತದೆ. ಇದು ಸಹ ಆಕೆಯ ಮರಣಾನಂತರವೇ ಈ ಶಾಸನವನ್ನು ಹಾಕಿಸಿರುವ ಸಾಧ್ಯತೆ ಕುರಿತು ಪರೋಕ್ಷ ಸೂಚನೆ ನೀಡುತ್ತದೆ.

ಈ ಬಗೆಗೆ ಇಲ್ಲಿ ಪ್ರಸ್ತಾಪಿಸಬೇಕಾದ ಮತ್ತೊಂದು ಮುಖ್ಯಾಂಶವೆಂದರೆ, 'ಚಿತ್ರದುರ್ಗದ ಬಖೈರು'ನಲ್ಲಿ ರಾಜಾ ಮದಕರಿಯು ಈ ನಾಗತಿಯನ್ನು 'ನಮ್ಮ ಮಾತೋಶ್ರೀ ಓಬವ್ವನಾಗತಿಯವರು' ಎಂದು ಸಂಬೋಧಿಸಿರುವನು (ಪು. ೫೪). 'ಬಖೈರ್'ನ ಕೆಲವು ಪ್ರತಿಗಳಲ್ಲಿ ಈಕೆಯನ್ನು 'ಮಹಾ ಮಾತೋಶ್ರೀ ಓಬಕ್ಕ ನಾಗತಿಯವರು' ಎಂತಲೂ ಹೇಳಿದೆ. ಒಟ್ಟಿನಲ್ಲಿ, ರಾಜಾ ಮದಕರಿಯು, ತನ್ನನ್ನು ದುರ್ಗದ ಸಿಂಹಾಸನದ ಮೇಲೆ ಕೂರಿಸಲು ಕಾರಣಳಾದ ಹಾಗೂ ತನ್ನನ್ನು ಪೋಷಿಸಿ, ತನ್ನ ಪರವಾಗಿ ರಾಜ್ಯದ ಸೂತ್ರವನ್ನು ಹಿಡಿದು ಎರಡು

17. ಎಂ. ಎಸ್. ಪುಟ್ಟಣ್ಣ ಅವರು 'ಚಿತ್ರದುರ್ಗದ ಪಾಳಯಗಾರರು' ಗ್ರಂಥದಲ್ಲಿ (ಬೆಂಗಳೂರು, ೧೯೨೪), ಈ ನಾಗತಿಯು 'ಧಾತು ಸಂ॥ ಜ್ಯೇಷ್ಠ ಶು॥ ೩ಯಲ್ಲು' ತೀರಿಹೋದಳೆಂದು ಉಲ್ಲೇಖಿಸಿದ್ದಾರೆ (ಪು. ೬೨). ಇದನ್ನು 'ಕ್ರಿ॥ ೧೭೫೫' ಎಂದು ಗ್ರಂಥದ ಕಡೆಯಲ್ಲಿರುವ 'ಕಾಲಾನುಸರಣಿಕೆ' ವಿಭಾಗದಲ್ಲಿ (ಪು. ೬) ಸೂಚಿಸಿದ್ದಾರೆ. ಆದರೆ ಇದು ಕ್ರಿ.ಶ. ೧೭೫೬ ಜೂನ್ ೧ ನೆಯ ಮಂಗಳವಾರಕ್ಕೆ ಹೊಂದುತ್ತದೆ. ಬಹುಶಃ ಇವರಿಗೆ ದೊರೆತ ವಂಶಾವಳಿ ಪ್ರತಿಯಲ್ಲಿ ಹೀಗಿರಬಹುದು. ಆದರೆ ಈ ಎರಡು ತೇದಿಗಳೂ ಅನುಮಾನಾಸ್ಪದವಾದುವು.


18. ಇದನ್ನು 'ಬ' (ಬಹುಳ) ಎಂಬುದಕ್ಕೆ 'ಶು' (ಶುಕ್ಲ) ಎಂದು ತಪ್ಪಾಗಿ ಓದಲಾಗಿದೆ. ಈ ಲೇಖನದ ಕೊನೆಯಲ್ಲಿ ಕೊಟ್ಟಿರುವ ಈ ಶಾಸನದ ಪರಿಷ್ಕೃತ ಪಾಠವನ್ನು ಗಮನಿಸಿ.

ವರುಷಗಳ ಕಾಲ ಸುಸೂತ್ರವಾಗಿ ಆಳ್ವಿಕೆ ನಡೆಸಿ ಮೃತಳಾದ 'ಮಾತೋಶ್ರೀ ಓಬಮ್ಮನಾಗತಿಯವರ' ಹೆಸರಿನಲ್ಲಿ ತನ್ನ ಹಿರಿಯರಿಗೆ ಪುಣ್ಯವಾಗಬೇಕೆಂದು ಹಿರಿಯೂರಿನಲ್ಲಿ ಮಠವೊಂದನ್ನು ಮಾಡಿಸಿ ಅದಕ್ಕೆ ಅದೇ ಸೀಮೆಯೊಳಗಿನ ಗೌಡನಹಳ್ಳಿಯನ್ನು ದಾನಪೂರ್ವಕವಾಗಿ ಬಿಟ್ಟುಕೊಟ್ಟನೆಂಬುದು ಇದರಿಂದ ಮತ್ತಷ್ಟು ದೃಢಪಡುತ್ತದೆ. ತಮ್ಮ ತಂದೆ-ತಾಯಿಯವರಿಗೆ ಅಥವಾ ಹಿರಿಯರಿಗೆ ಪುಣ್ಯವಾಗಲೆಂದು ಈ ರೀತಿಯಲ್ಲಿ ದಾನ ನೀಡಿ ಆ ಪ್ರಯುಕ್ತ ಶಾಸನಗಳನ್ನು ಹಾಕಿಸುತ್ತಿದ್ದುದು ಈ ನಾಯಕರು ಸಹ ಅನುಸರಿಸಿಕೊಂಡು ಬಂದಿದ್ದ ಪದ್ಧತಿಯಾಗಿದ್ದಿತು. ಬಿಚ್ಚುಗತ್ತಿ ಭರಮಣ್ಣನಾಯಕನು ಸಹ ತನ್ನ ಮಾತಾ–ಪಿತೃಗಳಿಗೆ ಪುಣ್ಯವಾಗಬೇಕೆಂದು ದಾನ ಮಾಡಿದುದನ್ನು ಪ್ರಸ್ತುತ ಸಂದರ್ಭಕ್ಕೆ ಒಂದು ಸಾಮಾನ್ಯ ಉದಾಹರಣೆಯಾಗಿ ತೋರಿಸಬಹುದು.[19]

ಈ ಮೇಲಿನ ಚರ್ಚೆ ಹಾಗೂ ಪ್ರಸ್ತಾಪಿಸಲಾಗಿರುವ ಪೂರಕ ಮಾಹಿತಿಯನ್ನನುಸರಿಸಿ ಗೌಡನಹಳ್ಳಿ ಶಾಸನದ ಮರು ಪರಿಶೀಲನೆಯ ಹಿನ್ನೆಲೆಯಲ್ಲಿ ಈ ಮುಂದಿನಂತೆ ನಿರ್ಣಯಗಳನ್ನು ಮಂಡಿಸಬಹುದು : ೧. ಈ ದಾನ ಶಾಸನದ ತೇದಿಯು ಶಕವರುಷ ೧೬೨೪ನೆಯ ಧಾತ್ರಿನಾಮ ಸಂವತ್ಸರ ವೈಶಾಖ ಬಹುಳ ೧ ಸ್ಥಿರವಾರ, ಅಂದರೆ ಕ್ರಿ. ಶ. ೧೭೦೨ ಮೇ ೧೫ ಶನಿವಾರ ; ೨. ಇದನ್ನು ಹಾಕಿಸಿದ ರಾಜಾ ಮದಕರಿನಾಯಕನ 'ತಂದೆ'ಯು 'ದುಗಪಣಯಕ', 'ದುಗಣಪಣಯಕ' ಅಥವಾ 'ದುರುಗಪ್ಪನಾಯಕ' ಅಲ್ಲ, '(ಕಸ್ತೂರಿ) ರಂಗಪ(್ಪ)ನಾಯಕ' ; ೩. ನಾಯಕನು ಇದನ್ನು ತನ್ನ 'ಮಾತೋಶ್ರೀ ಓಬಮ್ಮನಾಗತಿಯವರ' ಹೆಸರಿನಲ್ಲಿ ಸ್ಥಾಪಿಸಿದ್ದಾನೆ, ಹಾಗೂ ಈ ಶಾಸನಕ್ಕೆ ಹೊರಕೆರೆದೇವರಪುರದ ಶಾಸನವು ಪೂರಕವಾಗಿದೆ.

* * *

ಗೌಡನಹಳ್ಳಿಯ 'ಊರುಬಾಗಿಲು' ಮುಂಭಾಗದಲ್ಲಿ ಅದಕ್ಕೆ ಒರಗಿಸಿರುವಂತೆಯೇ ಈಗ ಈ ಶಾಸನ ಕಂಡುಬರುತ್ತದೆ. ಸ್ಥಳೀಯವಾಗಿ ದೊರಕುವ ಚಪ್ಪಡಿ ಕಲ್ಲನ್ನು ಬಳಸಿ ಅದರ ಮೇಲೆ ಶಾಸನದ ಪಾಠವನ್ನು ಕಂಡರಿಸಲಾಗಿದೆ. ಲೂಯಿ ರೈಸ್ ಅವರು ಪ್ರಕಟಿಸಿರುವ ಈ ಶಾಸನದ ಪಾಠದಲ್ಲಿ ಒಟ್ಟು ೨೧ ಸಾಲುಗಳಿದ್ದುವೆಂದು ತಿಳಿದರೂ ಈಗ ಆರಂಭದ ೧೦ ಸಾಲುಗಳ ವಿನಾ ಉಳಿದ ಎಲ್ಲ ಸಾಲುಗಳು ಆ ಭಾಗದ ಕಲ್ಲಿನ ಚಕ್ಕಳ ಎದ್ದು ಹೋಗಿರುವುದರಿಂದ ಕಾಣೆಯಾಗಿವೆ. ೧೦ನೆಯ ಸಾಲಿನಲ್ಲಿ



ಗೌಡನಹಳ್ಳಿ ಶಾಸನದ ಪಾಠ : ಮೂಲ (ಮೇಲೆ), ಅದರ ಪ್ರತಿ (ಕೆಳಗೆ)

19. *E. C.*, Vol. XI, Hl. 105 (1702 A.D.) : ಈ ಶಾಸನದ ಪಾಠವು ತ್ರುಟಿತವಾಗಿರುವುದೆಂದು ತೋರಿಸಲಾಗಿರುವುದರಿಂದ ಈ ನಾಯಕನು ಏನನ್ನು ದಾನ ಮಾಡಿರುವನೆಂಬುದು ಸ್ಪಷ್ಟಪಡುವುದಿಲ್ಲ.

ಸಹ ಕೆಲವು ಅಕ್ಷರಗಳ ಹೊರತು ಇತರ ಅಕ್ಷರಗಳು ಮಾಯವಾಗಿವೆ. ಅಲ್ಲದೆ, ಈ ಶಾಸನದ ಕಲ್ಲು ಓರೆಯಾಗಿ ಸೀಳಿ ಎರಡು ಭಾಗವಾಗಿರುವುದರಿಂದ ಸೀಳಿನ ಅಕ್ಕಪಕ್ಕದ ಸಾಲುಗಳಲ್ಲಿಯು ಕೆಲವು ಅಕ್ಷರಗಳು ಮುಕ್ಕಾಗಿವೆ. ಇದೇ ಸ್ಥಿತಿಯು ೭ ರಿಂದ ೧೦ ರ ವರೆಗಿನ ಸಾಲುಗಳಿಗೂ ಉಂಟಾಗಿದೆ. ಆದರೆ ಶಾಸನ ಪಾಠದ ಮುಖ್ಯಭಾಗವು ಸ್ಪಷ್ಟವಾಗಿದ್ದು ಪ್ರಸ್ತುತ ಅಧ್ಯಯನಕ್ಕೆ ಅನುಕೂಲಕರ ವಾಗಿದೆ.[20]

ಶಾಸನದ ಪಾಠದಲ್ಲಿ ಬರುವ ಕೆಲವು ಸಂಗತಿಗಳನ್ನು ಇಲ್ಲಿ ಪರಿಶೀಲಿಸುವುದಾದರೆ, ರಾಜಾ ಮದಕರಿನಾಯಕನು ತನ್ನ ಅವಧಿಯ ಇತರ ಶಾಸನಗಳಲ್ಲಿರುವಂತೆಯೇ ಕಸ್ತೂರಿ ರಂಗಪ್ಪನಾಯಕನನ್ನೇ ತನ್ನ ತಂದೆ ಎಂಬುದಾಗಿ ಕರೆದು ಕೊಂಡಿದ್ದಾನೆ; ಜತೆಗೆ (ಹಿರಿಯ) ಮದಕರಿನಾಯಕನನ್ನು (ರಂಗಪ್ಪನ ತಂದೆ) ತನ್ನ ಅಜ್ಜನೆಂಬುದಾಗಿ ಉಲ್ಲೇಖಿ ಸಿರುವುದು ವಿಶೇಷವಾಗಿದೆ. ಅರಸುತನದ ರೀತಿ-ರಿವಾ ಜನ್ನು ಇಲ್ಲಿ ಕ್ರಮವರಿತು ಬಳಸಲಾಗಿದೆ. ಮೇಲೆ ತಿಳಿಸಿದ, ಕ್ರಿ.ಶ. ೧೭೫೭ ಮೇ ೨೮ ಶನಿವಾರದಂದು ಈ ನಾಯಕನು ನೀಡಿದ ದಾನಶಾಸನ(ತಾಮ್ರಪಟ)ದಲ್ಲಿಯೂ ಹೀಗೆಯೇ ಬರೆಯಿಸಲಾಗಿದೆ.[21] ಇತರ ಶಾಸನಗಳಲ್ಲಿಯೂ ಈ ನಾಯಕನು 'ಕಸ್ತೂರಿ ರಂಗಪ್ಪನಾಯಕರ ರಾಜಾ ಮದಕರಿ ನಾಯಕರು' ಎಂತಲೇ ಹೇಳಿಕೊಂಡಿರುವನು.[22] ಇಂತಹ ಅನೇಕ ಉದಾಹರಣೆಗಳಿವೆ. ಇಲ್ಲಿ ಉಲ್ಲೇಖಾರ್ಹವಾದ ಅಂಶವೆಂದರೆ, ವಂಶಾವಳಿಕಾರರ ಪ್ರಕಾರ, ದುರ್ಗದ ಇತಿಹಾಸದಲ್ಲಿ ಎರಡನೆಯ ಸಂತತಿಯ ಆಳ್ವಿಕೆಯೆಂದು ಹೇಳಲಾಗುವ ಹಾಗೂ ಮೇಲೆಯೇ ಪ್ರಸ್ತಾಪಿಸಲಾಗಿರುವ 'ಬಿಳಿಚೋಡು ಸಂತತಿ' (ಅಥವಾ 'ಆದಿಬುಳ್ಳನ ಸಂತತಿ')ಗೆ ಸೇರಿದವನೆನಿಸಿದ ಬಿಚ್ಚುಗತ್ತಿ ಭರಮಣ್ಣ ನಾಯಕನು ಸಹ ತಾನು ಹಾಕಿಸಿದ ಶಾಸನಗಳಲ್ಲಿ, ದುರ್ಗದ ಸಿಂಹಾಸನವನ್ನೇರಿದ ತನಗಿಂತ ಹಿಂದಿನ ಅರಸರನ್ನು ಹೆಸರಿಸಿರುವನು. 'ಕಾಮಗೆತ್ತಿ ಕಸ್ತೂರಿ ರಂಗಪ್ಪ ನಾಯಕರ ಪೌತ್ರರಾದ ಮೆದಕೆರಿನಾಯಕರ ಪುತ್ರರಾದ ಬರಮಂಣನಾಯಕರು' ಎಂದು ತನ್ನನ್ನು ಕರೆದುಕೊಂಡು ಅರಸು ಮನೆತನದ ಪರಂಪರೆಯನ್ನು ಉಳಿಸಿಕೊಂಡಿರು ವನು.[23] ಈಗನ ಮಗ ಹಿರಿಯ ಮದಕರಿಯು ಸಹ ತಾನು ಕಸ್ತೂರಿ ಮದಕರಿನಾಯಕನ ಪೌತ್ರನೆಂದೂ ಭರಮಣ್ಣನಾಯಕನ ಪುತ್ರನೆಂದೂ ಹೇಳಿಕೊಂಡು ಇದೇ ಕ್ರಮವನ್ನು ಮುಂದುವರೆಸಿರುವನು.[24] ರಾಜಾ ಮದಕರಿಯೂ ಈ ಪದ್ಧತಿಯನ್ನೇ ಅನುಸರಿಸಿರುವನೆಂದು ತಿಳಿಯಬಹುದು.

ಶಾಸನದಲ್ಲಿ ಹೇಳಿರುವ 'ಹಿರಿಯೂರು ಸೀಮೆ'ಯು (ಒಂದನೆಯ) ಕಸ್ತೂರಿ ರಂಗಪ್ಪನಾಯಕನ ಕಾಲದಿಂದಲೇ ಚಿತ್ರದುರ್ಗ ಸಂಸ್ಥಾನಕ್ಕೆ ಸೇರಿದ್ದಿತೆಂಬುದಕ್ಕೆ ಚರಿತ್ರೆಯಲ್ಲಿ ಸೂಚನೆಯಿದೆ. ಹಿರಿಯ ಮದಕರಿಯು ಆಳಿದ ಸೀಮೆ ಗಳಲ್ಲಿ ಇದೂ ಒಂದಾಗಿದ್ದಿತು. ರಾಜಾ ಮದಕರಿಯ ಕಾಲಕ್ಕೂ ಅದು ಚಿತ್ರದುರ್ಗದ ಒಂದು ಭಾಗವಾಗಿಯೇ ಮುಂದುವರೆಯಿತು. ಆದ್ದರಿಂದಲೇ ಶಾಸನದಲ್ಲಿ 'ನಾವಾಳುವಂತ್ತ ರಾಜ್ಯ ಹಿರ್‍ರಿಯೂರ ಸೀಮೆಯೊಳಗಣ ಗಲುಡನಹಳಿ(ೃ) ಗಾ(ೢ)ಮು' ಎಂದು ಪ್ರಸ್ತಾಪಿಸ ಲಾಗಿದೆ.

---

20. ಇಲ್ಲಿಗೆ ಸುಮಾರು ೫–೬ ವರುಷಗಳ ಹಿಂದೆ ಬೆಂಕಿಯ ಆಕಸ್ಮಿಕಕ್ಕೆ ಒಳಗಾಗಿ ಈ ಕಲ್ಲು ಎರಡಾಗಿ ಸಿಡಿದಿದೆಯೆಂದು ಸ್ಥಳೀಯರು ಕಾರಣ ಕೊಡುತ್ತಾರೆ. ಮತ್ತೊಂದು ಅಕ್ಷರಕಲ್ಲು ಈ ಊರಿನ ಸಮಿಪದ ಕೆರೆಯ ಬಳಿ ಇದ್ದಿತೆಂದೂ ಅದರಲ್ಲಿ 'ರಂಗಪ್ಪ ನಾಯಕ'ನ ಹೆಸರು ಕಂಡುಬರುತ್ತಿದ್ದಿತೆಂದೂ ಹೇಳುವರು. ಆ ಕಲ್ಲನ್ನು ಶೋಧಿಸಲೆತ್ನಿಸಿದರೂ ಅದು ಕಂಡುಬರಲಿಲ್ಲ.

21. *M.A.R.*, 1947–56, pp. 64–66

22. ನೋಡಿ: ಶ್ರೀಮಜ್ಜಗದ್ಗುರು ಶ್ರೀ ಕೂಡ್ಲೀ-ಶೃಂಗೇರಿ ಸಂಸ್ಥಾನದ ಪ್ರಾಚೀನ ಶಾಸನ ಲೇಖನ ಸಂಗ್ರಹ, ಭಾಗ ೧, ಶ್ರೀ ಕೂಡಲೀ ಕ್ಷೇತ್ರ (ಶಿವಮೊಗ್ಗ ಜಿಲ್ಲೆ), ೧೯೬೫: ದಾನಶಾಸನ, ಲೇಖನಗಳ ಕ್ರ.ಸಂ. ೧೦೮ ರಿಂದ ೧೧೨, ೧೧೯ ರಿಂದ ೧೨೧, ಪು. ೭೭-೮೦, ೮೨-೮೪

23. ನೋಡಿ: *E.C.*, Vol. XI, Dg. 131 (1708 A.D.), 130 (1711 A.D.), Jl. 17 (1715 A.D.), Dg. 147 (1716 A.D.), Cd. 56 (1718 A.D.), Dg. 16 (1719 A.D.), ಇತ್ಯಾದಿ

24. *Ibid.*, Dg. 157 (1728 A.D.), Jl. 46 (1733 A.D.), etc.

ಗೌಡನಹಳ್ಳಿಯು ವಿಜಯನಗರದ ಆಳ್ವಿಕೆಯಲ್ಲಿಯೂ 'ಹಿರಿಯೂರು ಸ್ಥಳ'ಕ್ಕೆ ಸೇರಿದ್ದಿತೆಂದು ಕ್ರಿ. ಶ. ೧೫೮೯ ರಲ್ಲಿ ವೆಂಕಟಪತಿರಾಯನು ಕೊಟ್ಟ (ಮಸ್ಕಲ್ಲು ಗ್ರಾಮದಲ್ಲಿ ದೊರೆತ) ತಾಮ್ರಪಟ (ದಾನ) ಶಾಸನದಿಂದ ತಿಳಿದುಬರುತ್ತದೆ.[25] 'ಸಂಮು ರಾಜ್ಯದ ಆಸ್ಥಾನಕ್ಕೆ ನಡೆದಂಥ ಹಿರಿಯೂರ ಸ್ಥಳಾಂತ್ರ'ಗಳೆಂದು ಉಲ್ಲೇಖಿಸಿ, ಆ ಸ್ಥಳಕ್ಕೆ ಸೇರಿದ ಬಗ್ಗನಡು, ಹೊಸೂರು, ಗೌಡನ(ಗವುಡನ)ಹಳ್ಳಿ, ಕುರುಬರಹಳ್ಳಿ, ಲಕ್ಕಿಹಳ್ಳಿ, ಬಸಾಪಟ್ಟಣ, ಆರಳಿಹಳ್ಳಿ, ತಪನಿಧಿ, ಬುಕ್ಕಾಪಟ್ಟಣ, ಇ(ಯಿ)ಕ್ಕನೂರು ಸ್ಥಳಗಳನ್ನು ಪ್ರಸ್ತಾಪಿಸಿದೆ. ಪ್ರತಿಯೊಂದು ಸ್ಥಳದ ವ್ಯಾಪ್ತಿಗೊಳಪಟ್ಟದ್ದ ಗ್ರಾಮಗಳ ಸಂಖ್ಯೆಯನ್ನು ಹೇಳುವಾಗ, 'ಗವುಡನಹಳ್ಳಿ ಸ್ಥಳ ೧ಕ್ಕೆ ಗ್ರಾಮ ೧೦' ಎಂದು ಸೂಚಿಸಿದೆ. ಈ ಎಲ್ಲ ಸ್ಥಳಗಳಿಗೆ ಸಲ್ಲುವ ಮಾನ್ಯದ ಗದ್ದೆಗಳ ವಿವರವನ್ನು ನೀಡುವುದರೊಂದಿಗೆ 'ಗವುಡನಹಳ್ಳಿ ಕೆರೇ ಕೆಳಗೆ ಖ ೦।೦' ಎಂದಿರುವುದರಿಂದ, ಈಗ ಗೌಡನಹಳ್ಳಿಯ ಎಲ್ಲೆಯಲ್ಲಿ ಬರುವ ಕೆರೆಯು ಆಗಾಗಲೇ ನಿರ್ಮಾಣಗೊಂಡಿದ್ದಿತು. ಒಟ್ಟಿನಲ್ಲಿ, ಗೌಡನಹಳ್ಳಿಯು ಹಿಂದಿನಿಂದಲೂ ಹಿರಿಯೂರು ಸ್ಥಳ (ಅಥವಾ ಸೀಮೆ)ಗೆ ಸೇರಿದ್ದು, ಆಡಳಿತದ ವಿಭಾಗಕ್ಕೊಳಪಟ್ಟ ಪ್ರಮುಖ ಗ್ರಾಮಗಳಲ್ಲಿ ಒಂದಾಗಿದ್ದಿತೆನ್ನುವುದು ಇಲ್ಲಿ ವ್ಯಕ್ತಪಡುತ್ತದೆ.

ಚಿತ್ರದುರ್ಗ ಸಂಸ್ಥಾನವನ್ನು ಮೊದಲನೆಯ ಅರಸನಿಂದ (ಎರಡನೆಯ) ಕಸ್ತೂರಿ ರಂಗಪ್ಪನಾಯಕನವರೆಗೆ ಆಳಿದವರೆಲ್ಲರೂ 'ಶ್ರೀಮನ್ಮಹಾನಾಯಕಾಚಾರ್ಯ' ಎಂದೇ ಕರೆದುಕೊಂಡಿದ್ದರೆ, ಈ ಮದಕರಿಯು ತನ್ನನ್ನು 'ರಾಜಾ' ಎಂದು ಹೇಳಿಕೊಂಡಿದ್ದಾನೆ. ತಾನು ನೀಡಿದ ಶಾಸನ, ನಿರೂಪ, ವ್ಯವಹಾರಗಳಲ್ಲಿ ಹಾಗೆಂದೇ ಕರೆಯಿಸಿಕೊಂಡಿದ್ದಾನೆ. ಬಹುಶಃ ಈತನು ಅಧಿಕಾರಕ್ಕೆ ಬರುವ ವೇಳೆಗೆ ದುರ್ಗದ ಸಂಸ್ಥಾನವು ದಕ್ಷಿಣಭಾರತದ ರಾಜಕೀಯ ಆಗು–ಹೋಗುಗಳಲ್ಲಿ ಪಡದುಕೊಂಡಿದ್ದ ಪ್ರಾಮುಖ್ಯತೆಯು ಕಾರಣವಿರಬಹುದು; ಬಲಿಷ್ಠ ಸಂಸ್ಥಾನಗಳಲ್ಲಿ ದುರ್ಗವು ಒಂದಾಗಿದ್ದುದೂ ಇದಕ್ಕೆ ಪ್ರೇರಣೆ ನೀಡಿರಬಹುದು; ಸಮಕಾಲೀನ ಸಂಸ್ಥಾನಿಕರಲ್ಲಿ ಕೆಲವರು ಧರಿಸುತ್ತಿದ್ದ ಇಂತಹ ಅಭಿಧಾನವೂ ಈ ಹಿನ್ನೆಲೆಯಲ್ಲಿ ಪ್ರಭಾವ ಬೀರಿರಬಹುದು.

ಈ ಶಾಸನದಲ್ಲಿ 'ಮಾತೋಶ್ರೀ ಓಬಮ್ಮನಾಗತಿಯವರ' ಎಂಬುದನ್ನು 'ಮಾ॥ ॥ಯವರ' ಎಂದಷ್ಟೆ ತೋರಿಸಿದೆ. ಕೆಲವೊಮ್ಮೆ ಈ ನಾಯಕರು ಸಂಬಂಧಿಸಿದವರ, ಅಂದರೆ ಅರಸರು, ಧರ್ಮಪೀಠಾಧಿಕಾರಿಗಳು ಮತ್ತಿತರ ಗೌರವಾನ್ವಿತರ ಹೆಸರುಗಳನ್ನು ಪೂರ್ತಿ ಪ್ರಸ್ತಾಪಿಸದೆ, ತಮ್ಮ ಪತ್ರವ್ಯವಹಾರ, ನಿರೂಪ, ಶಾಸನ ಇತ್ಯಾದಿಗಳಲ್ಲಿ ಇದೇ ಕ್ರಮವನ್ನನುಸರಿಸಿದ್ದಾರೆ. 'ರಾ॥ ॥ಗಳು' ಅಥವಾ 'ರಾ।ಗಳು' ಎಂದು ಅರಸರುಗಳಿಗೂ 'ಶ್ರೀ। ಸ್ವಾಮಿಗಳವರು' ಅಥವಾ 'ಮ॥ ರಾ॥ ಗಳವರು' ಎಂದು ಮಠಾಧೀಶರುಗಳಿಗೂ ಸಂಬೋಧಿಸಿರುವುದುಂಟು. ಇತರ ಸಂಸ್ಥಾನಿಕರೂ ಇದೇ ಕ್ರಮವನ್ನು ಅನುಸರಿಸುತ್ತಿದ್ದರೆಂಬುದಕ್ಕೆ ಉದಾಹರಣೆಗಳಿವೆ.

ರಾಜಾ ಮದಕರಿಯು ಹಿರಿಯೂರಿನಲ್ಲಿ ಮಾಡಿಸಿದ 'ಅಂನಛತ್ರದ ಮಠ' ಯಾವುದೆಂಬುದಕ್ಕೆ ತಕ್ಕ ಸಮಾಧಾನ ನೀಡುವುದು ಸದ್ಯಕ್ಕೆ ಅಸಾಧ್ಯ. ಹಿರಿಯೂರಿನ ವಿವಿಧ ಸ್ಥಳಗಳನ್ನು, ಮಠಗಳನ್ನು ಈ ಸಂಬಂಧದಲ್ಲಿ ಅನ್ವಯಿಸಿ ಊಹಿಸಲಾಗುತ್ತದೆ. ಈ ಮಠದ ಕಟ್ಟಡವು ಈಗ ಅಸ್ತಿತ್ವದಲ್ಲಿಲ್ಲವೆಂತಲೂ ಸುಮಾರು ೧೯೧೮-೧೯ರ ವರೆಗೆ ಈ ಮಠದ ಸ್ಮಾರಕವು ಉಳಿದಿದ್ದಿತೆಂತಲೂ ಈ ಜಾಗವನ್ನು 'Kitchen' ಎನ್ನುತ್ತಿದ್ದರೆಂತಲೂ ಹೇಳಲಾಗುತ್ತದೆ.[26] ಇದೊಂದು ಪರಿಶೋಧಿಸಬೇಕಾದ ವಿಷಯ ಎನ್ನಬಹುದು.

ಪ್ರಸ್ತುತ ಗೌಡನಹಳ್ಳಿ ಶಾಸನದ ಮರು ಪರಿಶೀಲನೆಯಲ್ಲಿ, ಲೂಯಿ ರೈಸ್ ಅವರು ಪ್ರಕಟಿಸಿರುವ ಪಾಠಕ್ಕೂ

---

25. *Ibid.*, Hr. 88 (1589 A.D.)

26. ಈ ಮಾಹಿತಿ ಒದಗಿಸಿದವರು ಹಿರಿಯೂರಿನ ವಯೋವೃದ್ಧರಾದ ಹೆಚ್. ಟಿ. ಮಹಲಿಂಗನಾಯಕ ಅವರು. ದಿನಾಂಕ ೧೩-೧೦-೮೬ ರಂದು ಈ ಮಠದ ಪರಿಶೋಧನೆಯ ನಿಮಿತ್ತ ಹಿರಿಯೂರಿನಲ್ಲಿದ್ದಾಗ ಅಲ್ಲಿಯ ಯಳನಾಡು ಅಂಜನಪ್ಪ ಮತ್ತಿತರರು ಜತೆಗಿದ್ದು ಸಹಕರಿಸಿರುತ್ತಾರೆ.

ಮರು ಓದಿಕೆಯಲ್ಲಿ ಪರಿಷ್ಕರಿಸಿರುವ ಪಾಠಕ್ಕೂ ಇರುವ ಕೆಲವು ಮುಖ್ಯ ವ್ಯತ್ಯಾಸಗಳನ್ನು ಇತರ ಸಾಮಾನ್ಯ ವ್ಯತ್ಯಾಸಗಳೊಡನೆ ಇಲ್ಲಿ ಕಾಣಿಸಿದೆ. ಶಾಸನ ಪಾಠದ ತಿದ್ದುಪಡಿಯ ಸಂಬಂಧದಲ್ಲಿ ಇಲ್ಲಿ ಪ್ರಸ್ತಾಪಿಸಬೇಕಾದ ಅಂಶಗಳೆಂದರೆ, ಈ ಶಾಸನವನ್ನು ಓದಿದವರು ಪಾಠವನ್ನು ಎಚ್ಚರಿಕೆಯಿಂದ ಗಮನಿಸುವಲ್ಲಿ, ಲಿಪಿಶೈಲಿ ಹಾಗೂ ವೈಶಿಷ್ಟ್ಯಗಳನ್ನು ಪರಿಗಣಿಸುವಲ್ಲಿ, ಕಾಲಮಾನದ ಕ್ರಮ ವನ್ನನುಸರಿಸಿದ ಸಾಮಾನ್ಯ ಸೂತ್ರವನ್ನು ಅನ್ವಯಿಸುವಲ್ಲಿ ಹಾಗೂ ಲಿಪಿಗಳ ಪರಸ್ಪರ ಹೋಲಿಕೆಯೊಡನೆ ಪರಿಶೀಲಿ ಸಿದ ಶುದ್ಧ ಪಾಠವನ್ನು ಕೊಡುವುದರೊಂದಿಗೆ ಚರಿತ್ರೆಗೆ ಪೂರಕವೆನಿಸುವ ನೈಜಾಂಶಗಳನ್ನು ಒದಗಿಸಲು ಪ್ರಯತ್ನಿ ಸುವಲ್ಲಿ ಇನ್ನಷ್ಟು ಶ್ರಮವಹಿಸಬಹುದಿತ್ತು.[27] ಇಂತಹ ಲೋಪ ಉಂಟಾಗಲು ಶಾಸನ ಓದಿದವರು ಮಾತ್ರವಲ್ಲದೆ ಅದನ್ನು ಕಂಡರಿಸಿದವರೂ ಕಾರಣರಾಗಿದ್ದಾರೆನ್ನಬಹುದು. ಲಿಪಿಯ ಕಂಡರಣೆಯಲ್ಲಿ ಸಮಕಾಲೀನ ಲಿಪಿಶೈಲಿಯು ಚೆನ್ನಾಗಿ ಮೂಡಿ ಬಂದಿದೆಯಾದರೂ ಶಾಸನದಲ್ಲಿಯ 'ಶ' ಅಥವಾ 'ಶು' ಮತ್ತು 'ಬ' ಹಾಗೂ 'ವ' ಮತ್ತು 'ಪ' ಅಕ್ಷರಗಳಲ್ಲಿ ಕೊಂಚಮಟ್ಟಿನ ಹೋಲಿಕೆಯಿರುವುದರಿಂದ ಪಾಠವನ್ನು ತಪ್ಪಾಗಿ ಓದಿರುವ ಸಾಧ್ಯತೆಯನ್ನು ಒಪ್ಪ ಬೇಕಾಗುತ್ತದೆ. ಶಾಸನದ ಆರಂಭದಲ್ಲಿ ಬರುವ 'ನಮ ಸ್ತುಂಗ...' ಪದದಲ್ಲಿಯ 'ಮ' ಅಕ್ಷರವನ್ನು ೯ ನೆಯ ಸಾಲಿನ ಮೊದಲನೆಯ ಅಕ್ಷರ 'ಮಾ' (ಈಗಿನ ಓದಿಕೆ) ಯೊಡನೆ ಹೋಲಿಸಿ ನೋಡಬಹುದು. ನಾಲ್ಕನೆಯ ಸಾಲಿನ ಕೊನೆಯ ಅಕ್ಷರ 'ಬ' (=ಬಹುಳ) ವನ್ನು 'ಶು' (=ಶುಕ್ಲ) ಎಂದು ಓದಿರುವುದಕ್ಕೆ ಲಿಪಿ ಕಂಡರಣೆ ಯಲ್ಲಿಯ ವಿಲಕ್ಷಣತೆಯೇ ಕಾರಣ. ಹಾಗೆಯೇ 'ನಾ' ಎಂಬುದು ಇಲ್ಲಿ 'ಣ' ಆಗಿ ಕಂಡಿರುವುದಕ್ಕೂ ಇದೇ ಕಾರಣ. 'ಣ' ಲಿಪಿಯು ಶಾಸನದಲ್ಲಿ ಈಗ ಉಳಿದು ಕೊಂಡಿರುವ ಪಾಠದ ಯಾವ ಸಾಲಿನಲ್ಲಿಯೂ ಸೇರಿಲ್ಲ ವಾದ್ದರಿಂದ, ಈ ನಾಯಕರ ಇತರ ಶಾಸನಗಳಲ್ಲಿಯ ಈ ಲಿಪಿಯೊಡನೆ ಹೋಲಿಸಿ ನೋಡಬಹುದು. ಇಲ್ಲಿಯ 'ನಾ' ಲಿಪಿಯ 'ತಲೆಕಟ್ಟು' ಸಾಮಾನಾಂತರದಲ್ಲಿಲ್ಲದೆ ಕೊಂಚ ಕೆಳಕ್ಕೆ ಬಾಗಿರುವುದರಿಂದ ಅದನ್ನು 'ಣ' ಎಂದು ತಿಳಿಯಲು ಅವಕಾಶವಾಗಿದೆ. ಅಲ್ಲದೆ, ಶಾಸನ ಪಾಠದಲ್ಲಿ ಆಯಾ ಸಂದರ್ಭವನ್ನನುಸರಿಸಿ 'ನಾಯಕ' ಎಂದೇ ಕಂಡರಿ ಸಿರುವಾಗ ಹಾಗೂ ಹಾಗೆಯೇ ಓದಿರುವಾಗ 'ನಾಯಕ' ಎಂಬುದನ್ನು 'ಣಯಕ' ಎಂದು ಭಾವಿಸುವುದಕ್ಕೆ ಅವ ಕಾಶವೇ ಇಲ್ಲ. ಇದರೊಡನೆ ಸೇರಿಕೊಂಡಿರುವ 'ದುಗಪ' ಎಂಬುದು ಸಹ ಇದೇ ರೀತಿಯಲ್ಲಿಯೇ ರೂಪು ತಳೆದಿರು ವಂತಹದು. 'ರ' ಅಕ್ಷರ ಮತ್ತು ಅದರೊಂದಿಗೆ ಸೇರಿರುವ 'ಂ' (ಸೊನ್ನೆ)—ಇವುಗಳನ್ನು ಲಿಪಿ ಕಂಡರಣೆಯಲ್ಲಿಯ ವ್ಯತ್ಯಾಸದಿಂದಾಗಿ 'ದ' ಮತ್ತು 'ು' (ಕೊಂಬು) (='ದು') ಎಂಬುದಾಗಿ ಭಾವಿಸುವುದರೊಡನೆ ಮೂಲ ನಾಮವನ್ನೆ ಮರೆಮಾಚುವಂತಾಯಿತು. ಚರಿತ್ರೆಯ ಶೋಧನೆಯಲ್ಲಿ ಇವುಗಳಿಂದ ಆಗಬಹುದಾದ ಪರಿಣಾಮ ಗಳು ತೀವ್ರವಾಗಿರುವಂತಹವು.

ಸದ್ಯಕ್ಕೆ ಲಭ್ಯವಿರುವ ಗೌಡನಹಳ್ಳಿ ಶಾಸನ ಪಾಠದ ಮೊದಲರ್ಧದಲ್ಲಿಯ ೧೦ ಸಾಲುಗಳನ್ನು ಮರು ಓದಿಕೆಯಿಂದ ವ್ಯಕ್ತಪಟ್ಟ ತಿದ್ದುಪಡಿಯೊಂದಿಗೆ ಈ ಕೆಳಗಿ ನಂತೆ ಕೊಟ್ಟಿದೆ :

(ಮುಂದಿನ ಪುಟ ನೋಡಿ)

27. ಈ ಶಾಸನ ಪಾಠದಲ್ಲಿ ತಪ್ಪಾಗಿ ಓದಲಾಗಿರುವ 'ಪೂತನಾಯರವರ' ಎಂಬುದನ್ನು ಇಂಗ್ಲಿಷ್‌ಗೆ ಲಿಪ್ಯಂತರಗೊಳಿಸುವಾಗ, ಇದನ್ನು ಕೈಬಿಟ್ಟು ಅನುಮಾನಾಸ್ಪದವೆನ್ನುವ ಹಾಗೆ ಆ ಜಾಗದಲ್ಲಿ ಕೇವಲ ಚುಕ್ಕೆಗಳನ್ನು ತೋರಿಸಿರುವುದರಿಂದ ('......vara'), ಶಾಸನದ ನಕಲನ್ನು ಪ್ರತಿ ಮಾಡಿದವರಿಗೆ ಸಹ ತಮ್ಮ ಓದಿಕೆ ತೃಪ್ತಿಕರವಾಗಿಲ್ಲವೆಂದು ತೋರಿದ್ದಿರ ಬಹುದೆಂದು ಇದರಿಂದ ವ್ಯಕ್ತಪಡುತ್ತದೆ.

ಗೌಡನಹಳ್ಳಿ ಶಾಸನದ ಪರಿಷ್ಕೃತ ಪಾಠ

೧. ನಮಸ್ತುಂಗ ಶಿರಶ್ಚುಂಬಿ। ಚೆಂದ್ರ ಚಾಮರ ಚಾರ
೨. ವೇ। ತ್ರೈಲೋಕ್ಯ ನಗರಾರಂಭ। ಮೂಲಸ್ತಂಭಾಯ ಶಂಭವೆ। ಸ್ವ
೩. ಸ್ತಿ ಶ್ರಿ ವಿಜೆಯಾಭ್ಯುದಯ ಶಾಲ್ಲಿವಾಹನ ಶಕ। ವರುಶಂ
೪. ಗಳು। ಸಾ ೧೬೭೮ ನೆಯ। ದಾತ್ರುನಾಮ ಸಂ। ವಯಿಶಾಕ ಬ
೫. ೧ ಸ್ತಿರವಾರದಲ್ಲು। ವಾಲ್ಮಿಕ ಗೊತ್ರದ ಸ್ರಿಮಂನ್ಮಾಹ
೬. ನಾಯಕಾಚಾರ್ಯ। ಕಾಮಗೆತ್ತಿ। ಕಸುರ್‍ರಿ। ಮೆದಕೆರ್‍ರಿ ನಾ
೭. ಯಕರ। ಪಉತ್ರರದಾ। ಕಸ್ತುರ್‍ರಿ ರಂಗಪನಾಯಕರ।
೮. ಪುತ್ರರಾದ। ರಾಜಾ। ಮೆದಕೆರ್‍ರಿನಾಯಕ(ರವ)ರು।
೯. ಮಾ॥ ॥ಯವರ ಹೆಸುರಲ್ಲು। ಹಿರಿಯೂ(ರಲ್ಲು) ಮಾಡಿ
೧೦. ....ತ್ರದ ಮಠಕೆ। ನಂಮ.......ಯರ್‍ರಿ
೧೧. ....ಳು *

---

* ಈ ಶಾಸನದ ಅಧ್ಯಯನದ ಸಂಬಂಧದಲ್ಲಿ ಆಸಕ್ತಿ ತೋರಿ ನನ್ನನ್ನು ಉತ್ತೇಜಿಸಿದ ಚಿತ್ರದುರ್ಗದ ಎಚ್. ಶ್ರೀಶೈಲ ಆರಾಧ್ಯ, ಟಿ. ಎನ್. ಗಂಡುಗಲಿ, ಪಾಂಡವಪುರದ ನಾ. ಪ್ರಭಾಕರ್ ಹಾಗೂ ಅರೇಹಳ್ಳಿಹಟ್ಟಿಯ ಬಿ. ಎಸ್. ಶ್ರೀನಿವಾಸನಾಯಕ ಅವರುಗಳಿಗೆ ಕೃತಜ್ಞನಾಗಿದ್ದೇನೆ.

Notable Source Book-Lokopakara of Chavundaraya

– Dr. G. S. Dikshit

Kannada poets during the 11th century composed new types of works, most of them scientific works which include Chavundaraya's 'Lokopakara', Chandraraja's 'Madana Tilaka' and Durgasimha's 'Panchatnatra' (1031). Sridharacharya wrote a work on astrology. The author of 'Lokopakara', Chavundaraya lived during the days of Chalukya Emperor Jayasimha II (1020–45), and his work is of around 1025. He was an Advaita Brahmin of the Kashyapa Gotra, hailing from Mudgal. Jayasimha II appointed him Sarvadhikari and granted him the village Mahabali.

The work has 12 Adhikaras or Chapters. First two chapters are on astrology, first dealing with 'Panchanga Shuddhi' and the second with 'Muhurtas' for the 14 'Karmas'. Third chapter on architecture includes planning of a house and discussion on the use of the materials. The fourth discusses the natural calamities. The fifth deals with 'water divining' in the sense what Flora or natural phenomena help one locate or strike water if a well is to be sunk. Sixth chapter is on 'Vrikshayurveda', discussing the ways of planting, diseases of plants and their treatment, grafting and some peculiar processes of making one tree yield two types of fruits, or of raising fruits without seeds, etc.

If the seventh chapter deals with perfumes and the methods of their production and sources, eighth is on cookery. It also discusses methods of preserving food items, extracting fruit juice, preparing artificial milk or curds, etc. Ninth is on medicine, not only for men and children but even for animals like cows, horses and elephants. Urine therapy and treatment of consumption, typhoid, leprosy' impotency, etc. are discussed. The tenth chapter dtscusses the question of poisons and their treatment including snake bite and dog bite. The eleventh chapter deals with interpretation of physical features of men, women and animals like cow, elephant, dog, fowls, etc. and palmistry. The twelfth is on omens.

The work must be appreciated for its critical attitude and experimental approach. It does not rely much on superstitions. Many of its statement are worth testing by experiments. It is a source book for contemporary social history also.

Satyavakya's Hirekati Inscription

– Devara Kondareddy

An unpublished stone inscription in Kannada found at Hirekati in Gundlupet tq. at the Chandrashekhara temple on a hill near the village, begins with the titles of Ganga prince Satyavakya Kongunivarma in whose days one Krantaya donated 30 gold gadyanas and some land ('mannu') to " Bettada Mahadeva" in the presence of 74 Nalgaundas of Karenadu. The inscription is ascribed by the author to c. 965 A.D. and the temple can be also ascribed to the same date, he says.

Achievements of Basel Mission in Karnataka

—Dr. Suryanath Kamath

The people of Basel, the headquarters of a German speaking Swiss Canton, took an oath during the Napoleonic Wars that if the town remained unharmed by the Wars, they would start a school to train Christian Missionaries, and accordingly in 1816 the Basel Mission (Protestant) was founded and when the Indian Charter Act of 1833 relaxed the restrictions on the activities of the Christian Missionaries in India, three German-speaking missionaries came to Mangalore *via* Calicut port in 1834.

These Protestants did not try to change the name and life pattern of the new converts. The Basel Mission worked in Dakshina Kannada, Kodagu, Dharwad and Bijapur dts. To know the local Kannada, Kodava and Tulu languages they wrote and published books in them and evolved Kannada types and started printing in the language. To know the local religions, they studied the classics in Kannada and published them. To help the new converts earn their livelihood, they entered the industrial field and initiated Mangalore tile industry and weaving Khaki by introducing frame looms instead of pit looms. They started schools, introduced Westren learning and gave impetus to female education. The Shanti Church they built (1862) at Balmatta in Mangalore was modelled on the Mission House at Basel. In Mangalore they converted the untouchables and the Billavas (toddy tappers).

The Basel Mission Press started (1841) by the efforts of Veigal and Plebst printed the 'Tulu Keertanegalu' in Kannada script in 1841. Moegling started the first Kannada newspaper 'Mangalura Samachara' (1843). They printed books on a variety of subjects like religious works, railway time-table, etc. Konkani works were printed in Kannada script. The experiments they conducted later helped the further growth of Kannada printing by the efforts of others and Attavar Anantachari later evolved beautiful Kannada types called 'Ananta Shades'. Rev. Tziggler, Moegling, Veigal and Kittel rendered yeoman service for the study and research and publication of text books, grammar, dictionary and other scholary works in Kannada. Veigal published the first history of Kannada literature in 1846 in German language. Rev. Manner published a Tulu dictionary (1886) and Tulu 'paddanas' connected with Bhuta worship in *Indian Antiquary* Vols. Rev. Kittel's Kannada dictionary was a crowning work (1894). The Basel Mission laid foundations of Kannada Renaissance by their contributions to education, printing, scientific study of language and literature, writing of lyric poetry and journalism. By criticising some of the evil practices in the Hindu society like untouchability they indirectly initiated social reforms in Hindu society.

Another Jaina Pillar Inscription at Varuna near Mysore Discovered

—**Dr. H. R. Raghunatha Bhat**

Near the Devambudhi tank outside the Varuna village, in front of the Hundimaramma temple, on a pillar this Jaina inscription engraved (text not given in the article). It mentions one Gangabba a *Kanti*, who undertook 'sallekhana' and died. This record is of Ganga times and adds one more *kanti* to the existing list of them and proved that Varuna was a Jaina centre.

Some Problems of the Early-historic Studies in Karnataka

—**Dr. A.V. Narasimha Murthy**

The period posterior to the pre-historic period, which can be included definitely into the historic period is called early-historic. The special feature of this period are the red or brown burnt pottery, with white kaolin linear designs. This was also called 'Andhra Pottery'. Bricks were extensively used during this period. The Shatavahana coins were also found in these layers to help fix its date.

Early-historic layer was first discoverd in Karnataka by M. H. Krishna at Chandravalli. Basing on the coins, he divided the period as earlier and later. In 1947 Mortimer Wheeler after conducting excavations at Chandravalli called the period as Shatavahana epoch and divided it into three periods. According to Wheeler, this period had pottery with white designs, the coins of the Shatavahanas and the Romans, and brick structues. Wheeler also located similar layer at Brahmagiri, of the post-Megalithic period. There were no coins, and he dated it as belonging to 1st to 3rd century A.D. It was B.K. Thapar, after his Maski excavation of 1954 that used the word early-historic period instead of Shatavahana or Andhra culture to this layer. Beads, stucco figurines, bangles, etc. were also found at Maski. Dr. M. Sheshadri located similar sites at T. Narsipur and Hemmige. At Hallur only pottery of this epoch were found. At Banavasi red, black and rouletted ware and punch-marked coins, and the mould of a Roman coin were excavated. The stucco figurines found here resemble Mathura ones.

The Wadgoan-Madhavapur site is a fine example of this epoch with many brick buildings. Surface finds of this epoch are found at Sannati. Alchin's finds at Piklihal, S. R. Rao's at Pattadakal and finds at Kurugodu are notable.

The period between 4th cent. B.C. and 1st cent. A.D. which synchronises with the Mauryan age, also had *megalithic* culture in Karnataka. The period from 1st to 3rd cent. A.D. when you have red pottery with white designs, Roman, Shatavahana, Chutu or Maharathi coins and rouletted pottery in some places, has to be called the second phase of *early-historic*. It is wrong to call the latter the Andhra epoch. Thus we can postulate two phases of the Early Historic in Karnataka.

Ancient (Administrative) Divisions in Bangalore District

—**P. V. Krishna Murthy**

Based on inscriptions of the period between 500 A.D. and 1350 A.D. following administrative divisions in Bangalore dt. have been

identified : Gangavadi 96,000 is the broad name given to the area in South Karnataka, and this is mentioned in two inscriptions of the district of 890 and 1005 A.D. Vartur inscription speaks of Ganga-6000 which was under the Nolambas. Karikanadu included Yeshwantpur and Yelahanka regions and Bidirakallu village is mentioned as part of this. Kelgalinadu is mentioned in a record from Aijur dated 7:0. Morasunadu is mentioned in a record from Vartur of 820, and this was a part of bigger division Ganga-6000. Bempur 12 was Begur and surrounding villages like Togur, Hulimangala, Iggalur, Kudalu, etc. Mannenadu around Manne, and a record of 1050 speaks of Vikrama Cholamandala. Nekkundiandu was around Nekkundi in Hoskote tq. (950 A.D.), Punnada 70 is mentioned in a record of 900 from Aradeshahalli of Devanahalli tq. This is distinct from Punnadu in Mysore dt. Kaivaranadu is mentioned in the Siddanahalli record of 1041 from Hoskote tq. Kerekunda-300 is mentioned in a record of 720 from Marenahalli, in Hoskote tq. the region perhaps extending over the whole tq. Kunugi-500 is mentioned in a record of c.900 from Aradeshahalli, Devanahalli tq., Salne - 300 or Sannenadu, included Gangavara, Pattandur, Avati, Karahalli, etc. Bidekanda was in Bangalore tq. in which Kamapur and Madambapattana were included. Kukkarenadu included Taluvura Poogundi, Aigandapura, Binnamangala, Nakkuru, Maniupra, etc. Kukkurapalikkadnadu or Kukkalanadu included Dasarahalli, Vasantahalli, Ferakad, Tippur, etc., in Bangalore tq. Villages included in the Kaluvalinadu or Nelavalandu like Vadagatta, Chandimadiyahalli, Madagutte, etc., in Channapattana tq. have been indentified. Mudigonda Cholamandala of the Cholas included Rajendrachola Valanadu, Karikalachola Valanadu, Kilalvenadu, Murushu(Morasu)nadu of Bangalore dt. in the South and Western parts. Vikramacholamandala had Sannenadu, Kukkanurunadu and Mannenadu. The eastern and northern parts of Bangalore dt. were in Nigarila Cholamandala which had Yalahankanadu, Mashandinadu and Veppurunadu in it. Other divisions mentioned are Karikalachola Valanadu (Mulur inscription of 1000), Kshatriyashikhamani Valanadu (Puliyur was in it), Rajendrachola Valanadu (part of Mudigondacholanadu), Erumarai or Yamara (Anekal tq. parts), Elahakka or Elaipakka (Yalahanka)nadu, Kilalainadu(in Channapattna tq.), Kunjinadu(earlier name: Pulliyur Nadu), Chikkagangavadinadu, Turaivarinadu, Periyanadu, Banatihalliyanadu, Saviteyanadu, Hommaligenadu and Kadanur-70 are also identified.

Department of Archaeology of Karnataka: Hundred Years Achievements

—K. G. Nagarajan

The article reviews the achievenents of the Dept. of Archaeology in Karanataka, on the occasion of its centenary. In the field of Indological Studies, the Department's achievements are enviable and the Department was lucky in having Directors like B.L. Rice, R. Narasimhachar, R. Shama Shastry and M.H. Krishna. The Department was founded in 1985 and even earlier Col.Mackenzie, Major Dixon and B.L. Rice, out of their own personal efforts had done some spade work which served as a background. Rice was put in charge of the new Department together with his regular responsibility of Director of Public Instruction. In 1890 he was made full time Director of the new Dept. Till 1906, he published 12 vols. of *Epigraphia Carnatica* with 9000 inscriptions.

The ASI's *Inscriptionum Indicarum* series were later named *Epigraphia Indica*, after seeing this appropriate name. R. Narasimhachar who was Rice's assistant became Director with independent charge in 1910, and under his aegis highly useful *Mysore Archaeological Reports* were brought out annually and revised and new volumes of *Epigraphia Indica* were published. He brought out *Karanataka Kavicharite* in three vols. and works on Hoysala art.

In 1922 R. Shama Shastry became the Director and the office was shifted from Bangalore to Mysore. He published *Artha Shastra* and S.I.I., Vol X.

Dr. M. H. Krishna who became the Director in 1928 was also a Professor in the University. He paid more attentions to excavations and Chandravalli and Brahmagiri excavations were of his time. Some of the manuscripts of Dr. Krishna remain unpublished till now. He died in 1947 and his successors in the post were L. Narasimhachar, K. Narayana Iyengar (1950), Prof. K.A. Nilakantha Shastry (1954) and Dr. M. Sheshadri (1956). The Museums were transferred to the Dept. in 1960. In 1972, the Department was separated from the University under whose control it was placed in 1954, and Dr. M. S. Nagaraja Rao was the full-time Director. He conducted excavations at Hallur and Tadakanahalli. Now from 1983, Dr. A. Sundara is the Director. Hampi Excavation started by Dr. Nagaraja Rao in 1979 are being continued. Repairing of Shivappa Nayaka's palace at Shimoga and conservation of Aralaguppe temple are some of the other programmes under progress.

Ranganathapur Copper Plate

—H. S. Gopala Rao

This copper plate in the possession of the priests of Maradi Ranganathaswamy of Ranganathapur, Shira tq., Tumkur dt. has Srivaishnava emblems, i.e., Chakra, Nama and Shankha (conch) inscribed on the top. Between the emblems 'Sri' and 'Rama' are engraved in Kannada script.

Then an inscription of 30 lines is inscribed in Kannada (text given). The inscription records a victory of three persons over a Sardar Gokilya who instigated them to snatch the seals in the temple of Musavanur which were in the possession of 'Kattemaneyavaru' and 'Sagara Upparadaivadavaru.' The three persons who gained victory turning back to the instigator belonged to 'Deshabagha Sect'. The three persons were appreciated by the head (Guru) of the temple for having saved the seals. Then a treaty was made between 'Kattemaneyavaru'. 'Sagara Upparadaivadavaru' and 'Deshabaghadavaru', all of whom belong to Sri Vaishanava tradition.

Gokilya mentioned in the inscription may be the same Navab Dargakuli Khan mentioned in the published copper plate record of Baragur (E C. XII, Sr.112) which is dated to 1720 A.D. In this record date is not specifically recorded but Pingala-name of the cyclic year is mentioned. Hence this record may be dated to 1738 A.D. Tatacharya of this record may belong to the same Tatacharya family who had a royal patronage of Vijayanagar kings and then of Mysore Odeyars during 17th century.

The Temple Rejected by God Panduranga

—B.M. Chandrashekhariah

There is a belief that the Vijaya Vithala Temple at Hampi never had Vithala image installed there and there is a legend which says that God Vithala of Pandharpur refused to accept this temple as his abode and He returned

to his simple and humble abode as he did not relish this grand, spacious and highly embellished temple. But 23 inscriptions, ranging between 1513 and 1564 and other literary sources reveal that God Vijaya Vithala was worshipped here. Prolagunte Tippa, a commander of Devaraya II (1422-46) built the *bhogamantapa* of the temple. Krishnadevaraya himself donated many silver and gold dishes and vessels, his two queens built *rayagopuras* and donated gold dishes to the temple. This temple is the finest example of Vijayanagar style, has an enclosure 151 meter long and 49 meter wide, and of its three entrance *gopuras*, the southern is the most embellished. The Amma shrine, Kalyanamantapa, Dolotsavamantapa, 100-pillared *mantapa* and the famous stone chariot are its other adjuncts. The original small temple must have grown to this huge size due to the influence of Vyasateertha who was at the capital in the days of Krishnadevaraya and Purandara and Kanakdasa also lived there then.

The article provides a description of the temple, its *mantapas*, sculptures, the 'musical pillars' and the stone chariots. Dolotsavamantapa to the south-east of the temple, built in 1554 has patches of old paintings on its ceilings. The *mantapa* at the south-west was built by Krishnadevaraya in 1516. Not far away from the temple, on the banks of the Tungabhadra is the Purandara Mantapa.

The Gowdanahalli Inscription Mentioning Medikeri Nayaka's Father's Name : A Re-consideration

—B. Rajashekharappa

In 'Prajavani' Kannada daily dated 19th Augst 1986, appeared a report about the finding of a new inscription by Mr. Md. Z. Zafrulla which was said to mention the name of Madakari Nayaka's father, contrary to the one known so far. (The correct form of the name is not Madakari Nayaka, as being used now every where, but it is Medakeri Nayaka). The name of Nayaka's father was not Todalu Bharamappa Nayaka of Janakal, but it was known to be Duganapana Nayaka, according to Mr. Zafrulla. It immediately brought to my mind an inscription of the same Nayaka, of the same year 1756 A.D., and of the same village Gowdanahalli (in Hiriyur Taluk), which also mentions the Nayaka's father's name to be Dugapa Nayaka, published long back, by Mr. B.L. Rice in 1903. The inscripton published by Mr. Rice tells that this village was given as a gift to a Matha constructed by him at Hiriyur, for running a choultry. But the inscription which is said to be a new one, as it is reported, tells that the Nayaka constructed the village and granted it as a gift. This contradiction gave room for a doubt about the inscription itself.

Then arose a new doubt about the probability of the error in the engraving or the reading of the letters 'Dugapa Nayaka' or 'Duganapana Nayaka' instead of 'Rangapa Nayaka', because this name is mentioned in many an inscription of Medakeri Nayaka V (1754-79), as the former was the father of the latter in relation with adoption or succession. The errors of this kind are common with the engraving and the reading of the inscriptions. The only thing left out for me was to go to the spot and re-examine the inscription, directly.

The conclusions drawn after a close study of the inscription are as follows :

1) It is the one and the only inscription being existed in Gowdanahalli village, the same old inscription bounded by Mr. B. L. Rice. 2) As Mr. Zafrulla claims it was not a village built by the Nayaka for gifting, but it

was a village already existing and was given as a gift to Matha at Hiriyur. 3) The name of Medakeri Nayaka's father is not either 'Dugapa Nayaka' as Mr. Rice has read, or 'Duganapana Nayaka' as Mr. Zufrulla has claimed, but it is 'Kastarri Rangapa Nayaka'. Their readings are misconceived. 4) It is quite surprising to note that some facts are not clarified in the inscription. 5) It seems that the Matha possibly is a Veerashaiva Matha and for the time being, there are no clear evidences to identify its location at Hiriyur. The factual error in the inscription insists upon the dire necessity reconsidering the inscriptions, published earlier.

The Role of the Shudras of the Lower Strata in the Extension of Agriculture on the Kannada Coast : A Historical Perspective

—Dr. K.G. Vasanta Madhava

Basing the study on inscriptions, Travellers', Accounts, folk literature like the Tulu Paddanas and Folk Stories and archival material, the extension of agriculture or bringing more land under cultivation by clearing forests and levelling ground in Dakshina and Uttara Kannada Districts by the Shudra groups, described as of the lower strata of society like the Mogers, the Billavars, Kumbaras, Koragas, Bakudas, Malekudiyas, Halepaikas, etc. is discussed. Many of these had been craftsmen, but were also engaged in agriculture. Except the untouchables like the Holeyas and Bakudas, who toiled as bonded labourers or agricultural slaves (called as Holeyalu, Mannalu or Huttalu) who were also sold with the land and who had toiled for the extension of most of the agricultural lands (under a master), other communities like the Kumbaras, Billavas and the Halepaikas owned these lands or tilled them as tenants.

The process is outlined from the days of Vijayanagara times till the down of the modern age.

Gowdanahalli Inscription of Raja Madakari Nayaka of Chitradurga —Reconsidered

—Laxman Telagavi

The stone epigraph at Gowdanahalli in Hiriyur taluk of Chitradurga district was edited and published by Mr. B. L. Rice in *Epigraphia Carnatica*, Vol. XI (Chitradurga District, 1903, Hr. 53, A. D. 1756). The record is read as the maha-nayaka-charyya Kamagetti Kasturi Medakeri Nayaka's grandson, Kasturi Dugappa Nayaka's son, Raja Medakeri Nayaka, granted the village of Gowdanahalli in the Hiriyur sime of the kingdom he was ruling, for the *anna-chchatra-matha*, established at Hiriyur. The inscription registers this gift. Mr. Rice, in his Introduction to this volume (p. 29), has given the genealogical account of this family and also the details he could have from the inscriptions, and he has readily admitted that he could not vouch its accuracy in every particular. He has attempted to trace that Raja Medakeri Nayaka, the last ruler of Chitradurga was the son of one Dugappa Nayaka, who was the son of Medakere Nayaka, who ruled from A. D. 1721 to 1730, with the help of the inscription mentioned above. Mr. R. N. Saletore, in his article 'The Genealogy of the Medakere Nayakas of Citradurga' (*Journal of the University of Bombay*, Vol. VIII, Part 4, January 1940, pp. 3-17), has seen the inscriptions and other references available, and set down, provisionally, the reconstructed genealogy of the Nayaks. 'Dugapa' has occupied his place in it, described as the father of the last ruler, i. e., Raja Medakere Nayaka.

An attempt has been made here to establish that the name 'Dugappa Nayaka' is not conected to Chitradurga history, and now it is certain that it was wrongly deciphered by Mr. Rice for the name 'Rangapa Nayaka'. Mr. Rice also mis-read 'Poota-naya[ka]' for 'Ma‖ ‖yavara', and now the present reading has clarified that Raja Madakari Nayaka was the son (or the successor) of Rangappa Nayaka, and not of Dugappa, and Gowdanahalli village was granted to *anna-chchatra-matha* at Hiriyur in the name of his *mother*, Obamma Nagati, wife of Hire Madakari Nayaka (A. D. 1721-1748) and the mother of Kasturi Rangappa Nayaka (II) (A. D. 1749-1754). After the latter's death, she, with the consent of the officers of the State, elected Raja Madakari Nayaka, a boy of 12 years, and the son of *Todalu* Bharamappa Nayaka of Janakallu-durga (Hosadurga taluk), to the throne of Chitradurga, and continued her administration (*sarvadhikara)* for two years (A. D. 1754-1756) on his behalf. She has been referred to in the Horakeredevara Pura (Holalkere taluk) inscription (A. D. 1754) as the mother (*tayi*) (Mr. Rice has again mis-read this as *kayi*. See E. C., Vol.XI, Hl. 54) of Kasturi Rangappa Nayaka (II) and Raja Madakari Nayaka. She died in A. D. 1756. The original inscribed slab is broken into two pieces, and it is kept infront of the village gateway. A few letters of the record in the middle are lost.

ಕರ್ನಾಟಕ ಇತಿಹಾಸ ಅಕಾದೆಮಿ: ಬೆಂಗಳೂರು

ನಿಬಂಧನೆಗಳು

1. ಸಂಸ್ಥೆಯ ಹೆಸರು : 'ಕರ್ನಾಟಕ ಇತಿಹಾಸ ಅಕಾದೆಮಿ' ಎಂದಿರುತ್ತದೆ.

2. ಅಕಾದೆಮಿಯ ನೋಂದಾಯಿತ ಕೇಂದ್ರ ಕಛೇರಿಯು—'ಸಂಖ್ಯೆ 13 (ಹಳೆಯ ಸಂಖ್ಯೆ 4), ನೂತನ ದೇವಾಲಯದ ರಸ್ತೆ, 15ನೆಯ ತಿರುವು, ಮಲ್ಲೇಶ್ವರಂ, ಬೆಂಗಳೂರು-560 003
—ಈ ವಿಳಾಸದಲ್ಲಿರುತ್ತದೆ.

3. **ಅಕಾದೆಮಿಯ ಧ್ಯೇಯೋದ್ದೇಶಗಳು :**

ಅ) ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಗಳ ಸರ್ವಾಂಗೀಣ ಅಧ್ಯಯನ, ಸಂಶೋಧನೆ ಕೈಗೊಳ್ಳುವುದು ಹಾಗೂ ಈ ಕಾರ್ಯದಲ್ಲಿ ನಿರತರಾಗಿರುವ ವ್ಯಕ್ತಿ ಅಥವಾ ಸಂಸ್ಥೆಗಳಿಗೆ ನೆರವು ನೀಡುವುದು.

ಆ) ಈ ಧ್ಯೇಯದ ಸಾಧನೆಗಾಗಿ ಸಭೆ, ಸಮ್ಮೇಳನ, ವಿಚಾರಸಂಕಿರಣ, ಅಭ್ಯಾಸವರ್ಗ, ದತ್ತಿ ಉಪನ್ಯಾಸ ಹಾಗೂ ಸಾಂಸ್ಕೃತಿಕ ಪ್ರವಾಸ ಇವುಗಳನ್ನು ಏರ್ಪಡಿಸುವುದು.

ಇ) ಈ ಧ್ಯೇಯದ ಸಾಧನೆಗಾಗಿ ನಿಯತಕಾಲಿಕೆ ಮತ್ತು ಪುಸ್ತಕಗಳ ಪ್ರಕಟಣೆ ಕೈಗೊಳ್ಳುವುದು.

ಈ) ಇತಿಹಾಸ ಸಂಶೋಧನೆಗೆ ನೆರವಾಗುವ ಭಾಷೆ, ಶಾಸನ, ಮೋಡಿ ಲಿಪಿ ಮತ್ತು ತತ್ಸಂಬಂಧ ಅಧ್ಯಯನ ತರಗತಿಗಳನ್ನು ನಡೆಸುವುದು.

ಉ) ಇತಿಹಾಸ ಅಧ್ಯಯನಕ್ಕೆ ಸಾಧಕವಾಗುವ ಗ್ರಂಥಾಲಯ, ವಸ್ತುಸಂಗ್ರಹಾಲಯಗಳ ಸ್ಥಾಪನೆ ಹಾಗೂ ವಿವಿಧ ಮಾಧ್ಯಮಗಳಲ್ಲಿರುವ ದಾಖಲೆಗಳನ್ನು ಅನ್ವೇಷಿಸುವುದು, ಸಂಗ್ರಹಿಸುವುದು ಮತ್ತು ಸಂರಕ್ಷಿಸುವುದು.

ಊ) ಇತಿಹಾಸ ಅಧ್ಯಯನವನ್ನು ಜನಪ್ರಿಯಗೊಳಿಸುವುದು ಹಾಗೂ ಶಾಸನ, ಸ್ಮಾರಕ, ದಾಖಲೆಗಳು, ಕಲಾಕೃತಿಗಳು ಮತ್ತು ಪ್ರಾಚ್ಯವಸ್ತುಗಳು–ಇವುಗಳ ರಕ್ಷಣೆಗಾಗಿ ಜನರಲ್ಲಿ ಜಾಗೃತಿ ಮೂಡಿಸುವುದು.

ಋ) ತನ್ನ ಧ್ಯೇಯೋದ್ದೇಶಗಳಿಗನುಗುಣವಾಗಿ ಇತರ ಕಾರ್ಯಗಳನ್ನು ಕೈಗೊಳ್ಳುವುದು.

4. ಅ) ಅಕಾದೆಮಿಯ ಕಾರ್ಯನಿರ್ವಹಣೆಯನ್ನು ಕಾರ್ಯಕಾರಿ ಸಮಿತಿಯು ನಿರ್ವಹಿಸುತ್ತದೆ. ಕಾರ್ಯಕಾರಿ ಸಮಿತಿಯಲ್ಲಿ ಅಕಾದೆಮಿಯ ಸರ್ವಸದಸ್ಯರ ಮಹಾಸಭೆಯಲ್ಲಿ ಚುನಾಯಿತರಾದ ಇಪ್ಪತ್ತು ಮಂದಿ ಸದಸ್ಯರಿರುತ್ತಾರೆ. ಕರ್ನಾಟಕ ರಾಜ್ಯದ ಪ್ರತೀ ಕಂದಾಯ (ರೆವಿನ್ಯೂ) ವಿಭಾಗದಿಂದ ಕನಿಷ್ಠ ಇಬ್ಬರು ಸದಸ್ಯರು ಇರಬೇಕು. ಕಾರ್ಯಕಾರಿ ಸಮಿತಿಯ ಆಡಳಿತಾವಧಿಯು ಎರಡು ವರ್ಷಗಳಿದ್ದು, ಒಮ್ಮೆ ಇದ್ದ ಸದಸ್ಯರ ಮರುಚುನಾವಣೆಗೆ ಅವಕಾಶವಿರುತ್ತದೆ.

ಆ) ಕಾರ್ಯಕಾರಿ ಸಮಿತಿಯು ತನ್ನ ಮೊದಲನೆಯ ಸಭೆಯಲ್ಲಿ, ತಮ್ಮಲ್ಲೇ ಏಳು ಜನ ಪದಾಧಿಕಾರಿಗಳನ್ನು ಚುನಾಯಿಸಿಕೊಳ್ಳುತ್ತದೆ. ಅವರುಗಳೆಂದರೆ : ಕಾರ್ಯಾಧ್ಯಕ್ಷ, ಇಬ್ಬರು ಉಪಾಧ್ಯಕ್ಷರು, ಒಬ್ಬ ಪ್ರಧಾನ ಕಾರ್ಯದರ್ಶಿ, ಇಬ್ಬರು ಕಾರ್ಯದರ್ಶಿಗಳು ಮತ್ತು ಒಬ್ಬ ಕೋಶಾಧಿಕಾರಿ.

ಇ) ಕಾರ್ಯಕಾರಿ ಸಮಿತಿಯಲ್ಲಿ ಸ್ಥಾನ/ಸ್ಥಾನಗಳು ತೆರವಾದಾಗ, ಆ ಜಾಗಗಳಿಗೆ ಸದಸ್ಯರಲ್ಲಿಯೇ ಆಯ್ಕೆಮಾಡಿ ನೇಮಕ/ನಾಮಕರಣದ ಮೂಲಕ ತುಂಬುವ ಅಧಿಕಾರವು ಕಾರ್ಯಕಾರಿ ಸಮಿತಿಗೆ ಇರುತ್ತದೆ.

ಈ) ಅವಶ್ಯ ಕಂಡರೆ ಮೂವರು ಸದಸ್ಯರನ್ನು ಕಾರ್ಯಕಾರಿ ಸಮಿತಿಗೆ ನಾಮಕರಣ ಮಾಡುವ ಅಧಿಕಾರವು ಕಾರ್ಯಕಾರಿ ಸಮಿತಿಗೆ ಇರುತ್ತದೆ.

ಉ) ಅಕಾದೆಮಿಯ ವಾರ್ಷಿಕ ಸಮ್ಮೇಳನಕ್ಕಾಗಿ ಗಣ್ಯ ವಿದ್ವಾಂಸರೊಬ್ಬರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡತಕ್ಕದ್ದು.

ಊ) ಪ್ರಾದೇಶಿಕ ಇಲ್ಲವೆ ಯಾವುದೇ ಕಾರ್ಯಸಾಧನೆಗಳಿಗಾಗಿ ಸ್ಥಾಯಿ ಸಮಿತಿಗಳನ್ನು ಕಾರ್ಯಕಾರಿ ಸಮಿತಿಯು ನೇಮಕ ಮಾಡಬಹುದು. ಈ ಸ್ಥಾಯಿ ಸಮಿತಿಗಳ ಅವಧಿಯು ಕಾರ್ಯಕಾರಿ ಸಮಿತಿಯ ಅವಧಿಯೊಂದಿಗೆ ಕೊನೆಗೊಳ್ಳುತ್ತದೆ.

5. ಅಕಾದೆಮಿಯ ಕಾರ್ಯನಿರ್ವಹಣೆಗೆ ಅವಶ್ಯವೆನಿಸುವ ನಿಯಮ, ನಿಬಂಧನೆಗಳನ್ನು ಕಾರ್ಯಕಾರಿ ಸಮಿತಿಯು ಸಿದ್ಧಪಡಿಸುತ್ತದೆ. ಅಂತಹ ನಿಯಮ, ನಿಬಂಧನೆಗಳು ಅಕಾದೆಮಿಯ ನೋಂದಾಯಿತವಾಗಿರುವ ಸಹಕಾರಿ ಸಂಸ್ಥೆಗಳ ನೋಂದಾವಣೆಯ ಕಾನೂನು ನಿಯಮಗಳಿಗೆ ಅನುಗುಣವಾಗಿರತಕ್ಕದ್ದು ಮತ್ತು ಸರ್ವಸದಸ್ಯರ ಸಭೆಯಲ್ಲಿ ಅನುಮೋದನೆಯನ್ನು ಪಡೆಯತಕ್ಕದ್ದು.

6. ಅಕಾದೆಮಿಯ ಆಸ್ತಿಪಾಸ್ತಿ ಹಾಗೂ ಹಣದ ವ್ಯವಹಾರಗಳು ಕಾರ್ಯಕಾರಿ ಸಮಿತಿಯ ನಿಯಂತ್ರಣದಲ್ಲಿ ಇರುತ್ತವೆ. ಅಕಾದೆಮಿಯ ಬ್ಯಾಂಕು ವಹಿವಾಟುಗಳು ಕಾರ್ಯಾಧ್ಯಕ್ಷ ಅಥವಾ ಪ್ರಧಾನ ಕಾರ್ಯದರ್ಶಿ ಮತ್ತು ಕೋಶಾಧಿಕಾರಿಗಳಿಂದ ಸಂಯುಕ್ತವಾಗಿ ನಿರ್ವಹಿಸತಕ್ಕದ್ದು.

7. ಅಕಾದೆಮಿಯ ಸುಲಲಿತ ಕಾರ್ಯಾಚರಣೆಗಾಗಿ ವರುಷಕ್ಕೆ ಕನಿಷ್ಠ ಆರು ಬಾರಿ ಕಾರ್ಯಕಾರಿ ಸಮಿತಿಯ ಸಭೆ ಸೇರಬೇಕು.

8. ಕಾರ್ಯಕಾರಿ ಸಮಿತಿಯ ಯಾವುದೇ ಸಭೆಗೆ ಕನಿಷ್ಠ ಆರು ಮಂದಿ ಸದಸ್ಯರ ಕೋರಂ ಇರತಕ್ಕದ್ದು. ಕೋರಂ ಇಲ್ಲದ ಕಾರಣ ಸಭೆಯು ಮುಂದೂಡಲ್ಪಟ್ಟರೆ ಅರ್ಧ ಗಂಟೆಯ ನಂತರ ಮುಂದೂಡಲ್ಪಟ್ಟ ಸಭೆಯಲ್ಲಿ ಕೋರಂ ಇಲ್ಲದಿದ್ದರೂ ಸಭೆಯನ್ನು ನಡೆಸತಕ್ಕದ್ದು. ಇಂತಹ ಸಭೆಯಲ್ಲಿ ಕೈಗೊಂಡ

ನಿರ್ಣಯಗಳು ಊರ್ಜಿತವಾಗುತ್ತವೆ. ನಿರ್ಣಯ ಕೈಗೊಳ್ಳುವಾಗ ಸಮಾನ ಮತಗಳು ಬಂದಲ್ಲಿ ಸಭಾಧ್ಯಕ್ಷರಿಗೆ ಅಧಿಕ ನಿರ್ಣಾಯಕ ಮತ ಚಲಾಯಿಸುವ ಹಕ್ಕು ಇರುತ್ತದೆ.

9. ಕಾರ್ಯಕಾರಿ ಸಮಿತಿ ಸದಸ್ಯರ ಕರ್ತವ್ಯಗಳು :

ಅ) ಕಾರ್ಯಾಧ್ಯಕ್ಷರು ಅಕಾದೆಮಿಯ ವ್ಯವಹಾರ, ಕಾರ್ಯಚಟುವಟಿಕೆ ಕುರಿತು ಸಲಹೆ ನೀಡಿ ಮಾರ್ಗ ದರ್ಶನ ಮಾಡತಕ್ಕದ್ದು. ಪ್ರಧಾನ ಕಾರ್ಯದರ್ಶಿಯು ಅವರಿಗೆ ಅಧೀನರಾಗಿರುತ್ತಾರೆ.

ಆ) ಕಾರ್ಯಾಧ್ಯಕ್ಷರು ಕಾರ್ಯಕಾರಿ ಸಮಿತಿಯ ಸಭೆಗಳ ಅಧ್ಯಕ್ಷತೆ ವಹಿಸಿ ಅಕಾದೆಮಿಯ ವ್ಯವಹಾರ ಗಳಲ್ಲಿ ಮಾರ್ಗದರ್ಶನ ನೀಡುತ್ತಾರೆ.

ಇ) ಕಾರ್ಯಾಧ್ಯಕ್ಷರ ಗೈರು ಹಾಜರಿಯಲ್ಲಿ ಅವರ ಕಾರ್ಯವನ್ನು ವಯಸ್ಸಿನಲ್ಲಿ ಹಿರಿಯರಾದ ಉಪಾಧ್ಯಕ್ಷರು ನಿರ್ವಹಿಸುತ್ತಾರೆ.

ಈ) ಪ್ರಧಾನ ಕಾರ್ಯದರ್ಶಿಯು ಕಾರ್ಯಕಾರಿ ಸಮಿತಿಯ ಮತ್ತು ಸರ್ವಸದಸ್ಯರ ಮಹಾಸಭೆಯನ್ನು ವ್ಯವಸ್ಥೆ ಮಾಡುವ ಆಯಾ ಸಭೆಗಳ ನಡೆವಳಿಕೆಗಳನ್ನು ದಾಖಲು ಮಾಡುವ, ಸಭೆಗಳಲ್ಲಿ ಸ್ವೀಕೃತವಾದ ತೀರ್ಮಾನಗಳನ್ನು ಅಥವಾ ಒಪ್ಪಿತವಾದ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರುವ, ಅಕಾದೆಮಿಯ ದಾಖಲೆಗಳನ್ನು ಸಮರ್ಪಕವಾಗಿ ಇಡುವ, ಅಕಾದೆಮಿಯ ಸದಸ್ಯರ ಪಟ್ಟಿಯನ್ನು ಇಡುವ, ಅಕಾದೆಮಿಗೋಸ್ಕರ ಅದರ ಪರವಾಗಿ ವ್ಯವಹರಿಸುವ, ಕಾರ್ಯಕಾರಿ ಸಮಿತಿಗೆ ಮತ್ತು ಕಾರ್ಯಾಧ್ಯಕ್ಷರಿಗೆ ಅಕಾದೆಮಿಯ ಕಾರ್ಯಗಳಿಗೆ ಸಂಬಂಧಿಸಿದಂತೆ ಸಹಕರಿಸುವ ಕಾರ್ಯವನ್ನು ನಿರ್ವಹಿಸುತ್ತಾರೆ. ಕಾರ್ಯದರ್ಶಿಗಳು ಪ್ರಧಾನ ಕಾರ್ಯದರ್ಶಿಗೆ ಅಧೀನರಾಗಿ ಅವರಿಗೆ ನೆರವಾಗುತ್ತಾರೆ.

ಉ) ಕೋಶಾಧಿಕಾರಿಯು ಅಕಾದೆಮಿಗೆ ಬರಬೇಕಾದ ಹಣವನ್ನು ಸಂಗ್ರಹಿಸುವ, ಸ್ವೀಕರಿಸುವ ಹಾಗೂ ಅಕಾದೆಮಿಯು ಪಾವತಿ ಮಾಡಬೇಕಾದ ಹಣವನ್ನು ಪಾವತಿ ಮಾಡುವ ಜವಾಬ್ದಾರಿ ಹೊತ್ತಿರು ತ್ತಾರೆ. ಜೊತೆಗೆ ಹಣದ ವಹಿವಾಟಿನ ನಿರ್ವಹಣೆಯನ್ನು ಕೋಶಾಧಿಕಾರಿಯು ಮಾಡತಕ್ಕದ್ದು. ಅಕಾದೆಮಿಯ ಲೆಕ್ಕ ಪತ್ರಗಳನ್ನು ಕೋಶಾಧಿಕಾರಿಯು ಇಡತಕ್ಕದ್ದು ಹಾಗೂ ವಾರ್ಷಿಕವಾಗಿ ಆಡಿಟ್ ಮಾಡಿಸಿಕೊಳ್ಳತಕ್ಕದ್ದು.

ಊ) ಅಧ್ಯಕ್ಷರು ವಾರ್ಷಿಕ ಸಮ್ಮೇಳನದ ಕಾಲಕ್ಕೆ ಸಮ್ಮೇಳನದ ಅಧ್ಯಕ್ಷತೆ ವಹಿಸುವರು. ಅವರು ಅಕಾದೆಮಿಯ ಸದಸ್ಯರಾಗಿರಬೇಕಿಲ್ಲ.

10. ಸದಸ್ಯತ್ವ :

ಅಕಾದೆಮಿಯ ಧ್ಯೇಯೋದ್ದೇಶಗಳನ್ನು ಒಪ್ಪುವ, ಹದಿನೆಂಟು ವರುಷಗಳ ವಯಸ್ಸು ದಾಟಿದ ವ್ಯಕ್ತಿಗಳು ಸಾಮಾನ್ಯ ಸದಸ್ಯರಾಗಲು ಅರ್ಹರಾಗಿರುತ್ತಾರೆ. ಸದಸ್ಯತ್ವದ ಅರ್ಜಿಯನ್ನು ಅಕಾದೆಮಿಯ ಯಾರಾದ ರೊಬ್ಬ ಸದಸ್ಯರು ದೃಢೀಕರಿಸಬೇಕಾಗುತ್ತದೆ. ಸದಸ್ಯತ್ವಕ್ಕೆ ಒಪ್ಪಿಗೆಯನ್ನು ಕಾರ್ಯಕಾರಿ ಸಮಿತಿಯು ನೀಡಬೇಕು. ಸಾಮಾನ್ಯ ಸದಸ್ಯತ್ವದ ವಾರ್ಷಿಕ ಶುಲ್ಕವು ರೂ 25-00 (ಇಪ್ಪತ್ತೈದು) ಆಗಿರುತ್ತದೆ. ಆಜೀವ ಸದಸ್ಯತ್ವದ ಶುಲ್ಕ ರೂ. 200-00 (ಎರಡು ನೂರು) ಆಗಿರುತ್ತದೆ. ಒಂದು ವರುಷದ

ಅವಧಿಯಲ್ಲಿ ಆಜೀವ ಸದಸ್ಯತ್ವದ ಶುಲ್ಕವನ್ನು ಪಾವತಿ ಮಾಡತಕ್ಕದ್ದು. ರೂ. 1000-00 (ಒಂದು ಸಾವಿರ) ಮತ್ತು ಮೇಲ್ಪಟ್ಟು ಒಂದೇ ಕಂತಿನಲ್ಲಿ ಕಾಣಿಕೆ ಕೊಡುವ ವ್ಯಕ್ತಿಗಳು ಪೋಷಕರಾಗಿರುವರು. ಅವರಿಗೆ ಆಜೀವ ಸದಸ್ಯರ ಹಕ್ಕುಗಳಿರುತ್ತವೆ.

11. ಸಾಮಾನ್ಯ ಸದಸ್ಯರು ಪ್ರತೀ ವರುಷದ ಮಾರ್ಚ್ ತಿಂಗಳ ಕೊನೆಯ ದಿನಕ್ಕೆ ಮೊದಲು ಆಯಾ ವರುಷದ ತಮ್ಮ ಸದಸ್ಯತ್ವದ ಚಂದಾ ಹಣವನ್ನು ಮುಂಗಡವಾಗಿ ಸಂದಾಯ ಮಾಡತಕ್ಕದ್ದು. ಅಕಾದೆಮಿಯ ಲೆಕ್ಕಪತ್ರ ವರುಷವು ಪ್ರತೀ ವರುಷದ ಜನವರಿ 1ರಂದು ಆರಂಭವಾಗಿ ಡಿಸೆಂಬರ್ 31ಕ್ಕೆ ಮುಗಿಯುತ್ತದೆ. ಸದಸ್ಯತ್ವದ ಚಂದಾ ಹಣವನ್ನು 'ಕೋಶಾಧಿಕಾರಿ, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು' ಇವರ ಹೆಸರಿಗೆ ನಗದು, ಚೆಕ್, ಡಿಮ್ಯಾಂಡ್ ಡ್ರಾಫ್ಟ್, ಮನಿ ಆರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕ ಪಾವತಿ ಮಾಡಬಹುದು. ಚೆಕ್, ಡ್ರಾಫ್ಟ್ ಮತ್ತು ಪೋಸ್ಟಲ್ ಆರ್ಡರ್‌ಗಳನ್ನು ನಗದುಗೊಳಿಸಿಕೊಳ್ಳಲು ತಗಲುವ ವೆಚ್ಚವನ್ನೂ ಚೆಕ್ ಮತ್ತು ಪೋಸ್ಟಲ್ ಆರ್ಡರ್‌ಗಳಲ್ಲಿ ಸೇರಿಸಿ ಕೊಡಬೇಕು.

12. ಆಯಾ ವರುಷದ ಏಪ್ರಿಲ್ 1ನೆಯ ದಿನಾಂಕದೊಳಗೆ ಚಂದಾ ಹಣವನ್ನು ಪಾವತಿ ಮಾಡಿ ಸದಸ್ಯತ್ವವನ್ನು ನವೀಕರಣಗೊಳಿಸದಿದ್ದರೆ ಅಂತಹವರ ಸದಸ್ಯತ್ವವು ಅಕಾದೆಮಿಯಿಂದ ರದ್ದಾಗುತ್ತದೆ.

13. ಕಾರ್ಯಕಾರಿ ಸಮಿತಿಯು ಅಕಾದೆಮಿಯ ಚಟುವಟಿಕೆ ಮತ್ತು ಧ್ಯೇಯೋದ್ದೇಶಗಳಿಗೆ ಕುಂದು ತಂದಿರುವ ಅಥವಾ ತರಬಲ್ಲ ಯಾವುದೇ ಸದಸ್ಯನ ಸದಸ್ಯತ್ವವನ್ನು ರದ್ದುಮಾಡಬಹುದು. ಈ ನಿರ್ಣಯಕ್ಕೆ ಕಾರ್ಯಕಾರಿ ಸಮಿತಿಯ ಮೂರನೆಯ ಎರಡುಭಾಗ ಸದಸ್ಯರ ಸಮ್ಮತಿ ಇರತಕ್ಕದ್ದು.

14. ಅಕಾದೆಮಿಯ ಸದಸ್ಯತ್ವಕ್ಕೆ ಅಂಗೀಕಾರ ಪಡೆಯದ ವ್ಯಕ್ತಿ ಅಥವಾ ಸಂಸ್ಥೆಗಳು ಅಕಾದೆಮಿಯ ನಿಯತ ಕಾಲಿಕಕ್ಕೆ ಚಂದಾದಾರರಾಗಬಹುದು. ಈ ಚಂದಾ ದರವನ್ನು ಕಾರ್ಯಕಾರಿ ಸಮಿತಿಯು ನಿರ್ಧರಿಸುವುದು.

15. **ಸದಸ್ಯರಿಗೆ ಸೌಲಭ್ಯಗಳು :**

ಅ) ಸದಸ್ಯರಿಗೆ ಪ್ರತೀ ತಿಂಗಳ ಉಪನ್ಯಾಸ ಕಾರ್ಯಕ್ರಮವನ್ನು ತಿಳಿಸಲಾಗುವುದು.

ಆ) ಸದಸ್ಯರು ಉಪನ್ಯಾಸಗಳಿಗೆ ತಮ್ಮ ಸ್ನೇಹಿತರನ್ನೂ ಕರೆತರಬಹುದು. ವಿಶೇಷ ಸಂದರ್ಭಗಳಲ್ಲಿ, ಕಾರ್ಯಾಧ್ಯಕ್ಷರು ಯಾರಿಗಾದರೂ ಸಭೆಗೆ ಬರದಂತೆ ನಿಷೇಧಿಸುವ ಅಧಿಕಾರ ಹೊಂದಿರುತ್ತಾರೆ.

ಇ) ಸದಸ್ಯರು ಅಕಾದೆಮಿಯ ವಾರ್ಷಿಕ ಮಹಾಧಿವೇಶನದಲ್ಲಿ ಮತ ಚಲಾಯಿಸುವ ಹಾಗೂ ಚುನಾವಣೆಗೆ ಸ್ಪರ್ಧಿಸುವ ಹಕ್ಕನ್ನು ಪಡೆದಿರುತ್ತಾರೆ. ಬದಲಿ ಮತ ಚಲಾವಣೆಗೆ ಅವಕಾಶ ಇರುವುದಿಲ್ಲ.

ಈ) ಸದಸ್ಯರಿಗೆ ಅಕಾದೆಮಿಯ ನಿಯತಕಾಲಿಕೆಯ ಒಂದು ಪ್ರತಿಯನ್ನು ಉಚಿತವಾಗಿ ನೀಡಲಾಗುತ್ತದೆ. ನಿಯತಕಾಲಿಕೆಯ ಹೆಚ್ಚು ಪ್ರತಿಗಳು ಅಥವಾ ಹಿಂದಿನ ಪ್ರತಿಗಳು ಅವಶ್ಯಕವಾದರೆ ನಿಗದಿತ ಬೆಲೆಯನ್ನು ಪಾವತಿ ಮಾಡಿ ಕೊಳ್ಳಬೇಕಾಗುತ್ತದೆ. ಅಕಾದೆಮಿಯ ನಿಯತಕಾಲಿಕೆಯ ಅಥವಾ ಮತ್ತಾವುದೇ ಪ್ರಕಟಣೆಯ ಮುಖಬೆಲೆಯ ಶೇಕಡ $33\frac{1}{3}$ರಷ್ಟು ಸೋಡಿಗೆ ಸದಸ್ಯರು ಅರ್ಹರಾಗಿರುತ್ತಾರೆ.

16. ಲೆಕ್ಕ ಪತ್ರದ ವರ್ಷದ ಅವಧಿ ಮುಗಿದ ಆರು ತಿಂಗಳ ಒಳಗೆ ಅಕಾದೆಮಿಯ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ನಡೆಸತಕ್ಕದ್ದು. ಆ ಮಹಾಸಭೆಯಲ್ಲಿ ಸಭೆಯ ಒಪ್ಪಿಗೆಗಾಗಿ ಕಳೆದ ವರ್ಷದ ಅಕಾದೆಮಿಯ ಕಾರ್ಯನಿರ್ವಹಣೆಯ ವರದಿ, ಲೆಕ್ಕ ಪತ್ರಗಳ ತನಿಖೆಯ ವರದಿ ಮತ್ತು ಮುಂಬರುವ ವರುಷದ ಆಯ–ವ್ಯಯ ವರದಿಯನ್ನು ಮಂಡಿಸತಕ್ಕದ್ದು.

17. ಸರ್ವಸದಸ್ಯರ ವಾರ್ಷಿಕ ಮಹಾಸಭೆಗೆ 15 ಮಂದಿ ಸದಸ್ಯರ ಕೋರಂ ಇರಬೇಕು. ಮಹಾಸಭೆಯ ದಿನಾಂಕಕ್ಕೆ ಕನಿಷ್ಠ 15 ದಿವಸ ಮೊದಲು, ಅಕಾದೆಮಿಯ ಪ್ರತಿಯೊಬ್ಬ ಸದಸ್ಯನಿಗೂ ಮಹಾಸಭೆಯ ತಿಳಿವಳಿಕೆಯ ಪತ್ರವನ್ನು ಕಳುಹಿಸಬೇಕು. ಸರ್ವಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮುಂದಿನ ವರುಷದ ಲೆಕ್ಕ ತನಿಖಾಧಿಕಾರಿಗಳನ್ನೂ ನೇಮಿಸತಕ್ಕದ್ದು.

18. 1960ನೆಯ ವರುಷದ ಕರ್ನಾಟಕ ಸಹಕಾರೀ ಸಂಸ್ಥೆಗಳ ನೋಂದಾವಣೆ ಕಾಯಿದೆಯ ವಿಭಾಗ 22ರಲ್ಲಿ ಸೂಚಿತವಾಗಿರುವುದಕ್ಕೆ ಅನುಗುಣವಾಗಿ ಅಕಾದೆಮಿಯನ್ನು ರದ್ದುಪಡಿಸುವಂತಹ ಸಂದರ್ಭಗಳಲ್ಲಿ, ರದ್ದು ಮಾಡುವ ದಿನದಂದು ಅಕಾದೆಮಿಗೆ ಸೇರಿದ ಉಳಿದಿರುವ ಯಾವುದೇ ಸ್ವತ್ತನ್ನು ಕಾರ್ಯಕಾರಿ ಸಮಿತಿ ಸದಸ್ಯರಿಗೆ ಹಂಚುವಂತಿಲ್ಲ; ಬದಲಿಗೆ 1961ರ ಆದಾಯ ತೆರಿಗೆ ಕಾಯಿದೆಯ ವಿಭಾಗ 80 'ಜಿ'ಯ ಅಂಗೀಕಾರದ ಸೌಲಭ್ಯ ಪಡೆದ, ಅಕಾದೆಮಿಯ ಧ್ಯೇಯೋದ್ದೇಶಗಳಿಗೆ ಅನುರೂಪ ಧ್ಯೇಯೋದ್ದೇಶಗಳನ್ನು ಹೊಂದಿರುವ ಯಾವುದೇ ದಾನಸಂಸ್ಥೆ, ಸಂಸ್ಥೆ ಅಥವಾ ಸಂಘಕ್ಕೆ ವರ್ಗಾವಣೆ ಮಾಡತಕ್ಕದ್ದು.

ಅಕಾದೆಮಿಯ ವಾರ್ಷಿಕ ಸಮ್ಮೇಳನ

1987 ಮೇ ತಿಂಗಳಿನಲ್ಲಿ ಇತಿಹಾಸ ಅಕಾದೆಮಿಯ ವಾರ್ಷಿಕ ಸಮ್ಮೇಳನವು ಬೆಂಗಳೂರಿನಲ್ಲಿ ನಡೆಯಲಿದೆ. ತಾರೀಖುಗಳನ್ನು ಏಪ್ರಿಲ್ ತಿಂಗಳಿನಲ್ಲಿ ಖಚಿತಪಡಿಸಲಾಗುವುದು. ಸದಸ್ಯರಾದವರು ಪ್ರತಿನಿಧಿಗಳಾಗಿ ಬಂದು ಕರ್ನಾಟಕದ ಇತಿಹಾಸದ ಬಗೆಗೆ ಯಾವುದೇ ಸಂಶೋಧನಾತ್ಮಕ ಪ್ರಬಂಧವನ್ನು ಕನ್ನಡದಲ್ಲಿ ಓದಬಹುದು. ಓದಬೇಕಾದ ಪ್ರಬಂಧದ ಒಂದು ಪ್ರತಿಯನ್ನು ಏಪ್ರಿಲ್ 30ಕ್ಕೆ ಮೊದಲು ಪ್ರಧಾನ ಕಾರ್ಯದರ್ಶಿಗಳಿಗೆ ಕಳುಹಿಸಿ ಕೊಡಬೇಕು.

ಸಮ್ಮೇಳನದ ಕಾಲಕ್ಕೆ ಪ್ರಕಟವಾಗುವ 'ಇತಿಹಾಸ ದರ್ಶನ'ದ ವಿಶೇಷಾಂಕಕ್ಕೆ ಮಾರ್ಚ್ 15ಕ್ಕೆ ಮೊದಲು ಲೇಖನಗಳನ್ನು ಕಳುಹಿಸಬಹುದು. ಈ ಲೇಖನದ ಒಂದು ಇಂಗ್ಲಿಷ್ ಸಾರಾಂಶವನ್ನು ಲೇಖನವು ಒಳಗೊಂಡಿರಬೇಕು.

ಪದವಿಪೂರ್ವ ಪರೀಕ್ಷೆಯ ಮೌಲ್ಯಮಾಪನ ಮುಗಿದ ತಕ್ಷಣ ಸಮ್ಮೇಳನವನ್ನು ಏರ್ಪಡಿಸಲಾಗುವುದು. ನಿಮ್ಮ ಸ್ನೇಹಿತರನ್ನೂ ಸದಸ್ಯರಾಗಿ ನೋಂದಾಯಿಸಿ ಸಮ್ಮೇಳನಕ್ಕೆ ಕರೆದು ತನ್ನಿ.

ಪ್ರತಿನಿಧಿ ಶುಲ್ಕ : ರೂ. 50 (ವಸತಿ ಸಹಿತ), ರೂ. 25 (ವಸತಿ ರಹಿತ). ಅಧಿಕ ಮಾಹಿತಿಗೆ ಇವರಿಗೆ ಬರೆಯಬಹುದು : ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಇತಿಹಾಸ ಅಕಾದೆಮಿ, 'ರಂಗನಾಥ ನಿಲಯ', ಸಂಖ್ಯೆ 13 (ಹಳೆಯ ಸಂಖ್ಯೆ 4), 15ನೆಯ ತಿರುವು, ನೂತನ ದೇವಾಲಯದ ರಸ್ತೆ, ಮಲ್ಲೇಶ್ವರಂ, ಬೆಂಗಳೂರು 560 003.

ಕರ್ನಾಟಕ ಇತಿಹಾಸ ಅಕಾದೆಮಿ ಬೆಂಗಳೂರು

ವರದಿ

ದಿನಾಂಕ 28-6-86 ರಿಂದ 14-12-86ರ ವರೆಗಿನ ಕರ್ನಾಟಕ ಇತಿಹಾಸ ಅಕಾದೆಮಿಯ ಕಾರ್ಯ ಚಟುವಟಿಕೆಗಳ ಸ್ಥೂಲ ಪರಿಚಯ ಇಂತಿದೆ :

ಕರ್ನಾಟಕ ಚರಿತ್ರೆ ಮತ್ತು ಸಂಸ್ಕೃತಿಯ ಸಮಗ್ರ ಅಧ್ಯಯನಕ್ಕೆ ಪ್ರತಿಷ್ಠಿತ ಸಂಸ್ಥೆಯೊಂದರ ಅಗತ್ಯ ತೀವ್ರವಾಗಿರುವುದನ್ನು ಅರಿತು ಚರಿತ್ರೆ ಮತ್ತು ಪೂರಕ ವಿಷಯಗಳ ಸಂಶೋಧನೆಯಲ್ಲಿ, ಅಧ್ಯಯನದಲ್ಲಿ ನಿರತರಾಗಿರುವ ಕೆಲವು ಆಸಕ್ತರು ಡಾ॥ ಸೂರ್ಯನಾಥ ಯು. ಕಾಮತ್ ಅವರ ಮಾರ್ಗದರ್ಶನದಲ್ಲಿ, ದಿನಾಂಕ 28-6-86ರಂದು ಬೆಂಗಳೂರಿನ ಮಿಥಿಕ್ ಸೊಸಾಯಿಟಿಯಲ್ಲಿ ಸಭೆ ಸೇರಿ, ಇಂತಹ ಸಂಸ್ಥೆಯೊಂದನ್ನು ಹುಟ್ಟು ಹಾಕಲು ನಿರ್ಧರಿಸಿದರು. ಸಭಿಕರ ಪ್ರಾರ್ಥನೆಯ ಮೇರೆಗೆ ಅಂದಿನ ಸಭೆಯ ಅಧ್ಯಕ್ಷತೆಯನ್ನು ಮೈಸೂರಿನ ಡಾ॥ ಎಂ. ವಿ. ಶ್ರೀನಿವಾಸ್ ಅವರು ವಹಿಸಿದ್ದರು. ಸಂಸ್ಥೆಯ ಸ್ಥಾಪನೆ, ಅದರ ಉದ್ದೇಶ, ಕಾರ್ಯಕ್ರಮ ಇತ್ಯಾದಿಗಳ ಬಗೆಗೆ ಸಭೆಯಲ್ಲಿ ದೀರ್ಘ ಚರ್ಚೆ ನಡೆದು, ಶ್ರೀ ಕೆ. ಜಿ. ನಾಗರಾಜನ್ ಮತ್ತು ಡಾ॥ ಸೂರ್ಯನಾಥ ಕಾಮತ್ ಅವರುಗಳ ಸಂಯುಕ್ತ ಸೂಚನೆಯನ್ನು ಅಂಗೀಕರಿಸಿ, ಈ ಸಂಸ್ಥೆಯನ್ನು 'ಕರ್ನಾಟಕ ಇತಿಹಾಸ ಅಕಾದೆಮಿ' ಎಂಬ ಹೆಸರಿನಿಂದ ಕರೆಯಲು ನಿರ್ಣಯ ಕೈಗೊಂಡಿತು. ಸಂಶೋಧನ ಲೇಖನಗಳ ಪ್ರಕಟಣೆಗೆ ಅವಕಾಶ ಮಾಡಿ ಕೊಡುವಂತಹ ನಿಯತಕಾಲಿಕವನ್ನು ಅಕಾದೆಮಿಯ ವತಿಯಿಂದ ಹೊರತರಬೇಕೆನ್ನುವುದನ್ನೂ ಸಭೆ ನಿರ್ಣಯದ ಮೂಲಕ ಅಂಗೀಕರಿಸಿತು. ಸಭೆಯು ಈ ಕೆಳಕಂಡ 12 ಮಂದಿಯನ್ನು ಕಾರ್ಯಕಾರಿ ಸಮಿತಿಗೆ ಆಯ್ಕೆ ಮಾಡಿತು :

ಅಧ್ಯಕ್ಷರು	:	ಡಾ॥ ಎಂ. ವಿ. ಶ್ರೀನಿವಾಸ್
ಉಪಾಧ್ಯಕ್ಷರು	:	ಶ್ರೀ ಎಂ. ಜಿ. ನಾಗರಾಜ್
ಕಾರ್ಯದರ್ಶಿಗಳು	:	ಶ್ರೀ ಲಕ್ಷ್ಮಣ್ ತೆಲಗಾವಿ ಮತ್ತು ಶ್ರೀ ಕೆ. ಆರ್. ಗಣೇಶ
ಕೋಶಾಧಿಕಾರಿ	:	ಶ್ರೀ ಎಸ್. ಎ. ಜಗನ್ನಾಥ್
ಸದಸ್ಯರು	:	ಡಾ॥ ಸೂರ್ಯನಾಥ ಯು. ಕಾಮತ್
		ಶ್ರೀಮತಿ ಸಿ. ಎಸ್. ಶ್ಯಾಮಲಾಂಬಿಕಾ
		ಶ್ರೀಮತಿ ಕಮಲ ಸಂಪಳ್ಳಿ
		ಶ್ರೀ ಹೆಚ್. ಎಮ್. ಸಿದ್ಧನಗೌಡರ
		ಶ್ರೀ ಎಚ್. ಎಸ್. ಗೋಪಾಲರಾಯ
		ಶ್ರೀ ಎಚ್. ಪಿ. ಶಶಿಧರಮೂರ್ತಿ
		ಶ್ರೀ ಕೆ. ಜಿ. ನಾಗರಾಜನ್

ಕಾರ್ಯಕ್ರಮಗಳು : ಅಕಾದೆಮಿಯು ತನ್ನ ಉದ್ದೇಶಗಳಿಗೆ ಅನುಸಾರವಾಗಿ ಈ ಕೆಳಕಂಡಂತೆ ಮಾಸಿಕ ಉಪನ್ಯಾಸ ಕಾರ್ಯಕ್ರಮಗಳನ್ನು ಬೆಂಗಳೂರಿನ ವಿವಿಧ ಪ್ರದೇಶಗಳಲ್ಲಿ ಏರ್ಪಡಿಸಿ, ಸಾರ್ವಜನಿಕರಲ್ಲಿ ಇತಿಹಾಸ ಕುರಿತು ಆಸಕ್ತಿ ಬೆಳೆಸಿಕೊಳ್ಳುವಂತೆ ಮಾಡಲು ಯತ್ನಿಸಿದೆ :

ದಿನಾಂಕ 26-7-86ರಂದು ಮಲ್ಲೇಶ್ವರಂನ ಗಾಂಧಿ ಸಾಹಿತ್ಯ ಸಂಘದಲ್ಲಿ ಡಾ॥ ಜಿ. ಎಸ್. ದೀಕ್ಷಿತ್ ಅವರು 'ಇತಿಹಾಸ ಸಂಶೋಧನೆಯ ವಿಧಾನಗಳು' ಎಂಬ ವಿಷಯ ಕುರಿತು ಉಪನ್ಯಾಸ ಮಾಡಿದರು. ಅಕಾದೆಮಿಯ ಉಪಾಧ್ಯಕ್ಷ ಶ್ರೀ ಎಂ. ಜಿ. ನಾಗರಾಜ್ ಅವರು ಅಧ್ಯಕ್ಷತೆ ವಹಿಸಿದ್ದರು.

ದಿನಾಂಕ 30-8-86ರಂದು ವೆಂಕಟಪ್ಪ ಕಲಾಶಾಲೆಯಲ್ಲಿ ಡಾ॥ ಎಂ. ಚಿದಾನಂದಮೂರ್ತಿ ಅವರು 'ಕಲ್ಯ : ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯ ಕುರಿತು ಉಪನ್ಯಾಸ ಮಾಡಿದರು. ಶ್ರೀ ಎಂ. ಜಿ. ನಾಗರಾಜ್ ಅವರು ಅಧ್ಯಕ್ಷತೆ ವಹಿಸಿದ್ದರು.

ದಿನಾಂಕ 27-9-86ರಂದು ವೆಂಕಟಪ್ಪ ಕಲಾಶಾಲೆಯಲ್ಲಿಯೇ ಡಾ॥ ಸೂರ್ಯನಾಥ ಕಾಮತ್ ಅವರು 'ಸಸ್ಯಮೂಲದ ಸ್ಥಳನಾಮಗಳು' ಎಂಬ ವಿಷಯ ಕುರಿತು ಉಪನ್ಯಾಸ ಮಾಡಿದರು. ಡಾ॥ ಎಂ. ಚಿದಾನಂದ ಮೂರ್ತಿ ಅವರು ಅಧ್ಯಕ್ಷತೆ ವಹಿಸಿದ್ದರು.

ದಿನಾಂಕ 29-11-86ರಂದು ಬಸವನಗುಡಿಯ ಬಿ. ಎಂ ಎಸ್. ಮಹಿಳೆಯರ ಕಾಲೇಜಿನ ಹಳೆಯ ಕಟ್ಟಡದಲ್ಲಿ ಡಾ॥ ಎಸ್. ವಿ. ದೇಶಿಕಾಚಾರ್ ಅವರು 'ಐತಿಹಾಸಿಕ ಕಾಗದದ ದಾಖಲೆಗಳು' ಎಂಬ ವಿಷಯ ಕುರಿತು ಉಪನ್ಯಾಸ ಮಾಡಿದರು. ಅಕಾದೆಮಿಯ ನೂತನ ಅಧ್ಯಕ್ಷ ಡಾ॥ ಜಿ. ಎಸ್. ದೀಕ್ಷಿತ್ ಅವರು ಅಧ್ಯಕ್ಷತೆ ವಹಿಸಿದ್ದರು.

ನಿಬಂಧನೆ : ದಿನಾಂಕ 26-7-86ರಂದು ಸೇರಿದ್ದ ಅಕಾದೆಮಿಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅಕಾದೆಮಿಯ ನಿಬಂಧನೆಯನ್ನು ರೂಪಿಸಿಕೊಡುವ ಜವಾಬ್ದಾರಿಯನ್ನು ಶ್ರೀ ಕೆ. ಜಿ. ನಾಗರಾಜನ್ ಅವರಿಗೆ ವಹಿಸಿಕೊಡುವ ನಿರ್ಣಯವನ್ನು ಕೈಗೊಳ್ಳಲಾಯಿತು.

ದಿನಾಂಕ 18-10-86ರಂದು ಸೇರಿದ ಎರಡನೆಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಶ್ರೀ ನಾಗರಾಜನ್ ಅವರು ಸಿದ್ಧಪಡಿಸಿಕೊಟ್ಟ ಅಕಾದೆಮಿಯ ನಿಬಂಧನೆಗಳ ಕರಡುಪ್ರತಿಯನ್ನು ಪರಿಶೀಲಿಸಿ ಹಾಗೂ ಚರ್ಚಿಸಿ ತಿದ್ದುಪಡಿಯೊಡನೆ ಅದಕ್ಕೆ ಅಂತಿಮ ರೂಪ ಕೊಡಲಾಯಿತು.

ದಿನಾಂಕ 25-10-86ರಂದು ಸೇರಿದ್ದ ಮೂರನೆಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ನಿಬಂಧನೆಯ ಕರಡನ್ನು ಓದಿ ತಿದ್ದುಪಡಿಯೊಡನೆ ಅದನ್ನು ಒಪ್ಪಲಾಯಿತು. ಅದನ್ನು ಸ್ಟೆನ್ಸಿಲ್ ಮಾಡಿಸಿ ಅಕಾದೆಮಿಯ ಎಲ್ಲ ಸದಸ್ಯರಿಗೂ ಪರಿಶೀಲನೆಗಾಗಿ ಮುಂಚಿತವಾಗಿಯೇ ಕಳುಹಿಸಲು ನಿರ್ಧರಿಸಲಾಯಿತು. ನಿಬಂಧನೆಯನ್ನು ರೂಪಿಸಿಕೊಟ್ಟ ಶ್ರೀ ನಾಗರಾಜನ್ ಅವರಿಗೆ ಕೃತಜ್ಞತೆ ಸಲ್ಲಿಸುವ ನಿರ್ಣಯವನ್ನು ಕೈಗೊಳ್ಳಲಾಯಿತು.

ದಿನಾಂಕ 23-11-86ರಂದು ಮಿಥಿಕ್ ಸೊಸಾಯಿಟಿಯಲ್ಲಿ ಕರೆದಿದ್ದ ಅಕಾದೆಮಿಯ ಸಕಲ ಸದಸ್ಯರ ಮೊದಲನೆಯ ಸಭೆಯಲ್ಲಿ ನಿಬಂಧನೆಯ ಕರಡನ್ನು ಮಂಡಿಸಿ, ಕೆಲವು ತಿದ್ದುಪಡಿಗಳೊಡನೆ ಅಂತಿಮವಾಗಿ ಅಂಗೀಕರಿಸಲಾಯಿತು. ಈಗ ಈ ನಿಬಂಧನೆಯನ್ನು ನೋಂದಾಯಿಸಲು ಕ್ರಮ ಕೈಗೊಳ್ಳಲಾಗಿದೆ.

ಲಾಂಛನ : ದಿನಾಂಕ 26-7-86ರಂದು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅಕಾದೆಮಿಗೆ ಅಗತ್ಯವಿರುವ ಲಾಂಛನವನ್ನು ಪರಿಣತರ ಸಲಹೆಯ ಮೇರೆಗೆ ರೂಪಿಸಿ ಕೊಡುವಂತೆ ಸದಸ್ಯರಾದ ಶ್ರೀ ಅ. ಲ. ನರಸಿಂಹನ್ ಅವರನ್ನು ಪ್ರಾರ್ಥಿಸಲಾಯಿತು.

ದಿನಾಂಕ 23-11-86ರಂದು ಸಮಾವೇಶಗೊಂಡಿದ್ದ ಅಕಾದೆಮಿಯ ಸಕಲಸದಸ್ಯರ ಸಭೆಯಲ್ಲಿ ಲಾಂಛನದ ರೇಖಾಚಿತ್ರವನ್ನು ಮಂಡಿಸಿ ಒಪ್ಪಿಗೆ ಪಡೆಯಲಾಯಿತು; ಶ್ರೀ ನರಸಿಂಹನ್ ಅವರಿಗೆ ಕೃತಜ್ಞತೆ ಸಲ್ಲಿಸುವ ನಿರ್ಣಯವನ್ನು ಕೈಗೊಳ್ಳಲಾಯಿತು.

ನಿಯತಕಾಲಿಕೆ : ದಿನಾಂಕ 26-7-86ರ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅಕಾದೆಮಿಯ ನಿಯತಕಾಲಿಕವನ್ನು 'ಇತಿಹಾಸ ದರ್ಶನ' ಎಂದು ಕರೆಯಬೇಕೆಂದೂ ಆ ಸಂಚಿಕೆಯನ್ನು ಸದಸ್ಯರುಗಳಾದ ಡಾ॥ ಸೂರ್ಯನಾಥ ಕಾಮತ್ ಮತ್ತು ಶ್ರೀ ಲಕ್ಷ್ಮಣ್ ತೆಲಗಾವಿ ಅವರುಗಳು ಸಂಯುಕ್ತವಾಗಿ ಸಂಪಾದಿಸಿ ಕೊಡಬೇಕೆಂದೂ ತೀರ್ಮಾನಿಸಲಾಯಿತು.

ನೂತನ ಕಾರ್ಯಕಾರಿ ಸಮಿತಿ ; ದಿನಾಂಕ 23-11-86ರಂದು ಸಮಾವೇಶಗೊಂಡಿದ್ದ ಅಕಾದೆಮಿಯ ಸಕಲಸದಸ್ಯರ ಸಭೆಯ ನೂತನ ಕಾರ್ಯಕಾರಿ ಸಮಿತಿಗೆ ಈ ಕೆಳಕಂಡವರನ್ನು ಒಮ್ಮತದಿಂದ ಆಯ್ಕೆ ಮಾಡಿದ್ದು, ಅಂದೇ ಸಭೆ ಸೇರಿದ್ದ ನೂತನ ಕಾರ್ಯಕಾರಿ ಸಮಿತಿಯು ನಿಯಮಾನುಸಾರವಾಗಿ ತನ್ನಲ್ಲೇ ಪದಾಧಿಕಾರಿಗಳನ್ನು ಆಯ್ಕೆ ಮಾಡಿತು. ನೂತನ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರ ಹೆಸರುಗಳು ಈ ಕೆಳಕಂಡತಿವೆ :

ಡಾ॥ ಜಿ. ಎಸ್. ದೀಕ್ಷಿತ್, ಬೆಂಗಳೂರು (ಅಧ್ಯಕ್ಷರು), ಡಾ॥ ಕೆ. ಆರ್. ಬಸವರಾಜ್, ಧಾರವಾಡ ಮತ್ತು ಎಂ. ಜಿ. ನಾಗರಾಜ್, ಬೆಂಗಳೂರು ಜಿಲ್ಲೆ (ಉಪಾಧ್ಯಕ್ಷರುಗಳು), ಲಕ್ಷ್ಮಣ್ ತೆಲಗಾವಿ, ಬೆಂಗಳೂರು (ಪ್ರಧಾನ ಕಾರ್ಯದರ್ಶಿ), ಎಚ್. ಎಸ್. ಗೋಪಾಲರಾಯ ಮತ್ತು ಪ್ರೊ॥ ಆರ್. ಪರಿಮಳ, ಬೆಂಗಳೂರು (ಕಾರ್ಯದರ್ಶಿಗಳು), ಕೆ. ಆರ್. ಗಣೇಶ, ಬೆಂಗಳೂರು (ಕೋಶಾಧಿಕಾರಿ), ಡಾ॥ ಸೂರ್ಯನಾಥ ಯು. ಕಾಮತ್, ಬೆಂಗಳೂರು, ಡಾ॥ ಅ. ಸುಂದರ, ಡಾ॥ ಎ. ವಿ. ನರಸಿಂಹಮೂರ್ತಿ, ಮೈಸೂರು, ಡಾ॥ (ಶ್ರೀಮತಿ) ಚೂಡಾಮಣಿ ನಂದಗೋಪಾಲ್, ಮಂಗಳೂರು, ಎಚ್. ಪಿ. ಶಶಿಧರಮೂರ್ತಿ, ಮೈಸೂರು, ಎಚ್. ಶ್ರೀಶೈಲ ಆರಾಧ್ಯ, ಚಿತ್ರದುರ್ಗ, ಕಮಲ ಸಂಪಳ್ಳಿ, ಕೆ. ಜಿ. ನಾಗರಾಜನ್, ಹೆಚ್. ಎಂ. ಸಿದ್ಧನಗೌಡರ, ಎಸ್. ಎ. ಜಗನ್ನಾಥ್, ಬೆಂಗಳೂರು ಹಾಗೂ ಡಾ॥ ಕೆ. ಜಿ. ವಸಂತಮಾಧವ, ಮೂಲ್ಕಿ–ದಕ್ಷಿಣಕನ್ನಡ (ಸದಸ್ಯರುಗಳು).

ಅಕಾದೆಮಿಯ ಉದ್ಘಾಟನೆ ಮತ್ತು ನಿಯತಕಾಲಿಕೆಯ ಬಿಡುಗಡೆ : ದಿನಾಂಕ 14-12-86ರಂದು ಬೆಳಗ್ಗೆ ಬೆಂಗಳೂರಿನ ರಾಜ್ಯ ಯುವಕ ಕೇಂದ್ರದ ಯುವಜನ ಸೇವಾ ಮತ್ತು ಕ್ರೀಡಾ ನಿರ್ದೇಶನಾಲಯದ ಸಭಾಂಗಣದಲ್ಲಿ, ಕರ್ನಾಟಕ ಸರ್ಕಾರದ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ನಗರಾಭಿವೃದ್ಧಿ ಸಚಿವರಾದ ಪ್ರೊ॥ ಎ. ಲಕ್ಷ್ಮೀಸಾಗರ್ ಅವರು ಅಕಾದೆಮಿಯ ಔಪಚಾರಿಕ ಉದ್ಘಾಟನೆಯನ್ನು ನೆರವೇರಿಸಿದರು. ಡಾ॥ ಎಂ. ಚಿದಾನಂದಮೂರ್ತಿ ಅವರು 'ಇತಿಹಾಸ ದರ್ಶನ' ನಿಯತಕಾಲಿಕೆಯನ್ನು ಬಿಡುಗಡೆ ಮಾಡಿದರು. ಅಕಾದೆಮಿಯ ಉದ್ದೇಶ, ಚಟುವಟಿಕೆ, ಯೋಜನೆ, ಇತ್ಯಾದಿಗಳನ್ನು ಡಾ॥ ಸೂರ್ಯನಾಥ ಕಾಮತ್ ಅವರು ಸಭೆಗೆ ಪರಿಚಯಿಸಿದರು. ಅಕಾದೆಮಿಯ ಅಧ್ಯಕ್ಷ ಡಾ॥ ಜಿ. ಎಸ್. ದೀಕ್ಷಿತ್ ಅವರು ಸಭಾಧ್ಯಕ್ಷತೆ ವಹಿಸಿದ್ದು, ಈ ಕಾರ್ಯಕ್ರಮದಲ್ಲಿ ಕರ್ನಾಟಕದ ನಾನಾ ಕಡೆಗಳಿಂದ ಬಂದಿದ್ದ ಸದಸ್ಯರು, ವಿದ್ವಾಂಸರು ಭಾಗವಹಿಸಿದ್ದರು.

ಶುಭಾಶಯಗಳು

ಜಿಲ್ಲಾ ಮದಕರಿನಾಯಕ ವಿದ್ಯಾಸಂಸ್ಥೆ (ರಿ.), ಚಿತ್ರದುರ್ಗ

೧. ಮಹಾರಾಜ ಮದಕರಿನಾಯಕ ಪ್ರಥಮ ದರ್ಜೆ ಕಾಲೇಜು, ಚಿತ್ರದುರ್ಗ
೨. ಮಹಾರಾಣಿ ಪದವಿಪೂರ್ವ ಬಾಲಕಿಯರ ಕಾಲೇಜು, ಚಿತ್ರದುರ್ಗ
೩. ರಾಜವೀರ ಮದಕರಿನಾಯಕ ಪ್ರೌಢಶಾಲೆ, ಮಾರುತಿಹಳ್ಳಿ, ಬೆಂಗಳೂರು ದಕ್ಷಿಣ
೪. ಮದಕರಿನಾಯಕ ಸ್ವತಂತ್ರ ಪದವಿಪೂರ್ವ ಕಾಲೇಜು, ವಿನೋಬನಗರ, ದಾವಣಗೆರೆ
೫. ಮಹಾರಾಣಿ ಪ್ರೌಢಶಾಲೆ, ಕೆ. ಟಿ. ಜೆ. ನಗರ, ದಾವಣಗೆರೆ
೬. ಶ್ರೀ ಗಾದ್ರಿಪಾಲನಾಯಕ ಗ್ರಾಮಾಂತರ ಪ್ರೌಢಶಾಲೆ, ಜುಂಜರಗುಂಟೆ, ಚಳ್ಳಕೆರೆ ತಾಲ್ಲೂಕು
೭. ಶ್ರೀ ಪರಶುರಾಮ ದೈಹಿಕ ಶಿಕ್ಷಣ ಕಾಲೇಜು, ಪರಶುರಾಮಪುರ, ಚಳ್ಳಕೆರೆ ತಾಲ್ಲೂಕು
೮. ಶ್ರೀ ಕಲ್ಲೇಶ್ವರ ಗ್ರಾಮಾಂತರ ಪ್ರೌಢಶಾಲೆ, ಕಲ್ಲೇದೇವರಪುರ, ಜಗಳೂರು ತಾಲ್ಲೂಕು
೯. ಶ್ರೀಮತಿ ಯಶೋಧರ ಬೋರಪ್ಪ ಗ್ರಾಮಾಂತರ ಪ್ರೌಢಶಾಲೆ, ಹಾಯ್ಕಲ್, ಚಿತ್ರದುರ್ಗ ತಾಲ್ಲೂಕು
೧೦. ಶ್ರೀ ಕಣಿವೆ ಮಾರಮ್ಮ ಗ್ರಾಮಾಂತರ ಪ್ರೌಢಶಾಲೆ, ಅಳಗವಾಡಿ, ಚಿತ್ರದುರ್ಗ ತಾಲ್ಲೂಕು
೧೧. ಶ್ರೀ ಮಲ್ಲಿಕಾರ್ಜುನ ಗ್ರಾಮಾಂತರ ಪ್ರೌಢಶಾಲೆ, ಶ್ಯಾಗಲಿ, ದಾವಣಗೆರೆ ತಾಲ್ಲೂಕು
೧೨. ಶ್ರೀ ರೇಣುಕಾದೇವಿ ಪದವಿಪೂರ್ವ ಸ್ವತಂತ್ರ ಕಾಲೇಜು, ರೇಣುಕಾಪುರ, ಚಳ್ಳಕೆರೆ ತಾಲ್ಲೂಕು
೧೩. ಶ್ರೀ ಜೋಗೇಶ್ವರ ಪದವಿಪೂರ್ವ ಸ್ವತಂತ್ರ ಕಾಲೇಜು, ಬಿ. ಜಿ. ಕೆರೆ
೧೪. ಮಹಾರಾಣಿ ಅಲ್ಪಾವಧಿ ಶಿಕ್ಷಕಿಯರ ತರಬೇತಿ ಕೇಂದ್ರ, ಚಿತ್ರದುರ್ಗ
೧೫. ಮಹಾರಾಜ ಮದಕರಿನಾಯಕ ವಸತಿಯುತ ವಿದ್ಯಾರ್ಥಿ ನಿಲಯ, ಚಿತ್ರದುರ್ಗ
೧೬. ಮಹಾರಾಣಿ ಪದವಿಪೂರ್ವ ಬಾಲಕಿಯರ ವಸತಿಯುತ ವಿದ್ಯಾರ್ಥಿ ನಿಲಯ, ಚಿತ್ರದುರ್ಗ
೧೭. ಗಂಡುಗಲಿ ಮದಕರಿನಾಯಕ ಪ್ರಾಚ್ಯವಸ್ತು ಸಂಗ್ರಹಾಲಯ, ಚಿತ್ರದುರ್ಗ

ಡಿ. ಬೋರಪ್ಪ, ಎಂ.ಎ. (ಕ), ಎಂ.ಎ. (ಪೊ), ಬಿ.ಎಲ್.
ಪ್ರಾಚಾರ್ಯರು

ಮಹಾರಾಜ ಮದಕರಿನಾಯಕ ಪ್ರಥಮ ದರ್ಜೆ ಕಾಲೇಜು
ಚಿತ್ರದುರ್ಗ

ಕೆ. ಬೋರಯ್ಯ
ಅಧ್ಯಕ್ಷರು

ಜಿಲ್ಲಾ ಮದಕರಿನಾಯಕ
ವಿದ್ಯಾಸಂಸ್ಥೆ (ರಿ.), ಚಿತ್ರದುರ್ಗ

ಯಾವುದೇ ವಾಹನವು ನಿಮಗೆ ಅಪಘಾತ ಮಾಡಿ ಪರಾರಿಯಾಗಿ ನೀವು ನೊಂದಿದ್ದೀರಾ?

ಹಾಗಿದ್ದಲ್ಲಿ ನಿಮಗಾಗಿ ಒಂದು ಮಾನವೀಯ ಯೋಜನೆ

ನಿಮ್ಮಲ್ಲಿ ಯಾರಾದರೂ ಆಕಸ್ಮಿಕವಾಗಿ ರಸ್ತೆಯ ಅಪಘಾತಕ್ಕೊಳಗಾಗಿ, ಅಪಘಾತವೆಸಗಿದ ವಾಹನ ಪರಾರಿಯಾಗಿದ್ದಲ್ಲಿ ಹತಾಶರಾಗಬೇಡಿ. ಏಕೆಂದರೆ ಈಗ ಅಂತಹ ಅಪಘಾತದಿಂದ ತೊಂದರೆಗೀಡಾದವರಿಗೆ ಸೊಲೇಷಿಯಂ ಅಥವಾ ಸಮಾಧಾನಾರ್ಥ ನಿಧಿಯಿಂದ ಪರಿಹಾರ ಒದಗಿಸಲಾಗುವುದು.

ಸೊಲೇಷಿಯಂ ಅಥವಾ ಸಮಾಧಾನಾರ್ಥ ಪರಿಹಾರ ನಿಧಿ ಎಂದರೇನು ?

ಅಪಘಾತವೆಸಗಿ ವಾಹನ ಪರಾರಿಯಾದ ಸಂದರ್ಭಗಳಲ್ಲಿ ಅಪಘಾತಕ್ಕೀಡಾದವರಿಗೆ ಅಥವಾ ಅವರ ವಾರಸುದಾರರಿಗೆ ಪರಿಹಾರ ನೀಡಲು ಸರಕಾರ ರೂಪಿಸಿರುವ ನಿಧಿ. ಅಪಘಾತಕ್ಕೆ ಕಾರಣವಾದ ವಾಹನವು ಪತ್ತೆಯಾಗದಿದ್ದಲ್ಲಿ ಈ ನಿಧಿಯಿಂದ ಕೂಡಲೇ ಪರಿಹಾರ ಒದಗಿಸಲಾಗುವುದು.

ಅಪಘಾತ ಸಂಭವಿಸಿದ ನಂತರ ಏನು ಮಾಡಬೇಕು ?

ಅಪಘಾತಕ್ಕೆ ಒಳಗಾದವರು ಅಥವಾ ಅವರ ವಾರಸುದಾರರು ಹತ್ತಿರದ ಆರಕ್ಷಕ ಠಾಣೆಗೆ ಅಪಘಾತದ ಬಗ್ಗೆ ದೂರು ಸಲ್ಲಿಸಬೇಕು.

ನಂತರ : ಹತ್ತಿರದ ಆರಕ್ಷಕ ಠಾಣೆ ಅಥವಾ ಕಂದಾಯ ಇಲಾಖಾ ಕಛೇರಿಗಳಲ್ಲಿ ಉಚಿತವಾಗಿ ದೊರೆಯುವ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕು. ಅರ್ಜಿಯೊಂದಿಗೆ ವೈದ್ಯಕೀಯ ಪ್ರಮಾಣಪತ್ರವೊಂದನ್ನು ಲಗತ್ತಿಸಿ, ಅದನ್ನು ಅಪಘಾತ ಸಂಭವಿಸಿದ ತಾಲ್ಲೂಕಿನ ತಹಸೀಲ್ದಾರರು ಅಥವಾ ಉಪ ವಿಭಾಗದ ಸಹಾಯಕ ಕಮೀಷನರಿಗೆ ಒಂದು ತಿಂಗಳ ಅವಧಿಯೊಳಗೆ ಕಳುಹಿಸಬೇಕು.

ಪರಿಹಾರ ಧನದ ಪಾವತಿ

ಅಪಘಾತ ಸಂಭವಿಸಿದ ತಾಲ್ಲೂಕಿನ ತಹಸೀಲ್ದಾರರು ಅಥವಾ ಉಪ ವಿಭಾಗದ ಸಹಾಯಕ ಕಮೀಷನರು ಈ ಕೆಳಕಂಡಂತೆ ಪರಿಹಾರ ಧನವನ್ನು ನೀಡುವರು :

೧. ತೀವ್ರವಾಗಿ ಗಾಯಗೊಂಡವರಿಗೆ ರೂ. ೧,೦೦೦

೨. ಅಪಘಾತದಲ್ಲಿ ಮಡಿದವರ ವಾರಸುದಾರರಿಗೆ ರೂ. ೫,೦೦೦

ಹೆಚ್ಚಿನ ವಿವರಗಳಿಗೆ ಬರೆಯಿರಿ :

ಸಾರಿಗೆ ಕಮೀಷನರು
ಕರ್ನಾಟಕ ಸರ್ಕಾರ, ೩ನೆಯ ಮಹಡಿ
ಬಹು ಅಂತಸ್ತು ಕಟ್ಟಡ
ಡಾ. ಅಂಬೇಡ್ಕರ್ ವೀಧಿ
ಬೆಂಗಳೂರು ೫೬೦ ೦೦೧

● ಕರ್ನಾಟಕ ವಾರ್ತೆ